ಸಂಪುಟ ೯
ಸಂಚಿಕೆ ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ

೧೯೭೭

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ,

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈ ಮಾ ಸಿ ಕ ಪ ತ್ರಿ ಕೆ

ಸಂಪುಟ : ೯   ಸಂಚಿಕೆ : ೩

ಪ್ರಧಾನ ಸಂಪಾದಕರು

ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೯ ಸಂಚಿಕೆ : ೩

ಜನವರಿ ೧೯೭೭

ಸಂಕ್ರಮಣ ಸಂಚಿಕೆ

ಪ್ರಕಾಶಕರು
ಸಿ. ಎಸ್. ಕಣವಿ
ನಿರ್ದೇಶಕರು
ವ್ಯಾಸಂಗ ವಿಸ್ತರಣ–ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು
ಸೋಮಶೇಖರ ಆಕಳವಾಡಿ
ಮನೋಹರ ಮುದ್ರಣಾಲಯ, ಧಾರವಾಡ

ಪ ರಿ ವಿ ಡಿ


—



ಘಟಿಕೋತ್ಸವ ಸಮಾರಂಭ

ಮುಖ್ಯ ಅತಿಥಿ ಡಾ. ಸತೀಶಚಂದ್ರ, ಕುಲಾಧಿಪತಿ ಮಾನ್ಯ ಶ್ರೀ ಉಮಾಶಂಕರ ದೀಕ್ಷಿತ

ಕುಲಪತಿ ಡಾ. ಆರ್. ಸಿ. ಹಿರೇಮಠ



ರಜತಮಹೋತ್ಸವ ವರ್ಷದ ಪ್ರಕಟನೆಗಳ ಬಿಡುಗಡೆ

ಕುಲಾಧಿಪತಿ ಮಾನ್ಯ ಶ್ರೀ ಉಮಾಶಂಕರ ದೀಕ್ಷಿತ, ಶಿಕ್ಷಣ ಸಚಿವ ಮಾನ್ಯ ಶ್ರೀ ಎಸ್. ಎಂ. ಯಾಹ್ಯಾ
ಕುಲಪತಿ ಡಾ. ಆರ್. ಸಿ. ಹಿರೇಮಠ

ಪರಿಧಿ

● ಮೋಹನ ಕುರುಡಗಿ

ಈ ವೃತ್ತದ ತುಂಬ ನನ್ನ ರಾಜ್ಯ.
ಮಧ್ಯಬಿಂದು, ತ್ರಿಜ್ಯಗಳೆಲ್ಲ ಹಿಡಿದು
ನಿಲ್ಲಿಸಿವೆ ಕಟ್ಟಿ.
ಕೊಸರಿ ಓಡಬೇಕೆಂದರೆ ವೃತ್ತದಂಚು
ಭೂತವಾಗೆದ್ದು ಹಿಮ್ಮೆಟ್ಟಿಸುತ್ತದೆ.
ಮಧ್ಯಬಿಂದು ಕೊಡವಿ ಜಗ್ಗುತ್ತದೆ ಕೊರಳ ಕುಣಿಕೆ
ಉರಲು ಬೀಳುವುದಿಲ್ಲ, ಉಸಿರು ಸಾಲುವುದಿಲ್ಲ
ನಿಶ್ಯಕ್ತಿ, ನಿರಾಶೆಗಳೆಲ್ಲ ಗಾಢವಾಗೆದ್ದು ಮತ್ತೆ–ಮತ್ತೆ
ಪರಿಧಿಯೊಳಗೇ ಅವಿತಿಟ್ಟುಕೊಳ್ಳುತ್ತೇನೆ.
ಹಾರುವ ಹಕ್ಕಿ, ತೇಲುವ ಮೋಡ
ಅಣಕಿಸುತ್ತವೆ.
ಇದ್ದ ಉಸಿರೆಲ್ಲ ಪರಿಧಿಯೊಳಗೇ ಬಂಧಿ,
ಗಿರಿಗಿರಿ ತಿರುಗುತ್ತ ಪರಿಘದೊಳಗೆ
ಕಾಲ ಹಾಕುತ್ತೇನೆ, ತುಳಿಯುವ ದಾರಿ
ಗೊತ್ತು ! ಕಣ್ಣ ಮುಚ್ಚಿದರೂ ಮತ್ತೆ
ಮತ್ತೆ ಸೇರುವ ನಿಲ್ದಾಣ ಅದೇ.
ಪಯಣ ಮಾತ್ರ ನಿರಂತರ.
........ಕಟ್ಟಿ ಮೇಯಿಸಿದ ಗೂಳಿ
–ಗೆ ಕಣ್ಣಿಲ್ಲ.

ನೊಗಹೊತ್ತು, ಎಳೆಯುತ್ತ ತಿರುಗುತ್ತದೆ
ಗಾಣ. ಸದಾ ಜಾಗ್ರತೆ
-ಯಿಂದ ಕಾಯುತ್ತದೆ ಬೆನ್ನಮೇಲೆ ಚಾಟಿ
ಯೇಟು !
ದೂರ ಪಯಣದ ದಣಿವು, ಅನುಭವ
ಕಣ್ಣಪಟ್ಟಿ ಬಿಚ್ಚಿದಾಗಿಲ್ಲ.   ಬರೀ ಎಲ್ಲ ಭ್ರಮೆ !
ಕೊನೆಯೆಂದು ಈ ಶೋಷಣೆಗೆ ?

• •

ಪಂಪ–ರನ್ನರ ಲೌಕಿಕಕಾವ್ಯಗಳ ಮಂಗಲಪದ್ಯಗಳು

● ಎಸ್. ಎಸ್. ಹಿರೇಮಠ

ಪಂಪಭಾರತದ ಮಂಗಲಪದ್ಯಕ್ಕೂ, ರನ್ನಗದಾಯುದ್ಧದ ಮಂಗಲಪದ್ಯಕ್ಕೂ ಹಲವಾರು ಅಂಶಗಳ ಸಾಮ್ಯತೆಯಿರುವುದರಿಂದ, ಈ ಲೇಖನದ ಮೂಲಕ ಪಂಪ ಭಾರತದ ಮಂಗಲಪದ್ಯದ ಬಗ್ಗೆ ನಡೆದ ಚರ್ಚೆಗೆ ಒಂದು ಹೆಚ್ಚಿನ ಅಂಶವನ್ನು ಸೇರಿಸಬಹುದಾಗಿದೆ.

ವಿಕ್ರಮಾರ್ಜುನವಿಜಯದಿಂದ ಪ್ರಭಾವಿತನಾಗಿ, ಗದಾಯುದ್ಧದ ಮೂಲಕ ಮಹಾಕವಿತ್ವದ ಮಟ್ಟವನ್ನು ಮುಟ್ಟಿದ ರನ್ನ, ಪಂಪನನ್ನು ಹೇಗೆ ಅನುಸರಿಸುತ್ತಿರುವ ನೆಂಬುದಕ್ಕೆ ಗದಾಯುದ್ಧದ ಮಂಗಲಪದ್ಯವೂ ವಿವರಣೆ ನೀಡುತ್ತದೆ.

೧. 'ಶ್ರೀಯನರಾತಿಸಾಧನಪಯೋನಿಧಿಯೊಳ್ ಪಡೆದುಂ.........
ಇಂತುದಾತ್ತನಾರಾಯಣನಾದ ದೇವಂ......ಅರಿಕೇಸರಿ.........'[೧]

ಇದೇ ಮಥಿತಾರ್ಥವನ್ನುಳ್ಳ ರನ್ನನ ಗದಾಯುದ್ಧದ ಮಂಗಲಪದ್ಯದ ಸಾಲು :

'ಶ್ರೀಯುವತಿಪ್ರಿಯಂ ಬಲಯುತಂ......
ಪುರುಷೋತ್ತಮನೀ ಚಳುಕ್ಯನಾರಾಯಣದೇವಂ.........'[೨]

ಪಂಪನ ಪದ್ಯದಲ್ಲಿ, ನಿರಾಯಾಸವಾಗಿ ಲಕ್ಷ್ಮಿ ಎಂಬ ಸ್ತ್ರೀಯನ್ನು (ಭೋಗಕ್ಕೆ ಸಂಕೇತ) ಪಡೆದ ವಿಷ್ಣುವಿಗಿಂತ, ಸ್ವಪ್ರಯತ್ನದಿಂದ ಜಯವೆಂಬ ಲಕ್ಷ್ಮಿಯನ್ನು (ಶೌರ್ಯಕ್ಕೆ ಸಂಕೇತ) ಪಡೆದ ಉದಾತ್ತನಾರಾಯಣನ (ಅರಿಕೇಸರಿಯ) ಅತಿಶಯತೆ ವ್ಯಕ್ತವಾಗಿದೆ. ಇಲ್ಲಿ ಪಂಪನು ಭೋಗಲಕ್ಷ್ಮಿಗಿಂತ ಜಯಲಕ್ಷ್ಮಿಗೆ ಹೆಚ್ಚಿನ ಪ್ರಾಶಸ್ತ್ಯ

ಈ ಲೇಖನದಲ್ಲಿ ಹಿಂದಿನ ಎಲ್ಲ ಲೇಖನಗಳ ಅಷ್ಟಿಷ್ಟು ಪ್ರಭಾವವನ್ನಲ್ಲದೆ. ವಿಶೇಷವಾಗಿ ಡಾ. ಆರ್. ಸಿ. ಹಿರೇಮಠ, ಡಾ, ಎಂ. ಎಂ. ಕಲಬುರ್ಗಿ ಗುರುಗಳನ್ನು ಮತ್ತು ಸ್ನೇಹಿತ ಬಸವರಾಜ ಮಲಶೆಟ್ಟರನ್ನೂ ಸ್ಮರಿಸುತ್ತೇನೆ.

೧ ಪಂಪಭಾರತ : ೧–೧

೨ ಗದಾಯುದ್ಧ ಸಂಗ್ರಹ : ೧–೧

ನೀಡಿದ್ದಾನೆ. ಅವನು ಹತ್ತನೆಯ ಶತಮಾನದ ಮೌಲ್ಯಗಳ ಪ್ರತಿಪಾದಕನೆಂಬುದಕ್ಕೆ ಇದೊಂದು ನಿದರ್ಶನ.

ಪಂಪನ ಮಾತಿನಲ್ಲಿರುವ ಧ್ವನಿ, ರನ್ನನ ಪದ್ಯದಲ್ಲಿಲ್ಲದಿರುವುದರಿಂದ ಅವನ ಹೇಳಿಕೆ ಸರಳವೂ ನೇರವೂ ಆಗಿದೆ ಎಂಬುದು ಮೇಲಿನ ಉದ್ಧರಣೆಯಿಂದ ಕಂಡು ಬರುತ್ತದೆ.

೨. 'ಧರಿತ್ರಿಯಂ ಜೀಯೆನೆ ಬೇಡಿಕೊಳ್ಳದೆ ವಿರೋಧಿನರೇಂದ್ರರನೊತ್ತಿಕೊಂಡುಂ
......ಇಂತುದಾತ್ತನಾರಾಯಣನಾದ ದೇವಂ...ಅರಿಕೇಸರಿ...'[೩]

ಇದೇ ಸಂಗತಿಗಳಿಗೆ ಸಮಾನವಾದ ರನ್ನನ ಪದ್ಯದ ಸಾಲು :

'ಬಲಿದರ್ಪಹರಂ ಜಿತಾರಿದೈತೇಯಂ......
ಪುರುಷೋತ್ತಮನೀ ಚಳುಕ್ಯನಾರಾಯಣದೇವಂ......'[೪]

ಬಲಿಚಕ್ರವರ್ತಿಯಿಂದ ಭೂಮಿಯನ್ನು 'ಜೀಯೆನೆ' ಬೇಡಿದ್ದು ವಿಷ್ಣುವಿನ ಮೋಸತನಕ್ಕೆ ಸಾಕ್ಷಿಯಾದರೆ, ಉದಾತ್ತನಾರಾಯಣನ ಸ್ವಾಭಿಮಾನ– ಶೌರ್ಯಕ್ಕೆ 'ವಿರೋಧಿನರೇಂದ್ರರನೊತ್ತಿಕೊಂಡು' ಪಡೆದದ್ದು ಸಾಕ್ಷಿ. ಹೀಗೆ ಉದಾತ್ತನಾರಾಯಣ ನಲ್ಲಿ 'ವೈದಿಕನಾರಾಯಣನ' ದೋಷಪರಂಪರೆಯಿಲ್ಲ. 'ವೈದಿಕನಾರಾಯಣ'ನನ್ನು ಉದ್ದೇಶಪೂರ್ವಕವಾಗಿಯೆ ಜೈನಕವಿ ಪಂಪ ಕೀಳುಮಾಡುತ್ತಿರುವನೆ? ಅಥವ ವೈದಿಕ ನಾದ ಅರಿಕೇಸರಿ ತನ್ನ ಆರಾಧ್ಯದೈವವಾದ ವಿಷ್ಣುವಿಗಿಂತ ಉದಾತ್ತನೆಂದು ಹೊಗಳಿಸಿ ಕೊಳ್ಳುವ ಅತಿ ಪ್ರತಿಷ್ಠಿತ ಮನೋಭಾವದವನೆ ?

ಪಂಪನ ನಾರಾಯಣನಂತೆ 'ಜೀಯೆನೆ ಬೇಡಿಕೊಳ್ಳದೆ' ರನ್ನನ ನಾರಾಯಣನೂ ಬಲಿದರ್ಪವನ್ನಡಗಿಸಿದ ಎಂಬಲ್ಲಿ, ನಾರಾಯಣನ ತನ್ಮೂಲಕ ಚಳುಕ್ಯನ ಶೌರ್ಯಾ ತಿಶಯವನ್ನು ಸೂಚಿಸಿದಂತಾಗುತ್ತದೆ. 'ವಿರೋಧಿನರೇಂದ್ರರನೊತ್ತಿಕೊಂಡ' ಅರಿ ಕೇಸರಿಗೂ 'ಅರಿದೈತೇಯ'ರನ್ನು ಗೆದ್ದ ಸತ್ಯಾಶ್ರಯನಿಗೂ ಸಮಾನತೆ ಇದೆ.

ರನ್ನ 'ಚಳುಕ್ಯನಾರಾಯಣದೇವಂ' ಎಂದು ಸತ್ಯಾಶ್ರಯ ಮತ್ತು ನಾರಾಯಣ ರನ್ನು ಅಭೇದವಾಗಿ ಹೊಗಳಿದ್ದರೆ, ಪಂಪ ಅರಿಕೇಸರಿಯನ್ನು ಮಾತ್ರ 'ಉದಾತ್ತ ನಾರಾಯಣನಾದದೇವಂ' ಎಂದು ನಾರಾಯಣನಿಗಿಲ್ಲದ ಅಂಶವನ್ನು ಕಲ್ಪಿಸಿ, ಅರಿಕೇಸರಿ ಯನ್ನು ಉದಾತ್ತೀಕರಿಸಿದ್ದಾನೆ.

ಪಂಪನ 'ಉದಾತ್ತನಾರಾಯಣ' ಶಬ್ದಕ್ಕೆ ರನ್ನನ 'ಪುರುಷೋತ್ತಮ' ಶಬ್ದ ಸಂವಾದಿ ಎನಿಸುತ್ತದೆ. ಆದರೆ ರನ್ನನು ನಾರಾಯಣನಲ್ಲಿಲ್ಲದ ಶ್ರೇಷ್ಠತ್ವವನ್ನು ಸತ್ಯಾಶ್ರಯನಿಗೆ ಆರೋಪಿಸಿಲ್ಲ.

---

೩ ಪಂಪಭಾರತ : ೧–೧.

೪ ಗದಾಯುದ್ಧ ಸಂಗ್ರಹ : ೧–೧.

೩. 'ಆತ್ಮೀಯ ಸುಪುಷ್ಪವೃಷ್ಟಿಯನೊಡಂಬಡೆ ತಾಳ್ದಿಯುಂ...
ಇಂತುದಾತ್ತನಾರಾಯಣನಾದ ದೇವಂ......ಅರಿಕೇಸರಿ......'[೫]

'......ಅನಂತಭೋಗನಿಲಯಂ ಪ್ರತಿಪಾಲಿತ ಧರ್ಮಚಕ್ರನಬ್ಜಾಯತನೇತ್ರ-
ನಾದಿಪುರುಷಂ ಪುರುಷೋತ್ತಮನೀ ಚಳುಕ್ಯನಾರಾಯಣದೇವಂ......'[೬]

ಪಂಪನ ಮಾತಿನಲ್ಲಿ, ಪಂಡಿತರ ತಲೆತಿನ್ನುತ್ತಿರುವ ಸಮಸ್ಯಾತ್ಮಕ ಪಾಠ 'ಸುಪುಷ್ಪ ವೃಷ್ಟಿ'.

'ಸುಪುಷ್ಪವೃಷ್ಟಿ' ಎಂಬುದಕ್ಕೆ ಮುಳಿಯ ತಿಮ್ಮಪ್ಪಯ್ಯನವರು 'ಆತ್ಮೀಯ ರಾದವರ ಪುಷ್ಪವೃಷ್ಟಿಯನ್ನು ಅವನೊಬ್ಬನೆ ತಾಳಿದನು' ಎಂದು ಅರ್ಥೈಸಿದ್ದಾರೆ.[೭]

ಡಾ. ಡಿ. ಎಲ್. ಎನ್. ಅವರು 'ಸುಪುಷ್ಪದೃಷ್ಟಿ', 'ಸುಪುಷ್ಪಪಟ್ಟ' ಎಂಬೆರಡು ಊಹಿತಪಾಠಗಳನ್ನು ಹೇಳಿ; 'ಪುಷ್ಪಪಟ್ಟ' ಎಂಬುದು ಸಾಮಂತ ಅರಸರು ಧರಿಸು ತ್ತಿದ್ದ ಒಂದು ಕಿರೀಟದ ಹೆಸರೆಂದು ಶಿಲ್ಪಶಾಸ್ತ್ರದ ಆಧಾರದಿಂದ ವಿವರಿಸಿದ್ದಾರೆ. ಇದೇ ಪಾಠ ಸ್ವೀಕಾರಯೋಗ್ಯವೆನ್ನುತ್ತಾರೆ.[೮]

ಡಾ. ಎಂ. ಎಂ. ಕಲಬುರ್ಗಿ ಅವರು 'ಸುಪುಷ್ಪದೃಷ್ಟಿ' ಎಂಬ ಡಾ. ಡಿ. ಎಲ್. ಎನ್. ಅವರ ಊಹಿತಪಾಠವನ್ನು ಎತ್ತಿಕೊಂಡು, ವಿಷ್ಣುವು ಶಿವನಿಗೆ ಕಮಲದಂತಹ ಕಣ್ಣನ್ನು ಅರ್ಪಿಸಿ 'ಕಮಲನೇತ್ರ' ಎಂಬ ಹೆಸರನ್ನು ಪಡೆದರೆ, ಅರಿಕೇಸರಿಯು ಕಮಲ ದಂಥ ಕಣ್ಣುಗಳನ್ನು ಹುಟ್ಟಿನಿಂದ ಸಹಜವಾಗಿಯೆ ಪಡೆದಿದ್ದಾನೆ, ಎಂದು ಹೇಳುತ್ತಾರೆ.[೯]

ಸೀತಾರಾಮ ಜಾಗೀರದಾರ್‌ರು 'ಸುಪುಷ್ಪವೃಷ್ಟಿ' ಎಂಬ ಪಾಠದ 'ಪುಷ್ಪ'ಕ್ಕೆ ಬಂಗಾರದ ನಾಣ್ಯ ಎಂಬ ಅರ್ಥವನ್ನು ಸಾಧಾರವಾಗಿ ತಿಳಿಸಿ, ಅದೇ ಪಾಠವನ್ನು ಒಪ್ಪಿಕೊಂಡಿದ್ದಾರೆ. 'ಒಳ್ಳೆಯ ಪುಷ್ಪವೆಂಬ ಆತ್ಮೀಯ ನಾಣ್ಯವೃಷ್ಟಿ'ಯನ್ನು ಅರಿ ಕೇಸರಿ ಪಡೆದನೆಂದು ಅರ್ಥ ಹೇಳಿದ್ದಾರೆ.[೧೦]

'ಸುಪುಷ್ಪದೃಷ್ಟಿ' ಎಂಬ ಪಾಠವನ್ನು ಒಪ್ಪಿದ ಹೇಮಲತಾ ಪದಕಿಯವರು 'ಸುಪುಷ್ಪ' ಎಂಬುದಕ್ಕೆ 'ಬಂಗಾರದಿಂದ ತಯಾರಿಸಿದ ಹೂಗಳು' ಎಂದೂ, ಅಂಥ ಕಣ್ಣುಳ್ಳವ ಅರಿಕೇಸರಿ ಎಂದೂ ಹೇಳಿದ್ದಾರೆ.[೧೧]

---

೫ ಪಂಪಭಾರತ : ೧-೧.
೬ ಗದಾಯುದ್ಧಸಂಗ್ರಹ : ೧-೧
೭ ನಾಡೋಜಪಂಪ : ಪುಟ : ೧೯-೨೦೦.
೮ ಡಿ. ಎಲ್. ಎನ್, ಪಂಪಭಾರತ ದೀಪಿಕೆ : ಪುಟ : ೧-೨.
೯ ಡಾ. ಎಂ. ಎಂ. ಕಲಬುರ್ಗಿ, ಕ.ಭಾರತಿ : ೩-೨, ಪುಟ : ೬೮-೭೧.
೧೦ ಸೀ. ಜಾಗೀರದಾರ್, ಸಾಧನೆ : ೩-೧ ಮತ್ತು ೪-೧.
೧೧ ಹೇ. ಪದಕಿ, ಸಾಧನೆ : ೩-೩.

ಈ ಎಲ್ಲ ಅಭಿಪ್ರಾಯಗಳಲ್ಲಿ ಡಾ. ಎಂ. ಎಂ. ಕಲಬುರ್ಗಿಯವರ ಮಾತಿಗೆ ರನ್ನನ ಪದ್ಯವು ಪುಷ್ಟಿಕೊಡುತ್ತದೆ.

ಅಸಲ್ ಜೈನನಾದ ರನ್ನನ ಮಂಗಲಪದ್ಯದಲ್ಲಿ, ಪಂಪನಲ್ಲಿ ಕಾಣಸಿಗದ 'ಅನಂತ ಭೋಗ', 'ಧರ್ಮಚಕ್ರ', 'ಆದಿಪುರಷ' - ಈ ಜೈನ ಪಾರಿಭಾಷಿಕಶಬ್ದಗಳಿವೆ. ನಂತರದ **'ಅಬ್ಜಾಯತನೇತ್ರಂ'** ಎಂಬ ಪದ 'ಸುಪುಷ್ಪದೃಷ್ಟಿ' ಎಂಬ ಶಬ್ದಕ್ಕೆ ಸಂವಾದಿಯಾಗುತ್ತದೆ.

ಉಳಿದೆಲ್ಲ ಅಂಶಗಳಲ್ಲಿ ಪಂಪನನ್ನೇ ಅನುಸರಿಸುತ್ತ ಬಂದ ರನ್ನ, ಈ ಪ್ರಸಂಗದಲ್ಲೂ ಇನ್ನೂ ಪಾಠಾಂತರಗಳಾಗಿರದ ಪಂಪನ 'ಸುಪುಷ್ಪದೃಷ್ಟಿ'[೧೨] ಎಂಬ ಶಬ್ದವನ್ನು 'ಅಬ್ಜಾಯತನೇತ್ರಂ' ಎಂದು ಹೇಳಿರಬೇಕು. 'ಸುಪುಷ್ಪದೃಷ್ಟಿ' ಅಕ್ಷರಸಾದೃಶ್ಯದಿಂದ 'ಸುಪುಷ್ಪವೃಷ್ಟಿ' ಮುಂತಾದ ಪಾಠಗಳಾಗಿರಬೇಕು.[೧೩]

ಬಂಗಾರದಿಂದ ತಯಾರಿಸಿದ ಹೂಗಳಂಥ[೧೪] ಅಥವಾ ಹೂಗಳ ಚಿತ್ರವಿರುವ ಬಂಗಾರದ ನಾಣ್ಯದಂಥ[೧೫] ಎಂದು 'ಪುಷ್ಪ'ಕ್ಕೆ ಅರ್ಥವನ್ನು ಎಳೆದುತಂದು ಚರ್ಚಿಸಿರುವಲ್ಲಿ ಅನವಶ್ಯಕ, ಹೊಸ ಅರ್ಥಗಳನ್ನು ಹುಡುಕಿದ ಕೀರ್ತಿ ಅವರಿಗಿದೆ.

೪. '...ಇಂತುದಾತ್ತನಾರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯಕೋಟಿಯಂ'* ಎಂಬ ಸಂಪ್ರದಾಯಿಕ ಅಭೀಪ್ಸೆಯಿಂದ ಪಂಪನ ಮಂಗಲಪದ್ಯ ಮುಕ್ತಾಯವಾಗುವುದು. ಹಲವನ್ನು ಕೊಡಲು ಶಕ್ತನಾದ ಮಾಂಡಲಿಕ ದೊರೆ ಅರಿಕೇಸರಿ 'ಸೌಖ್ಯ ಕೋಟಿ'ಯನ್ನೆಂತು ಕೊಟ್ಟಾನು.[೧೬]

ರನ್ನನ ಮಂಗಲಪದ್ಯ :

' ಚಳುಕ್ಯನಾರಾಯಣದೇವನೀಗೆಮಗೆ ಮಂಗಳಕಾರಣಮುತ್ಸವಂಗಳಂ '[೧೭]

ಎಂದು ಮುಕ್ತಾಯವಾಗಿದೆ.

ಪಂಪ, ಕಾವ್ಯದಲ್ಲಿ ಅರಿಕೇಸರಿಯನ್ನು ಅರ್ಜುನನ ಜತೆ 'ತಗುಳ್ಚಿ ಪೋಲಿಪೊಡೆ–ನಗಲ್ಚಿತ್ತಿಯಾದುದು'[೧೮] ಎಂದು ಹೇಳಿದರೂ ಮಂಗಲಪದ್ಯದಲ್ಲಿ ವಿಷ್ಣುವಿನ ಜತೆ ಅರಿಕೇಸರಿಯನ್ನು ಹೋಲಿಸಿ ಹೊಗಳಿದುದು ಆಭಾಸವೆನಿಸುತ್ತದೆ. ಆ ದೋಷ ರನ್ನನಲ್ಲೂ ಆಗಿದೆ, ಪಂಪನ ಹೆಜ್ಜೆಯಲ್ಲೇ ನಡೆದಿರುವುದರಿಂದ.

• •

೧೨ ಡಿ. ಎಲ್. ಎನ್ ಅವರ ಊಹಿತಪಾಠವಿದು.

೧೩ ಕ. ಭಾರತಿ ೬–೨, ಹೇಮಲತಾ ಪದಕಿಯವರ ಲೇಖನ ನೋಡಿ.

೧೪ ಹೇ. ಪದಕಿ –ಸಾಧನೆ– ೩–೩.

೧೫ ಸೀ. ಜಾಗೀರದಾರ –ಸಾಧನೆ– ೩–೧.

* ಪಂಪ ಭಾರತ : ೧–೧.

೧೬ ಡಾ. ಆರ್. ಸಿ. ಹಿರೇಮಠ ಅವರ ಉಪನ್ಯಾಸದಿಂದ.

೧೭. ಗದಾಯುದ್ಧ ಸಂಗ್ರಹ : ೧–೧.

೧೮ ಪಂಪಭಾರತ : ೧–೧೪.

ಶಾಸನಗಳಲ್ಲಿ ರೇವಂತ

• ಎಚ್. ಆರ್. ರಘುನಾಥಭಟ್

ವೈವಿಧ್ಯಪೂರ್ಣವಾದ ಹಿಂದೂ ದೇವತಾರಾಧನೆಯಲ್ಲಿ ರೇವಂತ ಒಬ್ಬ ಅಶ್ವಾರೋಹಿ ಉಪದೇವತೆ. ಶಾಸನ, ಶಿಲ್ಪ, ಸಾಹಿತ್ಯ, ಪುರಾಣಗಳಲ್ಲಿ ವರ್ಣಿಸಲ್ಪಟ್ಟ ಈತನನ್ನು ಕೆಲಬಾರಿ ಕಪಿಲವಸ್ತುರಾಜ್ಯವನ್ನೇ ತೊರೆದು ಹೊರಟ ಗೌತಮಬುದ್ಧನೆಂದೂ (ಮಹಾಭಿನಿಷ್ಕ್ರಮಣ) ವಿಷ್ಣುವಿನ ಕೊನೆಯ ಅವತಾರವಾದ ಕಲ್ಕಿಯೆಂದೂ ಭೈರವನಿರಬೇಕೆಂದೂ ತಪ್ಪಾಗಿ ಊಹಿಸಿದ್ದುಂಟು. ಡಾ. ಬಿ. ಎನ್. ಶರ್ಮರವರ ಇತ್ತೀಚಿನ ಸಂಶೋಧನೆ ಈ ತಪ್ಪು ಗ್ರಹಿಕೆಗಳನ್ನು ಸರಿಪಡಿಸಲು ಸಮರ್ಥವಾಗಿದೆ.[೧]

ವರಾಹಮಿಹಿರನ ಬೃಹತ್‌ಸಂಹಿತೆಯಲ್ಲಿ (ಗುಪ್ತರ ಕಾಲ) ಸೂರ್ಯಪುತ್ರನಾದ ರೇವಂತನ ಬಣ್ಣನೆ, ಬಹುಶಃ ಮೊದಲಬಾರಿಗೆ ಕಂಡುಬರುತ್ತದೆ.[೨] ಅಲ್ಲದೆ ವಿಷ್ಣುಪುರಾಣ[೩], ಮಾರ್ಕಂಡೇಯ ಪುರಾಣ[೪], ಸಾಂಬ ಉಪಪುರಾಣ[೫], ಭವಿಷ್ಯಪುರಾಣ[೬], ಕಾಲಿಕಾ ಪುರಾಣ[೭] ಮುಂತಾದ ಪುರಾಣಗಳಲ್ಲೂ ಉದ್ಯೋತನಸೂರಿಯ **"ಕುವಲಯಮಾಲಕಥಾ"**[೮], **"ಶಬ್ದಕಲ್ಪದ್ರುಮ"**[೯], ರಘುನಂದನನ **"ತಿಥಿತತ್ವ"**[೧೦],

---

೧ ನವದೆಹಲಿಯ ನ್ಯಾಶನಲ್ ಮ್ಯೂಸಿಯಂನಲ್ಲಿ ಕೀಪರ್ ಆಗಿರುವ ಡಾ. ಬಿ. ಎನ್. ಶರ್ಮರವರು ತಮ್ಮ ಅನೇಕ ವರ್ಷಗಳ ಸಂಶೋಧನೆಗಳ ಫಲವಾಗಿ ಇತ್ತೀಚೆಗೆ 'ರೇವಂತ ಪ್ರತಿಮಾಲಕ್ಷಣ' *(Iconography of Revanta)* ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ.

೨ "ರೇವಂತೊ ಅಶ್ವಾರೂಢೋ ಮೃಗಯಾಕ್ರೀಡಾದಿ ಪರಿವಾರ" – ಬೃಹತ್‌ಸಂಹಿತಾ : ೫೮, ೫೬.

೩ Wilson H. H. : *The Vishṇu Purāṇa*, ಪು : ೨೧೪–೧೫.

೪ Pargitter L. E. : *Markaṇḍeya Purāṇa*, C. VIII, ಪು : ೫೭೫.

೫ ಸಾಂಬ ಉಪಪುರಾಣ, ೨೯–೧೩.

೬ ಭವಿಷ್ಯಪುರಾಣ, ೭೯, ೭೮.

೭ ಕಾಲಿಕಾಪುರಾಣ, ೮೫. ೪೬–೪೯.

೮ ಉದ್ಯೋತನಸೂರಿ : ಕುವಲಯಮಾಲಕಥಾ, ಪು : ೭೮.

೯ ಶಬ್ದಕಲ್ಪದ್ರುಮ.

೧೦ ರಘುನಂದನನ ತಿಥಿತತ್ವ, ಪು : ೬೯೦.

ನಕುಲನ "ಅಶ್ವಶಾಸ್ತ್ರ"[೧೧], ಅಭಿನವಚಂದ್ರನ "ಅಶ್ವವೈದ್ಯ"[೧೨] ಮುಂತಾದ ಕೃತಿಗಳಲ್ಲೂ ರೇವಂತ ಉಲ್ಲೇಖಿತನಾಗಿದ್ದಾನೆ.

ರೇವಂತ ಸೂರ್ಯ ಮತ್ತು ಸಂಜ್ಞಾಳ ಮಗ, ಗುಹ್ಯಕಾಧಿಪತಿ. ಅಶ್ವಾರೋಹಿಯಾಗಿ, ಸೈನ್ಯಸಮೇತನಾಗಿ ಬೇಟೆಗೆ ಹೊರಟಿರುವಂತೆ ಶಿಲ್ಪಗಳಲ್ಲಿ ಚಿತ್ರಿತನಾಗಿದ್ದಾನೆ. ಭಯಾನಕ ಅರಣ್ಯಗಳಲ್ಲಿ ಅಭಯಹಸ್ತ ನೀಡಿ ದರೋಡೆಕೋರರೇ ಮೊದಲಾದ ವೈರಿಗಳಿಂದ ರಕ್ಷಣೆ ನೀಡುವನೆಂದು ಪ್ರತೀತಿ. ಈತನನ್ನು ಆರಾಧಿಸುವುದರಿಂದ ಸುಖ, ಸಂತೋಷ, ರಾಜತ್ವ, ಆರೋಗ್ಯ, ಕೀರ್ತಿ ಹಾಗೂ ಉನ್ನತಿ ಲಭಿಸುತ್ತದೆಯೆಂಬುದು ನಂಬಿಕೆಯಾಗಿದೆ. "ಶಬ್ದ ಕಲ್ಪದ್ರುಮ"ದಲ್ಲಿ ವರ್ಣಿಸಿರುವಂತೆ ರಾಜಮಹಾರಾಜರು ನಿರಾಜನವಿಧಿಯಾದ (ರಣರಂಗಕ್ಕೆ ಹೊರಡುವ ಮುಂಚೆ ಆಚರಿಸಬೇಕಾದ ಧಾರ್ಮಿಕ ವಿಧಿ) ಏಳನೆಯ ದಿವಸ ಸೂರ್ಯಾರಾಧನೆಯನ್ನೂ ಆತನ ಪುತ್ರನಾದ ರೇವಂತನಾರಾಧನೆಯನ್ನೂ (ಮಹಾದ್ವಾರದ ಒಳಭಾಗದಲ್ಲಿ) ಮಾಡಬೇಕು.

ಮಧ್ಯಕಾಲೀನ ಭಾರತದಲ್ಲಿ ರೇವಂತಾರಾಧನೆ ಜನಪ್ರಿಯವಾಗಿದ್ದಂತೆ ತೋರುತ್ತದೆ. ಆಳರಸರೂ ಕುದುರೆ ಸವಾರರೂ ಸೇನಾನಿಗಳೂ ಈ ಅಶ್ವದೇವತೆಯನ್ನು ಪೂಜಿಸಿ ಅಶ್ವವಿದ್ಯೆಯಲ್ಲಿ ಪ್ರಾವಿಣ್ಯ ಗಳಿಸಿಕೊಂಡಿದ್ದಿರಬೇಕು; ಆ ಕಾಲದ ಅನೇಕ ಶಾಸನಗಳಲ್ಲಿ ಹಾಗೂ ಮೂರ್ತಿಶಿಲ್ಪಗಳಲ್ಲಿ ಈತ ಚಿತ್ರಿತವಾಗಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಕನ್ನಡನಾಡಿನ ಕೆಲವು ಶಾಸನಗಳಲ್ಲಿ, ಅದರಲ್ಲೂ ಮುಖ್ಯವಾಗಿ ಕಲ್ಯಾಣ ಚಾಲುಕ್ಯ–ಹೊಯ್ಸಳ–ಯಾದವರ ಕಾಲದ ಶಿಲಾಶಾಸನಗಳಲ್ಲಿ ರೇವಂತನ ಉಲ್ಲೇಖ ವಿಶೇಷವಾಗಿ ಬರುತ್ತದೆ. ಆ ಕಾಲದ ವೀರಯೋಧರನ್ನೂ ಆಳರಸರನ್ನೂ ''ತುರಗರೇವಂತ'', '' ಹಯಾರೂಢಪ್ರೌಢರೇಖಾರೇವಂತ '', '' ಕಲಿಯುಗರೇವಂತ '', ''ಸುರೇಖಾರೇವಂತ'', ''ಅಶ್ವಾರೂಢರೇವಂತ'' ಎಂದು ಮುಂತಾಗಿ ವರ್ಣಿಸಿದ್ದುಂಟು. ಪ್ರಸ್ತುತದಲ್ಲಿ ರೇವಂತನ ಉಲ್ಲೇಖವಿರುವ ಕೆಲವು ಪ್ರಮುಖ ಶಾಸನಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ.

ಕ್ರಿ. ಶ. ೧೦೫೮ರ ಶಿಲಾಹಾರ ಶಾಸನವೊಂದರಲ್ಲಿ (೨೦ನೆಯ ಸಾಲಿನಲ್ಲಿ) ಮಾರಸಿಂಹನ ಕಾರ್ಯಸಾಹಸಗಳನ್ನು ವರ್ಣಿಸುತ್ತಾ ಆತನನ್ನು "ರೇವಂತೊ ವತ್ಸರಾಜೊ ವರ ತುರಗಚ(ಹ)ಯಾರೂಢರೇಖಾವಿಶುದ್ಧೌ"[೧೩] ಎಂದು ಸ್ತುತಿಸಲಾಗಿದೆ. ಇಲ್ಲಿ 'ತುರಗರೇವಂತ'ನಲ್ಲದೆ 'ವತ್ಸರಾಜ' ಎಂಬ ಇನ್ನೊಂದು ಹೆಸರಿರುವುದು ಗಮ

೧೧ ನಕುಲ, ಅಶ್ವಶಾಸ್ತ್ರಂ, ಪು. ೭. ಶ್ಲೋಕ ೧–೬.

೧೨ ಅಭಿನವ ಚಂದ್ರ : ಅಶ್ವವೈದ್ಯ.

೧೩ *Cave Temple Inscriptions*, No. 10 of the Brochures of the Archaeological Survey of Western India, ಪು : ೧೦೨.

ನಾರ್ಹ. ಅಶ್ವವಿದ್ಯೆಗೆ ಸಂಬಂಧಿಸಿದಂತೆ ಇನ್ನೊಂದು ಜನಪ್ರಿಯ ಹೆಸರೆಂದರೆ 'ವತ್ಸರಾಜ'[೧೪]. ಈತನನ್ನು 'ಹಯವತ್ಸರಾಜಂ'[೧೫], 'ವಿಷಮ ಹಯವತ್ಸರಾಜ [ನುಂ]'[೧೬], 'ಸೂ(ಶೂ)ಕಳಹಯವತ್ಸ್ರರಾಜಂ'[೧೭] ಎಂದು ಮುಂತಾಗಿ ಹೆಸರಿಸಿದೆ. ತುರಗರೇವಂತ ಎನ್ನುವುದರ ಬದಲಾಗಿ ಒಮ್ಮೊಮ್ಮೆ 'ತುರಯ ರೇವಂತ' ಎಂದೂ ವರ್ಣಿಸಲಾಗಿದೆ. ಬಳ್ಳಿಗಾವೆಯ ಒಂದು ಶಾಸನದ ೧೧ನೆಯ ಸಾಲಿನಲ್ಲಿ 'ತುರಯ ರೇವಂತ' ಎಂದು ಉಲ್ಲೇಖಿಸಿರುವುದನ್ನು ಇಲ್ಲಿ ಉದಹರಿಸಬಹುದು.[೧೮] 'ತುರಯ' ಎಂಬುದನ್ನು ಬಿ.ಎಲ್.ರೈಸ್‌ರವರು 'ತುರೀಯ' ಎಂದು ಓದಿ, 'ನಾಲ್ಕನೆಯ ರೇವಂತ' ಎಂದು ಅರ್ಥೈಸಿದ್ದುಂಟು.

ಧಾರವಾಡ ಜಿಲ್ಲೆಯ ಬಂಕಾಪುರ ತಾಲೂಕಿನ ಹುಲ್ಲೂರು (ಅಥವಾ ಹುಲ್ಲುಂಗೂರು) ಎಂಬಲ್ಲಿರುವ ಸಿದ್ಧಲಿಂಗ ಗುಡಿಯ ದಕ್ಷಿಣ ಗೋಡೆಗೆ ಇದ್ದ ಶಾಸನವನ್ನು ಕಲ್ಯಾಣ ಚಾಲುಕ್ಯ ಚಕ್ರವರ್ತಿಯಾದ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಬರೆಯಲಾಗಿದ್ದು (ಶಕೆ ೯೯೯), ಅದರಲ್ಲಿ 'ಕಲಿಯುಗ ರೇವನ್ತ'ನ ಉಲ್ಲೇಖವಿದೆ.[೧೯] ಇದರ ಕಾಲ ಕ್ರಿ. ಶ. ೧೦೭೭ನೆಯ ಜೂನ್ ೨೫ ರವಿವಾರ. ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿದ್ದ ಮಹಾಸಾಮಂತನಾದ ಜಯಕೇಸಿಯರಸನನ್ನು ಈ ರೀತಿ ವರ್ಣಿಸಲಾಗಿದೆ :

> ಸ್ವಸ್ತಿ ಸಮಧಿಗತ ಪಂಚಮಹಾಸಾಮಂತಂ
> ಕಲಿಯುಗರೆವ[ನ್]ತ[ಂ] ಮಣಲೆಯುರಾನ್ವಯಪ್ರಸೂತಂ
> ಸಿಂಹಲಾಂಛನಪ್ರಣೂತಂ ಪುಲಿಗೆಱೆಪುರವರಾಧೀಶ್ವರಂ
> ಸಮರಮಾಹೇಶ್ವರಂ ಸಂಗರಮಾರ್ತ್ತಂಡ ಮನ್ನೆಯಸಿಂಗ ನಾಮಾದಿ
> ಸಮಸ್ತ ಪ್ರಶಸ್ತಿಸಹಿತಂ ಶ್ರೀಮತ್ ಜಯಕೇಸಿಯರಸರ್
> ನಾಗಾರ್ಗ್ಗಣ್ಡುಗೆಯ್ಯೆ ॥

ಇಲ್ಲಿ ಮಹಾಸಾಮಂತ ಜಯಕೇಸಿಯರಸನ ಸೈನಿಕ ಬಲ, ಶೌರ್ಯ– ಸಾಹಸಗಳನ್ನು ವರ್ಣಿಸುತ್ತಾ ಸಮರಮಾಹೇಶ್ವರನಾದ ಆತನನ್ನು "ಕಲಿಯುಗ ರೇವಂತ" ಎಂದು ಸ್ತುತಿಸಿದ್ದು ಗಮನಾರ್ಹವಾಗಿದೆ.

ಆಂಧ್ರಪ್ರದೇಶದ ನಾಡೆಣ್ಡ್ರದಲ್ಲಿರುವ ಮೂಲಸ್ಥಾನೇಶ್ವರ ದೇವಾಲಯದಲ್ಲಿ

---

೧೪ ನೋಡಿ: *EI* Vol.V. ಪು. ೨೩೬ n. 1.

೧೫ *JBBRAS-X*, ಪು. ೨೧೪, ಶಾಸನ ಪಾಠದ ಸಾಲು–೮.

೧೬ *PSOC Ins*. No. 218, Mysore Inscriptions, ಪು. ೨೦೦.

೧೭ ಅದೇ.

೧೮ ಅದೇ, ಪು. ೧೩೯.

೧೯ *EI*. Vol. XVI, ಪು. ೩೩೦, ಸಾಲು– ೧೧.

ಕಂಡುಬರುವ ಒಂದು ಸ್ತಂಭಶಾಸನದಲ್ಲಿ ಎರ್ರಮಣ್ಣನ ಶ್ರೇಷ್ಠ ಗುಣಾವಳಿಗಳನ್ನು ವರ್ಣಿಸುವಾಗ ಆತನನ್ನು 'ಕುದುರೆಕಲೆಯಲ್ಲಿ ರೇವಂತನಂತೆ' ಇದ್ದನೆಂದು ಹೇಳಲಾಗಿದೆ. (ಈ ಶಾಸನದ ಕಾಲ ಶಕ ಸಂವತ್ಸರ ೧೦೫೨; ಕ್ರಿ. ಶ. ೧೧೩೦).[೨೦]

ಕಲಚುರಿ ರಾಜನಾದ ಇಮ್ಮಡಿ ರತ್ನದೇವನ ಅಕಲ್ತರ ಶಿಲಾಶಾಸನದಲ್ಲಿ ಕುತೂಹಲ ಕಾರಿಯಾದ ಮಾಹಿತಿ ದೊರಕುತ್ತದೆ. ಈ ಶಾಸನದಲ್ಲಿ ಉಕ್ತವಾಗಿರುವಂತೆ ೮೯೩ ನೆಯ ಕಲಚುರಿ ಸಂವತ್ಸರದಲ್ಲಿ (ಕ್ರಿ. ಶ. ೧೧೪೧-೪೨) ರತ್ನದೇವನ ಸಾಮಂತನಾದ ವಲ್ಲಭರಾಜನು (ಭೂಲೋಕದಲ್ಲಿ ಕಣ್ಣಿಗೆ ಹಬ್ಬವನ್ನುಂಟು ಮಾಡುವಂಥ) ರೇವಂತ ದೇವಾಲಯವನ್ನು ನಿರ್ಮಿಸಿದನು :

> ...ತೆನೆದಮಾಭರಣಮಾ ರಚಿತಂ ಪೃಥಿವ್ಯಾಃ ಪತೇರ್ಸ್ಜಪತೆರ್ಮ್ಹಿಪಿತಿಮತ್ವಾ
> ರೇವಂತ ಮಂದಿರಮಿಷಾನ್ನಯನೋಪಭೋಗ್ಯಂ ಭ(ಕ್ತ್ಯಾ)ಪಚರ ಚತುರೆ
> (ಣ) ಯಶೋಧನೇನ । (ಸ) ಪಾಶ್ವ (ಸೂನು) ಭವನೋತ್ತಮ ಚಿತ್ರಕರ್ಮ
> ನಿರ್ಮಾಣತಃ ಸುವಿಶದಾಂ ಕಿರತಾ ಚ ಕೀತ್ರ್ತಿಂ । ತೇನಾಧುನಾ ಸಹ ಯ
> ಶೋಧನಮಾನಿಲೋಕೈರ್ವಿಸ್ಮಾಪಿತಃ ಸ ಭಗವಾನಪಿ ವಿಶ್ವಕರ್ಮಾ ।
> ಇ(ಹೋ) ಪವಾ (ಬಾ) ಹ್ಯಾಲಿ ವಿಲಾಸ(ವೆ) ಸ್ಮ(ಶ್ಮ) ನೋವಿ (ಚಿತ್ರಕರ್ಮೊನ್ನತ)
> ಮುತ್ತಮಂ ಧ (ನೈಃ) । ಅಚೀ (ಖ) ನಚ್ಚಾರೂತರೋಜರಾಜಿತಂ ಸ ಚ
> ತ್ರಿಲೋಕೀ ಮುಕುರಂ ಶ(ಸ)ರೋವರಂ ॥ ೨೧

ನಮಗೆ ಇದುವರೆಗೆ ತಿಳಿದುಬಂದಿರುವಂತೆ ರೇವಂತ ದೇವಾಲಯವನ್ನು ನಿರ್ಮಿಸಿದ್ದರ ಬಗೆಗೆ ಶಾಸನೀಯ ಉಲ್ಲೇಖಗಳು ತೀರವಿರಳವೆಂದು ಹೇಳಬಹುದು. ಮಧ್ಯಪ್ರದೇಶ ಮತ್ತು ಗುಜರಾತಪ್ರದೇಶಗಳಲ್ಲಿ ನಿರ್ಮಿಸಲಾಗಿದ್ದ ರೇವಂತ ದೇವಾಲಯುಗಳ ಬಗೆಗೆ ಕೆಲವು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಮಧ್ಯಕಾಲೀನ ಅನೇಕ ಶಾಸನಗಳಲ್ಲಿ ಸೇನಾಧಿಪತಿ, ಸಾಮಂತರಸರನ್ನು ಸ್ತುತಿಸುವಾಗ ಮಾತ್ರ 'ರೇವಂತ' ಶಬ್ದವನ್ನು ಎರವಲು ತೆಗೆದುಕೊಂಡಂತೆ ತೋರುತ್ತದೆ.

ಚಿತ್ರದುರ್ಗ ಜಿಲ್ಲೆಯ ಹರಿಹರದ ಶಾಸನವೊಂದರಲ್ಲೂ ರೇವಂತನನ್ನು 'ಸುರೇಖಾ ರೇವಂತ'ನೆಂದು ವರ್ಣಿಸಿರುವುದು ಗಮನಾರ್ಹವಾದುದಾಗಿದೆ. ೮೯೩ನೆಯ ಕಲಚುರಿ ಸಂವತ್ಸರದಲ್ಲಿ (ಕ್ರಿ. ಶ. ೧೧೪೧-೪೨) ಬರೆಯಲಾದ ಈ ಶಾಸನಪದ್ಯ ಹೀಗಿದೆ :

---

೨೦ *EI.* VI, ಪು. ೨೭೫.

೨೧ *CII*— IV-ii, ಪು. ೪೩೧-೩೨, ಶ್ಲೋಕ ೨೨-೨೩;
(ಇಮ್ಮಡಿ ಪೃಥ್ವೀದೇವನ ರತನಪುರ ಶಿಲಾಶಾಸನ ಕೂಡ ಈ ಮಾತನ್ನೇ ಸಮರ್ಥಿಸುತ್ತದೆ; ಇದರ ಕಾಲ ಕಲಚುರಿ ಸಂವತ್ಸರದ ೯೧೦ ಅಂದರೆ ಕ್ರಿ. ಶ. ೧೧೫೮-೯).

'ಗೃಹಣಸಿರ್ಗ್ಗತ ಪ್ರೇರಣಲಗ್ನಸ್ಥಾ (ಸ್ಥಾ)ಪನೋಲ್ಲಲಿತ ಸಾದಿಸು (ಧನ ?)
ಸೂ(ಶೂ) ಕಳಸಪ್ತಿ ಸಂಕುಳಗ್ರಾಹಿತ ಪಂಚಧಾರಾ ಪ್ರಪಂಚ
ಸಂಚರಣ ಚತುರತರ ಸುರೇಖಾವಂತನುಂ'[೨೨]

ಮಧ್ಯಪ್ರದೇಶದ ಬಿಲಾಸ್‌ಪುರ್ ಜಿಲ್ಲೆಯ ಶೇಯೊರಿನಾರಾಯಣದಲ್ಲಿರುವ ನಾರಾಯಣ ದೇವಾಲಯದ ಅಂಗಳದಲ್ಲಿ ಸಂಗ್ರಾಮಸಿಂಹನ ಒಂದು ಅದ್ಭುತವಾದ ಶಿಲಾಪ್ರತಿಮೆ ಯಿದ್ದು ಅವರ ಪೀಠಭಾಗದಲ್ಲಿರುವ ಶಾಸನದಲ್ಲಿ ರೇವಂತನ ಉಲ್ಲೇಖ ಕಂಡುಬರು ತ್ತದೆ. ೮೯೮ನೆಯ ಕಲಚುರಿ ಸಂವತ್ಸರದಲ್ಲಿ (ಕ್ರಿ. ಶ. ೧೧೪೬) ರಚಿಸಲಾದ ಈ ಶಾಸನದಲ್ಲಿ ಬಾಲಸಿಂಹ – ಆಮಣದೇವಿಯರ ಮಗನಾದ ಸಂಗ್ರಾಮಸಿಂಹನನ್ನು ಸೂರ್ಯಪುತ್ರ ರೇವಂತನೆಂದೇ ವರ್ಣಿಸಲಾಗಿದೆ.

"ಕನ್ಯಾ ಕಂದರ್ಪ್ಪತುಲ್ಯೋ ರವಿತನಯ ಸವೋ ವಾಜಿಪೂತ್ತುಂಗ
ಮಾತಾಜ್ಞಾರೋಹೆ ದೇವತೇಶಃ ಸುರಗುರುರಖಿಲಪ್ರಜ್ಞಯಾ ಖ್ಯಾತಕೀರ್ತಿಃ ॥[೨೩]

ಕಲ್ಯಾಣಚಾಲುಕ್ಯ ಮುಮ್ಮಡಿ ತೈಲನ ಕಾಲದ ಅಬ್ಲೂರು ಶಾಸನವು ಮಹಾ ಸಾಮಂತಾಧಿಪತಿ ಮಹದೇವರಸನನ್ನು 'ತುರಯ ರೇವಂತ' ಎಂದು ಬಣ್ಣಿಸುತ್ತದೆ (ಇದರ ಕಾಲ ಕ್ರಿ. ಶ. ಸು. ೧೧೫೩).[೨೪]

ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕು ದೇವರನಾವದಗಿಯ ಮಲ್ಲಿಕಾರ್ಜುನ ದೇವಾಲಯದಲ್ಲಿರುವ ಶಿಲಾಶಾಸನವು ಕಲ್ಯಾಣಚಾಲುಕ್ಯನಾದ ಇಮ್ಮಡಿ ಜಗದೇಕ ಮಲ್ಲನ ಕಾಲದ್ದಾಗಿದ್ದು (ಕ್ರಿ. ಶ. ೧೧೪೦), ಆತನ ಮಹಾಮಂಡಳೇಶ್ವರ ಸೋವಿ ದೇವರಸನನ್ನು ಈ ರೀತಿ ಬಣ್ಣಿಸುತ್ತದೆ :

...ತಗರನಗರಾಧೀಸ್ವರ ಡಂಗಾರಭೇರೀನಿರ್ಘೋಸಣ
ಸಮರವಿಭೀಷಣ ಸುವರ್ಣ್ನಗರುಡಧ್ವಜ ವಿಮಳ
ಕೀರ್ತ್ತಿಧ್ವಜ [ಸಿಳಾಱ]ವಂಸಪ್ರಸೂತ ಜೀಮೂತವಾಹನಾನ್ವಯ ಪ್ರಸೂತ
ರಿಪುಮಣ್ಡಳಿಕ ಶಿರಗಿರಿವಜ್ರದಣ್ಡ... ಕಾಮಿನೀಹೃದಯಕುಸ್ಮಕೋದಣ್ಡ
ರಣರಂಗ[ನೀಱ] ಸಿಂಗನ[ಂಕ]ಕಾ[ಱ] ವಿಸಮಹಯಾ
ರೂಢ ಪ್ರೌಢರೇವನ್ತ...[೨೫]

ಹೊಯ್ಸಳ–ಯಾದವರ ಕಾಲದಲ್ಲಿ 'ರೇವಂತ' 'ತುರಗರೇವಂತ' ಎಂಬುದರ ಬಳಕೆ ತೀರ ಸಾಂಪ್ರದಾಯಿಕವಾಗಿ ಹೋಗುತ್ತದೆ. ಅಂತೆಯೇ ಅದಕ್ಕೆ ಐತಿಹಾಸಿಕ

---

೨೨ *PSOC Inscriptions*, No. ೧೨೫. ಸಾಲು–೪೭.

೨೩ CII– IV, pt. ii, ಪು. ೫೮೨, ಶ್ಲೋಕ ೨.

೨೪ EI. V, ಪು. ೨೩೬, ಸಾಲು ೧೦.

೨೫ SII. XX (B.K. No. 21 of 1936-37).

ಮೌಲ್ಯ ಎಷ್ಟರ ಮಟ್ಟಿಗೆ ಕೊಡಬೇಕಾದೀತೆಂಬುದು ಪ್ರಶ್ನಾರ್ಹವಾಗಿಯೆ ಉಳಿಯುತ್ತದೆ. ಹಾಸನ ಜಿಲ್ಲೆ, ಬೇಲೂರು ತಾಲೂಕು ಹಳೇಬೀಡು ಹೋಬಳಿ ಕಸಬಾ ಗ್ರಾಮದ ಊರ ಬಾಗಿಲಲ್ಲಿದ್ದ ೨೦ ಸಾಲುಗಳ ಶಿಲಾಶಾಸನದಲ್ಲಿ ತಿಳಿಸಿದಂತೆ ಹೊಯ್ಸಳ ಪ್ರತಾಪ ವೀರಬಲ್ಲಾಳ ದೇವರಸರು ದಂಡಯಾತ್ರೆಗೈದು ಹದಡೆಯಕುಪ್ಪದಲ್ಲಿ ಬೀಡುಬಿಟ್ಟಿದ್ದರು. ಆಗ ಸೈನ್ಯದಲ್ಲಿದ್ದ (ಖ್ಯಾತ ಯೋಧನಾದ) ದಂಡನಾಯಕನಾದ ಚೆನ್ನಕಾಳಮ ಸಾಹಣಿಯನ್ನು ಈ ರೀತಿ ಬಣ್ಣಿಸಲಾಗಿದೆ :

"ಶ್ರೀಮತು ವಾರುವಸಾಹಣದೆ ರಾಜಪುತ್ರಸಾಹಣಗಳು ಅಧಿಪಾಲಕ ಕಟಕದ ಗೋವ, **ತುರೆಯ ರೇವಂತ, ಸೂಳಪಂಚಾನನ, ಅಧಿವರಾರೂಢ ರೇವನ್ತ, ಮಚ್ಚರಿಪ ಸಾಹಣಗಳಿ ಗೆದೆಯಗೂಂಟ ಮಚ್ಚರಿಪರಾಯಸಾಹಣಿಗಳ ಮೊಗದ ಬಿರುದರಾಯ, ಸಾಹಣಿಗಳ ಬೆಂನಚಂಮಟಿಗೆ ಬಿರುದ ಮಣಿಕಳಿಕೆ, ಕಲಿಗಳಂಕುಸಂ..."**[೨೬]

ಹಾಸನ ಜಿಲ್ಲೆಯ ಶ್ರವಣಬೆಳಗೊಳದ ಅಕ್ಕನ ಬಸದಿಯಲ್ಲಿರುವ ಶಾಸನ, ಹೊಯ್ಸಳ ವೀರಬಲ್ಲಾಳ IIನ ಕಾಲದ್ದಾಗಿದೆ. ಶಕ ವರ್ಷ ೧೧೦೪ (ಕ್ರಿ.ಶ. ೧೧೮೧) ರಲ್ಲಿ ರಚಿಸಲಾದ ಈ ಶಾಸನದಲ್ಲಿ, ಹೊಯ್ಸಳ ಇಮ್ಮಡಿ ಬಲ್ಲಾಳನ ಪ್ರಧಾನನಾದ ಚಂದ್ರಮೌಳಿಯ ಮಗನನ್ನು **"....ದುದ್ಧರ ತುರಂಗಾರೂಢ ರೇವನ್ತನ್"** ಎಂದು ಬಣ್ಣಿಸಲಾಗಿದೆ.[೨೭]

ಕಲಚುರಿ ಭಿಲ್ಲಮನ ಮತ್ತಿ ಶಾಸನದಲ್ಲೂ ಶ್ರೇಷ್ಠ ಅಧಿಕಾರಿಯ ಬಿರುದಾವಳಿಗಳನ್ನು ಕೊಡುವಾಗ **"........ಅತಿವಿಶ(ಷ) ಮಹಯಾರೂಢ ಪ್ರೌಢರೇಖಾ ರೇವಂತಂ"** ಎಂದು ಹೇಳಲಾಗಿದೆ.[೨೮]

ಯಾದವ ಸಿಂಘಣನ ಕಾಲದ ಕೊಳೂರು ಕನ್ನಡ ಶಾಸನದಲ್ಲಿ ಉಕ್ತನಾದ ಮಹಾಪ್ರಧಾನ ಕೇಶವನಾಯಕರನ್ನು ಈ ರೀತಿ ವರ್ಣಿಸಲಾಗಿದೆ :

"ಶ್ರೀಮನ್ಮಹಾಪ್ರಧಾನಂ ದ್ವಿಜಕಲಕಮಳಮಾರ್ತ್ತಂಡಂ ಕಾಮಿನೀಮನೋನಯನ ಪುಷ್ಪಕೋಧಂಡನುಂ ಶರಣಾಗತವಜ್ರಪಂಜರನುಂ ಯುಧಿದಿಕ್ಕುಂಜರನುಂಯ**ತಿವಿಶಮಹಯಾರೂಢ** ಪ್ರೌಢರೇಖಾರೇವಂತಂನುಂ ಸ್ವಾಮಿಭಕ್ತ ಹನೂಮಂತನುಂ..."

ಕ್ರಿ. ಶ. ಸು. ೧೨೧೦-೪೬ರ ಈ ಶಾಸನದ ಈ ಉಲ್ಲೇಖ ಗಣನೀಯವಾಗಿದೆ. "ವಿಶಮಹಯಾರೂಢ ಪ್ರೌಢರೇಖಾರೇವಂತ" ಎಂಬುದು ಕೇಶವನಾಯಕರ ಸೈನಿಕಗುಣಗಳಿಗೆ ನೀಡಿದ ಕನ್ನಡಿಯಂತಿದೆ.

---

೨೬ MAR, 1941, ಪು. ೧೫೦.

೨೭ EC. (2nd Edn.) 1973, ಪು. ೫೦೪.

೨೮ EI. XV, ಪು. ೩೬, ಸಾಲು- ೪೦.

ಕಲಚುರಿ ಗೋಪಾಲನ ಪ್ರಜರಿಪಲಿ ಶಿಲಾಶಾಸನದಲ್ಲಿ (ಸು. ೧೨ನೆಯ ಶತಮಾನ) ಗೋಪಾಲನನ್ನು ರೂಪದಲ್ಲಿ ಮನ್ಮಥನೆಂದೂ ಶೌರ್ಯದಲ್ಲಿ ಶೂದ್ರಕನೆಂದೂ ಅಶ್ವಾರೂಢನಾಗಿ ನಡೆಸುವಲ್ಲಿ ರೇವನ್ತನಂತೆಯೂ ಶೋಭಿಸುತ್ತಿದ್ದನೆಂದು ವರ್ಣಿಸಲಾಗಿದೆ. "ಸ್ಥಾನೆ ಸ್ಥಾನೆ ಹಯಾರೂಢೊ ರೇವಂತ ಇವ ದೃಶ್ಯತೆ".[೨೯]

ಹಾಸನ ಜಿಲ್ಲೆಯ ಅರಸಿಕೆರೆ ತಾಲೂಕು ಹೊನ್ನಗಟ್ಟಕ್ಕೆ ಸೇರಿದ ಕೆರೆಯ ಕೋಡಿಯ ಬಳಿ ಗೊಲ್ಲರಹಟ್ಟಿ ಹತ್ತಿರವಿರುವ ಶಾಸನವನ್ನು ಕ್ರಿ. ಶ. ೧೨೧೪ರಲ್ಲಿ ರಚಿಸಲಾಗಿದೆ. ಭುಜಗಲಿವೀರವಿಕ್ರಮನಾದ ವೀರಬಲ್ಲಾಳನ ಮಹಾಪಸಾಯ್ತ ಘಣ್ಟೆಯಸಿಂಗನನ್ನು ಈ ರೀತಿ ಸ್ತುತಿಸಲಾಗಿದೆ :

"ಸ್ವಸ್ತಿ ಮನ್ಮಹಾಪಸಾಯ್ತಂ ಅತಿನಿಶಿತನುಹಯಾರೂಢ ಪ್ರೌಢರೇಖಾ ರೇವನ್ತಂ ವೀರಲಕ್ಷ್ಮೀಕಾಂತಂ..."[೩೦]

ಕೆರೆಹಳ್ಳಿ ಹೋಬಳಿ ಹೊಲುಗುಡ್ಡೆಯ ಶಾಸನದ ತಮ್ಮರಸನನ್ನೂ **ಅತಿನಿಶಿತನುಹಯಾರೂಢಪ್ರೌಢರೇಖಾರೇವಂತ**ನೆಂದು ಬಣ್ಣಿಸಲಾಗಿದೆ.[೩೧]

ಕಾಠೆವಾಡದ ವಂಥಲಿಯಲ್ಲಿರುವ ಕ್ರಿ. ಶ. ೧೨೯೦ರ ಶಾಸನದಿಂದ ಗುಜರಾತ್ ಕಾಠೆವಾಡ್ ಪ್ರದೇಶದಲ್ಲಿ ರೇವಂತಾರಾಧನೆಯಿತ್ತೆಂಬುದು ತಿಳಿದುಬರುತ್ತದೆ. ಶಾಸನವು ರೇವಂತನ ಸ್ತುತಿಯಿಂದಲೇ ಆರಂಭವಾಗುತ್ತವೆ. ಅಲ್ಲದೆ ರೇವಂತ ವಿಗ್ರಹವನ್ನು ಹೊತ್ತ ರಣಸ್ತಂಭವೊಂದನ್ನು ವಾಮನಸ್ಥಲಿ ಎಂಬಲ್ಲಿ ಪ್ರತಿಷ್ಠಾಪಿಸಲಾಯಿತೆಂದೂ ಪ್ರಸ್ತುತ ಶಾಸನದಿಂದ ವ್ಯಕ್ತವಾಗುವುದು. ಇದಕ್ಕಿಂತ ಹೆಚ್ಚಾಗಿ ರೇವಂತ ದೇವನಿಗಾಗಿ ಸುಂದರವಾದ ಒಂದು ಮಂಟಪವನ್ನು ನಿರ್ಮಿಸಲಾಯಿತೆಂದೂ ಈ ಶಾಸನದಿಂದ ತಿಳಿದುಬರುವುದು. ಅಂತೆಯೆ ಈ ಶಾಸನವು ಐತಿಹಾಸಿಕವಾಗಿ ಮಹತ್ವದ್ದಾಗಿದೆಯೆನ್ನುವುದರಲ್ಲಿ ಸಂಶಯವಿಲ್ಲ. ವಂಥಲಿಶಾಸನದಲ್ಲಿ ರೇವಂತನ ಸ್ತುತಿ ಹೀಗಿದೆ :

ಓಂನಮಃ ಶ್ರೀ ರೇವಂತಾಯ...ತನ್ಮೂರ್ತಿಯುಕ್ತಂ...
ರಣಸ್ತಂಭಮಿದಂ ವ್ಯಧಾತ್ ॥
ಸಹಸ್ರ ಧಾಮ್ನಸ್ತನುಜನ್ಮನಃ ಶ್ರೀರೇವಂತ ನಾಮ್ನಾಃ ಪುರತೊ ನವೀನಃ ।
ಅಚೀಕರನ್ಮಣ್ಡಪಮದ್ವಿತೀಯಮಹೊ ಮಹಾಸಾಧನಿಕಃ ಸ ಏಷಃ ॥[೩೨]

---

೨೯ CII IV-ii, ಪು. ೫೯೨, ಶ್ಲೋಕ ೪೧.

೩೦ MAR 1937, ಪು. ೧೨೭, ಶ್ಲೋಕ ೨೨–೨೩.

೩೧ ಅದೇ, 1922, ಪು. ೭೬, ಶ್ಲೋಕ ೪.

೩೨ ಭಂಡಾರಕರ್ ಡಿ. ಆರ್. : *List of the Inscription of North India in Brahmi and its derivative scripts* from about 200 B. C. (App. to EI and Records of ASI XIX to XXIII), ಪು. ೮೯.

ಧಾರವಾಡ ಜಿಲ್ಲೆಯ ನರೇಂದ್ರ ಅಥವಾ ಕುಂಭಾಪುರದ(ಕುಂದೂರಿನ) ಮಲ್ಲಿಕಾರ್ಜುನ ದೇವಾಲಯದ ಬಲಗಡೆ ಇರುವ ಆರನೆಯ ವಿಕ್ರಮಾದಿತ್ಯ ಹಾಗೂ ಗೋವೆಯ ಕದಂಬ ಇಮ್ಮಡಿ ಜಯಕೇಸಿಯ ಕಾಲದ ಕನ್ನಡ ಶಾಸನದಲ್ಲಿ ಸಿಂಹದಂಡನಾಥನನ್ನು ಈ ರೀತಿ ವರ್ಣಿಸಲಾಗಿದೆ.

> "ಅತಿ ವಿಷಮರಸ ತುರಂಗಮಪತಿಯಂ ರೇವಂತನಂತಿರೆರಲು ಸಕಳ
> ಕ್ಷಿತಿ ಪೊಗಳುತ್ತಿರೆ ಸೇನಾಪತಿತಿಳಕಂ ಸಿಂಹದಣ್ಣನಾಥನೆ ಬಲ್ಲಂ "[೩೩]

ಈತ ಆರನೆಯ ವಿಕ್ರಮಾದಿತ್ಯನ ದಂಡನಾಯಕನಾದ ಲಕ್ಷ್ಮರಾಜನ ನಾಲ್ವರು ಪುತ್ರರಲ್ಲಿ ಒಬ್ಬನಾಗಿದ್ದು ಸಿಂಗರಸ, ಸಿಂಗಣ, ಸಿಂಹದಂಡನಾಥನೆಂದು ಖ್ಯಾತನಾಗಿದ್ದಾನೆ. ಆತನು ಸೈನಿಕ ಶಕ್ತಿಸಾಮರ್ಥ್ಯಗಳಲ್ಲೂ ಖ್ಯಾತನಾಗಿದ್ದನೆಂಬುದು ಪ್ರಸ್ತುತ ಶಾಸನದಿಂದ ತಿಳಿದುಬರುತ್ತದೆ. ವೇಮುಲವಾಡದ ಇಮ್ಮಡಿ ಅರಿಕೇಸರಿಯ ಶಾಸನದಲ್ಲೂ ತುರಗ ರೇವಂತನ ಉಲ್ಲೇಖವಿದೆ. ಹೀಗೆ ಮಧ್ಯಕಾಲೀನ ಶಾಸನಗಳಲ್ಲಿ ರೇವಂತನ ಉಲ್ಲೇಖ ಸಾಮಾನ್ಯವಾಗಿ ಕಂಡುಬರುವುದು.

ಸಪ್ತಾಶ್ವಪುತ್ರನಾದ ತುರಗರೇವಂತನ ಉಲ್ಲೇಖವು ಮಧ್ಯಕಾಲದ ಶಾಸನಗಳಲ್ಲಿ, ಅದರಲ್ಲೂ ಕರ್ನಾಟಕದ ಮಧ್ಯಕಾಲೀನ ಶಾಸನಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆಯಾದರೂ ೧೦ನೆಯ ಶತಮಾನಕ್ಕಿಂತ ಪೂರ್ವದ ಶಾಸನಗಳು ತುರಗರೇವಂತನನ್ನು ಉಲ್ಲೇಖಿಸಿದ್ದೇನೂ ಇದುವರೆಗೆ ತಿಳಿದುಬಂದಿಲ್ಲ. ಶಬ್ದಕಲ್ಪದ್ರುಮದಲ್ಲಿ ನಿರೂಪಿಸಿರುವಂತೆ ರಾಜಮಹಾರಾಜರು ಪ್ರಾಚೀನ ಕಾಲದಲ್ಲಿ ನಿರಾಜನವಿಧಿಯಾದ ಏಳನೆಯ ದಿವಸ ಆಚರಿಸುತ್ತಿದ್ದ ರೇವಂತಪೂಜೆ ಮತ್ತು ಅಶ್ವವಿದ್ಯೆಯಲ್ಲಿ ಆತನನ್ನು ಆದರ್ಶವಾಗಿಟ್ಟುಕೊಳ್ಳುವ ಪರಿಪಾಠವು ೧೨-೧೩ನೆಯ ಶತಮಾನದ ವೇಳೆಗೆ ಸಾಂಪ್ರದಾಯಿಕವಾಗಿ ಬಿಟ್ಟಂತೆ ತೋರುತ್ತದೆ. ಅಂತೆಯೇ ಸಾಮಂತರನ್ನು, ಪ್ರಧಾನರನ್ನು, ಯೋಧರನ್ನು ತುರಗರೇವಂತ, ಹಯಾರೂಢರೇವನ್ತ ಎಂದು ಮುಂತಾಗಿ ಸ್ತುತಿಸುವ ವಾಡಿಕೆ ಸರ್ವಸಾಮಾನ್ಯವಾಗಿ ಕಂಡುಬರುವುದು. ಇದರ ಐತಿಹಾಸಿಕ ಮೌಲ್ಯವನ್ನು ನಿರ್ಧರಿಸುವುದೂ ಕಷ್ಟವಾಗುತ್ತದೆ. ಅದೇನಿದ್ದರೂ ಮಧ್ಯಪ್ರದೇಶ, ಗುಜರಾತ್, ಕರ್ನಾಟಕ ಪ್ರಾಂತ್ಯಗಳಲ್ಲಿ ಕಂಡು ಬರುವ ನೂರಾರು ಮಧ್ಯಕಾಲೀನ ಶಾಸನಗಳಲ್ಲಿ **ತುರಗರೇವಂತ** ಉಲ್ಲೇಖಿತನಾಗಿದ್ದುದನ್ನು ಗಮನಿಸಿದರೆ, ರೇವಂತಾರಾಧನೆ ಈ ಪ್ರದೇಶದಲ್ಲಿ ಜನಪ್ರಿಯವಾಗಿತ್ತೆಂದೂ ರೇವಂತನು ವೀರಯೋಧ ಸಾಮಂತರಸರಿಗೆ ಆದರ್ಶಪ್ರಾಯನಾದ ಆರಾಧ್ಯದೇವತೆಯಾಗಿದ್ದನೆಂದೂ ಊಹಿಸಲವಕಾಶವಿದೆ. ದಕ್ಷಿಣಕನ್ನಡ ಜಿಲ್ಲೆಯ ಬಾರಕೂರು, ಹೊಸಕೋಟೆ ತಾಲೂಕು ಬನದಹಳ್ಳಿ, ಹಾಸನ ಜಿಲ್ಲೆಯ ಸೂಳೆಕಟ್ಟೆ, ಮುಂತಾದೆಡೆಗಳಲ್ಲಿ ಕಂಡುಬರುವ ರೇವಂತ(?) ಗುಡಿಗಳೂ ಇದಕ್ಕೆ ಪುಷ್ಟಿ ನೀಡುವವು.

---

೩೩ EI. XIII, ಪು. ೩೦೬, ಶ್ಲೋಕ ೪೯.

ನಾ – ನೀ

• ಅ. ಕೆ. ಪ್ರಕಾಶ

ನಿನ್ನ ಬೆಳದಿಂಗಳ
ನೆನಪಿನ
ಅಂಗಳದ ಒಳಗೆ ನನ್ನ
ಅಪರಿಚಿತ
ಹುಡುಕಾಟದ ರಥ
ಅಹೋರಾತ್ರಿ
ಬೆಳಕು–ನೆರಳಾಟದಲ್ಲಿ
ಓಡಾಡಿ ದಣಿದು
ಪಕ್ಕನೆ
ಉಲ್ಕೆ ಬಿದ್ದಂತೆ–
ಚಕ್ರ,
ಕೀಲು, ನರನರಗಳನ್ನು
ಮಗು ಕಿತ್ತಿಟ್ಟು
ಬಿಕ್ಕಿದ
ಗಡಿಯಾರದಂತೆ
ನಾನು, ನನ್ನ ರಥ–
ನಡುವೆ
ನೀನು.

• •

ಶ್ರೀಕೃಷ್ಣಪಾರಿಜಾತ ಮತ್ತು ಸಿರಗುಪ್ಪಿ ಸದಾಶಿವಯ್ಯ

● ಎಂ. ಎಂ. ಕಲಬುರ್ಗಿ

'ಶ್ರೀಕೃಷ್ಣ ಪಾರಿಜಾತ' ನಮ್ಮ ಜನಪದ ಸಣ್ಣಾಟಸಾಹಿತ್ಯದ ಮುಡಿಯ ಮಾಣಿಕ್ಯ. ಭಾಗವತಪುರಾಣದಲ್ಲಿ ಮಿನುಗುತ್ತಲಿದ್ದ ಈ ಕಿರುಪೊಡರನ್ನು ಪದ್ಯ ನಾಟಕವನ್ನಾಗಿ ಬೆಳಗಿಸಿದವ ರಾಯಚೂರು ಜಿಲ್ಲೆಯ ಅಪರಾಳ ಗ್ರಾಮದ ತಮ್ಮಣ್ಣ. ಕಾಲಾಂತರದಲ್ಲಿ ಈ ಪದ್ಯನಾಟಕವನ್ನು ಗದ್ಯಪದ್ಯನಾಟಕವನ್ನಾಗಿಸಿದವ ಬೆಳಗಾವ ಜಿಲ್ಲೆಯ ಕುಲಗೋಡ ಗ್ರಾಮದ ತಮ್ಮಣ್ಣ. ಇದರಿಂದ ಈ ವರೆಗೆ ಪೂರ್ವದಿಕ್ಕಿನ ರಾಯಚೂರ ಸೀಮೆಯಲ್ಲಿ ಸಂಗೀತಸಭೆಯ ವಸ್ತುವಾಗಿದ್ದ ಅದು ಈಗ ರಂಗಭೂಮಿಯ ನಾಟಕವಾಗಿ ಪಶ್ಚಿಮದಿಕ್ಕಿನ ಗೋಕಾಕ, ಜಮಖಂಡಿ ಇತ್ಯಾದಿ ಪ್ರದೇಶಗಳಲ್ಲಿ ಪಾರಿಜಾತಪುಷ್ಪದಂತೆಯೇ ಅರಳಿ ಪರಿಮಳಿಸಿತು.

ಗೀತನಾಟಕವಾದ ಕೃಷ್ಣಪಾರಿಜಾತವನ್ನು ಬರೆದ ತಮ್ಮಣ್ಣನು ರಾಯಚೂರು ಜಿಲ್ಲೆಗೆ ಸಂಬಂಧಿಸಿದ ಅಪರಾಳ ಗ್ರಾಮದವನು. ಪುರಾಣೇತಿಹಾಸ ಬಲ್ಲಿದನೂ ತತ್ವಜ್ಞಾನ-ಸಂಗೀತಜ್ಞಾನ ವಿದ್ವಾಂಸನೂ, ದೈವದತ್ತ ಪ್ರತಿಭಾಶಾಲಿಯೂ, ವಿಷ್ಣುಭಕ್ತಿ ಪರಾಯಣನೂ ಆಗಿದ್ದ ಬ್ರಾಹ್ಮಣಕವಿಯೀತ. ಶ್ರೀಕೃಷ್ಣಪಾರಿಜಾತವನ್ನು ಇಡಿಯಾಗಿ ಈತನೇ ಬರೆದನೆಂದು ಸಾಮಾನ್ಯವಾಗಿ ಭಾವಿಸಲಾಗುತ್ತಿದ್ದರೂ ಇವನಿಂದ ಕೃತಿ ಅಪೂರ್ಣವಾಯಿತೆಂಬ ಅಸ್ಪಷ್ಟ ಪ್ರತೀತಿಯೂ ಪ್ರಚಾರದಲ್ಲಿದೆ.

ನಾರದನಿಂದ ಪಡೆದ ಪಾರಿಜಾತಪುಷ್ಪವನ್ನು ಶ್ರೀಕೃಷ್ಣಪರಮಾತ್ಮನು ರುಕ್ಮಿಣಿಗೆ ಕೊಟ್ಟುದನ್ನು ಕೇಳಿ ಸಹಿಸದ ಸತ್ಯಭಾಮೆ, ರುಕ್ಮಿಣಿಗೆ ಅಲ್ಲದ ಮಾತುಗಳನ್ನಾಡುತ್ತಾಳೆ. ಲಕ್ಷ್ಮಿಯ ಅವತಾರವಾದ ರುಕ್ಮಿಣಿಯನ್ನು ದೂಷಿಸುವ ಈ ಪ್ರಸಂಗವನ್ನು ಬರೆದ ಕಾರಣ ಲಕ್ಷ್ಮಿಯ ಶಾಪದಿಂದ ಅಪರಾಳ ತಮ್ಮಣ್ಣನು ಕೃತಿಯನ್ನು ಪೂರ್ಣಗೊಳಿಸದೆ ಅಕಾಲಮೃತ್ಯುವಿಗೆ ವಶವಾದನೆಂದೂ ಉಳಿದ ಭಾಗವನ್ನು ಇನ್ನೊಬ್ಬನು ಬರೆದು ಪೂರ್ಣಗೊಳಿಸಿದನೆಂದೂ ಜನರು ಅಲ್ಲಲ್ಲಿ ಹೇಳುತ್ತಾರೆ.[೧] ತಮ್ಮಣ್ಣನ ಅಭಿಮಾನಿಗಳು ಈ ಹೇಳಿಕೆಯನ್ನು ಕಟ್ಟುಕಥೆಯೆಂದು ಅಲ್ಲಗಳೆಯುತ್ತಲಿರುವರಾದರೂ ಪೂರ್ಣ

೧ ಈ ಸಂಗತಿಯನ್ನು ನನ್ನ ಗಮನಕ್ಕೆ ತಂದವರು ಗುರುಗಳಾದ ಡಾ. ಎಂ.ಎಸ್.ಸುಂಕಾಪುರ ಅವರು.

ಮಾಡಿದವ ಬೇರೊಬ್ಬನೆಂಬ ಪ್ರತೀತಿ ಇನ್ನೂ ಜೀವಹಿಡಿದಿದೆ.[೨] ಈ ಪ್ರತೀತಿಯನ್ನು ಒರೆ ಹಚ್ಚಿ ನೋಡುವುದೇ ಈ ಲೇಖನದ ಉದ್ದೇಶ.

ಸಾಮಾನ್ಯವಾಗಿ ಯಾವುದೇ ಕೃತಿಯ ಕರ್ತೃವಿವರ ಅಂತ್ಯದ ಮಂಗಲಪದ್ಯದಲ್ಲಿ ಬರುತ್ತದೆ. ಈ ದೃಷ್ಟಿಯಿಂದ ಶ್ರೀಕೃಷ್ಣಪಾರಿಜಾತದ ಕೊನೆಗೆ ಬರುವ “ಶೋಭನವೇ ಶೋಭನವೇ” ಎಂಬ ಮಂಗಲಪದ್ಯವನ್ನು ಇಲ್ಲಿ ನೋಡಬಹುದು.

ಶೋಭನವೇ ಶೋಭನವೇ
ಶೋಭಿತ ಕನಕಾದ್ರಿವಾಸನಿಗೇ ॥ ಪಲ್ಲ ॥

(ಪದ್ಯ ೧–೪)

ಧರೆಯೊಳು ರಾಯಚೂರು ಸೀಮೆಯೊಳು
ವರದಪರಾಳ ತಮ್ಮಣ್ಣನು ವಿರಚಿಸಿ
ಪಾರಿಜಾತವು ಕೊರವಂಜಿಯು
ಸಿರಿಸತ್ಯಭಾಮೆಗೆ ತ್ಯಾಗವನು ॥ ೫ ॥

ಬೇಡಲು ಬೀಗರಿತ್ತಾ ಪೊದಿಕೆ
ಆಡಲು ಭೋಜನ ನೀಡೆನುತ
ಆಡಿದ ವಚನದಿ ಮುಂದಕೆ ನೂಡದೆ
ನಾಡೊಳು ಪಸರಿಸಿತೀ ಕಾವ್ಯ ॥ ೬ ॥

‘ಅಲ್ಲಿಯಪುರದ’[೩] ಭೀಮನದಾಸ
ಸುಲಭತನದಿ ಪಾಠವ ಮಾಡಿ
ಎಲ್ಲ ನಾಡೊಳು ಕೀರ್ತಿಯೆಸೆವ ಕನಕಗಿರಿ
ಯಲ್ಲಿ ಬರಲು ಕಾಲೋಚಿತದಿ ॥ ೭ ॥

ಮಂಗಳಮಹಿಮ ಶ್ರೀ ನರಹರಿಯ
ಹಿಂಗದೆ ಭಜಿಸುವ ಹರಿದಾಸ
ರಂಗಭೂಪಾಲನು ರಸಿಕ ವಿಚಾರಿಸಿ
ಮುಂಗೊಳಿಸೆಂದು ಬುದ್ಧಿಯ ಕೊಡಲು ॥ ೮ ॥

ಪಾರಿಜಾತವ ತಂದ ಪರಿಮಾಯ
ಸಾರ ಭಾಗವತ ಕ್ರಮದಿಂದ
ಪೂರಣವಾಯಿತು ಹೇಳುವ ಕೇಳುವ
ಸ್ವಾರಸ್ಯದವರಿಗೆ ಸಂಪದವು ॥ ೯ ॥[೪]

---

೨ ಶ್ರೀಕೃಷ್ಣಪಾರಿಜಾತವನ್ನು ಪೂರ್ತಿಯಾಗಿ ಅಪರಾಳ ತಮ್ಮಣ್ಣನೇ ಬರೆದನೆಂದು ಶ್ರೀ ಬೆಟಗೇರಿ ಕೃಷ್ಣಶರ್ಮರ ಅಭಿಪ್ರಾಯ; ಚರ್ಚೆಯಿಂದ ತಿಳಿದುಬಂದ ಸಂಗತಿಯಿದು.

೩ ‘ಅಲ್ಲಿಹಪುರ’ ಎಂಬ ಬೇರೊಂದು ಪಾಠವೂ ಇದೆ.

೪ ಶ್ರೀ ಆರ್. ಜಿ, ಕುಲಕರ್ಣಿ : ಶ್ರೀಕೃಷ್ಣಪಾರಿಜಾತ (೧೯೭೨, ಕನ್ನಡ ಅಧ್ಯಯನಸಂಸ್ಥೆ ಮೈಸೂರು) ಪು. ೨೭೬–೨೭೭.

ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ಪದ್ಯಗಳಿಂದ "ರಾಯಚೂರು ಸೀಮೆಯ ಅಪರಾಳ ತಮ್ಮಣ್ಣನು ವಿರಚಿಸಿದ ಶ್ರೀಕೃಷ್ಣಪಾರಿಜಾತವು, ಸತ್ಯಭಾಮೆಯಲ್ಲಿಗೆ ಬಂದ ಕೊರವಂಜಿಯು ಭವಿಷ್ಯವನ್ನು ಹೇಳಿ, ಕಾಣಿಕೆ ಸಹಿತ ಊಟಕ್ಕೆ ನೀಡೆಂದು ಕೇಳುವ ಪ್ರಸಂಗದಲ್ಲಿ ನಿಂತುಬಿಟ್ಟಿದ್ದಿತು. ಆದರೂ ಅಷ್ಟು ಭಾಗ ಮಾತ್ರ ನಾಡಿನಲ್ಲಿ ಪ್ರಸಾರ ಪಡೆಯುತ್ತಲೇ ಇದ್ದಿತು. ಇದನ್ನು ಕಂಠಗತಮಾಡಿಕೊಂಡಿದ್ದ 'ಅಲ್ಲಿಯಪುರದ ಭೀಮನದಾಸ'ನು ಕನಕಗಿರಿ (ಗ್ರಾಮ)ಕ್ಕೆ ಬರಲು, ಆ ಗ್ರಾಮದಲ್ಲಿದ್ದ ಶ್ರೀಹರಿಯ ಭಕ್ತನೂ ಹರಿದಾಸನೂ (ಗುಜ್ಜಲ ವಂಶದ ದೊರೆಯೂ) ಆದ ರಂಗಭೂಪಾಲನು (ಅರ್ಧಕ್ಕೆ ನಿಂತಿರುವ ಈ ಕೃಷ್ಣಪಾರಿಜಾತವನ್ನು) ಮುಂದುವರಿಸೆಂದು ತಿಳಿಹೇಳಿದನು. (ಅರಸನ ಕೋರಿಕೆಯ ಮೇರೆಗೆ) ಭಾಗವತ ಕ್ರಮದಿಂದ ಈ ಕೃತಿ ಪೂರ್ಣವಾಯಿತು" ಎಂಬ ಅರ್ಥ ಹೊರಡುತ್ತದೆ.

ಅಪರಾಳ ತಮ್ಮಣ್ಣನಿಂದ ಅರ್ಧಕ್ಕೆ ನಿಂತಿದ್ದ ಈ ಕಾವ್ಯವನ್ನು "ಅಲ್ಲಿಯಪುರದ ಭೀಮನದಾಸ"ನೆಂಬವನು ಕನಕಗಿರಿಯ ರಂಗಭೂಪಾಲನ ಅಜ್ಞೆಯಂತೆ ಪೂರ್ಣಗೊಳಿಸಿದನೆಂದು ಈ ಮಂಗಲ ಪದ್ಯಗಳಿಂದ ಸ್ಪಷ್ಟವಾಗುತ್ತಿದ್ದರೂ ಈ ವರೆಗೆ ಕೃಷ್ಣಪಾರಿಜಾತವನ್ನು ಅಭ್ಯಸಿಸಿದ ವಿದ್ವಾಂಸರಾಗಲೀ ಪ್ರಕಟಿಸಿದ ಸಂಪಾದಕರಾಗಲೀ೫ ಈ ಸಂಗತಿಯ ಕಡೆಗೆ ಗಮನ ಹರಿಸದುದು ಆಶ್ಚರ್ಯವೇ ಸರಿ!

ಅಪೂರ್ಣಸ್ಥಿತಿಯಲ್ಲಿ ನಿಂತಿದ್ದ ಈ ಕೃತಿಯನ್ನು ಪೂರ್ಣಗೊಳಿಸಿದ "ಅಲ್ಲಿಯಪುರದ ಭೀಮನದಾಸ" ಯಾರು? ಎಂಬ ಪ್ರಶ್ನೆಗೆ ಈಗ ಉತ್ತರ ಹುಡುಕಬೇಕು. ಈ ವರೆಗೆ ಅಜ್ಞಾತವಾಗಿಯೇ ಉಳಿದಿದ್ದ ಆತನ ಹೆಸರು ಸಿರಗುಪ್ಪಿ ಸದಾಶಿವಯ್ಯನೆಂದು ನನಗೆ ಲಭಿಸಿದ 'ಶ್ರೀಕೃಷ್ಣಪಾರಿಜಾತ'ದ ಒಂದು ಹಸ್ತಪ್ರತಿಯಿಂದ ತಿಳಿದು ಬರುತ್ತದೆ.

೬" × ೪" ಆಕಾರದ ಈ ಕಾಗದ ಪ್ರತಿ ಸಿಂದಗಿ ತಾಲೂಕಿನ ಅಸ್ಕಿಗ್ರಾಮದ ಶ್ರೀ ಎಂ. ಎಂ. ಪಡಶೆಟ್ಟಿ ಅವರಿಂದ ನನಗೆ ಲಭಿಸಿತು.* ಅವರಿಗೆ ಇದು ಸಿಕ್ಕುದು ಮುದ್ದೇಬಿಹಾಳ ತಾಲೂಕಿನ ತಾಳಿಕೋಟಿ ಗ್ರಾಮದಲ್ಲಿ. "ಶ್ರೀಗುರು ವಿರೂಪಾಕ್ಷಲಿಂಗಾಯನಮಃ। ಶ್ರೀಗುರು ನುಣ್ಗೊರಳ ಸಂಗಮೇಶ್ವರಾಯ ನಮಃ। ಶ್ರೀಗಣಾಧಿಪತಯೇ ನಮಃ। ರಾಯಚೂರು ಅಪರಾಲ ತಮ್ಮಣ್ಣನು ಮಾಡಿದ ಪಾರಿಜಾತ ಬರವುದಕ್ಕೆ ಶುಭಮಸ್ತು। ಶೋಭನಮಸ್ತು। ಆಯುರಾರೋಗ್ಯ ಐಶ್ವರ್ಯಮಸ್ತು।" ಎಂದು ಈ ಪ್ರತಿ ಪ್ರಾರಂಭವಾಗುತ್ತದೆ. ಆಮೇಲೆ ದೇವತಾಸ್ತುತಿ ಮುಗಿದು, ಕಥೆ ಮುಂದುವರಿಯ ತೊಡಗಿ ಶ್ರೀಕೃಷ್ಣನು ಕೊರವಂಜಿ ವೇಷಧರಿಸಿಬಂದು ಸತ್ಯಭಾಮೆಗೆ ಕಣಿಹೇಳಿ ತನಗೆ ಕಾಣಿಕೆಯನ್ನು ಕೇಳುವ ಸಂದರ್ಭ :

---

೫ ಈ ವರೆಗೆ ಶ್ರೀಕೃಷ್ಣಪಾರಿಜಾತವು ದೇವನಾಗರಿ ಮತ್ತು ಕನ್ನಡ ಲಿಪಿಗಳಲ್ಲಿ ಅನೇಕಸಲ ಪ್ರಕಟವಾಗಿದೆ. ಇತ್ತೀಚೆ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ ಶ್ರೀ ಆರ್. ಜಿ. ಕುಲಕರ್ಣಿ ಅವರೂ ಪ್ರಕಟಿಸಿದ್ದಾರೆ (೧೯೭೨).

* ಶ್ರೀ ಬಸವಪ್ರಭುದೇವರು ಕೈಲಾಸಮಠ, ತಾಳಿಕೋಟೆ ಇವರಿಂದ ಶ್ರೀ ಪಡಶೆಟ್ಟಿ ಅವರಿಗೆ ದೊರೆತ ಪ್ರತಿ.

ದುಂಡಿ ನಿನಗಂಡ ಪ್ರಚಂಡ ಉದ್ದಂಡ
ದನುಜರ ಗಂಟಲಗಾಣ, ಪಾಂಡವರ ಪಂಚಪ್ರಾಣ
....
ತ್ಯಾಗವ ಬೇಡುವೆನು ಎಲೆ ದುಂಡಿ
....
ಬೀಗರಿತ್ತ ಶಾಲವ ಕೊಡೆ ಮನವರಿತು
....
ನಿನಗೆಂದು ಮಾಡಿದ್ದು ಎನಗುಣಬಡಿಸೇ
ಆನಂದ ಮಾಡುವುದು ನಿನಗೊಳ್ಳಿತೇ ॥

ಎಂಬ ಭಾಗ ಮುಗಿಯುತ್ತಲೇ "ಶ್ರೀ ಶ್ರೀ ಶ್ರೀ ಶ್ರೀ । ಇತಿ **ಅಪರಾಲಾ ತಮಂಣಾ** ಮಾಡಿದ ಪಾರಿಜಾತ ಕೊರವಂಜಿ ಸಹ ಪದಗಳು ೪೩೮ ಕಂ । ಗದ್ಯ ೪೬ । ವಚನ ೧೨ ಕಂ । ಸೀಸಪದ್ಯ ೨೧ ಕಂ । ಯೇಕುನೂ ಜಮೆ ೪೯೫ ಕಂ ಮಂಗಳಮಹಾಶ್ರೀ[೬] । ನುಣ್ಗೊರಳ ಸಂಗಮೇಶ್ವರಾಯ ನಮಃ । **ವುಳಿದ ಅರಕೆ** ಸಿರಗುಪ್ಪಿ ಸದಾಶಿವಯ್ಯ ಮಾಡಿದ್ದು ಪ್ರಾರಂಭಮಸ್ತು । ಸಿದ್ಧಿರಸ್ತು । ರಾಗ ಭೈರವಿ । ಆದಿ ತಾಳ । ಅಂದ ಮಾತನು ಕೇಳಿ ನಲವಿಂದ ಮಾನಿನೀ । ತಂದ ಸ್ವರ್ಣಕಲಶದುದವ ಮಂದಹಾಸಿನೀ..." ಎಂಬ ಬರವಣಿಗೆ ಮುಂದುವರಿಯುತ್ತದೆ. ಅಪರಾಳ ತಮ್ಮಣ್ಣನ ಒಟ್ಟು ರಚನೆಯನ್ನು ಹೇಳಿ "ಉಳಿದ ಅರಕೆ" ಎನ್ನುತ್ತ ಮುಂದಿನದು ಸಿರಗುಪ್ಪಿ ಸದಾಶಿವಯ್ಯನ ರಚನೆಯೆಂದು ಸ್ಪಷ್ಟಪಡಿಸುತ್ತದೆ, ಮೇಲಿನ ಬರವಣಿಗೆ.

ಎರಡನೆಯದಾಗಿ ಈ ಹಸ್ತಪ್ರತಿಯ ಕೊನೆಯಲ್ಲಿ ಬರುವ "ಇತಿ ಅಪರಾಲ ತಮ್ಮಣ್ಣಕೃತ ಪಾರಿಜಾತ, ಸಿರಗುಪ್ಪಿ ಸದಾಶಿವಯ್ಯಕೃತ ಪಾರಿಜಾತದ್ವಯ ಕೃತ ಸಂಪೂರ್ಣಂ" ಎಂಬುದು ಈ ಕೃತಿಯ ಉಭಯಕರ್ತೃತ್ವವನ್ನು ಖಚಿತಗೊಳಿಸುತ್ತದೆ. ಈ ಕೊನೆಯ ಭಾಗದಲ್ಲಿಯೇ "ಇದರ ಪದಾ ೬೪೩ ಕಂ । ಸೀಸಪದ್ಯ ೪೫ ಕಂ । ದ್ವಿಪದಿ ೨೧ ಕಂ । ಶ್ಲೋಕ ೨೦ ಕಂ । ವಚನ ೧೩ ಕಂ । ವಾರ್ಧಿಕ ೯ ಕಂ । ಅಂತು ಜಮೆ ೭೪೨ ಕಂ ಮಂಗಳಮಹಾಶ್ರೀ" ಎಂಬ ವಾಕ್ಯ ಬರುತ್ತದೆ. ಈ ಒಟ್ಟು ಮೊತ್ತವಾದ ೭೪೨ರತ ಅಪರಾಳ ತಮ್ಮಣ್ಣನ ಮೊತ್ತ ೪೯೫ನ್ನು ಕಳೆದರೆ ಉಳಿಯುವ ೨೪೭ ರಷ್ಟು ಗದ್ಯ-ಪದ್ಯ ಪಾಠ ಸಿರಗುಪ್ಪಿ ಸದಾಶಿವಯ್ಯನಿಗೆ ಸಂಬಂಧಿಸಿದುದು. ಅಂದರೆಒಟ್ಟು ಕೃತಿಯ ೨/೩ ಭಾಗ ಅಪರಾಳ ತಮ್ಮಣ್ಣನದು, ೧/೩ ಭಾಗ ಸಿರಗುಪ್ಪಿ ಸದಾಶಿವಯ್ಯನದು.

ಸಿರಗುಪ್ಪಿ ಎಂಬುದು ಸದಾಶಿವಯ್ಯನ ಗ್ರಾಮವಾಗಿದ್ದ ಪಕ್ಷದಲ್ಲಿ ಇದು ಬಳ್ಳಾರಿ ಜಿಲ್ಲೆಯ ಸಿರಗುಪ್ಪೆಯೇ ಆಗಿರಬಹುದು. ಶೋಭನಪದ್ಯ ಸೂಚಿಸುವಂತೆ ಈತನು ರಾಯಚೂರುಪ್ರದೇಶದಲ್ಲಿರಬಹುದಾದ 'ಅಲ್ಲಿಯಪುರ' ಗ್ರಾಮದ ಭೀಮ ಅಂದರೆ

೬ ಶೋಭನ ಪದ್ಯದಲ್ಲಿ ಸೂಚಿಸಿದಂತೆ ಕೊರವಂಜಿಯು ಕಾಣಿಕೆ-ಊಟಗಳನ್ನು ಬಯಸುವ ಪ್ರಸಂಗದಲ್ಲಿಯೇ ತಮ್ಮಣ್ಣನ ರಚನೆ ಮುಕ್ತಾಯಗೊಂಡುದನ್ನು ಇಲ್ಲಿ ಗಮನಿಸಬೇಕು.

ಹನುಮಂತದೇವರ ಭಕ್ತನಾಗಿದ್ದಾನೆ.[೮] ಶ್ರೀ ಬೆಟಗೇರಿ ಕೃಷ್ಣಶರ್ಮ ಅವರು ಅಪರಾಳ ತಮ್ಮಣ್ಣನ ಬಗ್ಗೆ ಬರೆಯುತ್ತ 'ಶೋಭನವೇ ಶೋಭನವೇ । ಶೋಭಿತ ಕನಕಾದ್ರಿ ವಾಸನಿಗೆ' ಎಂಬ ಪದ್ಯವನ್ನು ಕುರಿತು ''ಈ ಹಾಡಿನಲ್ಲಿ ಕವಿಯ ಹೆಸರು, ಊರು, ಉಪಾಸ್ಯದೇವತೆ ಮೊದಲಾದ ಸಂಗತಿಗಳು ಗೊತ್ತಾಗುವವು" ಎಂದಿದ್ದಾರೆ.[೯] ತಮ್ಮಣ್ಣನ ಉಪಾಸ್ಯದೇವತೆ 'ಕನಕಾದ್ರಿವಾಸ'ನೆಂದು ಇಲ್ಲಿ ಶ್ರೀಯುತರ ಅಭಿಪ್ರಾಯವಿದ್ದಂತಿದೆ. ಆದರೆ ಈ ಶೋಭನಪದ್ಯದ ಕರ್ತೃ ಸದಾಶಿವಯ್ಯನಾಗಿರುವುದರಿಂದಲೂ ಆತನು ಕನಕಗಿರಿ(ಕನಕಾದ್ರಿ)ಯಲ್ಲಿ ನೆಲೆನಿಂತು ಕಾವ್ಯವನ್ನು ರಚಿಸಿರುವುದರಿಂದಲೂ 'ಕನಕಾದ್ರಿ ವಾಸ'ನು ತಮ್ಮಣ್ಣನ ಉಪಾಸ್ಯದೇವತೆಯಾಗಿರದೆ, ಸದಾಶಿವಯ್ಯನ ಉಪಾಸ್ಯದೇವತೆ ಯಾಗಿರುವನೆಂದು ಹೇಳಬೇಕಾಗುತ್ತದೆ.

ತಮ್ಮಣ್ಣನ ರಚನೆಯ ಪ್ರಾರಂಭದಲ್ಲಿ ಮತ್ತು ಸದಾಶಿವಯ್ಯನ ರಚನೆಯ ಪ್ರಾರಂಭದಲ್ಲಿ ಕಂಡುಬರುವ ''ನುಹ್ಲೊಗ್ಗರಳ ಸಂಗಮೇಶ್ವರಾಯನಮಃ'' ಎನ್ನುವುದು ಸದಾಶಿವಯ್ಯನ ಮತದ ಸೂಚನೆಯಾಗಿರದೆ ಲಿಪಿಕಾರನ ಮತದ ಸೂಚನೆಯಾಗಿರ ಬಹುದು. ಇಷ್ಟನ್ನು ಬಿಟ್ಟರೆ ಸದಾಶಿವಯ್ಯನ ಬಗೆಗೆ ಈಗ ಏನೂ ಹೇಳುವಂತಿಲ್ಲ.

× × × ×

ಶ್ರೀಕೃಷ್ಣಪಾರಿಜಾತ ರಚನೆಯಾದ ಕಾಲ ಇನ್ನೂ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಈ ಕೃತಿಯನ್ನು ಸಂಪಾದಿಸಿದ ಶ್ರೀ ಆರ್.ಜಿ. ಕುಲಕರ್ಣಿ ಅವರು ಅಪರಾಳ ತಮ್ಮಣ್ಣನ ಬಗೆಗೆ ಬರೆಯುತ್ತ "ಕ್ರಿ. ಶ. ೧೮೦೦ರಲ್ಲಿ ಇವರು ಶ್ರೀಕೃಷ್ಣಪಾರಿಜಾತವೆಂಬ ಗೀತ ನಾಟಕವನ್ನು ರಚಿಸಿದರು" ಎಂದು ಹೇಳಿ ತಮ್ಮ ಪರಿಷ್ಕರಣಕ್ಕೆ ಆಧಾರವಾಗಿರುವ (ದೇವನಾಗರಿ ಲಿಪಿಯ) ಹಸ್ತಪ್ರತಿ ಸುಮಾರು ೧೮೭೦ರಲ್ಲಿ ಲಿಪಿಸಲ್ಪಟ್ಟಿರಬಹುದು ಎಂದಿದ್ದಾರೆ.[೧೦] ಆದರೆ ನನಗೆ ದೊರೆತ ಈ ಹಸ್ತಪ್ರತಿಯ ಕೊನೆಯಲ್ಲಿ ''ಸ್ವಸ್ತಿ ಶ್ರೀ ಜಯಾಭ್ಯುದಯ ನೃಪಶಾಲಿವಾಹನ ಶಕೆ ೧೭೨೯ ಪ್ರವರ್ಧಮಾನೇ ಪ್ರಭವನಾಮ ಸಂವತ್ಸರೇ ಉತ್ತರಾಯಣೇ ವಸಂತೃತೌ ಚೈತ್ರಮಾಸೇ ಕೃಷ್ಣಪಕ್ಷೇ ಆದ್ಯಪಂಚಮೇ ಭೋಮವಾಸರೇ ಉತ್ತರಾಷಾಢನಕ್ಷತ್ರೇ ಸಾಧ್ಯನಾಮಯೋಗೇ ವಣಿಜಾಕರಣೇ ತೃತೀಯಪ್ರಹಾರೇ ಏವೌ ಸೂವೇಳಾಯಾಂ ಇದೌ ಪಾರಿಜಾತಪುಸ್ತಕಂ ತಾಳೀಕೋಟೀ

೮ ಸಿರಗುಪ್ಪಿಯೆಂಬುದು ಸದಾಶಿವಯ್ಯನ ಅಡ್ಡಹೆಸರಾಗಿದ್ದರೆ ಈತನು ಅದೇ ಪ್ರದೇಶದ 'ಅಲ್ಲಿಯಪುರ' ಗ್ರಾಮದವನಾಗಿರಲೂ ಸಾಧ್ಯವಿದೆ. [ರಾಯಚೂರು ಮತ್ತು ಬಳ್ಳಾರಿ ಗಳಿಗೆ ೩-೪ ಮೈಲು ಅಂತರದಲ್ಲಿ 'ಅಲ್ಲೀಪುರ' ಹೆಸರಿನ ಗ್ರಾಮಗಳಿವೆ. ಈ ಅಂಶವನ್ನು ತಿಳಿಸಿದವರು ಪ್ರೊ. ಎಸ್. ಎಸ್. ಹಿರೇಮಠ, ವಿಜಯನಗರ ಕಾಲೇಜ ಹೊಸಪೇಟ].

೯ ಶ್ರೀ ಬೆಟಗೇರಿ ಕೃಷ್ಣಶರ್ಮ : ಕನ್ನಡ ಜಾನಪದ ಸಾಹಿತ್ಯ (೧೯೭೬) ಪು. ೯೬.

೧೧ ಶ್ರೀ ಆರ್. ಜಿ. ಕುಲಕರ್ಣಿ : ಶ್ರೀಕೃಷ್ಣ ಪಾರಿಜಾತ (೧೯೫೨) ಪ್ರಸ್ತಾವನೆ, ಪು. ೮೩ ಮತ್ತು ೮೫.

ಹೊಸಮನಿ ಬಸಲಿಂಗಪ್ಪನಾ ದೌಹಿತ್ರ ಉಮಾಪತಿನಾಮಧೇಯೇನ ಪರೋಪಕಾರಾರ್ಥಂ ಲಿಖಿತಂ'' ಎಂಬ ವಿವರಣೆ ಇದೆ. ಈ ಹಿಂದೂ ಮಿತಿಗೆ ಸಮಾನವಾದುದು ಕ್ರಿ. ಶ. ೧೮೦೭. ಇದು ಕೃತಿನಿರ್ಮಾಣಕಾಲವಾಗಿರದೆ ಪ್ರತಿನಿರ್ಮಾಣವಾದ ಕಾಲವೆಂಬುದು ಸುಸ್ಪಷ್ಟ. ಶ್ರೀ ಆರ್. ಜಿ. ಕುಲಕರ್ಣಿ ಅವರು ತಮ್ಮ ಪರಿಷ್ಕರಣಕ್ಕೆ ಆಧಾರವಾಗಿರುವ ಹಸ್ತಪ್ರತಿ ಕ್ರಿ.ಶ. ೧೮೭೦ರ ಸುಮಾರಿಗೆ ಸೇರಿದುದೆಂದು ಊಹಿಸಿರುವರು. ಕಾರಣ ಕ್ರಿ.ಶ. ೧೮೦೭ರ ನಮ್ಮ ಹಸ್ತಪ್ರತಿ ಈಗಿನ ಮಟ್ಟಿಗೆ ಮಿತಿನಿರ್ದೇಶನವುಳ್ಳದೂ, ತುಂಬ ಹಳೆಯದೂ ಕರ್ತವಿನ ಕಾಲಕ್ಕೆ ತೀರ ಸಮೀಪದಲ್ಲಿ ಹುಟ್ಟಿದುದೂ ಆಗಿರುವುದರಿಂದ, ಇದು ಪ್ರಾಮಾಣಿಕ ಪಾಠದ ಪ್ರತಿಯೆಂದು ಹೇಳಬೇಕಾಗುತ್ತದೆ.

ಹೀಗೆ ತುಂಬ ಪ್ರಾಮಾಣಿಕ ಪ್ರತಿಯಾದುದರಿಂದ, ಇದು ಬೆಲೆಯುಳ್ಳ ಪಾಠಾಂತರಗಳನ್ನು ನೀಡುತ್ತದೆ. ಉದಾ :

ಕುಳಿತು ದೂತಿಗೆ ಹೇಳಿ ಸತ್ವರ
ಕಳುಹಲು ಸರಿ ಆ ರುಕ್ಮಿಣಿ
ಯೊಳು ಮತ್ತಳಾಗಿ ವಾದವ
ಬೆಳಸಿ ಮರಳಲು ದೂತಿ । ಶೋಭನವೇ...

(ಶ್ರೀ ಆರ್. ಜಿ. ಕುಲಕರ್ಣಿ ಆವೃತ್ತಿ ಪು. ೨೭೭)

ಪತ್ರವ ನೋಡಿ ಸಾಮವ ಕೇಳಿ–ವಿ
ಚಿತ್ರದಿ ಕುಳಿತು ದೂತಿಗೆ ಹೇಳಿ
ಸತ್ವರ ಕಳುಹಲು ಸಿರಿ ರುಕ್ಮಿಣಿಯೊಳು
ಮತ್ತಳಾಗಿ ವಾದವ ಮಾಡಿ । ಶೋಭನವೇ...

(ನಮ್ಮ ಹಸ್ತಪ್ರತಿಯಲ್ಲಿಯ ಪಾಠ)

ಈ ಎರಡು ಪದ್ಯಗಳನ್ನು ಹೋಲಿಸಿ ನೋಡಿದರೆ, ಈಗ ಲಭಿಸಿದ ಈ ಹಸ್ತಪ್ರತಿಯ ಪಾಠ ಮೂಲಕ್ಕೆ ಹೆಚ್ಚು ಪ್ರಾಮಾಣಿಕವಾದುದೆಂದು ಸ್ಪಷ್ಟವಾಗುತ್ತದೆ. ಇದರ ಪ್ರಕಟನೆಯಿಂದ, ಕಾಲದೇಶಪರಿಸರಗಳಿಗೆ ತಕ್ಕಂತೆ ಪಾಠಪ್ರವಾಹಗಳಿಗೆ ಗುರಿಯಾಗುತ್ತ ಬಂದಿರುವ ಶ್ರೀಕೃಷ್ಣಪಾರಿಜಾತದ ಮೂಲಸ್ವರೂಪ ಬೆಳಕಿಗೆ ಬರುವ ಸಾಧ್ಯತೆಯಿದೆ.

• •

ಗಂಗಿ–ಗೌರಿ

ಸಂ : ಸುಶೀಲಾದೇವಿ ಹೆಂಡಿ

ಲಕ್ಷ್ಮೀಯು ಗೌರವ್ವ ಪಾರತಾದೇವಿsss
ಶಿವಶಿವ ಗೌರವ್ವ ಶಿವಲೋಕದಲ್ಲಿss
ಗಂಗವ್ವ ಗೌರವ್ವ ವಾದನಾಡುವರುss
ಗಂಗವ್ವ ಗೌರವ್ವ ಜೂಜನಾಡುವರುss
ಜೂಜಾಡಿ ಶಿವರಾಯ ಗಂಗಿನ ತಂದss
ಜಗಳಾಡಿ ಶಿವರಾಯಾ ಗಂಗಾನೆ ತಂದss
ಗಂಗವ್ವ ಗೌರವ್ವ ವಾದನಾಡುವರುss
ಯಾರಿಗಿ ಹೇಳವಲ್ಲ ಹುಚ್ಚ ಮಾದೇವss
ಒಬ್ಬರಿಗಿ ಹೇಳವಲ್ಲ ದಡ್ಡ ಮಾದೇವss
ಈ ಶಿವನ ಮ್ಯಾಲವ್ವ ಕಲ್ಲ ಬೀರಲೆss
ಈ ಶಿವನ ಮ್ಯಾಲವ್ವ ಮಣ್ಣ ತೂರಲೆss
ಮೂಕಾರು ಕುಂತಂಗ ಶಿವನು ಕುಂತಾನುss
ಕಲನಾಗಿ ಕುಂತಂಗ ಶಿವನು ಕುಂತಾನುss
ಕಡ್ಡ್ಯಾರ ಬಿದ್ದಂಗ ಶಿವನು ಬಿದ್ದಾನುss
ಹಣಿಮ್ಯಾಲಿನ ಉರಿಗಣ್ಣ ನೋಡಿ ಬಂದವಳುss
ಮುಂಗೈಯುನ ಜೋಳಿಗಿ ನೋಡಿ ಬಂದವಳೆss
ಹಚ್ಚಿದ ಈಬೂತಿ ಮೆಚ್ಚಿ ಬಂದವಳೆss
ತಲಿತುಂಬ ಜೆಡಿಗೊಳ ನೋಡಿ ಬಂದವಳುss
ಎಡಗೈಯುನ ಬೆತ್ತವ ಕಂಡು ಬಂದವಳುss
ಬಂದವಳ ಸವತಿಗೆ ಏಸ ಮಾತವ್ವss
ನೀಚವಳ ಗಂಗಿಗಿ ಏಸ ಮಾತೇಳುss
ಮೆಚ್ಚಿಬಂದ ಗಂಗಿ ಹೆಚ್ಚಾದಳೇನುss
ಕೂಡಿಬಂದ ಗಂಗಿಗಿ ಏಸ ಮಾತೇನುss
ಬೈಬ್ಯಾಡ ಸವತೀಯೆ ನನ್ನ ಬೈಬ್ಯಾಡss

ನಿನ ತಂದ ಮಾದೇವ ನನ್ನ ತಂದಾನಽಽ
ಇಬ್ಬರಿಗಿ ಬೇಕಾಗಿ ಶಿವನು ತಂದಾನಽಽ
ಇಬ್ಬರಿಗಿ ಜೋಡಾಗಿ ಶಿವನು ತಂದಾನಽಽ
ಏಡೀಯು ಕಪ್ಪೀಯು ಮಾರವಳೇ ಗಂಗಿಽಽ
ಪಾಲದವಳ ಗಂಗಿ ಪಾಲಂಚಿಕೊಡುಽಽ
ಸರಿದವಳ ಗಂಗವ್ವ ಸರಿಹಂಚಿಕೊಡುಽಽ
ಗುದ್ದೇನ ಸವತಿ ಗುಂಡು ಮುರಿಯಲಿಽಽ
ಒದ್ದೇನ ಸವತಿ ಒಳ್ಳ ಮುರಿಯಲಿಽಽ
ನಾಕಮಂದಿ ಬಳಗಾವ ನಾಚಿಗೋದಾವಽಽ
ಹತ್ತು ಮಂದಿ ಬಳಗಾವ ಅಬರು ಕಳದಾವಽಽ
ಒಬ್ಬರಿಗಿ ಹೇಳವಲ್ಲ ಹುಚ್ಚ ಮಾದೇವಽಽ
ಯಾರಿಗಿ ಹೇಳವಲ್ಲ ದಡ್ಡ ಮಾದೇವಽಽ
ಇಬ್ಬಟ್ಲೆ ಒಬ್ಬಳು ಬಿಡಬಾರದೇನುಽಽ
ಒಂದ ಚರಗಿ ನೀರಾವ ಕುಡಿಬಾರದೇನುಽಽ
ಒಂದ ಗಂಗಳದಾಗ ಉಣಬಾರದೇನುಽಽ
ಅಕ್ಕ-ತಂಗೇರಾಗಿ ಇರಬಾರದೇನುಽಽ
ಸವತಿ-ಮಕ್ಕಳಾಗಿ ನಡಿಬಾರದೇನುಽಽ
ಒಬ್ಬ ನನ್ನ ಪಾದಾ ಹಿಡಿಬಾರದೇನುಽಽ
ಬುದ್ಧಿವಂತ ಶಿವರಾಯ ಬುದ್ಧಿ ಹೇಳತಾನಽಽ
ಗ್ಯಾನವಂತ ಮಾದೇವ ಗ್ಯಾನ ಹೇಳತಾನಽಽ
ಹೊಲಸವಳ ತಂದಾನ ವಾದಿಗ್ಹಚ್ಯಾನಽಽ
ನೀಚವಳ ತಂದಾನ ಜಗಳಕ್ಹಚ್ಯಾನಽಽ
ಹೊಲಸಾದ ಗಂಗಿ ನೀನು ಎದ್ದಹೋಗುಽಽ
ಒಂದ ಬಂದ ರಂಡಿ ಈಸ ಮಾತೇನುಽಽ
ಬೆನ್ನಹತ್ತಿ ಬಂದವಳು ಬೇಕಾದಳೇನುಽಽ
ಮದುವ್ಹೀಣ್ತಿ ಶಿವರಾಯಗ ಬ್ಯಾಡಾದಳೇನುಽಽ
ಕರ್ರನ ಕಾಗಿಗಿ ಏಟು ಪ್ರೀತೆಯ್ಯಽಽ
ಕರ್ರನದವಳು ಬೇಕಾದಳೇನುಽಽ
ಕೆಂಪನದೆವಳು ಬ್ಯಾಡಾದಳೇನುಽಽ
ಈ ಶಿವನ ವ್ಯಾಲಮ್ಮ ಕಲ್ಲ ಬೀರಲೆಽಽ
ಈ ಶಿವನ ವ್ಯಾಲಮ್ಮ ಮಣ್ಣು ತೂರಲೆಽಽ
ಬಂಧು-ಬಳಗ ಬಿಟ್ಟು ಬಂದಿದೀ ಗಂಗಿಽಽ

ಅಣ್ಣ-ತಮ್ಮರ ಬಿಟ್ಟು ಓಡಿಬಂದವಳುಽಽ
ತಾಯಿ-ತಂದಿನ ಬಿಟ್ಟು ಮರತಬಂದವಳುಽಽ
ಅಕ್ಕ-ತಂಗೆರ ಬಳಗ ಬಿಟ್ಟು ಬಂದವಳುಽಽ
ಏಡಿಯು ಕಪ್ಪಿಯು ಗಂಗಿ ಮಾರವಳುಽಽ
ಕೊಳಕುಳ್ಳ ಗಡ್ಡಿ ತಂದ ಮಾರವಳುಽಽ
ಕೋತಂಬರಿ ಕಡ್ಡಿ ಹೊತ್ತ ಮಾರವಳುಽಽ
ಓಣಿ ಓಣಿ ಗಂಗವ್ವ ನೀನು ತಿರಗವಳುಽಽ
ಓಣಿಗೊಂದ ಮಾತ ಕಲತ ಬಂದವಳುಽಽ
ಕೇರಿಗೊಂದ ಸುದ್ದಿ ಕಲ್ತವಳೆ ಗಂಗಿಽಽ
ಓಣ್ಯಾನ ಪತ್ರೋಳಿ ತಂದ ಮಾರವಳುಽಽ
ಎಂಜಲ ಪತ್ರೋಳಿ ಹೊತ್ತ ಮಾರವಳುಽಽ
ಗುಡ್ಡ-ಗುಡ್ಡ ಗಂಗವ್ವ ನೀನು ತಿರಗವಳುಽಽ
ಗುಡದಾನ ಕಟ್ಟಿಗಿ ತಂದ ಮಾರವಳುಽಽ
ಹಳದಾನ ಕಾಕುಳ್ಳ ಹೊತ್ತ ಮಾರವಳುಽಽ
ಹಣ್ಣು ಬಾರಿಹಣ್ಣು ಹೊತ್ತ ಮಾರವಳುಽಽ
ಮಾರವಳ ಸವತೀಗಿ ಏಸ ಮಾತೇನುಽಽ
ನೀಚವಳ ಗಂಗೀಗಿ ಏಸ ಮಾತೇನುಽಽ
ಹೊಲಸವಳ ತಂದಾನ ವಾದಿಗ್ಹಚ್ಯಾನಽಽ
ನೀಚವಳ ತಂದಾನ ಜಗಳಕ್ಹಚ್ಯಾನಽಽ
ಚಂದನ್ನ ಚಲುವಿಗಿ ನಾ ಬಿಡಲಾರೆಽಽ
ಮುದ್ದುಳ್ಳ ಗಂಗಿಗಿ ನಾ ಬಿಡಲಾರೆಽಽ
ಸಿಂಪಿಗನ ಸೂಳಿ ನೀ ಅಲ್ಲವೇನುಽಽ
ಅಂಬಿಗನ ರಂಡಿ ನೀ ಅಲ್ಲವೇನುಽಽ
ಅಂದಂದ ಮಾತಲ್ಲ ವನದಾಡತೀದಿಽಽ
ಆಡಿದ ಮಾತೆಲ್ಲ ತಿರಿಗನ್ನತೀದಿಽಽ
ಒಬ್ಬರಿಗಿ ಬುದ್ಧಿ ಶಿವನ್ಹೇಳವಲ್ಲಽಽ
ಒಬ್ಬರಿಗಿ ಗ್ಯಾನಾ ಶಿವನ್ಹೇಳವಲ್ಲಽಽ
ಕಡಿಗಾದ ಗೌರವ್ವ ಖಾಲಿ ಕುಂತಾಳಽಽ
ಮುಟ್ಟಾದ ಗೌರಿ ಮೂಲಿಗಿ ಕುಂತಾಳಽಽ
ಮುಟ್ಟಾದ ಸುದ್ದಿ ಯಾರ ಕೇಳ್ಯಾರಽಽ
ಮಾಯಕಾರ ಗಂಗವ್ವ ತಾನ ಕೇಳ್ಯಾಳಽಽ
ಕಡಿಗಾದ ಸುದ್ದೆಮ್ಮ ಯಾರ ಕೇಳ್ಯಾರಽಽ

ಜಲಕಾರ ಗಂಗವ್ವ ಜಲಬತ್ತಿಸ್ಯಾಳss
ಮಾಯಕಾರ ಗಂಗವ್ವ ಮಾಯೆ ಮಾಡ್ಯಾಳss
ಮಗನೇ ಈರಣ್ಣ ಮುದ್ದು ಈರಣ್ಣss
ಮುದ್ದಾರ ಕೊಡಪ್ಪ ಮಗನ ಈರಣ್ಣss
ಮುದ್ದಾರ ತಿಂದೇನ ಜಲುವು ಬಿಟ್ಟೇನss
ಇಸವಾರ ತಿಂದೇನ ಪ್ರಾಣ ಬಿಟ್ಟೇನss
ಕಡಿಗಾಗಿ ಕುಂತು ಎರಡ ತಿಂಗಳಾಯ್ತುss
ನೀರಾರ ಕೊಡಪ್ಪ ಮಗನ ಈರಣ್ಣss
ಹಂಡ್ಯಾನ ನೀರು ಕಾಯ್ಸಿಕೊಡ ಮಗನss
ಹಂಡ್ಯಾಗ ನೀರಿಲ್ಲವಮ್ಮ ಎಲ್ಲ ಬತ್ತಿಹೋಗ್ಯಾವss
ಊರ ಮುಂದಿನ ಬಾಯಿ ನೋಡಿ ಬಾ ಮಗನೆss
ಊರ ಮುಂದಿನ ಬಾವ್ಯಾಗ ನೀರಿಲ್ಲವಮ್ಮss
ಬಾವ್ಯಾಗಿನ ನೀರು ಬತ್ತಿಹೋಗ್ಯಾವss
ಹಳ್ಳಕೊಳ್ಳಾ ನೋಡಿ ಬಾ ಮಗನೆss
ಹಳ್ಳಕೊಳ್ಳದಾಗ ನೀರಿಲ್ಲವಮ್ಮಾss
ಮೀನ ಕಪ್ಪಿ ಏಡಿ ಸತ್ತು ಬಿದ್ದಾವss
ಇನ್ನೆಲ್ಲಿ ಹೋಗಲಿ ತಾಯಿ ಗೌರಮ್ಮss
ಅಜ್ಜನ ಬಲ್ಲಿಗಿ ಹೋಗಿ ಬಾ ಮಗನೇss
ನಮ್ಮಪ್ಪನಾದರ ನೀರ ಕೊಟ್ಟಾನss
ಹಿಂದಿಂದ ಈರಣ್ಣ ಮುಂದ ಗಣೇಶಾss
ಅಜ್ಜನ ಬಲ್ಲಿಗಿ ಅವರು ಹೋಗ್ಯಾರss
ಅಜ್ಜಯ್ಯ ಶರಣ ನಿಮಗ ಶರಣss
ನನಗ್ಯಾಕ ಶರಣಪ್ಪ ನಿಮಗ ಶರಣss
ಏನ ಕಾರಣ ಬಂದ್ರಿ ಮಮ್ಮಕ್ಕಳ್ಯಾss
ಏನ ಸುದ್ದಿದಲ್ಲಿ ಬಂದ್ರಿ ಮಮ್ಮಕ್ಕಳ್ಯಾss
ನಿನ್ನ ದೊಡ್ಡ ಮಗಳು ಕಡಿಲಿ ಆಗ್ಯಾಳss
ನೀರನ್ನು ಕೊಟ್ಟು ಕಳವನಂದಾಳss
ನಿಮಗಿಲ್ದ ನೀರು ನಮಗೆಲ್ಲಿ ಮಮ್ಮಕ್ಕಳೇss
ನಿಮ್ಮವ್ವ ಸಲುವಾಗಿ ನಮಗ ನೀರಿಲ್ಲss
ಬಂಗಾರಿ ಎತ್ತು ಬಾಯ್ತೆರದಾವss
ಆನಿ ಒಂಟಿಯೂ ಸತ್ತುಬಿದ್ದಾವss
ತುಪ್ಪಾರ ಕೊಡಶೀನಿ ಒಯ್ಯಿರಿ ಮಮ್ಮಕ್ಕಳೇss

ಹಾಲಾರ ಕೊಡತೀಸಿ ಒಯ್ಯಿರಿ ಮಮ್ಮಕ್ಕಳೇಽಽ
ಒಂಬತ್ತ ಕೊಡ ತುಪ್ಪ ಕೊಟ್ಟಾನಽಽ
ಹತ್ತ ಕೊಡಾ ಹಾಲ ಕೊಟ್ಟಾನಽಽ
ಆಗಿ ಬೇಗಂದರಲ್ಲಿ ಓಡಿಬಂದಾರಽಽ
ಹಿಂದ ಈರಣ್ಣ ಮುಂದ ಗಣೇಶಾಽಽ
ತಂದೀವಿ ನೋಡವ್ಮಾ ಜಳಕ ಮಾಡವ್ಮಾಽಽ
ತಂದೀವಿ ನೋಡು ಶಿವಪೂಜಿ ಮಾಡುಽಽ
ಬಂಗಾರ ಮಂಚಮ್ಮ ಗೌರಿ ಇಳದಾಳಽಽ
ಬೆಳ್ಳಿ ಚರಗಿ ಕೈಲಿ ಹಿಡದಾಳಽಽ
ತುಪ್ಪದ ಕೊಡ ತೆಲಿಗಿ ಎರದಾಳಽಽ
ಹಾಲಿಲಿ ಕೊಡ ಜಳಕ ಮಾಡ್ಯಾಳಽಽ
ಕೆಂಪನ ಇರಬಿ ರಗತ ಸುರ್‍ಯಾಕ ಹತ್ಯಾವಳಿಽಽ
ಗಡಗಡ ಗೌರವ್ವ ಉಳ್ಳ್ಯಾಡತಾಳಽಽ
ಇನ್ನೆಲ್ಲಿ ಹೋಗಲಿ ಮಗನೆ ಈರಣ್ಣಽಽ
ಚಿಗವ್ವನ ಬಲ್ಲಿಗಿ ಹೋಗಣು ಬಾರಮ್ಮ ಽಽ
ಚಿಗವ್ವನಾದರ ನೀರ ಕೊಟ್ಟಾಳಽಽ
ಆ ಹೊಲಸಿ ಮನಿಗಿ ನಾ ಒಲ್ಲೆ ಮಗನೆಽಽ
ಆ ನೀಚಿ ಮನಿಗಿ ನಾ ಒಲ್ಲೆ ಮಗನೆಽಽ
ಹುಚ್ಚಿಗೌರಮ್ಮ ಹುಚ್ಚ ಮಾತೇನುಽಽ
ಚಿಗವ್ವನ ಮನಿಗಿ ಅವರು ಬಂದಾರಽಽ
ಶರಣಮ್ಮ ತಂಗಿ ನಿಮಗ ಶರಣಽಽ
ನನಗ್ಯಾಕ ಶರಣಮ್ಮ ನಿಮಗ ಶರಣಽಽ
ಏನಾರ ಅಂದು ನೀರ ಕೊಡಮ್ಮ ಽಽ
ಕಪಾಳಿಗಿ ಹೊಡೆದು ನೀರ ಕೊಡಮ್ಮ ಽಽ
ನಿನಗಿಲ್ಲದ ನೀರ ನನಗೆಲ್ಲಿ ಅಕ್ಕಽಽ
ನನ್ನೀಚ ಮನಿಗಿ ಯಾಕ ಬಂದೀದಿಽಽ
ನನ್ನ ಹೊಲಸ ಮನಿಗಿ ಯಾಕ ಬಂದೀದಿಽಽ
ಕಾಲಿಲಿ ಒದ್ದು ನೀರು ಕೊಡಮ್ಮ ಽಽ
ಇಬ್ಬರು ಮಕ್ಕಳ ನಿನಗ ಕೊಟ್ಟೇನಽಽ
ಬೆಳ್ಳಿಯು ಬಂಗಾರ ನಿನಗ ಕೊಟ್ಟೇನಽಽ
ನಿನಗಿದ್ದ ಮಕ್ಕಳು ನನಗ ಅಕ್ಕಯ್ಯಽಽ
ಉಟ್ಟಿದ್ದ ಸೀರಿ ನಿನಗ ಕೊಟ್ಟೇನಽಽ

ತೊಟ್ಟಿದ್ದ ಕುಬಸಾ ನಿನಗ ಕೊಟ್ಟೇನss
ನಿನಗಿದ್ದ ಸೀರಿ ನನಗಯ್ತೇಳಕ್ಕss
ನಿನಗಿದ್ದ ಕುಬಸಾ ನನಗಯ್ತೇಳಕ್ಕss
ಇನ್ನೇನ ಕೊಡಲೇ ತಂಗಿ ಗಂಗವ್ವಾss
ಶಿವನನ್ನು ಕೊಟ್ಟು ಲಗ್ನ ಮಾಡ್ತೇನss
ಪಾತಾಳ ಗಂಗವ್ವ ಫಕ್ಕನ ನಗತಾಳss
ಶಿವನ ಆಣಿ ತಗೊ ಅಂತಾಳss
ಇಬ್ಬರು ಮಕ್ಕಳ ಆಣಿ ತಗೋ ಅಂತಾಳss
ಐದ ಆಣಿ ಗೌರಿ ತಗೋತಾಳss
ಹೊಳಿದಂಡಿಗಿ ಇವರು ಹೋಗ್ಯಾರss
ಕೈಬೀಸಿ ಕೈಮಾಡಿ ಕರಿಯುತಾಳss
ಮುತ್ತಿನಂತ ಮಾಡ ಮುತಿಗೊಂತ ಬಂತುss
ರತ್ನದಂತ ಮಳಿಯು ಸುರಕೊಂತ ಬಂತುss
ಹಿರಿಹೊಳಿ ಚಿಗಹೊಳಿ ಏಕಾದವುss
ಮುಡಿಚೆಟ್ಟು ಮೈಲಿಗಿ ಗೌರಿ ತಗದಾಳss
ಆಣಿ ಕೊಟ್ಟ ಗೌರಿ ತಿರುಗಿ ಬಿದ್ದಾಳss
ಶಿವನ ಕೊಟ್ಟು ನಾಯೇನ ಮಾಡಲಂದಾಳss
ಮೂರ ಮನಿ ಭಿಕ್ಷಾ ನಾ ಬೇಡಲೇನss
ಮುಂಗೈ ಜೋಳಿಗಿ ನಾ ಕಟ್ಟಲೇನss
ಶಿವನ ಕೊಟ್ಟಿಲ್ಲಮ್ಮ ತಂಗಿ ಗಂಗಮ್ಮss
ನೋಡಿದಿ ಈರಣ್ಣ ನಿಮ್ಮವ್ವ ಮಾತುss
ಆಣಿ ಕೊಟ್ಟ ಗೌರಿ ತಿರಗಿಬಿದ್ದಾಳss
ತೆಕ್ಕಿಮುಕ್ಕಿ ತಾಯಿ ಅವರು ಬಿದ್ದಾರss
ಗೌರಿ ಕೂದಲ ಗಂಗಿ ಕೈಯಾಗss
ಗಂಗಿ ಕೂದಲ ಗೌರಿ ಕೈಯಾಗss
ಈರಣ್ಣ ಗಣಪತಿ ಹೊಯ್ಕೊಂಬುತಾರss
ಹೊಯ್ಕೊಂಬು ಸುದ್ದಿ ಯಾರ ಕೇಳ್ಯಾರss
ಬಂಗಾರ ಗುಡ್ಡದಾಗ ಶಿವನು ಕೇಳ್ಯಾನss
ಬೆಳ್ಳಿಯ ಬೆತ್ತ ಕೈಲಿ ಹಿಡದಾನss
ಬಂಗಾರ ಗುಡ್ಡ ಶಿವನಿಳಿದು ಬಂದಾನss
ಕೈಚಾಚಿ ಮೂರೇಟು ಗಂಗೀಗಿ ಬಡದss
ಕೈಚಾಚಿ ಮೂರೇಟು ಗೌರಿಗಿ ಬಡದss

ನಿನ ಸಣ್ಣ ಹೆಣ್ತಿಗಿ ಲಗ್ನ ಆಗೆಯ್ಯss
ನಿನ ಚಿಕ್ಕ ಹೆಣ್ತಿಗಿ ಮದವಿ ಆಗಯ್ಯss
ಸೋಮಾರ ದಿನದಲ್ಲಿ ಮಠಕ ಬಂದಾರss
ಆಕಾಶನೋಟು ಹಂದರ ಹಾಕ್ಯಾರss
ಭೂಕಾಶಿನೋಟು ಚಳಿಯು ಕೊಟ್ಟಾರss
ಐದ ದಿನ ಲಗ್ನ ಅವರು ಮಾಡ್ಯಾರss
ಬಂಗಾರ ಬಾಸಿಂಗ ಶಿವನಿಗಿ ಕಟ್ಟಿss
ಐದದಿನ ಮೆರವಣಗಿ ಅವರು ತಿರಗ್ಯಾರss
ಈ ನುಡಿ ಕೇಳಿದವರು ಪುಣ್ಯವಂತರss
ಈರಣ್ಣ ಗಣಪತಿಯಂತ ಮಕ್ಕಳಾಗಲವರಿಗಿss *

ಶಬ್ದಾರ್ಥಗಳು

ಪಾರತಾದೇವಿ–ಪಾರ್ವತಿದೇವಿ, ಮ್ಯಾಲಮ್ಮ–ಮೇಲೆ, ಬೀರಲೆ–ಹೊಡೆಯುಲಿ, ಎಸೆಯಲಿ; ತೂರಲಿ–ಎಸೆಯಲಿ, ಮೂಕಾರು–ಮೂಗರು, ಪಾಲಂಚಿ–ಪಾಲುಮಾಡಿ, ಇಬ್ಬಟ್ಲೆ–ಇಬ್ಬರಲ್ಲಿ ಒಬ್ಬರು, ಗ್ಯಾನವಂತ–ಜ್ಞಾನವಂತ, ಕಾಕುಳ್ಳ–ಅಡವಿಯಲ್ಲಿ ಬಿದ್ದ ಒಣಗಿದ ಸಗಣಿ, ಕಡಿಲಿ–ಕಡಿಗಾಗು, ಮುಟ್ಟಾಗು.

● ●

* ಈ ಹಾಡನ್ನು ಹೇಳಿದವರು : ಸೀತಮ್ಮ ರಾಮಕೊಂಡಾಡಿ.

" ಹುಲ್ಲು "– ಕಣವಿಯವರ ಒಂದು ಕವನ

● ಗೌರೀಶ ಕಾಯ್ಕಿಣಿ

"A proper study of mankind is Man" ಎಂದಿದ್ದಾನೆ, ಕವಿ ಪೋಪ. ಹಾಗೆಯೇ "The proper study of a poet is a Poem" ಎಂದು ನಾವು ಹೇಳಬಹುದು. ಒಬ್ಬ ಉತ್ತಮ ಕವಿಯು ತನ್ನ ಪ್ರತಿ ಕವನದಲ್ಲಿಯೂ ಪ್ರತಿಬಿಂಬಿತನಾಗುತ್ತಾನೆ– ಪ್ರತಿ ಬೀಜದಲ್ಲಿ ಮರವಿದ್ದಂತೆ. ಒಂದು ಕವಿತೆಯನ್ನು ಆಯ್ದು, ಆರೈಸಿ, ಅರಿತುಕೊಂಡರೆ ಅಲ್ಲಿ ನಮಗೆ ಕವಿಯ ಹೊನ್ನಿನ ಗೆರೆ– ಬಣ್ಣಗಳ ಹೊಳಪು ಒರೆದೆದ್ದು ಕಾಣಬಹುದು.

ಕವಿ ಕಣವಿಯವರ ಕಾವ್ಯದ ಗುಣಲಕ್ಷಣಗಳೇನು ? ಎದೆ ತುಂಬುವ ಮಾನವೀಯತೆ, ಎದೆ ತಟ್ಟುವ ಮಾರ್ಮಿಕತೆ, ನರ್ಮಸಚಿವನ ನಯಗಾರಿಕೆಯ ಹಿತೋಕ್ತಿ–ಚತುರೋಕ್ತಿ; ಉತ್ಪ್ರೇಕ್ಷೆಯ ಸವಿರಾದ ವಿಲಾಸ, ರಸಾರ್ದ್ರವಾದ ಪದಮೈತ್ರಿ; 'ಬಂಧವಿರದ ಬಂಧುರ' ಪದ್ಯಬಂಧ, ಆವೇಶವಿಲ್ಲದ ಉತ್ಸಾಹ–ಉತ್ಸುಕತೆ, ಆಕ್ರೋಶವರಿಯದ ವಾಗ್ಮಿತೆ; ವರ್ಣ್ಯವಿಷಯದ ಅದು ವಸ್ತುವಿರಲಿ, ವ್ಯಕ್ತಿ ಇರಲಿ ಅವಿಸ್ಮರಣೀಯ ಭಾವ-ಭಂಗಿ-ನಿಲವು-ಒಲವುಗಳನ್ನು ಸೂಕ್ತವಾಗಿ ಸೆರೆಹಿಡಿದು ಮಾತಿನಲ್ಲಿ ಮುದ್ರಿಸುವ ಚೂಟಿಯ ಛಾಯಾಗ್ರಾಹಕತೆ ಮತ್ತು ಆಳವಾದ, ನೈಜವಾದ, ನಿರ್ಭರವಾದ ಪ್ರಕೃತಿ ಪಾರವಶ್ಯ, ನಿಸರ್ಗಸೌಂದರ್ಯದ ಆಸಕ್ತಿ.

ಕವಿ–ವಿಮರ್ಶಕ ಡಾ. ಶಂಕರ ಮೊಖಾಸಿಯವರು ಕಣವಿಯವರಲ್ಲಿ Natural mysticism ಹದಗೆಡದ ರೂಪದಲ್ಲಿ ಕಂಡಿದ್ದಾರೆ. ಇಲ್ಲಿಯ Mysticism (ಅನುಭಾವ?) ದ ವಿಚಾರ ನನಗೆ ಹೊಳೆಯದು. ಆದರೆ ಅವರಲ್ಲಿ ನಿಸರ್ಗದ ಬಗೆಗೆ ಅತ್ಯಂತ ಆತ್ಮೀಯವಾದ ಆಸಕ್ತಿಯಿದೆ. ಇದನ್ನು ನಾವು ಭಕ್ತಿಯೇ ಅನ್ನಬಹುದು. ಆದರೆ 'ಭಕ್ತಿ' ಎಂಬ ಮಾತಿನಿಂದ ಹೊಳೆಯುವ ದೈವಿಕತೆ, ಶರಣಾಗತಿ ಇತ್ಯಾದಿಗಳ "ಕಾಂಡ" ಇಲ್ಲಿ ಕಾಣುವುದಿಲ್ಲ. ನಿಸರ್ಗವನ್ನು ಈ ಕವಿ ಮನವಾರೆ 'ಭಜಿಸು'ತ್ತಾರೆ, ಪ್ರೀತಿಸುತ್ತಾರೆ. ಅದರಿಂದ ತನ್ನ ಕಾವ್ಯಕ್ಕೆ ಸ್ಫೂರ್ತಿ ಪಡೆಯುವುದಿರಲಿ, ಅದರಲ್ಲಿ ಕಾವ್ಯವನ್ನೂ ಮರೆಯುತ್ತಾರೆ. ಅವರ 'ಬರೆಯಲೊಲ್ಲದ ಕವಿತೆ' ('ನಗರದಲ್ಲಿ ನೆರಳು' ಸಂಗ್ರಹ) ಯಲ್ಲಿಯ ಈ ಸಾಲುಗಳನ್ನು ನೋಡಬಹುದು :

ಇಂಥ ತಂಪೊತ್ತಿನಲಿ ಮಾನ್ಯ ಸಂಪಾದಕರೆ
ಕವಿತೆ ಏತಕೆ ಬೇಕು ಹೇಳಿ... ... ...
... ... ಬಾಡಿರುವ
ಹೂಗಳ ತೆಗೆದು, ಒಣಗಿದೆಲೆಗಳ ಗುಡಿಸಿ, ಅಲ್ಲಲ್ಲಿ
ಅಸ್ತಿತ್ವಕ್ಕೆ ಧಕ್ಕೆಬಾರದ ಹಾಗೆ ಬೆಳೆದ ಕಸ–ಕಳೆಯ
ಕಿತ್ತಿ, ಕುರುಪಿಯಾಡಿಸಿ, ಜರಜರಿಯಿಂದ ನೀರೆರೆಯುವಲ್ಲಿ
ನನಗೆ ಸುಖವುಂಟು.

ಈ ಸುಖದ ಇದಿರು ಕವಿಗೆ ಸಂಪಾದಕರ ಚೆಕ್ಕು. 'ಗೌರವದ ಚವರಿ' ಯಾವುದೂ ಮರುಳುಗೊಳಿಸದು. ಈ ಬಗೆಯ ತನ್ಮಯತೆಯಿಂದ ಈ ಕವಿಯ ಪ್ರಕೃತಿ ವರ್ಣನೆ ಯಾವಾಗಲೂ ಉತ್ಕಟ ಪ್ರಾಮಾಣಿಕತೆ (sincerity)ಯಿಂದ ತುಂಬಿರುತ್ತದೆ.

ಈ ಹಿನ್ನೆಲೆಯಲ್ಲಿ ನಾನು ವಿಶ್ಲೇಷಣೆಗೆ ಆಯ್ದುಕೊಂಡದ್ದು ಕವಿಯ 'ಹುಲ್ಲು' ಕವನ. ದೀಪಾವಳಿ ವಿಶೇಷ ಸಂಚಿಕೆ 'ಪಾಂಚಾಲಿ'ಯಲ್ಲಿ ಪ್ರಕಟವಾದ ಹೊಚ್ಚಹೊಸ ಕವನ.

ಬೆಳಕಿನ ಬಣ್ಣಗಳನ್ನು ಅಳೆದು ತಿಳಿಯಲು ಒಂದು ಕಿರಣವನ್ನು ಲೋಲಕದೊಳಗಿಂದ ಹಾಯಿಸಿ ಕಂಡರೆ ಸಾಕು. ಅದೇರೀತಿ ಈ ಕವನದ ವಿಮರ್ಶೆ. ಕವನವೇ ಒಂದು ಮನೋಲೋಲಕ– ಅದರ ಓದುಗರ ಪ್ರವಾಹವನ್ನು ಪೃಥಃಕರಿಸಿ ಅವರ ಮಾದರಿಗಳನ್ನು ಗುರುತಿಸಲು. ("A poem is a mental prism capable of seperating the stream of its readers into a number of distinguishable types"— J. A. Richards).

ಆಧುನಿಕ ಕವಿತೆಗೆ, ಅದೂ 'ನವ್ಯ'ವೆಂಬ ಕವನಕ್ಕೆ 'ರಸ'ವೆಂಬುದೊಂದು ಉಂಟೆ? ರಸಕ್ಕೆ ಒಂದು ಮಾನವೀಯ ಸಂದರ್ಭ ಬೇಕು. ಸ್ಥಾಯೀಭಾವಗಳೆಲ್ಲ ಮಾನವ ಜೀವನದ ಅಂಗಗಳು. 'ತ್ರೈಗುಣ್ಯೋದ್ಭವ ಲೋಕಚರಿತ'ದಿಂದ ಕಥೆ, ನಾಟ್ಯ ಇತ್ಯಾದಿಗಳಲ್ಲಿ ರಸೋತ್ಪತ್ತಿ. ಬಿಡಿ ಕವನಗಳಲ್ಲಿ ಕವಿಯ ಆಶಯ ಅಂತರಂಗವೇ ಏಕಪಾತ್ರ. ಅಲ್ಲಿ ಯಾವ ಮಾನವೀಯ ಘಟನೆಯೂ ನಡೆಯುವುದಿಲ್ಲ. ಕವನ ಓದಿ ಮುಗಿದಾಗ ಏನೋ ಒಂದು ಉತ್ಸಾಹ, ಉತ್ತೇಜನ, ಉದ್ರೇಕ, ಆನಂದ ಉಂಟಾಗುವುದು ಖಂಡಿತ. ಆದರೆ ಅದು ಅಖಂಡರಸಾನುಭವವಲ್ಲ. ಅದನ್ನು ಹೆಚ್ಚೆಂದರೆ ಭವಭೂತಿ ಹೇಳುವ 'ಕೌತುಕರಸ'ವೆನ್ನಬಹುದು. ಆದ್ದರಿಂದ ಇಂಥ ಕವಿತೆಯ 'ರಸ' ಪರಿಚಯವೆಂದರೆ ಅದರ ಆನಂದವರ್ಧಕ ಸೌಂದರ್ಯದ ಪದಪ್ರತ್ಯಯದಿಂದ ಉಂಟಾಗುವ ವಿಶಿಷ್ಟ ಬೌದ್ಧಿಕಸುಖದ ಅರ್ಥಮಾಡಿಕೊಳ್ಳುವ ಪ್ರಯತ್ನ.

'ಹುಲ್ಲು' ಕವನದ ವಸ್ತು ಅಪೂರ್ವ. ಹುಲ್ಲು ತೀರ ಸಾಮಾನ್ಯ, ಸರ್ವಸಾಧಾರಣ, ಜನಸಾಮಾನ್ಯರಂತೆ. ಆದರೆ ನಾವೆಲ್ಲ ಪ್ರಾಣಿಕೋಟಿ ಬದುಕುವುದು ಹುಲ್ಲಿನಿಂದಲೇ

ಎಂದರೆ ತಪ್ಪಲ್ಲ. ನಾವು ಉಣ್ಣುವ ಧಾನ್ಯ-ದವಸ ಹುಲ್ಲಿನಿಂದಲೇ. ನಾವು ಕುಡಿಯುವ ಹಾಲು-ಹೈನು ದನದ ಹೊಟ್ಟೆಯ ರಸಾಯನ ಶಾಲೆಯಲ್ಲಿ ಹುಲ್ಲಿನಿಂದ ತಯಾರಾದ ವಸ್ತುವೇ ! ಬೇರೆ ಗಿಡಮರಗಳು ಇಲ್ಲದಿರುವಲ್ಲಿ ನೆಲದ ಮರ್ಯಾದೆ ಮುಚ್ಚುವುದು ಹುಲ್ಲೇ ಸರಿ. ಶೂರ ವೀರರೆಂಬ ಪುಂಡರು ಹೋರಾಡಿ ಒಬ್ಬರನ್ನೊಬ್ಬರು ಕೊಂದು ಭೂಮಿತಾಯಿಯ ಮೈಯನ್ನೆಲ್ಲ ನೆತ್ತರದಿಂದ ತೊಯಿಸಿದಾಗ ಆ ಬಗ್ಗೆ ನೊಂದು ನಾಚಿ ಭೂಮಿ ಅದನ್ನೆಲ್ಲ ಹುಲ್ಲು ಹಾಸಿದ ಹಸಿರು ಸೆರಗಿನಿಂದ ಮುಚ್ಚಿಕೊಂಡು ಬಿಡುತ್ತಾಳೆ !

ಇಷ್ಟಾದರೂ ಹುಲ್ಲು ನಮಗೆ ಹೀನಾಯ. 'ಹುಲುಮನುಜ'ನೆಂದು ನಾವು ಹೀಯಾಳಿಸುತ್ತೇವೆ. ತೃಣೀಕರಿಸು ಎಂಬುದು ತಿರಸ್ಕರಿಸು ಎಂಬ ಅರ್ಥವನ್ನು ಕೊಡುತ್ತದೆ. ಅನಾಯಾಸವಾಗಿ ತಾನೇ ತಾನಾಗಿ ಬೆಳೆಯುವ ಹುಲ್ಲು ನಮ್ಮ ಮಟ್ಟಿಗೆ ದೀನದಲಿತ.

ಈ ದೀನದಲಿತ ಪಂಥಕ್ಕೆ ದನಿಕೊಟ್ಟಿದ್ದಾರೆ ಕವಿ ಈ ಕವನದಲ್ಲಿ. ಹುಲ್ಲು ದುರ್ದಮ್ಯ ಜೀವೇಷಣೆಯ ಪ್ರತೀಕವಾಗಿ ಕಂಡಿದ್ದಾರೆ. ಹುಲ್ಲಿಲ್ಲದ ತಾಣವೆಲ್ಲಿ ? ಹುಲ್ಲಿಗೆ ಯಾರ ಅಂಕೆ-ಅಂಕುಶ ? 'ನಿತ್ಯ ಸರ್ವಗತಃ ಸ್ಥಾಣುಃ ಅಚಲೋಽಯಂ ಸನಾತನಃ' ಎಂಬ ಪರಮಾತ್ಮನ ಪ್ರತೀಕ ನಿಜವಾಗಿಯೂ 'ಅಶ್ವತ್ಥ'ವಲ್ಲ, ಈ ಹುಲ್ಲು !

ಈ ಕವನ, ಮಳೆಯಿಂದ ಮೊದಲಾಗಿ ಮಳೆಯೇ ಇಲ್ಲದ ಮರುಭೂಮಿಯಲ್ಲಿ ಕೊನೆಯಾಗುತ್ತದೆ.

ಹುಲ್ಲಿನ ಹುಟ್ಟು ಗುಟ್ಟು ಕವಿ ಸಜೀವವಾಗಿ ಚಿತ್ರಿಸಿದ್ದಾರೆ. ಅದು ಧುತ್ತೆಂದು ಬೆಳೆದುನಿಂತಿದೆ. ಎಂಥ ಇಕ್ಕಟ್ಟಿನಲ್ಲೂ ತುರಾಯಿ ಹಚ್ಚಿಕೊಂಡು ಹೊರಬರುತ್ತದೆ. ಈ ಮಾತು ಹುಲ್ಲಿನ ಪುಟ್ಟ ದಿಮಾಕನ್ನು ತುಂಬ ಸೊಗಸಾಗಿ ಚಿತ್ರಿಸುತ್ತದೆ. ಗೊಂಡೆಯೋ, ಮೊಗ್ಗೆಯೋ, ಹೂವೋ ತಲೆಗಿಟ್ಟುಕೊಂಡು ಹುಲ್ಲು-ಕದರು ಕಾಣಿಸಿಕೊಳ್ಳುತ್ತದೆ. ಅದರ ಪುಟ್ಟಬಾಳಿನಲ್ಲಿಯೂ ಅಟ್ಟಹಾಸವೆಷ್ಟು ? ನಮಗೆ ಜಿಟಿಜಿಟಿ ಮಳೆ ಹೊಲ ಬೇಸರ. ಆದರೆ ಅಲ್ಪಪ್ರಾಣಕ್ಕೆ ಅದು ಧಾರಾಕಾರ ಹಾಲೆರೆದಂತೆ ಅದನ್ನೆ ಗಟಗಟ ಕುಡಿದು ಧುತ್ತೆಂದು ಮತ್ತೆ ಹಾಜರು-ನಾಗರಿಕತೆಗೆ ನಿಸರ್ಗದ ಸವಾಲು ಎಸೆದು. ಮೂಲಪ್ರವೃತ್ತಿಯನ್ನು ಪೂರ್ತಿ ನಿರ್ಮೂಲವಾಡಲು ಸಾಧ್ಯವೆ ? ಮೂಲ ಸಾಬೀತು ಇರುವತನಕವೂ ಅದು ಮತ್ತೆಮತ್ತೆ ಮೈದೋರುತ್ತದೆ.

'ತುರಾಯಿ ಹಚ್ಚಿಕೊಂಡು' ಎಂಬ ಚಿತ್ರಮಯ ಚಿಕ್ಕಪದಪ್ರಯೋಗ ತುಂಬ ಧ್ವನಿನಿಬಿಡವಾಗಿದೆ.

> 'ಹಿತ್ತಲ ಮಾತು ಗೊತ್ತೆ ಇದೆ'
> (ಮರುಭೂಮಿಯ ಮಾತು ಬೇರೆ)

ಇಂಥ ಸಾಲುಗಳು ಈ ವೃತ್ತಬಂಧವಿರದ ಸ್ವಚ್ಛಂದ ಛಂದದ ಕವನದ ಒಳತೋಲವನ್ನು ಕಾಯ್ದುಕೊಳ್ಳುತ್ತವೆ. ಇದಕ್ಕೆ ಅಲ್ಲಲ್ಲಿಯ ಅಂತಃಪ್ರಾಸಗಳು–ಗುತ್ತಿಗೆ–ಹೊತ್ತಿಗೆ, ಕರಿಕೆ–ತುರಿಕೆ, ಹುಲ್ಲು–ಬಿಲ್ಲು, ಬಾಣ–ತಾಣ ಇತ್ಯಾದಿ ಬೆಳ್ಳಿಯ ಕೀಲು ಜಡಿದಂತೆ ಅಚ್ಚುಕಟ್ಟನ್ನು ಒದಗಿಸಿವೆ.

ಹುಲ್ಲು ಕಿತ್ತಷ್ಟು ಮತ್ತೆ ಮತ್ತೆ ಹುಟ್ಟಿಬರುತ್ತದೆಂಬ ಒಂದು ವಿಚಾರವನ್ನು ಕವಿ ಅನೇಕ ಪರ್ಯಾಯೋಕ್ತಿಗಳಿಂದ (elegant variations) ವರ್ಣಿಸುತ್ತಾರೆ. ಅಲ್ಲಿ ಅವರಿತ್ತ 'ಕಷ್ಟದ ಮರುದಿನದ ಮುಖ'ದ ಉಪಮೆ ಒಮ್ಮೆಲೆ ಮನಸ್ಸು ಸೆರೆ ಹಿಡಿಯುವಂತಿದೆ. 'ಕಣ್ಣುಚ್ಚಿ ಬಿಟ್ಟೇ–' ಎಂಬ ಮಾತಿನ ಹಿಂದಿನ ಮಕ್ಕಳ ಕಣ್ಣು ಮುಚ್ಚಾಟದ ಧ್ವನಿ ಈ ಪುಟ್ಟ ಹುಲ್ಲ ಚೆಲ್ಲಾಟಕ್ಕೆ ಫಕ್ಕನೆ ಕಣ್ಣಿಗೆ ಬೀಳುವ ತುಂಟ ತರಳತನಕ್ಕೆ ಅರ್ಥವತ್ತಾದ ಶ್ರುತಿ ಕೊಡುತ್ತದೆ. ಅದೇರೀತಿ 'ಕಾಮನಬಿಲ್ಲು.... ಬಿಡುವುದು ಬಾಣ.' ಇಲ್ಲಿಯ ಹೋಲಿಕೆ ಹಳೆಯದೆನಿಸಿದರೂ ಅದರ ಕ್ರಿಯಾಶೀಲ ತಿರುವು ಹೊಸತು–ಹೃದ್ಯ.

ಬಂಡೆಗಲ್ಲಿನ ಬೋಳುತಲೆ ಅಲ್ಲಲ್ಲಿ ಇರಬಹುದು. ಆದರೆ ಪರೀಕ್ಷಿಸಿ ನೋಡಿ : ಅದರ ತಳದಲ್ಲಿ ಹುಲ್ಲು ಮೆತ್ತಗೆ ಮಲಗಿರುತ್ತದೆ.

> ಬೇಲಿದಾಟಿ ಒಳಗೆ ನುಗ್ಗುತ್ತದೆ
> ಕಾಲ ಕೆಳಗೆ ಬಂದು ಜಗ್ಗುತ್ತದೆ
> ಲಾನಿನ ಕ್ರಾಪು ಕತ್ತರಿಸಿದಾಗ ಮಗ್ಗುಲಲ್ಲಿ
> ಹಿಗ್ಗುತ್ತದೆ–

(ಮುಖ ಕ್ಷೌರದ ನಂತರ ಕ್ರಾಪಿನ ಹೋಲಿಕೆ !) ಈ ಪಂಕ್ತಿಗಳಲ್ಲಿಯ ಕ್ರಿಯಾಪದಗಳು ಪ್ರಾಸಕ್ಕಾಗಿ ಬಂದವಲ್ಲ. ಯಥಾರ್ಥತೆಯಲ್ಲಿ ಪ್ರಾಸವೂ ಸಾರ್ಥಕವಾಗಿದೆ.

'ಮಳೆಗೆ ಮಣ್ಣೆ ಮೊಳೆಯುತಿದೆ'– ಅಂದಿದ್ದಾರೆ ಅಂಬಿಕಾತನಯದತ್ತರು ತಮ್ಮದೊಂದು ಕವನದಲ್ಲಿ. ಆದರೆ ಈ ಕವಿ ಬೀಜದ ಕಸುವನ್ನೂ ಮಣ್ಣಿನ ಹಸಿ ವನ್ನೂ ಬೇರೆಯಾಗಿ ಗುರುತಿಸುತ್ತಾರೆ. ಆದರೆ ಕವನದ ಕೊನೆಯಲ್ಲಿ ಹುಲ್ಲಿನ ಬೆಳೆಗೆ ಬೀಜ ಮಣ್ಣುಗಳೊಂದಿಗೆ ಮಳೆಯನ್ನು ಮುಖ್ಯ ಅಂಗವಾಗಿ ಕವಿ ನಮೂದಿಸಿದ್ದಾರೆ. 'ಮಳೆಗೆ ಹುಲ್ಲು ಮೊಳೆಯುವದು'. ಇದು ಕವನದ ಆರಂಭಕ್ಕೆ ಚೆನ್ನಾಗಿ ಹೊಂದಿ ಕೊಳ್ಳುತ್ತದೆ. ಜಿಟಿಜಿಟಿ ಮಳೆ, ಷೆಕ್ಸಪೀಯರ ಹೇಳುವ gentle rain ಅಲ್ಲ. ಆದರೂ ಇದು ಕರುಣೆಯ ಪ್ರತೀಕ. ('ಕರುಣೆ ತೋರದೆ ಕುರುಪಿಯಿಂದ ಕೆತ್ತಿಕೆತ್ತಿ ತೆಗೆದಾಗ'). ಈ ಕರುಣೆ ಮಳೆಗರೆದಾಗಲೇ ಹುಲ್ಲು ಮತ್ತೆ ತಲೆಯೆತ್ತುವದು. ಅಂದರೆ ದೀನದಲಿತ ಜನಾಂಗ ದೇಶದ ನಿಜವಾದ ಬುಡಕಟ್ಟಿನ ಎಲ್ಲೆಲ್ಲೂ ನೆಲೆಸಿದ ಜನಪದ. ಮೇಲಿನವರ ಕರುಣೆಯಿಂದಲೇ ಚೇತರಿಸಿಕೊಂಡು ಏಳಬಲ್ಲದು ಎಂಬ ಭಾವ ಇಲ್ಲಿ ಮಿಡಿದಂತಿದೆ.

ಈ ವರೆಗಿನ ವಿಶ್ಲೇಷಣೆ, 'ಹುಲ್ಲು' ದುರ್ದಮ್ಯ ಜೀವೇಷಣೆ ಅಥವಾ ಜೀವನೋತ್ಸಾಹದ ಪ್ರತೀಕವೆಂದು ಕಂಡುಕೊಂಡಾಗ ಮೂಡಿ ಬಂದ ಮೀಮಾಂಸೆ. ಆದರೆ ಈ ಕವನದಿಂದ ಕವಿ ಇನ್ನೊಂದು ಆಳದ ಪಾತಳಿಯಲ್ಲಿ ಆಶಯವನ್ನು ತುಂಬಿದ್ದಾನೆ. ಇಲ್ಲಿ 'ಹುಲ್ಲು' ಜೀವನೋತ್ಸಾಹದಂತೆ ಜೀವಜೀವದ ಜೀವಾಳದ ಪ್ರೇರಣೆಯೂ, ಪ್ರಚೋದನೆಯೂ ಆದ ಕಾಮಕ್ಕೂ ಪ್ರತೀಕವಾಗಿದೆ. ಫ್ರೂಡನ ಮತದಂತೆ ಮಳೆಯು ಒಂದು ಕಾಮಪ್ರತೀಕ. ಆದರೆ ಇಲ್ಲಿ ಕವಿ, ಮಳೆಗೆ ಜುಮ್ಮೆಂದು ನಿಮಿರಿ ನಿಲ್ಲುವ ಹುಲ್ಲು ಕಾಮದ ಪ್ರತೀಕವಾಗಿ ಒಟ್ಟು ಕಂಡಿದ್ದಾನೆ.

ಈ ಕೋನದಿಂದ ಕಂಡರೆ ಕವನದಲ್ಲಿ ಕೊನೆಯವರೆಗೂ ಅರ್ಥಪೂರ್ಣತೆ ಮಿಡಿಯುತ್ತದೆ. ಕಾಮಪ್ರವೃತ್ತಿಯ ಸಾರ್ವತ್ರಿಕತೆ, ಸಾರ್ವಭೌಮಿಕತೆಯನ್ನು ಈ ಕವನ ಕಂಡರಿಸುತ್ತದೆ. ಈ ದೃಷ್ಟಿಯಿಂದ ಇಲ್ಲಿಯ ಯಾವ ಪಂಕ್ತಿಯೂ ನಿರರ್ಥಕವಲ್ಲ, ವ್ಯರ್ಥವಲ್ಲ. ಜಿಟಿಜಿಟಿ ಮಳೆಗೆ ('ಆಷಾಢಸ್ಯ ಪ್ರಥಮ ದಿವಸೇ........') ಬೆಳೆದು ನಿಂತಲ್ಲಿಂದ ಹಿಡಿದು ಮಳೆಯೇ ಇಲ್ಲದ ಮರುಭೂಮಿಯ ವರೆಗೂ, ಹಿತ್ತಲ ಬೇಲಿಯಿಂದ ಹಿಡಿದು ಬೋಳು ಬಂಡೆಯವರೆಗೂ ಇದಕ್ಕೆ "ಅರ್ಥ" ಹೊರಡುತ್ತದೆ.

''ಎಂಥ ಇಕ್ಕಟ್ಟಿನಲ್ಲೂ ಹೊರ ಬರುತ್ತದೆ ....'' ಈ ಸಾಲಿನಿಂದಲೇ ಈ ಭಾವಕ್ಕೆ ವಿಚಿತ್ರಸ್ವಾರಸ್ಯ ಕಟ್ಟುತ್ತದೆ. ಈ ಸಾಲು ಇಲ್ಲಿಯ ಪ್ರತೀಕಾತ್ಮತೆಗೆ keynote ಆಗಬಲ್ಲುದು– 'ಎಲ್ಲಾದರೂ ಸ್ವಲ್ಪ ಪಡುವು ಸಿಕ್ಕರೆ ಸಾಕು,' 'ಹಿತ್ತಲ ಮಾತು ಗೊತ್ತೇ ಇದೆ'. 'ಹೂದೋಟದಲ್ಲಿ ಹೇಳಿಕಳಿಸಿದ ಹಾಗೆ', 'ನೀರೆರೆದು ಬೆಳೆಸಿದ ಗಿಡಕ್ಕೆ' ಅಂದರೆ ನಾಗರಿಕ ಸಂಸ್ಕೃತಿಗೂ ಈ ಕಾಮದ ಸವಾಲು. ಎಂಥ ಪರಿಷ್ಕೃತ ಪ್ರತಿಷ್ಠೆಯ ಜಂಭವನ್ನೂ ಅದು ನಡುಗಿಸಬಲ್ಲುದು. ಹಸಿವು–ಕಸುವುಗಳು ಕಾಮಕ್ಕೂ ಸಲ್ಲುವವು. 'ಮುಸುಗುಡುವದು' ಅದರದೇ ಭಾಷೆ. 'ಕಜ್ಜಿಯ ತುರಿಕೆ' ಅದರವೇ 'ಕಂಡೂ ಶಮನ', ಕಾಮನ ಬಿಲ್ಲಿನ ಬಾಣ ಕಣ್ಮುಚ್ಚಿ ಬಿಟ್ಟ ಬಾಣ. 'ಹೇಳಿ ಎಲ್ಲಿಲ್ಲ ಅದರ ತಾಣ ?'.

ಮುಂದೆ ಇಲ್ಲವೆಂಬ ತಾಣಗಳ ಪರೀಕ್ಷೆ. 'ಬಂಡೆಗಲ್ಲಿನ ಬೋಳುತಲೆ' ನಿವೃತ್ತ, ಸಂನ್ಯಸ್ತ, ವಿರಕ್ತವೆಂಬ ಸ್ಥಾನ. ಆ ಬಂಡೆಯ ಕೆಳಗೂ ಈ ಹುಲ್ಲು ನುಣ್ಣಗೆ ಚಾಚಿದೆ ಅಲ್ಲಿ– 'ಮೆತ್ತಗೆ ಮಲಗಿರುತ್ತದೆ'! 'ಬೇಲಿದಾಟಿ ಒಳಗೆ ನುಗ್ಗುತ್ತದೆ – ತಾರುಣ್ಯೋನ್ಮಾದಕ್ಕೆ ಯಾವ ಬೇಲಿಯ ಅಡೆ–ತಡೆ ? 'ಮಗ್ಗುಲಲ್ಲಿ ಹಿಗ್ಗುತ್ತದೆ'– ಇದು ವಿಧಿವತ್ತಾಗಿ ಲಾನಿನ ಕ್ರಾಪು ಕತ್ತರಿಸಿದ ಮೇಲೆ ಅಂದರೆ ಗಾರ್ಹಸ್ಥ್ಯ – ದಾಂಪತ್ಯದ ಅಧಿಕೃತ ರೀತಿಯಲ್ಲಿ. ಅದರೆ ಈ ಕಾಮಪ್ರವೃತ್ತಿ 'ಒಗ್ಗಿ ಹೋಗುತ್ತದೆ ಹೀಗೆ ಬರುಬರುತ್ತ' ಎಂದು ಮತ್ತೆ ಸಮಾರೋಪಗೊಳಿಸುವದೇಕೆ ? ಇದು ಮಾಮೂಲಿನ ತೀರ್ಮಾನವಾಗದೇ ?

ಇನ್ನು ಜೀವನೋತ್ಸಾಹ ಮತ್ತೆಮತ್ತೆ ದಮಿತ ದಲಿತವಾದರೆ ಅದು ಅಂಥ ದೀನಾವಸ್ಥೆಗೆ ಬರುಬರುತ್ತ ಒಗ್ಗಿಹೋಗುವುದು ಸಹಜ. ಆದರೆ ಈ ಸಾಲಿನ ಹಿಂದಿನ ಸಾಲುಗಳು ಅಂಥ ತೊತ್ತುಳಿದುಳಿತದ ಧ್ವನಿಯನ್ನು ಕೊಡುವುದಿಲ್ಲ. ಅಲ್ಲೆಲ್ಲ ಸುಗ್ಗಿ ಹಿಗ್ಗುಗಳದೇ ಮಾತು !

'ಹುಲ್ಲು' ಕಾಮದ ಪ್ರತೀಕವಾಗಿ ತೆಗೆದುಕೊಂಡಾಗ ಮರುಭೂಮಿ ಓಯಾಸಿಸ್ ಎಲ್ಲವೂ ಅರ್ಥಪೂರ್ಣವಾಗುತ್ತವೆ. [ಆದರೆ ಅದು ಬರಿ ಜೀವನೋತ್ಸಾಹದ ಪ್ರತೀಕ-ಪ್ರತಿಮೆಯಾದಾಗ ಇದು ಅಷ್ಟೊಂದು ಪೂರಕ ಪೋಷಕವೆನಿಸುವುದಿಲ್ಲ. ಹಾಯಾಗಿ ಮೆಲುಕಾಡಿಸುತ್ತ ಮಲಗಿದ ಒಂಟಿ ದಲಿತ, ದಮಿತ ಪ್ರಾಣಶಕ್ತಿ (Vitality)ಯದಲ್ಲ.] ಮರುಭೂಮಿ ಬಂಜೆತನಕ್ಕೆ, ಓಯಾಸಿಸ್ ಅಲ್ಲಿಯೂ ವ್ಯಕ್ತವಾಗುವ ಲೈಂಗಿಕ ಹಸಿವೆಯ ಹಸಿ-ಹಸಿರಿಗೆ ಪ್ರತಿಮೆಗಳಾಗುತ್ತವೆ. ಆದರೆ ಆಗ "ದೂರ ಅಲ್ಲೊಂದು ಓಯಾಸಿಸ್ಸು ಉಂಟಲ್ಲ ಮಾರಾಯರೆ" ಎಂಬ ಉದ್ಗಾರದಲ್ಲಿ ಅಸಗತ್ಯ ಲೇವಡಿ (Mockery) ಧ್ವನಿಸುವಂತಿದೆ. ಆದರೂ ಆ ಬಂಜೆತನದಲ್ಲಿಯೂ, ಒಂಟಿ ಬಾಳಿನಲ್ಲಿಯೂ ಮಲಗಿ ಮೆಲುಕಾಡಿಸುವ ಈಪ್ಸೆ 'ಒಂಟಿ'ಯ ಪ್ರತಿಮೆಯಲ್ಲಿ ಮಾರ್ಮಿಕವಾಗಿಯೇ ವ್ಯೈವೆತ್ತಿದೆ. ಈ ದೃಷ್ಟಿಯಿಂದ ಧ್ವನ್ಯರ್ಥದ ಈ ಪಾತಳಿಯಲ್ಲಿ 'ಹುಲ್ಲು' ತುಂಬ ಸಾರ್ಥಕವಾಗಿದೆ.

ಉತ್ತಮ ಕವಿತೆಯ ಗಮಕವೇ ಇದು. ಅರ್ಥದ ಮರ್ಮವನ್ನು ಯಾವ ಪಾತಳಿಯಲ್ಲಿ, ಯಾವ ಕೋನದಿಂದ ನೋಡಿಕೊಂಡರೂ ಅದು ಸುಸಂಗತವಾಗಿ ಆತ್ಮ ವಿಸಂಗತಿಯಿಲ್ಲದೆ ಆಸ್ವಾದ್ಯವಾಗಬೇಕು. ಶ್ರೀ ಅರವಿಂದರು 'Future poetry' ಯಲ್ಲಿ ಒಂದೆಡೆಗೆ ಹೇಳುವಂತೆ "Modern poetry has achieved a far greater subtlity, fineness, and depth of suggeation in style and thought than the ancients..." ಈ ಮಾತು ಈ ಕವನದಲ್ಲಿಯೂ ಯಥಾರ್ಥವಾಗಿದೆ. ಕವಿ ಕಣವಿ ಈ ಆಳವನ್ನು ಅದರ ಸೂಕ್ಷ್ಮತೆ (Subtlity) ಮತ್ತು ನವಿರು (Fineness) ಗಳಲ್ಲಿ ಕೂಡಿಯೇ ಸಾಧಿಸಿದ್ದಾರೆ. ದುರ್ದಮ್ಯ ಜೀವನೋತ್ಸಾಹದ ಪ್ರತೀಕಾತ್ಮತೆಯಲ್ಲಿ ಕವನ ಕೊನೆತನಕವೂ ಉತ್ಕಟತೆಯನ್ನು ಸಾಧಿಸಿದಂತೆ ಕಾಣಲಿಕ್ಕಿಲ್ಲ. ಆದರೆ ಈ ಕಾಮದ ಪ್ರತೀಕತೆಯಲ್ಲಿ ಅದು ಸಾದ್ಯಂತ ಸಾಫಲ್ಯವನ್ನು ಪಡೆದಿದೆ. 'ದಲಿತ'ತೆಯ ಆಶಯವು ಜೀವನೋತ್ಸಾಹದ ಅಭಿವ್ಯಕ್ತಿ ಯದೇ ಒಂದು ಆಯಾಮವಾಗಿ ಬಂದಿದೆ.

ಹೀಗೆ 'ಹುಲ್ಲು' ಎರಡು ದೃಷ್ಟಿಗಳಿಂದಲೂ ಸಿದ್ಧಿಸಿದ ಕಾವ್ಯಸೃಷ್ಟಿ.

• •

ಹುಲ್ಲು

ಈ ಜುಲೈ ತಿಂಗಳ ಜಿಟಿ ಜಿಟಿ ಮಳೆ–
ಗಟಗಟ ಕುಡಿದು ಧುತ್ತೆಂದು ಬೆಳೆದು ನಿಂತಿದೆ ಹುಲ್ಲು.
ಎಲ್ಲಾದರೂ ಸ್ವಲ್ಪ ಪಡುವು ಸಿಕ್ಕರೆ ಸಾಕು :
ಸಿಮೆಂಟು ಗೋಡೆಯ ಬಿರುಕು, ಟಾರು ಬೀದಿಯ ಒಡಕು–
ಎಂಥ ಇಕ್ಕಟ್ಟಿನಲ್ಲು ಹೊರಬರುತ್ತದೆ ತುರಾಯಿ ಹಚ್ಚಿಕೊಂಡು.

ಗುಡ್ಡ–ಮರಡಿ–ಬಯಲು ಸ್ವಂತ ಸಾಮ್ರಾಜ್ಯ
ಹಿತ್ತಿಲದ ಮಾತು ಗೊತ್ತೇ ಇದೆ;
ಅಂಗಳದ ಅಂಗುಲಂಗುಲ ಕೂಡ ಅದರದೇ ಗುತ್ತಿಗೆ.
ಹೂದೋಟದಲ್ಲಿ ಹೇಳಿಕಳಿಸಿದ ಹಾಗೆ ಹೊತ್ತಿಗೆ
ಮೊದಲೇ ಬಂದು ಡೇರೆ ಹೊಡೆದು ತಳವೂರುತ್ತದೆ–
ನೀರೆರೆದು ಬೆಳೆಸಿದ ಹೂವಿನಗಿಡಕ್ಕೆಸೆದು ಸವಾಲು;
ಬೀಜದ ಕಸುವೋ, ಮಣ್ಣಿನ ಹಸಿವೋ–
ಮುಸುಗುಡುತ್ತದೆ ದನ ಮೇದು ಹೋದ ಮೇಲೂ.

ಕರುಣೆ ತೋರದೆ ಕುರುಪಿಯಿಂದ ಕೆತ್ತಿಕೆತ್ತಿ ತೆಗೆದು
ಹೊರಗೊಗೆದು ಹಸನಾಯಿತೆಂದು ಉಸಿರು ಬಿಡು–
ವಷ್ಟರಲ್ಲೇ ಕಷ್ಟದ ಮರುದಿನದ ಮುಖದಂತೆ
ಬ್ಲೇಡಿಗೆ ತಯಾರು. ನೀವಾರು, ನಿಮ್ಮ ಹೆಸರೇನು
ಕಸುಬಾವುದು– ಐದೆಸೆಯೆಲ್ಲ ಅದಕೆ ಗೊತ್ತು.
ಕರಿಕೆ : ಕಜ್ಜಿಯ ತುರಿಕೆ, ಹುಲ್ಲು : ಕಾಮನಬಿಲ್ಲು
ಕಣ್ಮುಚ್ಚಿ ಬಿಟ್ಟೇ–
ಬಿಡುತ್ತದೆ ಬಾಣ; ಹೇಳಿ ಎಲ್ಲಿಲ್ಲ ಅದರ ತಾಣ ?

ಇರಬಹುದು ಬಂಡೆಗಲ್ಲಿನ ಬೋಳುತಲೆ ಅಲ್ಲಲ್ಲಿ. ಅದರ
ತಳದಲ್ಲಿ ಮೆತ್ತಗೆ ಮಲಗಿರುತ್ತದೆ, ಪರೀಕ್ಷಿಸಿ ನೋಡಿ.
ಬೇಲಿದಾಟಿ ಒಳಗೆ ನುಗ್ಗುತ್ತದೆ; ಕಾಲ ಕೆಳಗೇ ಬಂದು
ಜಗ್ಗುತ್ತದೆ. ಲಾನಿನ ಕ್ರಾಪು ಕತ್ತರಿಸಿದಾಗ ಮಗ್ಗುಲದಲ್ಲಿ
ಹಿಗ್ಗುತ್ತದೆ; ಬರುಬರುತ್ತ ಒಗ್ಗಿಹೋಗುತ್ತದೆ.

ಮಳೆಗೆ ಹುಲ್ಲು ಮೊಳೆಯುವದು ಮೂಲಪ್ರವೃತ್ತಿ, ನಿಸರ್ಗ.
ಕಳೆ ತೆಗೆದು ಬಿತ್ತಿ ಬೆಳೆಯುವದು ನಾಗರಿಕ ಮಾರ್ಗ.
ಮರುಭೂಮಿಯ ಮಾತು ಬೇರೆ; ಅಲ್ಲಿ ಮಳೆಯೂ ಇಲ್ಲ.
ಆದರೂ ದೂರ ಅಲ್ಲೊಂದು ಓಯಾಸಿಸ್ಸು ಉಂಟಲ್ಲ ಮಾರಾಯರೆ
ಅದಕ್ಕೇ ಅಲ್ಲಿ ಒಂಟೆ ಮಲಗಿ ಮೆಲುಕಾಡಿಸುವದು.

● **ಚೆನ್ನವೀರ ಕಣವಿ**

ಉಗುರಮೂನೂರ್ವರು

• ಆರ್. ಎಸ್. ಗುರವ

ಗ್ರಾಮದ ಎಲೆದೋಟಗಳಲ್ಲಿ ವೀಳೆಯದೆಲೆ ಕೊಯ್ಯುವ ವ್ಯವಸಾಯ ಮಾಡು ವವರ ಸಂಘವನ್ನು ಶಾಸನಗಳಲ್ಲಿ **'ಉಗುರಮೂನೂರ್ವರು'** ಎಂದು ಕರೆಯಲಾಗಿದೆ. ಈ ಕಸಬುಗಾರರು ತಮ್ಮ ಹೆಬ್ಬೆರಳಿನ ಉಗುರನ್ನು ಬೆಳೆಯಿಸಿ ಅದರಿಂದ ಬಳ್ಳಿಗಳಲ್ಲಿಯ ಎಲೆಗಳನ್ನು ಕೊಯ್ಯುವದರಿಂದ ಅವರ ಸಂಘಕ್ಕೆ ಉಗುರಮೂನೂರ್ವರು ಎಂದು ಹೆಸರು. ಗದಗ ತಾಲೂಕಿನ ಎಲಿಶಿರೂರ ಗ್ರಾಮದ ಶಾಸನದಲ್ಲಿ[೧] (ಕ್ರಿ. ಶ. ೧೧೧೯) ಮತ್ತು ಅದೇ ತಾಲೂಕಿನ ಶಿರೋಳ ಗ್ರಾಮದ ಶಾಸನದಲ್ಲಿ[೨] (ಕ್ರಿ. ಶ. ೧೧೨೧) ಇವ ರನ್ನು 'ಉಗುರಬೆಡಂಗರ್', 'ಉಗುರಜೆಡಂಗರು' ಎಂದು ವರ್ಣಿಸಿದುದನ್ನು ಗಮನಿಸ ಬಹುದು. ಇವರಲ್ಲಿ ಕೆಲವರು ತಮ್ಮ ಹೆಬ್ಬೆರಳಿನ ಉಗುರಿಗೆ ಹೊಂದಿಕೊಳ್ಳುವಂತೆ ಒಂದು ಕಬ್ಬಿಣದ ಹರಿತವಾದ ಚಿಕ್ಕ ಉಳಿಯನ್ನು ಹಾಕಿಕೊಂಡು ಅದರಿಂದ ಎಲೆಗಳನ್ನು ಕೊಯ್ಯುವುದರಿಂದ ಇಂಥವರ ಸಂಘಕ್ಕೆ **'ಉಳಿಯಮೂನೂರ್ವರು'** ಎಂಬ ಹೆಸರು ಬಂದಿದೆ. ಎರಡೂ ಹೆಸರುಗಳು ಒಂದೇ ವ್ಯವಸಾಯಕ್ಕೆ ಸಂಬಂಧಿಸಿದವು. ಸಾಧನಭೇದ ದಿಂದ ಎರಡು ಹೆಸರುಗಳು ಬಂದಿವೆ.

ಸಾಂಪ್ರದಾಯಿಕವಾಗಿ ಈ ಸಂಘಗಳಲ್ಲಿಯ ಸದಸ್ಯರ ಸಂಖ್ಯೆ ಮುನ್ನೂರು ಆಗಿತ್ತು. ಈ ಸಂಘಗಳು ಜಾತಿವಾಚಕ ಸಂಘಗಳಾಗಿರದೆ ವೃತ್ತಿವಾಚಕ ಸಂಘ ಗಳಾಗಿದ್ದವು. ಉಗುರು ಮತ್ತು ಉಳಿಯ ಹೊರತು ಎಲೆಗಳನ್ನು ಕೊಯ್ಯುವುದ ರಲ್ಲಿ ಉಪಯೋಗಿಸುವ ಇನ್ನೊಂದು ಸಾಧನವೆಂದರೆ ಏಣಿ. ಗಿಡದ ಮೇಲೆ ಹಬ್ಬಿಸಿದ ಎಲೆಬಳ್ಳಿಗಳಲ್ಲಿ ಎತ್ತರದಲ್ಲಿದ್ದ ಎಲೆಗಳನ್ನು ಕೊಯ್ಯಲು ಏಣಿಗಳು ಬೇಕಾಗುತ್ತವೆ. ಈ ಏಣಿಯ ಉಲ್ಲೇಖವೂ ಈ ಸಂಘಗಳ ಉಲ್ಲೇಖಗಳಲ್ಲಿ ಮೇಲಿಂದ ಮೇಲೆ ಬರುತ್ತದೆ.

ಉಗುರಮೂನೂರ್ವರ ಸಂಘದಲ್ಲಿ ಸೇರ್ಪಡೆಯಾಗದೆ ಹೊರಗಿನಿಂದ ಗ್ರಾಮಕ್ಕೆ ಬಂದು ಎಲೆಗಳನ್ನು ಕೊಯ್ಯುವ ಉದ್ಯೋಗ ಮಾಡುವ ಆಳುಗಳಿಗೆ **'ಕೊಯ್ಲಾಳಿ ಗಳು'** ಎಂದು ಹೆಸರು.

---

೧. South Indian Inscriptions; Vol. XI, Part II; No. 158; p. 202, l. 23.

೨. Ibid No. 172; p. 222, l. 44

ಉಗುರಮೂನೂರ್ವರು ತಮ್ಮ ಸಮಾಜದ ವತಿಯಿಂದ ಕಟ್ಟಿಸಿದ ದೇವಾಲಯಕ್ಕೆ **'ಉಗುರೇಶ್ವರ ದೇವಾಲಯ'**ವೆಂದು ಹೆಸರು. ಇದೇ ಪ್ರಕಾರ ಕೊಯ್ಲಾಳಿಗಳು ಸ್ಥಾಪಿಸಿದ ದೇವಾಲಯಕ್ಕೆ **'ಕೊಯ್ಲಾಳೇಶ್ವರ ದೇವಾಲಯ'**ವೆಂದು ಹೆಸರು. ಉಗುರಮೂನೂರ್ವರು ಪ್ರಾಥಮಿಕವಾಗಿ ಕೊಯ್ಲಾಳಿಗಳೇ ಆಗಿದ್ದರಿಂದ ಈ ಕೊಯ್ಲಾಳೇಶ್ವರದೇವ ಅವರಿಗಾದರೂ ದೇವನಾಗಿದ್ದನು.

ಮುಂಡರಗಿ ತಾಲೂಕಿನ ದೋಣಿ ಗ್ರಾಮದ ಶಾಸನದಲ್ಲಿ[೩] (ಕ್ರಿ. ಶ. ೧೧೯೪) ಉಗುರಮೂನೂರ್ವರು ಸಿದ್ಧೇಶ್ವರದೇವರಿಗೆ, ಗ್ರಾಮದಲ್ಲಿ ಹುಟ್ಟಿದ ಎಲೆಯ ಹೇರಿಗೆ ವೀಸವೆರಡು, ಭುಂಡಿಪೊರೆಗೆ ಬೇಳೆಯೊಂದು ಲೆಕ್ಕದಿಂದ ತಮಗೆ ನಡೆವ ದರಿಸನಮಂ[೪] ಬಿಟ್ಟರೆಂದು ಮತ್ತು 'ಹೊಸಬರಪ್ಪ ಕೊಯ್ಲಾಳಿಗಳು ಬಂದು ಈ ಊರೊಳ್ ಕೊಯ್ವರಪ್ಪೊಡೆ ದೇವರ್ಗ್ಗೆ ದರಿಸನಮೆರಡು ಪಣಮಂ ಕೊಟ್ಟು ಕೊಯ್ವುರ್' ಎಂದು ಹೇಳಲಾಗಿದೆ. ಈ ಸಂದರ್ಭದಲ್ಲಿ 'ತಮಗೆ ನಡೆವ ದರಿಸನಮಂ' ಈ ಶಬ್ದಸಮೂಹವನ್ನು ಗಮನಿಸಬಹುದು. ಈ ದರಿಸನದ ಹಣ ಉಗುರಮೂನೂರ್ವರಿಗೆ ಸಲ್ಲತಕ್ಕ ಹಣ. ಹೇರಿಗೆ ಎರಡು ವೀಸ ಮತ್ತು ಭಂಡಿ (ದೊಡ್ಡ)ಹೊರೆಗೆ ಒಂದು ಬೇಳೆ ಈ ಲೆಕ್ಕದಿಂದ ಉಗುರಮೂನೂರ್ವರಿಗೆ ಅವರ ಸಂಘದ ಕಾರ್ಯಕ್ಕಾಗಿ ಕೊಡಲಾಗುವ ಹಣ ಈ ದರಿಸನ. ಈ ಪ್ರಕಾರವಾಗಿ ಸಂಘದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಹಣದ ವ್ಯವಸ್ಥೆ ಮಾಡಲಾಗುತ್ತಿತ್ತೆಂಬುದು ಈ ಶಾಸನದಿಂದ ವಿದಿತವಾಗುತ್ತದೆ.

ದಾನಕ್ಕೆ ಸಾರ್ವಜನಿಕ ಸ್ವರೂಪ, ಪಾವಿತ್ರ್ಯ ಹಾಗೂ ಸ್ಥೈರ್ಯ ಬರುವ ಉದ್ದೇಶದಿಂದ ದಾನ ಕೊಡುವಾಗ ಅವುಗಳನ್ನು ಪ್ರತಿಷ್ಠಿತ ವ್ಯಕ್ತಿ ಮತ್ತು ಪ್ರಮುಖ ಸಂಘ-ಸಂಸ್ಥೆಗಳ ಸಮ್ಮುಖದಲ್ಲಿ ಕೊಡುವುದೊಂದು ರೂಢಿಯಾಗಿತ್ತೆಂಬುದು 'ಅರುವತ್ತೊಕ್ಕಲು' ಎಂಬ ನನ್ನ ಲೇಖನದಲ್ಲಿ ಬಂದಿದೆ.[೫] ಇಂತಹ ಸಂಘಗಳಲ್ಲಿ ಉಗುರಮೂನೂರ್ವರ ಸಂಘವೂ ಒಂದಾಗಿತ್ತು. ಅದೇ ಪ್ರಕಾರ, ಕೊಟ್ಟ ದಾನಗಳನ್ನು ಸಂರಕ್ಷಿಸುವ ಹೊಣೆಯನ್ನು ಬೇರೆ ಸಂಘ-ಸಂಸ್ಥೆಗಳೊಡನೆ ಈ ಉಗುರಮೂನೂರ್ವರ ಸಂಘಕ್ಕೂ ಒಪ್ಪಿಸಲಾಗುತ್ತಿತ್ತು. 'ಈ ಧರ್ಮ್ಮವಂ ಗಾವುಣ್ಡನುಂ, ಮೂವದಿಂಬರು ವೆಲೆಯ ಬೊಜಂಗರೈನೂರನಾಲ್ವರುಂ,[೬] ಉಗುರಮೂನೂರ್ವ್ವರುಂ, ತಂಬುಲಿಗ

---

೩. S. I. I. XI-II; No. 181; p. 241, l. 17-21.

೪. ದರಿಸನ < ದರ್ಶನ = ಕಾಣಿಕೆ.

೫. ಕರ್ನಾಟಕ ಭಾರತಿ; ೮-೩; pp. 80-81.

೬ ವೀಳೆಯದೆಲೆಯ ಆಕಾರ ಭುಜಂಗದ (ನಾಗರ ಹಾವಿನ) ಹೆಡೆಯಂತೆ ಇರುವುದರಿಂದ ವೀಳೆಯದೆಲೆ ಉತ್ಪಾದಿಸುವ ಎಲೆದೋಟಗಾರರಿಗೆ ಎಲೆಯ ಬೋಜಂಗರೆನ್ನುವರು. ಇವರ ಸಂಘಕ್ಕೆ 'ಐನೂರನಾಲ್ವರ್' ಎಂಬ ಹೆಸರು.

ಸಾಸಿರ್ವ್ವರುಂ,[೭] ಮೂರುಂ ನಾಡ ಸುಂಕಿಗರುವಿನ್ನಿಬರುಂ ದಾತಾರರಾಗಿ ಪ್ರತಿಪಾಳಿಸುವರ್' ಎಂದು ಶಿಗ್ಗಾವಿ ತಾಲೂಕಿನ ಹೊಟ್ಟೂರಗ್ರಾಮದ ಶಾಸನದಲ್ಲಿ[೮] (ಕ್ರಿ. ಶ ೧೦೬೭) ಪೇಳಲಾಗಿದೆ. 'ಹರತಿಯ ಪನ್ನಿಬ್ಬರ್ಗಾವುಂಡುಗಳುಂ, ಅಜುವತ್ತೊಕ್ಕಲುಂ,[೯] ಉಗುರ ಮೂನೂರ್ವ್ವರುಂ, ಸಾಸಿರ್ವ್ವರುಂ ಮುಖ್ಯವಾಗಿ ಹಟ್ಟಗಾಜಿ ಬೀರವಣದ[೧೦] ಪೆಗ್ಗಡೆ ರೆಂಮ್ಮರಸು ತೋಂಟದ ಪೇಜಿನ ಬೀರವಣಮಂ ಬಿಟ್ಟರು' ಎಂದು ಗದಗ ತಾಲೂಕಿನ ಹರ್ತಿಗ್ರಾಮದ ಶಾಸನದಲ್ಲಿ[೧೧] (ಕ್ರಿ. ಶ. ೧೧೭೩) ಪೇಳಲಾಗಿದೆ.

ಇನ್ನು, ಉಗುರಮೂನೂರ್ವರ ಕೆಲವು ವರ್ಣನೆಗಳನ್ನು ನೋಡೋಣ : ಮೇಲೆ ಉದ್ಧರಿಸಿದ ಮುಂಡರಗಿ ತಾಲೂಕಿನ ಡೋಣಿಗ್ರಾಮದ ಶಾಸನದಲ್ಲಿ (ಕ್ರಿ. ಶ. ೧೧೯೪) ಅವರನ್ನು ಹೀಗೆ ವರ್ಣಿಸಲಾಗಿದೆ :

ಪರಸೈನ್ಯಾರ್ಣ್ಣವಬಾಡವಾನಳರನೇಕಾರ್ತ್ಥಿಪ್ರಯೂಥೇಂದ್ರಭೂ–
ಮಿರುಹರ್ಬ್ಬಾಸುರಕೀರ್ತ್ತಿವರ್ತ್ತಿತದಿಶಾಚಕ್ರರ್ದ್ದಯಾಧರ್ಮತ–
ತ್ಪರರಾರಾಧಿತ ಶಂಭುಚಾರುಚರಣಾಂಭೋಜಾತಯುಗ್ಮರ್ಸ್ಸದಾ–
ಚರಣತ್ರಾವೆನೆ ಸನ್ದರೀಯುಗುರಮೂನೂರ್ಬ್ಬರ್ಜ್ಜಗದ್ಭುಂಭುಕರ್ ॥
ತವಗೆತ್ತಾನುಂ ಮೊಗಕ್ಕೊಸ್ದಿಸಿಸು ಮುಳಿಸು ಬಂದನ್ದು ಗೋತ್ರಾದ್ರಿಸಂಘಾ
ತವನೆತ್ತಂ ಪತ್ತಿ ಕಿತ್ತೆತ್ತುವರುಜಿ ಪಿಡಿದುದ್ಯದ್ದಿಶಾನೇಕಸಾಸೀ
ಕವನಾದ್ದೊಂದೊನ್ದೆ ತೋಳ್ತಾಗಿಪರವಯುಪದಿಂ ಸುಜಿತ್ರೆನಲ್ತಾಯ್ನೆಲಂ ದೋ–
ಜುವಿಸಂ ಮೂನೂರ್ಬ್ಬರುಂ ವಾರ್ದ್ಧಿಗಳನಿತುವನಾಳಾಪದಿಂ ಪೀರ್ದ್ದು ತೋರ್ಪ್ಪರ್ ॥

ಈ ಪದ್ಯಗಳಲ್ಲಿ ಉಗುರಮೂನೂರ್ವರ ಶೌರ್ಯ, ದಾನಶೀಲತೆ, ಈಶಭಕ್ತಿ, ಧರ್ಮತತ್ಪರತೆ ಮುಂತಾದ ಗುಣಗಳನ್ನು ವರ್ಣಿಸಲಾಗಿದೆ.

ಗದಗ ತಾಲೂಕಿನ ಎಲಿಶಿರೂರ ಗ್ರಾಮದ ಶಾಸನದಲ್ಲಿ[೧೨] (ಕ್ರಿ. ಶ. ೧೧೦೯) ಉಗುರಮೂನೂರ್ವರ ನೆಗಳ್ತೆಯನ್ನು ಹೀಗೆ ಹೇಳಲಾಗಿದೆ :

ಸಿಡಿಲನೆಡೆಗಲಿಪರೇಳುಂ
ಕಡಲಂ ದಾಂಟಲ್ಕೆ ಬಗೆವರಂಜದೆ ನಂಜಂ

---

೭ ಎಲೆ, ಅಡಿಕೆ ಮುಂತಾದ ತಾಂಬೂಲಕ್ಕೆ ಬೇಕಾಗುವ ವಸ್ತುಗಳನ್ನು ಮಾರಾಟ ಮಾಡುವ ವ್ಯಾಪಾರಿಗಳ ಸಂಘಕ್ಕೆ 'ತಂಬುಲಿಗ ಸಾಸಿರ್ವರು' ಎಂಬ ಹೆಸರು.

೮ E-I-XVI; p. 85; u. 37-3೮.

೯ ಊರಲ್ಲಿಯ ರೈತರ ಸಂಘಕ್ಕೆ 'ಅಜುವತ್ತೊಕ್ಕಲು' ಎಂಬ ಹೆಸರು.

೧೦ ಸಂರಕ್ಷಕ ದಲದ ವೆಚ್ಚಕ್ಕಾಗಿ ವಸೂಲು ಮಾಡಲಾಗುವ ಸುಂಕ.

೧೧ S. I. I. XV; No. 240; pp. 296-97, u. 5-11.

೧೨ S. I. I. XI-II; No. 158; p. 202, u. 22-23.

ಕುಡಿಯಲೊಡರಿಸುವರಲ್ಲದೆ
ಪಿಡಿವರು ಫಣಿಪತಿಯನೆನಿಪರುಗುರಬೆಡಂಗರು ॥

ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಹೊಳಲಗ್ರಾಮದ ಶಾಸನದಲ್ಲಿ[೧೩] (ಸುಮಾರು ಕ್ರಿ. ಶ. ೧೧೦೦) ಉಗುರಮೂನೂರ್ವರ ವರ್ಣನೆ ಹೀಗಿದೆ : ನಾಗವಳ್ಳಿ ಲಬ್ಧವರಪ್ರಸಾದರು, ಶಿವಪಾದಶೇಖರರು, ನುಡಿದಂತೆ ಗಂಡರು, ಲೋಕೈಕವೀರರು, ಮರೆವುಗೆ ಕಾವರು, ಧರ್ಮಕ್ಕಾರಾಧ್ಯರು, ಸುಜನ ಚಿಂತಾಮಣಿಗಳು, ಚತುರ್ಭಾಷಾ ವಿಷಯಬಿರುದ ತ್ರಿಣೇತ್ರರು– ಇತ್ಯಾದಿ. ಕೊಯ್ಲಾಳೇಶ್ವರದೇವ ಉಗುರಮೂನೂರ್ವರಿಗೂ ದೇವನೆಂದು ಈ ಶಾಸನದಲ್ಲಿ ಹೇಳಿದೆ.

ಧಾರವಾಡ ತಾಲೂಕಿನ ಮನಗುಂಡಿ ಗ್ರಾಮದ ಶಾಸನದಲ್ಲಿ[೧೪] (ಕ್ರಿ.ಶ. ೧೨೦೩) ಉಗುರ ಮೂನೂರ್ವರನ್ನು ಈ ಪರಿ ವರ್ಣಿಸಲಾಗಿದೆ :

ನುಡಿದಂತೂರ್ಜ್ಜಿತಕಾರ್ಯ್ಯಮಂ ಪಡೆದು ಮಾಳ್ಪಮ್ಮಾನ್ಯರಂ ಮಂನಿಪ
ಗ್ಗ್ಗಡಣಂ ತಂಮೊಳನೂನಮಾಗಿ ವರಧರ್ಮ್ಮಾಧಾರರಾದರ್ಮ್ಮನಂ-
ಬಿಡೆ ವಂದಿಬ್ರಜಮಂ ಸಮುದ್ಧರಿಸುವಸ್ಸಾರ್ಕಾದುವಂ ಕೊಟ್ಟಪ
ಪ್ಪ್ಪಡಿಮಾತೇಂ ಸ್ಥಿರಚಿತ್ತರೀಯುಗುರಮೂನೂರ್ವ್ವರ್ಮಹಾಮ್ಮೈಮರೋ ॥
ಉಗುರೇಶ್ವರ ದೇವಕ್ರಮ-
ಯುಗಮಂ ಪೂಜಿಸಿವರತ್ರಿಯಿಂದನವರತಂ
ಸೊಗಯಿಸುವರೆಂದು ಬಂಣ್ಣಿಪೆ
ನಗಣಿತ ಗುಣಯುತರನುಗುರಮೂನೂರ್ವ್ವರುಮಂ ॥

ಮಣಿಗುಂದಗೆಯ (ಮನಗುಂಡಿಯ) ಈ ಉಗುರಮೂನೂರ್ವರು ತ್ರಿಭುವನ ವೀರ ಜಯಕೇಶಿದೇವರ ದೇವಾಲಯಕ್ಕೆ 'ಚೈತ್ರದ ಪರ್ವ್ವಕ್ಕೆ ಆಳಲ್ಲಿ ಹಾಗ, ಪವಿತ್ರದ ಪರ್ವ್ವಕ್ಕೆ ಆಳಲ್ಲಿ ಹಾಗ' ಬಿಟ್ಟರು ಮತ್ತು ಮುಗದ, ದೇವರಹುಬ್ಬಳ್ಳಿ, ಸತ್ತೂರ, ನುಗ್ಗಿಹಳ್ಳಿ ಹಾಗೂ ನೀರುಸಾಗರ ಈ ಐದು ಗ್ರಾಮದ ಉಗುರಮೂನೂರ್ವರು ಪವಿತ್ರದ ಪೂಜೆಯನ್ನು ನೋಡಲು ಮನಗುಂಡಿಗೆ ಬಂದು, ಪ್ರಸಾದಮನುಂಡು ಪರ್ವದ ಬೀಯಕ್ಕೆ ಆಳಲ್ಲಿ ಹಾಗಮಂ ಕೊಟ್ಟರು ಎಂದು ಈ ಶಾಸನ ಹೇಳುತ್ತದೆ.

ಉಗುರಮೂನೂರ್ವರ ಈ ವರ್ಣನೆಗಳಿಂದ ನಾವು ಆಗಿನ ಕಾಲದ ಪುರುಷಾರ್ಥದ ಮೌಲ್ಯಗಳನ್ನು ತಿಳಿದುಕೊಳ್ಳಬಹುದು.

ಇನ್ನು, ಈ ಉಗುರಮೂನೂರ್ವರು ಬಿಟ್ಟ ದಾನಗಳ ಕೆಲವು ಉಲ್ಲೇಖಗಳನ್ನು

---

೧೩ S. I. I. IX-I; Nos. 285-86; pp. 305-6.

೧೪ Ink-impressions with me; 11-35-37.

ಪರಿಶೀಲಿಸೋಣ : ಗದಗ ತಾಲೂಕಿನ ಸೊರಟೂರಗ್ರಾಮದ ಶಾಸನದಲ್ಲಿ[೧೫] (ಕ್ರಿ. ಶ. ೧೦೯೮) 'ಉಗುರಮೂನೂರ್ವ್ವರು ದರ್ಶನಮಂ ದೇವರ್ಗ್ಗೆ ಪೇಱಂಗೆ ವೀಸ ತಲೆವೊಱಿಗರೆವೀಸಮಂ ಬಿಟ್ಟರ್' ಎಂದು ಹೇಳಲಾಗಿದೆ. ಅದೇ ತಾಲೂಕಿನ ಹೊಸೂರಗ್ರಾಮದ ಶಾಸನದಲ್ಲಿ[೧೬] (ಕ್ರಿ. ಶ. ೧೧೦೩) ಮೋರಕೇಶ್ವರದೇವರ ಉಪಹಾರಕ್ಕಾಗಿ 'ಮೊತ್ತಕಾಱ ಬಮ್ಮಣಂ ಮುಖ್ಯವಾಗಿ ಉಗುರಮೂನೂರ್ವ್ವರು ವಿದ್ದರ್ದ್ದ ಏಣೆಯುಲೊನ್ದು ಪಣಮಂ[೧೭] ಬಿಟ್ಟರು ಮತ್ತವಾ ದೇವರ್ಗ್ಗೆಲೆಯ ಹೇಱಿನಲು ವೀಸವೊನ್ದು ಕಾವಣದರಿಹದಲಾಳಭಾಗವೊನ್ದು'[೧೮] ಬಿಟ್ಟರೆಂದು ಉಲ್ಲೇಖ ಬರುತ್ತದೆ.

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ನೀಲಗುಂದಗ್ರಾಮದ ಶಾಸನದಲ್ಲಿ[೧೯] (ಕ್ರಿ. ಶ. ೧೧೩೬) ಸಮಸ್ತ ತೋಟಿಗರು, ಕೊನಕಾರರು. ಉಳಿಯ ಮೂನೂರ್ವರು ಕೂಡಿ ಮೂಲಸ್ಥಾನದ ಶ್ರೀ ಸ್ವಯಂಭುರಾಮೇಶ್ವರದೇವರಿಗೆ ನಿವೇದ್ಯನಂದಾದೀವಿಗೆಗಳಿಗಾಗಿ ಬಿಟ್ಟ ಧರ್ಮ ಉಳಿಗೆ ಪಾಗ, ಸಮಸ್ತ ಕೊಯ್ಲಾಳಿಗಳೆಲ್ಲರು ಬಿಟ್ಟ ಧರ್ಮ ಏಣಗೆ ಪಾಗವೆಂದು ಹೇಳಲಾಗಿದೆ. ಕಲಘಟಗಿ ತಾಲೂಕಿನ ಮಡಕಿಹೊನ್ನಿಹಳ್ಳಿ ಗ್ರಾಮದ ಶಾಸನದಲ್ಲಿ[೨೦] (ಕ್ರಿ.ಶ.೧೧೫೬) ಉಗುರಮೂನೂರ್ವರು ಗ್ರಾಮೇಶ್ವರದೇವರಿಗೆ ದರ್ಶನವ ಬಿಟ್ಟರೆಂದು ಮತ್ತು ಕೆರೆಯ ತಡಿಯ ಉಗುರೇಶ್ವರ ದೇವರಿಗೆ ಏಣೆಯಲ್ಲಿ ಪಣವೊಂದು ಹಾಗೂ ಹೊರಗಿನಿಂದ ಬಂದ ಕೊಯ್ಲಾಳಿಗಳು ಹಣವೊಂದು ಬಿಟ್ಟರೆಂದು ಉಲ್ಲೇಖಗಳು ಬರುತ್ತವೆ.

ಕಿತ್ತೂರ ಬಳಿಯ ಅವರಾದಿ ಗ್ರಾಮದ ಶಾಸನದಲ್ಲಿ[೨೧] (ಕ್ರಿ.ಶ. ೧೧೨೨) ಕೆರೆಯ ತಡಿಯ ಚಟ್ಟೇಶ್ವರದೇವರಿಗೆ ಉಗುರಮೂನೂರ್ವರು ಆಳಲಡ್ಡ ಚಿನ್ನಮಂ ಬಿಟ್ಟರೆಂದು ಹೇಳಲಾಗಿದೆ. ಧಾರವಾಡಕ್ಕೆ ಹತ್ತಿರವಿದ್ದ ನುಗ್ಗಿಕೇರಿ ಗ್ರಾಮದ ಪಾದಪೀಠ

---

೧೫ S. I. I. XI-II; No. 145; p. 176, l. 3.

೧೬ Ibid; No 152; p. 191 u. 40-41.

೧೭ ಗದ್ಯಾಣ (=ಹೊನ್ನ) ಮಧ್ಯಯುಗದ ಕರ್ನಾಟಕದ ಸುಮಾರು ಅರ್ಧ ತೊಲೆಯ ತೂಕದ ಬಂಗಾರದ ನಾಣ್ಯ. ಒಂದು ಗದ್ಯಾಣವೆಂದರೆ ಹತ್ತು ಪಣಗಳು (ಹಣಗಳು); ಒಂದು ಪಣವೆಂದರೆ ಎರಡು ಅಡ್ಡಚಿನ್ನಗಳು; ಒಂದು ಅಡ್ಡಚಿನ್ನವೆಂದರೆ ಎರಡು ಪಾಗ ಇಲ್ಲವೆ ಹಾಗಗಳು; ಒಂದು ಹಾಗವೆಂದರೆ ಎರಡು ಬೇಳೆಗಳು; ಒಂದು ಬೇಳೆ ಎಂದರೆ ಎರಡು ವೀಸಗಳು; ಒಂದು ವೀಸವೆಂದರೆ ಎರಡು ಅರೆವೀಸಗಳು.

೧೮ ಅರಿಹ = ವ್ಯವಹಾರ.

೧೯ S. I. I. IX. I. No. 141.

೨೦ Ink-impressions with me; 11-34-37.

೨೧ Ibid. l. 20.

ಶಾಸನದಲ್ಲಿ[೨೨] (ಸುಮಾರು ಕ್ರಿ.ಶ. ೧೧೬೦) 'ಚಂದ್ರನಾಥಸ್ವಾಮಿಗಳಷ್ಟವಿಧಾರ್ಚ್ಚನೆಗೆ.... ಉಗುರಮೂನೂರ್ವರು ಹೇಱಿಂಗೆ ವೀಸ, ಏಣಿಗೆ ಹಾಗ....... ಶಿಷ್ಯತಿ ರಾಜಮತಿ ಕಂತಿಯರ[೨೩] ಕಾಲಂ ಕರ್ಚ್ಚಿ....... ಧಾರಾಪೂರ್ವ್ವಕಂ ಮಾಡಿ ಕೊಟ್ಟರ್' ಎಂದು ಉಲ್ಲೇಖ ಬರುತ್ತದೆ. ಮುಂಡರಗಿ ತಾಲೂಕಿನ ಡಂಬಳ ಗ್ರಾಮದ ಶಾಸನವೊಂದರಲ್ಲಿ[೨೪] (ಕ್ರಿ.ಶ. ೧೨೮೮) ನಗರಜಿನಾಲಯಕ್ಕೆ[೨೫] ಉಗುರಮೂನೂರ್ವರು ದೇವರ ಅಷ್ಟವಿಧಾರ್ಚನೆಗೆ ಏಣಿಗೆ ಹಾಗವೊಂದು ಬಿಟ್ಟರೆಂದು ಹೇಳಲಾಗಿದೆ. ರೋಣ ತಾಲೂಕಿನ ಕಳಕಪ್ಪನಗುಡ್ಡ ಗ್ರಾಮದ ಶಾಸನದಲ್ಲಿ[೨೬] (ಕ್ರಿ ಶ.೧೨೨೦) 'ರಾಜೂರ ಸ್ಥಳದ ಉಗುರ ಮೂನೂರ್ವರು ಅಯ್ನೂಱನಾಲ್ವರುಂ, ಸಾಸಿರ್ವ್ವರುಂ, ಸಮಯಮಾಗಾವ್ರಣ್ಡಸ್ಸಾಕ್ಷಿಯಾಗಿ ದೇವರ ಶ್ರೀಕಾರ್ಯಕ್ಕೆ ಚಯಿತ್ರದಲು ಆಳಿಂಗೆ ಎಲೆಯ ಬೊಜಗರಲ್ಲಿ ಹಾಗ ಲೆಖ,[೨೭] ಪವಿತ್ರದಲು ಹಾಗ ಲೆಖ' ಎಂದು ಹೇಳಲಾಗಿದೆ. ಈ ಪ್ರಕಾರವಾಗಿ ಉಗುರಮೂನೂರ್ವರು ದಾನಕೊಟ್ಟ ಅನೇಕ ಉಲ್ಲೇಖಗಳು ಶಾಸನದಲ್ಲಿ ಕಂಡು ಬರುತ್ತವೆ.

ಮಧ್ಯಯುಗದ ಕರ್ನಾಟಕದಲ್ಲಿ ವೀಳೆದೆಲೆಯ ಉತ್ಪಾದನೆ ಹಾಗು ವ್ಯವಸಾಯ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿತ್ತು. (೧) ಎಲೆಗಳನ್ನು ಬೆಳೆಸುವ ತೋಟಗಾರರು ಎಲೆಯ ಬೋಜಂಗರು (ಇವರಿಗೆ ಬೊಜಗರು, ಐನೂರನಾಲ್ವರು ಎಲೆಯ ಬೊಜಂಗರು, ಐನೂರನಾಲ್ವರು ಎಂದೂ ಹೆಸರುಗಳು); (೨) ಎಲೆಗಳನ್ನು ಕೊಯ್ಯುವ ಉಗುರಮೂನೂರ್ವರು, ಉಳಿಯ ಮೂನೂರ್ವರು, ಕೊಯ್ಲಾಳಿಗಳು, ಆಳುಗಳು; (೩) ಎಲೆಗಳ ಸಂಗ್ರಹದ ಕಾವಣಗಳು, ಕೋಠಾರಗಳು; (೪) ಎಲೆಗಳನ್ನು ಸಂಗ್ರಹ ಮಾಡುವ ಮೊತ್ತಕಾರರು; (೫) ಎಲೆಗಳನ್ನು ಸಾಗಾಟ ಮಾಡುವ ಗವರೆಗಳು. ಗಾತ್ರಿಗರು; (೬) ಎಲೆಗಳ ವ್ಯಾಪಾರಮಾಡುವ ತಂಬುಲಿಗ ಸಾಸಿರ್ವರು (ಇವರಿಗೆ ತಂಬುಲಿಗರು, ಸಾಸಿರ್ವರು ಎಂದೂ ಹೆಸರುಗಳು); ಹೀಗೆ ಈ ಎಲೆಯ ಉದ್ಯಮದಲ್ಲಿ ತೊಡಗಿದ ಜನರನ್ನು ನಾವು ವಿಂಗಡಿಸಬಹುದು. ಈ ವಿವಿಧ ವೃತ್ತಿಗಳನ್ನು ಪರ್ಯಾಲೋಚಿಸಿದರೆ ಈ ವಿಷಯಕ್ಕೆ ಸಂಬಂಧಿಸಿದ ಶಾಸನಗಳ ಭಾಗಗಳನ್ನು ಅರ್ಥಮಾಡಿಕೊಳ್ಳಲು ಸುಲಭವಾಗುವುದು. ಈ ವೃತ್ತಿಗಳು ಭಿನ್ನವಾಗಿದ್ದರೂ ಪರಸ್ಪರ ಪೂರಕವಾಗಿದ್ದುವು.

ಉಗುರಮೂನೂರ್ವರು ಯೋಧಜನಾಂಗಕ್ಕೆ ಸೇರಿದವಲ್ಲ. ಎಲೆಗಳನ್ನು ಕೊಯ್ಯುವ ವ್ಯವಸಾಯ ಮಾಡುವ ಜನರು ಇವರು. ಆದರೆ ವೀರವೃತ್ತಿಗೆ ಸಲ್ಲುವ

೨೨ Ink-impressions with me; ll-3-6.

೨೩ ಜೈನ ಸಂನ್ಯಾಸಿನಿ.

೨೪ Karnatak Inscriptions; Vol. V; No. 46; p.186, ll-8-9.

೨೫ ನಗರ, ನಕರ ಇಲ್ಲವೆ ನಖರ ಎಂಬ ವರ್ತಕರ ಸಂಘದವರು ಕಟ್ಟಿಸಿದ ಜಿನಾಲಯ.

೨೬ S.I.I. XV; No. 165; p. 211, ll. 8-10.

೨೭ ಲೆಕ್ಕ

ಬಿರುದುಗಳನ್ನು ಹಾಗು ವರ್ಣನೆಗಳನ್ನು ಉಗುರಮೂನೂರ್ವರಿಗೆ ಕೊಟ್ಟದ್ದು ಶಾಸನಗಳಲ್ಲಿ ಕಂಡು ಬರುತ್ತದೆ. ಇದು ಆ ಕಾಲದ ಪರಿಸ್ಥಿತಿಗೆ ಅನುಸಾರವಾಗಿದೆ. ಆಗಿನ ಕಾಲದಲ್ಲಿ ಸಮಾಜದ ಎಲ್ಲ ಘಟಕಗಳಿಗೆ ವೀರವೃತ್ತಿಯ ಸಾಧನೆ ಮಾಡಲೇ ಬೇಕಾಗುತ್ತಿತ್ತು. ಈಗಿನ ಕಾಲದಂತೆ ಯುದ್ಧರಹಿತ ಶಾಂತಪರಿಸ್ಥಿತಿ ಆಗ ಇರಲಿಲ್ಲ. ಸಾಮ್ರಾಟರ ದಿಗ್ವಿಜಯ ಹಾಗೂ ಘರ್ಷಣೆ, ಸಾಮಂತ, ಮಹಾಸಾಮಂತ, ಮಂಡಳೇಶ್ವರರ ವೈಮನಸ್ಸು ಹಾಗೂ ಆಕ್ರಮಣಶೀಲತೆ, ಗೋಗ್ರಹಣ, ಸ್ತ್ರೀಹರಣ, ಕೊಳ್ಳೆ, ಸುಲಿಗೆ ಮುಂತಾದವುಗಳಿಂದಾಗಿ ಆ ಕಾಲದಲ್ಲಿ ಕಾಳಗಗಳ ಪ್ರಸಂಗಗಳು ಪ್ರತಿ ಜಿಲ್ಲೆ ಪ್ರತಿ ತಾಲೂಕುಗಳಲ್ಲಿ ಮೇಲಿಂದ ಮೇಲೆ ಬರುತ್ತಿದ್ದವು. ಕಾರಣ, ಸಮಾಜದ ಎಲ್ಲ ಜನರು ಶಸ್ತ್ರಾಸ್ತ್ರವಿದ್ಯೆಯಲ್ಲಿ ನೈಪುಣ್ಯ ಹೊಂದಲೇ ಬೇಕಾಗುತ್ತಿತ್ತು. ಮತ್ತು ಪ್ರಸಂಗ ಬಂದರೆ ಯುದ್ಧಗಳಲ್ಲಿ ಭಾಗವಹಿಸಬೇಕಾಗುತ್ತಿತ್ತು. ಆದುದರಿಂದ ಉಗುರಮೂನೂರ್ವರು ಶೌರ್ಯಸಂಪನ್ನರಿದ್ದರೆಂದು ಹೇಳುವುದು ಸಹಜ.

ಜನಪದ ಕವಿಚರಿತೆ

ಎಂ. ಎಸ್. ಲಕ್ಷ್ಮಿ

೨. ಇಂಚಲದ ಕೆಂಚನಾಯ್ಕ

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಇಂಚಲ ಗ್ರಾಮವು ಬೈಲಹೊಂಗಲದಿಂದ ಸುಮಾರು ಮೂರು ಮೈಲು ಅಂತರದಲ್ಲಿದೆ. ತೋಟಪಟ್ಟಿಗಳಿಂದ ಕಂಗೊಳಿಸುತ್ತಿರುವ ಈ ಹಳ್ಳಿ ಸಾಧು–ಸಂತರ ಮಠದ ಆಧ್ಯಾತ್ಮಿಕ ಪರಿಸರದಿಂದ ಪವಿತ್ರವೆನಿಸಿದೆ.

ಒಂದು ಶತಮಾನದ ಹಿಂದಿನ ಮಾತು. ವೀರಶೈವ ಧರ್ಮಾನುಯಾಯಿಗಳಾದ ಜಕ್ಕಪ್ಪನವರ ಮನೆತನದಲ್ಲಿ ಈರಪ್ಪನಾಯ್ಕನ ಹೊಟ್ಟೆಯಿಂದ ಹುಟ್ಟಿದ ಕೆಂಚನಾಯ್ಕನೇ ಈ ಜನಪದ ಕವಿ. ತಂದೆಯಂತೆ ಮಗ ಕೆಂಚನಾಯ್ಕನೂ ಮನೆತನದ ಉದ್ಯೋಗವಾದ ಒಕ್ಕಲುತನವನ್ನೇ ಮಾಡಬೇಕಾಗಿತ್ತು. ಅದರಲ್ಲಿಯೆ ತೊಡಗಿದ ಕೆಂಚನಾಯ್ಕನಿಗೆ ಮೈಲೀಬೇನೆ ತಟ್ಟುತ್ತದೆ. ಅದರಿಂದಾಗಿ ಕಣ್ಣು ಕಳೆದುಕೊಂಡು ಲೋಕದ ಕಣ್ಣಿಗೆ ಕುರುಡನೆನ್ನಿಸಿಕೊಳ್ಳುವಂತಾಗುತ್ತದೆ. ಬಾಲ್ಯದಿಂದಲೂ ಹಾಡಿನಲ್ಲಿ ಗತಿ ಇದ್ದುದರಿಂದ ಹಾಡನ್ನೇ ಹಾಡುತ್ತ ಸಂತೋಷಪಡುತ್ತಾನೆ. ಆ ಊರ ಹಿರಿಯರ ತಾಳ, ಗತ್ತು, ಲಯಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳುತ್ತಾನೆ. ಅಂತರ್ಮುಖಿಯಾಗಿ, ಚಿಂತನಶೀಲನಾಗಿ ತಾನೂ ಹಾಡುಕಟ್ಟುತ್ತಾನೆ. ಹಾಡು ಕಟ್ಟಿದಂತೆ ಆತ ಬರೆಯುತ್ತ ಹೋಗಿದ್ದರೆ, ರಾಶಿರಾಶಿಗಟ್ಟಲೆ ಬೀಳಬಹುದಾಗಿತ್ತು. ದುರ್ದೈವ! ಕೆಂಚನಾಯ್ಕನಿಗೆ ಅಕ್ಷರಾಭ್ಯಾಸ ಆಗಿರಲಿಲ್ಲ. ಆಗಿದ್ದರೂ ಕುರುಡ. ಹಾಗೇ ಹೊಸ ಹೊಸ ಪದಗಳನ್ನು ಸೃಷ್ಟಿಸುತ್ತ, ಹಾಡುತ್ತ ಹೋಗುತ್ತಿದ್ದ. ಇದನ್ನರಿತ ಜನತೆ ಈತನೂ ಒಬ್ಬ ಕವಿ ಎಂದು ನಾಮಕರಣ ಮಾಡಿತು. ಊರೂರು ಅಡ್ಡಾಡ ಹತ್ತಿದ. ಸುಮಧುರವಾದ ಕಂಠ, ಪ್ರತಿಭಾಪೂರ್ಣ ಹಾಡು, ಮನಂಬುಗುವ ವಿಷಯಗಳಿಂದಾಗಿ ಜನತೆ ಈತನನ್ನು ತುಂಬು ಹೃದಯದಿಂದ ಅಪ್ಪಿಕೊಂಡಿತು. ಕವಿಕೆಂಚನಾಯ್ಕರ ಪಾದದಡಿಯಲ್ಲಿ ಕುಳಿತು ಸಾವಿರಾರು ಜನರು ಹಾಡು ಕೇಳಹತ್ತಿದರು, ಕಲಿಯಹತ್ತಿದರು. ಬರೆದುಕೊಂಡರು. ಹೀಗೆ ಕವಿಯ ಪ್ರತಿಷ್ಠೆ ನಾಡಿನತುಂಬೆಲ್ಲ ಪಸರಿಸಿತು. ಕಣ್ಣು ಇಲ್ಲದಿದ್ದರೇನಾಯ್ತು ? ಕರುಳಿಲ್ಲವೇ....ಬಹುಶಃ ಕುರುಡನಾಗಲಿರುವ ಈತನನ್ನು ಬಲ್ಲ ಆ ಬ್ರಹ್ಮ, ಗತ್ತು–

ಲಯಗಳನ್ನು ದಯಪಾಲಿಸಿರಬೇಕು. ಹಲಗೆ ಬಳಪವ ಹಿಡಿಯದೆ, ನಾಲಿಗೆಯ ಮೇಲೆ ಸರಸ್ವತಿದೇವಿಯನ್ನು ಕುಣಿಸುತ್ತ ಕವಿ ಜನಪದರಿಗಾಗಿ ಜನಪದ ಹಾಡುಗಳನ್ನು ಹೇಳುತ್ತ 'ಕರ್ನಾಟಕದ ಜಾನಪದ ಹೋಮರ'ನಾಗಿ ಮೆರೆದನೆಂದು ಹೇಳಬಹುದು.

ಕವಿಗೆ ಲಗ್ನವಾಗಿತ್ತು. ಸಾಧ್ವಿಮಣಿ ಗೌರಮ್ಮ-ಹೆಂಡತಿ; ಇವಳ ಹೊಟ್ಟೆಯಿಂದ ಇಬ್ಬರು ಗಂಡುಮಕ್ಕಳೂ ಜನಿಸಿದ್ದರು. ಅವರ ಲಾಲನೆಪಾಲನೆಯಲ್ಲಿ ಸಂಪೂರ್ಣ ಜವಾಬ್ದಾರಿ ಹೊತ್ತ ತಾಯಿಗೆ ಮುಂದೆ ಒಬ್ಬನೇ ಮಗ ಉಳಿಯುತ್ತಾನೆ. ಕಿರಿಯಮಗ ರಾಮನಾಯ್ಕನು ಪ್ಲೇಗುಬೇನೆಯಿಂದ ಪ್ರಾಣ ಕಳೆದುಕೊಳ್ಳುತ್ತಾನೆ. ಉಳಿದವ ಬಾಬಾ ನಾಯ್ಕನೆಂಬ ಹಿರಿಯಮಗ ಮಾತ್ರ. ಅವನಿಗೆ ಈರ್ವರು ಗಂಡುಮಕ್ಕಳು. ಅವರಲ್ಲಿ ಹಿರಿಯವನೇ ಅಜ್ಜನ ಹೆಸರಿನ ಮೊಮ್ಮಗ-ಈಗಿದ್ದ ಕೆಂಚನಾಯ್ಕ. ದಿ. ೨೭-೫-೧೯೭೬ ರಂದು ಇಂಚಲಕ್ಕೆ ಸಂಶೋಧನೆಗೆಂದು ಹೋದಾಗ ಈ ಮೊಮ್ಮಗನನ್ನು ಕಂಡು ಕವಿಯ ವಿಷಯಕ್ಕೆ ಹೆಚ್ಚಿನ ಮಾಹಿತಿ ಪಡೆದುಕೊಂಡದ್ದು. ಕವಿಯ ಪ್ರತಿಭೆ, ಪಾಂಡಿತ್ಯ ಗಳ ಪ್ರಭಾವ ಈ ಮನತನದಲ್ಲಿ ಇದುವರೆಗೆ ಯಾರಿಗೂ ಮೂಡಿಲ್ಲ. ಹಿರಿಯಮಗ ಬಾಬಾನಾಯ್ಕನೇ ಆಗಾಗ ತಂದೆ ರಚಿಸಿದ ಹಾಡುಗಳನ್ನು ಹಾಡುತ್ತಿದ್ದನಂತೆ ಅಷ್ಟೇ.

ಕವಿಯ ಮನೆಯಲ್ಲಿ ಆತ ರಚಿಸಿದ ಹಾಡುಗಳ ಯಾವ ಕಟ್ಟೂ ಇಲ್ಲವಂತೆ. ಇದ್ದರೆ ಕೊಡಿರಿ ಎಂದು ಕೇಳಿದಾಗ ನಿರಾಶರಾಗಿ ನಮ್ಮಲ್ಲಿ ಇಲ್ಲ ಎಂದು ದುಃಖದಿಂದ 'ಕೆಂಚನಾಯ್ಕನ ಮೊಮ್ಮಗ' ಹೇಳಿದರು. ನಮ್ಮೂರಲ್ಲೇ ಕೆಲವರಲ್ಲಿವೆ ನಡೆಯಿರಿ ಕೇಳೋಣ ಎಂದು ಕರೆದುಕೊಂಡು ಆಮನೆ ಈಮನೆ ಅಡ್ಡಾಡಿಸಿದರೂ ಯಾರೂ ಹಚ್ಚಿಕೊಳ್ಳಲಿಲ್ಲ. ನಮ್ಮ ಮನೆಯಲ್ಲಿ ಇಲ್ಲ ಇಲ್ಲವೆಂದೇ ಹಾರಿಕೆಯ ಉತ್ತರಗಳನ್ನು ಕೊಟ್ಟರು. ಆದರೆ ಅದೇ ಊರಿನ ಒಂದುನೂರು ವರುಷದ ಶ್ರೀ ಹನುಮಂತಪ್ಪ ಕೋಲಕಾರ ಎಂಬ ಯಜಮಾನರ ಮನೆಗೆ ಕರೆದೊಯ್ದರು. ಅವರಿಗೂ ಅಕ್ಷರಬಾರದು. ಕೆಂಚನಾಯ್ಕರ ಹಾಡುಗಳನ್ನೆಲ್ಲಾ ಹಾಡುತ್ತಾರೆ. ವಯಸ್ಸಾಗಿದ್ದರೂ ಇನ್ನೂ ಆ ಹುರುಪು ಹುಮ್ಮಸ್ಸು ಇದೆ. ಒಂದೆರಡು ಹಾಡುಕೇಳಿ ನೆರೆದ ನೂರಾರು ಜನರೆಲ್ಲರೂ ದಂಗಾದೆವು. ಸಾಯುವ ಮುನ್ನ ಈ ಹಾಡುಗಳನ್ನು ನಮಗೆ ಕೊಟ್ಟು ಹೋಗಿರಿ ಎಂದು ವಿನಂತಿಸಿಕೊಂಡೆವು. ಬೇಕಾದಾಗ ಬರೆದುಕೊಳ್ಳಿರಿ-ಹಾಡುತ್ತೇನೆ; ಕಲಿಯಿರಿ ಕಲಿಸುತ್ತೇನೆ ಎಂದು ಆತ್ಮೀಯತೆಯಿಂದ ಅವರೂ ಹೇಳಿದರು. ಹೀಗೆ ಕೆಂಚನಾಯ್ಕರ ಪದಗಳನ್ನು ಹಾಡುವವರನ್ನು ಬೆಳಗಾವಿ ಜಿಲ್ಲೆಯಲ್ಲಿ ಸಾಕಷ್ಟು ಜನರನ್ನು ಕಾಣಬಹು ದಾಗಿದೆ. ಮುತನಾಳದ ಶ್ರೀ ಬಸನಗೌಡ್ರು ಫಕೀರಪ್ಪ, ಬಸಾಪುರದ ಮಲ್ಲಪ್ಪ, ಹಿರೇಬಾಗೇವಾಡಿಯ ರೊಟ್ಟಿ ಮತ್ತು ಹುಲಮನಿ ಮೊದಲಾದವರನ್ನು ಹೆಸರಿಸ ಬಹುದಾಗಿದೆ.

ಕವಿಯ ಉದ್ಯೋಗ ಹಾಡು ರಚಿಸುವುದು, ಕಲಿಸುವುದೇ ಆದಂತಾಗಿತ್ತು.

ಹಾಡು ಕಲಿಯುವ ಜನರು ಇದ್ದಲ್ಲಿಗೆ ಬಂದು, ತಮ್ಮ ತಮ್ಮ ಊರುಗಳಿಗೆ ಕರೆದು ಕೊಂಡು ಹೋಗಿ ಹಾಡು ಕಲಿಯುತ್ತಿದ್ದರಂತೆ. ಅಂಥ ಊರುಗಳಲ್ಲಿ ಬಡಸ, ಹಿರೇಬಾಗೇವಾಡಿ, ಬಸಾಪುರ, ಸೂಳಿಭಾಂವಿ- ಇವು ನನಗೆ ತಿಳಿದು ಬಂದ ಗ್ರಾಮ ಗಳಾಗಿವೆ. ಬಸಾಪುರದ ಬಸನಗೌಡರಂತೂ ಕವಿಗೆ ಸಾಕಷ್ಟು ದವಸ ಧಾನ್ಯಗಳನ್ನಿತ್ತು ಹೆಚ್ಚು ವರ್ಷ ಕವಿಯ ಸಂಗದಲ್ಲೇ ಕಾಲಕಳೆದರಂತೆ. ಅವರಿಗೆ ಈಗಲೂ ಈ ಭಾಗದ ಜನತೆ 'ಹಾಡೊ ಬಸನಗೌಡ'ರೆಂದೇ ಕರೆಯುತ್ತಾರೆ. ಕವಿಯ ಹೊಟ್ಟೆಬಟ್ಟೆ ನೋಡಿ ಕೊಂಡು, ಕುಟುಂಬಕ್ಕೂ ನಾಲ್ಕೈದು ಹೇರು ಕಾಳು ಕೊಡುತ್ತಿದ್ದರಂತೆ. ಬಡಸದ ಹಾಡೊ ಬಸನಗೌಢರ ಬೀಗರಾದ ಮುತನಾಳದ ಬಸನಗೌಡರು ತಮ್ಮ ಚಿಕ್ಕವಯಸ್ಸಿ ನಲ್ಲಿ ಕೆಂಚನಾಯ್ಕರ ಹಾಡುಗಳನ್ನು ಕಲಿತಿದ್ದರಂತೆ. ಇಂದಿಗೂ ಅವುಗಳನ್ನು ತಮ್ಮ ನಾಲಿಗೆಯ ಮೇಲೆ ಬದುಕಿಸಿಕೊಂಡು ಬಂದಿದ್ದಾರೆ. ಅವರು ಹಾಡಿದ ಹಾಡುಗಳನ್ನು ಕೇಳಿ, ಅಲ್ಲಿ ಬರುವ 'ಇಂಚಲದ ಬಂಕನಾಥ' ಎಂಬ ಕವಿಯ ಮುದ್ರಿಕೆಯನ್ನು ಕಂಡೇ ಕವಿಯ ಊರು-ಮನೆ ಕಂಡುಬಂದದ್ದು, ನಾನು.

ನಮ್ಮ ಊರ ಶ್ರೀ ಕಲ್ಲಪ್ಪ ಬುಚಡಿ ಅವರ ಮನೆಯಲ್ಲಿ ದೊರೆತ ಹಾಡಿನ ಚೋಪಡಿಯೊಂದರಲ್ಲಿ ಹಾಡು ನಕಲು ಮಾಡಿಕೊಂಡ ತಾರೀಖು ಬಂದಿದೆ. ಅದು ೨೭-೧೨-೧೯೧೩ ಎಂದಿದೆ. ಅದರಂತೆ, ಕವಿಯ ಮೊಮ್ಮಗನಾದ ಶ್ರೀ ಕೆಂಚನಾಯ್ಕ ನಿಗೆ ಈಗ ಸುಮಾರು ೫೫ ವರುಷಗಳಾಗಿವೆಯಂತೆ. ಅಲ್ಲದೆ ಇಂಚಲದ ನೂರು ವರುಷದ ಮುದುಕ ಶ್ರೀ ಕೋಲಕಾರ ಹನುಮಂತ ಅವರು ತಮ್ಮ ೧೪-೧೫ನೇ ವಯಸ್ಸಿನಲ್ಲಿ ಕವಿಯನ್ನು ನೋಡಿದ ನೆನಪು ಎಂದರು. ಆಗ ಕವಿಗೆ ೮೦-೯೦ ವರುಷ ಆಗಿರಬೇಕೆಂದೂ ಅವರು ಹೇಳಿದರು. ಈ ಎಲ್ಲ ಅಂಶಗಳಿಂದ ಕವಿ ಒಂದನೂರು ವರುಷಗಳ ಹಿಂದೆ ಕಾವ್ಯರಚಿಸಲು ಪ್ರಾರಂಭಿಸಿರಬೇಕೆಂದು ಹೇಳಬಹುದು.

ಕವಿಗೆ ಶಾಸ್ತ್ರ ಓದಿ ಹೇಳುವವರೂ ಇದ್ದರಂತೆ. ಆವರು ಹಾಡಿದಂತೆ ಜೊತೆ ಜೊತೆಗೇ ಇದ್ದ ಅದೇ ಊರಿನ ಸಕ್ರನಾಯ್ಕರು ಹಾಡು ಬರೆದಿಡುತ್ತಿದ್ದರಂತೆ. ಸ್ವತಃ ಸಕ್ರನಾಯ್ಕರೂ ಕವಿಗಳಿದ್ದರಂತೆ. ಅದರಂತೆ ತಿಪ್ಪಣ್ಣಾ ಮತ್ತು ಮಲ್ಲಣ್ಣಾ ಎಂಬಿಬ್ಬರು ಕೆಂಚನಾಯ್ಕನಿಗೆ ರಾಮಾಯಣ, ಮಹಾಭಾರತ ಹಾಗೂ ಕಾವ್ಯ-ಶಾಸ್ತ್ರಗಳನ್ನು ಓದಿ ಹೇಳುತ್ತಿದ್ದುದನ್ನೂ ಜನತೆಯ ಬಾಯಿಂದ ಕೇಳಬಹುದಾಗಿದೆ. ''ಜೋಡಿ ಕೂಡಿ ತೋಡಿ ಮಾಡಿ ಹೇಳಿದಾರೆ। ಹೊಡದಾರ ಮದ್ದಿನ ಹೊಸಗುಂಡ। ರತಿಯಂತಾ ಸತಿ ನಿನ್ನ ಮೇಲೆ। ಕಮಲ ಅರಳಿದ್ಹಾಂಗ ಏನ ಪುಣ್ಯಾ ಮಾಡಿದಾನ ನಿನಗಂಡ।'' ಎಂದು ಜೋಡಿಕೂಡಿ ಎಂಬ ಮಾತಿನಲ್ಲಿ ಈ ತಿಪ್ಪಣ್ಣಾ ಮತ್ತು ಮಲ್ಲಣ್ಣ ಅವರ ಹೆಸರನ್ನು ತಿಳಿದುಕೊಳ್ಳಬಹುದಾಗಿದೆ.

ಕವಿಯ ಕಾವ್ಯಸೃಷ್ಟಿ ವೈವಿಧ್ಯಪೂರ್ಣವಾದುದು. ಲಾವಣಿ, ಗೀಗೀ, ಸೋಬಾನ,

ಭಲೇರಿ, ಪಂತಿ, ಡೊಳ್ಳು ಹೀಗೆ ವಿವಿಧ ರೀತಿಯ ಹಾಡುಗಳನ್ನು ಸೃಷ್ಟಿಸಿ ಜನಪದ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಸಾಲದ್ದಕ್ಕೆ ಅನೇಕ ಸಣ್ಣಾಟಗಳನ್ನು ಬರೆದಿದ್ದರಂತೆ. ಆದರೆ ಆ ಸಣ್ಣಾಟಗಳಲ್ಲಿ ಅವರದೆಂದು ಹೇಳುವ ಒಂದೇ ಆಟ ನನಗೆ ದೊರೆತಿದೆ. ಈಗಲೂ ಬೆಳಗಾವಿ ಜಿಲ್ಲೆಯಾದ್ಯಂತ ಜಯಭೇರಿ ಹೊಡೆದ 'ಪುಂಡಲಿಕನ ಆಟ'. ಅದು 'ಬಾವಾನಾಟ' ಎಂದೂ ಪ್ರಸಿದ್ಧಿ ಪಡೆದಿದೆ. ಆ ಆಟದ ಹಾಡುಗಳನ್ನು ಶ್ರೀ ಬಸನಗೌಡರ ಬಾಯಿಂದಲೇ ಕೇಳಬೇಕು; ಅದರ ರಸ-ಸ್ವಾರಸ್ಯ ಹೊರಬೀಳುವುದು.

"ಚಿತ್ರಜ ಮುಖಿ ಕೇಳೆ ಅತ್ತರೇನಾಗುವುದು
ಒತ್ತರ ಮಾಡಿ ಲಗ್ಗ ಪೋಗುವೆನುs ।
ಪತ್ರವು ಬಂದಿತು ಆತುರದಿಂದಲಿ ।
ಸಿರ್ದಾರಾ ಕಳುವ್ಯಾನ ದಂಡಿನ ಸರ್ದಾರಾ ।
ಹಿಂಬಾಲೆ ದಮಡಿ ಸನದೀರಾ ।
ಕಲ್ಕತ್ತ ಹೋಗಿ ಸಿಲ್ಕಬೇಕ ಬಲ್ಕಿ ಇದ್ದವರಾ ।
ಚಿಲ್ಕತದ ಅಂಗಿ ಉಲ್ಕದಂಥಾ ಮಲ್ಕಿ ಉಂಗುರಾ ।
ಕಾಬುಲ್ಕ ಹೋಗುವ ಕಟ್ಟ ಬರಿದಾರ ಶ್ರೇಷ್ಟ ಸಾಹಿಬ್ರಾ"

ಲಾವಣಿಯ ಹಾಡುಗಳ ರಚನೆಯಲ್ಲಂತೂ ಕವಿಯದು ಎತ್ತಿದ ಕೈ. ಪ್ರಾಸ, ಅರ್ಥಭಾರ, ಅನ್ಯೋಕ್ತಿ, ವ್ಯಂಗ್ಯಾರ್ಥ ಹಾಗೂ ರಸಗಳಿಂದ ತುಂಬಿತುಳುಕುವ ಹಾಡುಗಳವು.

"ರಾಜ ಬೀದಿ ಹಿಡದ ಮೋಜಿಲಿ ಹೋಗುವಳೊ
ಸೋಜಿಗದ ಹೆಣ್ಣ ಯಾರಿವಳೊ । ಚ್ಯಾಲ ।
ಕಾಂತಿಯುಳ್ಳ ನಾರಿ ನಿನ್ನ ಪ್ರಾಂತದೊಳು ಕಾಣಲಿಲ್ಲ
ಭ್ರಾಂತಿ ಬಡದ ನಿಂತೆನ ಹವ್ವಹಾರಿs ।
ಏನಂತಿ ಹೇಳ ಈಗ ವಚನ ಕೊಡ ಒಯ್ಯಾರಿ ।
ಬಳಕುತ ನಡುವಿನ ಬಾಲಿ ಕೇಳೆ ಎಳಿಯ ಪ್ರಾಯದೊಳು ।
ನಿನ್ನ ಸುಳುವ ಕಂಡ ನಿಂತೆನ ಬೆದರಿ ।
ಅರಗಿಳಿ ಕೇಳ ನನ್ನ ಮಾತಿನ ಮಧುರಿ ।"

"ತೋಳಿಗಿ ಕುಬಸಿಲ್ಲದ ಏಳೂರ ತಿರುಗಿದಳೋ
ಯೇನಾತ್ಯೊ ಅವಳ ಬಾಳೇವೊ । ಚಾಲ ।
ಮನ್ಮಥ ಚೆದುರನ ಮಾರಿ ನೋಡಿ
ನಾರಿ ಗ್ವಾಡಿ ಜಗದಾಳೊ ಅಲಕ್ಕ ।
ಬಾಗಿಲ್ಗಿ ಹಾಕಿ ನಿಂತಿದಾಳೊ ಚಿಲಕ್ಕ ।
ಬಂದಿ ಕುಬಸತೊಟ್ಟ ಬಿಂದಿಗಿ ಹೊತಗೊಂಡ
ನಾರಿ ಬಂದಾಳ ನಮ್ಮ ಹೊಲಕ್ಕ ।

ಭಾಂವಿ ನೀರ ಮಾಡಿದಾಳ ಕಲಕ್ಕ ।
ಊರಾಗ ರಂಡಿನ್ನ ಯಾಂವ ಕೇಳೂದಿಲ್ಲ
ಹತ್ತಿದಾವ ಒಂಟಿ ಹುರಕ್ಕ ।
ನನ್ನ ಮುಂದ ಆಗಿ ತಿರಗ್ತಾಳೊ ಪರಕ್ಕ ।
ಮುನ್ನೂರ ರೂಪಾಯಿ ಇವರಪ್ಪ ಎಣಿಸಿಕೊಂಡ
ಹೋದಾನೊ ಸುಂಬಳಬುರಕ್ಕ ।
ಇವರವ್ವನ ಸೀರೆಲ್ಲಾ ಹರಕ್ಕ ।

ಕವಿಗೆ ಧರ್ಮದಲ್ಲಿ ಶ್ರದ್ಧೆ, ದೇವ-ದೇವತೆಗಳಲ್ಲಿ ನಂಬಿಗೆ. ಅವರನ್ನೆಲ್ಲ ಹಾಡಿಸ ಮೊದಲು ಪ್ರಾರ್ಥಿಸುವುದು ಕವಿಯ ಮನೋಧರ್ಮ. ಶಿವ, ಗಣಪತಿ, ಪಾರ್ವತಿ, ಸರಸ್ವತಿಯರನ್ನು ನೆನೆದದ್ದೇ ನೆನೆದದ್ದು. ಅಲ್ಲಿ ಆತನ ಸುಸಂಸ್ಕೃತ ಹೃದಯದ ಶ್ರೀಮಂತಿಕೆಯನ್ನು ಕಾಣಬಹುದಾಗಿದೆ. ಇಂಚಲದ ಬಂಕನಾಥನ ವರಪುತ್ರ ತಾನೆಂದೂ ಶಂಕೆಯಿಲ್ಲದಲೆ ನಿನ್ನನ್ನು ಭಜಿಸುವೆನೆಂದು ಹಾಡಿಯೇ ಹಾಡುತ್ತಾನೆ.

"ಶಂಕು ಚಕ್ರಾಯುಧದ ಶಂಕರ ನಂದನನೆ
ಶಂಕೆ ಇಲ್ಲದಲೆ ಭಜಿಸುವೆನೊ ।
....
ಇಂಚಲದ ಬಂಕನಾಥನ ವರಪುತ್ರಾ ॥
"ದೇವಿ ಸರಸ್ವತಿ ನಿನ್ನ ಕವಿಗೆ ನಾ ಮೊದಲಾಗಿ
ಸೇವಿ ಮಾಡುವೆನ ಮನಃಪೂರ್ಣಾ ।''
ಮುತ್ತಿನಮುಡಿಗಳ ನಿನ್ನ । ಚಿತ್ತದಲ್ಲೆ ಇಡವೂತೇನ
ಮತ್ತು ಪ್ರಸನ್ನಾಗ ಏ ತಾಯೀ ।
ನಾಲಿಗೆ ಮ್ಯಾಗೆ ನಿಂತ ಕೊಡ ವಿದ್ಯಾದ ಬಾಯಿ."

ಸೋಬಾನದ ಹಾಡುಗಳಿಗಂತೂ ಲೆಕ್ಕವಿಲ್ಲ. ಸುರಗಿ ಸುತ್ತು ಹಾಡು, ಇದರ ಗೊಳ್ಳೊ ಹಾಡು, ಹೆಣ್ಣೀನವರ ಪದ, ಒರಳಕ್ಕಿಪಾಡುವ ಪದ, ಬೀಸುಕಲ್ಲು ಪೂಜಾ ಮಾಡು ಪದ, ಧಾರೀ ಎರೆವಾಗಿನ ಪದ. ಹೀಗೆ ಅನೇಕ ಬಗೆಯ ಹಾಡುಗಳನ್ನು ಸೃಷ್ಟಿಸಿದ್ದುದನ್ನು ನೆನೆಯಬಹುದಾಗಿದೆ. ಹಲಸಂಗಿಯ ಗೆಳೆಯರ ಗುಂಪಿನ 'ಗರತಿಯರ ಹಾಡು' ಸಂಕಲದಲ್ಲಿ ಬರುವ ಹೆಣ್ಣು ಒಪ್ಪಿಸುವ 'ಒಂಬತ್ತು ತಿಂಗಳ ನಿನ್ನ ಹೊತಗೊಂಡ ತಿರಗೇನ' ಮೊದಲಾದ ಹಾಡುಗಳನ್ನು ಕೆಂಚನಾಯ್ಕ ಕವಿಯೇ ರಚಿಸಿರ ಬೇಕು. ಈತನೇ ರಚಿಸಿದನೆಂದು ಹಾಡುಗಾರರೂ ಹೇಳುವುದುಂಟು (ಮುತನಾಳದ ಬಸನಗೌಡ್ರು). ಅದು ನಿಷ್ಕರ್ಷೆಯಾಗಬೇಕಾದ ಮಾತು; ಇನ್ನೂ ಆಧಾರ ದೊರಕಬೇಕು. ಇಲ್ಲಿ ಕೆಲ ಸೋಬಾನದ ಹಾಡುಗಳನ್ನು ಓದಬಹುದು.

'ಜರ್ಕ್ಯಾಟಿ ರುಮ್ಮಾಲಾ ಎರಕದಗೊಂಬಿಯಂಗ
ಮುರ್ಕ್ಯಾ ಮಾಡುವ ಪ್ರಾಯದವ್ರಾ ।ಸೋ।

ಮಕ್ಯಾ ಮಾಡುವಂಥ ಪ್ರಾಯದವ್ರ । ಬಡಸದ ।
ತರುಳರ್‍ಯಾ ತಳಿಯ ಹಿಡಿಯಬರ್‍ಯೊ । ಸೋ ।'

'ಚತ್ತುರಗಿ ನೆರಳಾಗ ನಿಂತಿದಾನೆಪ್ಪೊತ್ತಾ ।
ನಮ್ಮ ಪುತ್ರನ ಮುಖವ್ರ ಬಳಲ್ಯಾವಾ । ಸೋ ।
ಪುತ್ರನ ಮುಖವು ಬಳಲ್ಯಾದ । ಬೀಗತಿ ।
ನಿನ್ನ ಪುತ್ರಿಯ ತಾರಹೊರಿಯ್ಯಾಕ । ಸೋ ।

'ಅತ್ತೆವ್ವನ್ನ ಮಾತಾ ಚಿತ್ತಿಟ್ಟ ನೀ ಕೇಳಿದ್ರ
ಹೆತ್ತವ್ವಗಂಜಿ ನಡದರ । ಸೋ ।
ಹೆತ್ತವ್ವಗಂಜಿ ನಡದರ । ಸಮುದರದ ।
ಮುತ್ತುಬಾರೆಂದು ಕರದೇನ । ಸೋ ।'

'ಬಂಗಾರದಾರತಿ ಅಂಗೈಯಾಗ್ಹಿಡಕೊಂಡು
ಶೃಂಗಾರವಾಗಿ ತಳಿಯಾಗs । ಸೋ ।
ಶೃಂಗಾರವಾಗಿ ತಳಿಯಾಗ । ಬರುವಂಥ ।
ತಾರೆರಿನ್ನೆಷ್ಟ ಚೆಲುವೇರಾ । ಸೋ ।'

ಕವಿಯು ಹಾಡುಗಳ ಕೊನೆಗೆ ಬರುವ 'ಇಂಚಲದ ಬಂಕನಾಥ' ಎಂಬ ಮುದ್ರಿಕೆ ಆ ಊರ ಶರಣ ಬಂಕನಾಥನ ಸ್ಮರಣೆಯಾಗಿದೆ. ಕವಿಯ ತಂದೆ ತಾಯಿಗಳು ಬಂಕನಾಥನ ಪರಮಭಕ್ತರು. ಆತನ ಕೃಪಾಶೀರ್ವಾದದಿಂದಲೆ ಈತ ಹುಟ್ಟಿದ್ದಂತೆ ಕವಿಗೂ ಇಂಥ ಕವಿತ್ವಶಕ್ತಿ ಪ್ರಾಪ್ತವಾದದ್ದು, ಬಂಕನಾಥನ ಪುಣ್ಯವೇ. ಅಂತೆಯೆ ಕವಿ ಈ ಹೆಸರಿನ ಮುದ್ರಿಕೆ ಬಳಸಿದ್ದುಂಟು. ಈಗಲೂ ಇಂಚಲದಲ್ಲಿ ಬಂಕನಾಥನ ಗುಡಿ ಶೋಭಿಸುತ್ತಿದೆ. ಕೆಂಚನಾಯ್ಕನು ತಾನು ಬೇರೆ ಬೇರೆ ಊರುಗಳಲ್ಲಿ ವಾಸ್ತವ್ಯಮಾಡಿ ಹಾಡು ಕಟ್ಟುವಾಗ ಆ ಆ ಊರ ಗ್ರಾಮದೇವತೆಗಳ ಹೆಸರುಗಳನ್ನು ನಡು-ನಡುವೆ ತನ್ನ ಹಾಡುಗಳಲ್ಲಿ ಉಲ್ಲೇಖಿಸಿದ್ದಾನೆ.

ಕವಿ ಕೆಂಚನಾಯ್ಕನ ಹಾಡುಗಳು ಎಷ್ಟು ಎಂದು ಹೇಳಲು ಆಗದು. ಈಗ ನನಗೆ ದೊರೆತಿರುವವು ಮಾತ್ರ ನೂರಕ್ಕೂ ಮಿಕ್ಕಿ, ಒಂದು ಸಣ್ಣಾಟ. ಮೇಲಾಗಿ ನೂರಾರು ಸೋಬಾನದ ಪದಗಳು. ಗಂಡು ಹೆಣ್ಣಿನ ವಾದಿ ಹಾಡುಗಳು ಲಳಿ ಪದ್ಯ ಗಳು, ಇದ್ದವರು ಹೊರತಂದರೆ ದೊರಕಬಹುದಾದ ಹಾಡುಗಳೆಷ್ಟೋ. ಆಳವಾದ ಲೋಕಾನುಭವ ಹಾಗೂ ಶಾಸ್ತ್ರಾನುಭವಗಳು ಸಹಜ ಪ್ರತಿಭೆಯೊಂದಿಗೆ ಹಾಸು ಹೊಕ್ಕಾಗಿ ಕವಿಯ ಸತ್ವಶಕ್ತಿಗೆ ಈ ಹಾಡುಗಳು ಸಾಕ್ಷಿಯಾಗಿವೆ. ಜನಪದದ ಬೆಡಗು, ಬಿನ್ನಾಣ, ಸಾಹಿತ್ಯ-ಸಂಸ್ಕೃತಿಗಳ ಜೊತೆಗೆ ಕವಿಯ ಸಮಕಾಲೀನ ಪ್ರಜ್ಞೆಯನ್ನೂ ಕಾಣಬಹುದಾಗಿದೆ.

ಕವಿ ಕುರುಡ. ಹೌದು, ಅದು ಹೊರಗಣ್ಣಿನಿಂದ. ಆತನ ಒಳಗಣ್ಣು ಕುರುಡಿದ್ದಿರಲಿಲ್ಲ. ಅದು ಯಾವಾಗಲೂ ತೆರೆದಿತ್ತು. ಅಂತೆಯೆ ದಾರ್ಶನಿಕ ಕವಿಯಾಗಿ ಕೆಂಚನಾಯ್ಕ ಮೆರೆದಿದ್ದಾನೆ. ಹಲವರ ಸಹಕಾರದಿಂದ ಶಾಸ್ತ್ರ, ತತ್ವ ಓದಿಸಿಕೊಂಡು ತನ್ನಲ್ಲಿ ಅರಗಿಸಿಕೊಂಡು, ಜನತೆಗಾಗಿ ಹೀಗೆ ಕೇಳು, ಕಲಿ, ಹಾಡು, ಬರೆ ಎಂದೆಂದು ಅರಹುತ್ತ ತನ್ನ ಅನುಭವವನ್ನು ಸುಂದರವೂ, ಸಹಜವೂ ಆದ ಜನಪದ ನುಡಿಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾನೆ.

ಕವಿ ಊಟ ಮಾಡುವಾಗ ಬೊಗಸೆತುಂಬ ತುಪ್ಪ ಬಿದ್ದಾಗ ಊಟ ಪ್ರಾರಂಭಿಸುತ್ತಿದ್ದನಂತೆ. ಕುರುಡನಿದ್ದುದರಿಂದ ಹೀಗಾಗಿರಬೇಕು. ಅಂಥ ಜನತೆಯ ತುಪ್ಪ ಉಂಡ ಕವಿ ಎಂದೆಂದಿಗೂ ಉಂಡರೂ ಸವಿದರೂ ತೀರದ, ಇನ್ನೂ ಹೆಚ್ಚೆಚ್ಚಾಗುವ, ರಸಭರಿತ ಜನಪದ ಹಾಡುಗಳನ್ನು ಜಾನಪದಪ್ರಪಂಚಕ್ಕೆ ನೀಡಿದ್ದಾನೆ.

• •

ಕನ್ನಡ ಸಾಹಿತ್ಯಕ್ಷೇತ್ರದಲ್ಲಿಯ ನಾಗವರ್ಮರು

• ಪ್ರ. ಗೋ. ಕುಲಕರ್ಣಿ

ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತೆಯಲ್ಲಿ "ಈ (ನಾಗವರ್ಮ) ಹೆಸರಿನವರು ಇಬ್ಬರು ಕವಿಗಳಿದ್ದಂತೆ ತಿಳಿದುಬರುತ್ತದೆ. ಛಂದೋಂಬುಧಿಯನ್ನೂ ಕಾದಂಬರಿಯನ್ನೂ ಬರೆದವನು ಒಬ್ಬ ನಾಗವರ್ಮನೆಂದೂ, ಕಾವ್ಯಾವಲೋಕನ, ವಸ್ತು ಕೋಶ, ಕರ್ಣಾಟಕಭಾಷಾಭೂಷಣಗಳನ್ನು ಬರೆದವನು ಬೇರೊಬ್ಬ ನಾಗವರ್ಮನೆಂದೂ ನಿರ್ಧರಿಸುವುದಕ್ಕೆ ಸಾಕಾದ ಕಾರಣಗಳಿವೆ" ಎಂದು ಹೇಳಿ, ಆ ಕಾರಣಗಳನ್ನು ವಿವರಿಸಿ ದ್ದಾರೆ. ಅಲ್ಲದೆ ಈ ವಿವರಣೆಯ ಕೊನೆಯಲ್ಲಿ "ಈ ಇಬ್ಬರು ನಾಗವರ್ಮರಲ್ಲದೆ ಬೇರೊಬ್ಬ ನಾಗವರ್ಮನೆಂಬ ಬ್ರಾಹ್ಮಣನು ಚಂದ್ರಚೂಡಾಮಣಿಶತಕವೆಂಬ ಗ್ರಂಥ ವನ್ನು ಬರೆದಿದ್ದಾನೆ"[೧] ಎಂದಿದ್ದಾರೆ. ಇದೂ ಅಲ್ಲದೆ ಕವಿಚರಿತೆಯ ೩ ನೆಯ ಸಂಪುಟ ದಲ್ಲಿ ಕೊಟ್ಟ ಗ್ರಂಥಶುದ್ಧೀಕರಣದಲ್ಲಿ "ಧಾರಾಪುರದ ಭೋಜರಾಜನು ೧೦೧೦ ರಲ್ಲಿ ಆಳುವುದಕ್ಕೆ ಆರಂಭಿಸಿದಂತೆ ತಿಳಿವುದರಿಂದ ಕಾದಂಬರಿಯನ್ನು ಬರೆದ ನಾಗವರ್ಮನು ಛಂದೋಂಬುಧಿಯನ್ನು ಬರೆದ ನಾಗವರ್ಮನಿಂದ ಬೇರೊಬ್ಬನಾಗಿರಬಹುದೋ ಎಂಬ ಸಂದೇಹಕ್ಕೆ ಅವಕಾಶವಿರುವಂತೆ ತೋರುತ್ತದೆ"[೨] ಎನ್ನುತ್ತಾರೆ.

ಕನ್ನಡ ಛಂದಸ್ಸಂಪುಟದ ಡಾ. ಎಲ್. ಬಸವರಾಜು ಅವರು ಅದರ ಪೀಠಿಕೆಯಲ್ಲಿ

"ಈ ಘಟ್ಟದಲ್ಲಿ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಕಾಣಸಿಗುವ ನಾಗವರ್ಮರು ಎಷ್ಟು ಜನ? ಎಂಬ ವಿಚಾರ :

i. ಕರ್ನಾಟಕ ಕಾದಂಬರಿಯನ್ನು ಬರೆದ ಬ್ರಾಹ್ಮಣನಾಗವರ್ಮ

ii. ಕಾವ್ಯಾವಲೋಕನ ಮುಂತಾದುವನ್ನು ಬರೆದ ಜೈನನಾಗವರ್ಮ

iii. ಛಂದೋಂಬುಧಿಯನ್ನು ಬರೆದ ಶೈವನಾಗವರ್ಮ"[೩]

ಎಂದಿದ್ದಾರೆ. ಚಂದ್ರಚೂಡಾಮಣಿಶತಕವನ್ನು ರಚಿಸಿದ ಬಗೆಗೆ ಇವರು ಏನನ್ನೂ

೧ ಕರ್ನಾಟಕ ಕವಿಚರಿತೆ I (೧೯೨೪), ಪುಟ : ೫೨-೫೩.

೨ ಕರ್ನಾಟಕ ಕವಿಚರಿತೆ I (೧೯೨೪), ಪುಟ : ४೭೮.

೩ ಕನ್ನಡ ಛಂದಸ್ಸಂಪುಟ, ಪೀಠಿಕೆ. ಪುಟ : ೫೧.

ಹೇಳುವುದಿಲ್ಲ. ಇವರ ಅಭಿಪ್ರಾಯದಲ್ಲಿ ಚಂದ್ರಚೂಡಾಮಣಿಶತಕವನ್ನು ರಚಿಸಿದವನು ನಾಗವರ್ಮನೆಂಬವನಲ್ಲ ಎಂದೂ ಇರಬಹುದು.

ಶ್ರೀ ಗೋವಿಂದ ಪೈಗಳು 'ನಾಗವರ್ಮರು ಎಷ್ಟು ಮಂದಿ?' ಎಂಬುದನ್ನು ಚರ್ಚಿಸುತ್ತ "ಹೀಗೆ ಛಂದೋಂಬುಧಿ–ಕಾದಂಬರಿಗಳ ರಚಕನಾದ ಬ್ರಾಹ್ಮಣನಾಗವರ್ಮನೊಬ್ಬನು, ವಸ್ತುಕೋಶ–ಕಾವ್ಯಾವಲೋಕನ–ಭಾಷಾಭೂಷಣಗಳನ್ನು ರಚಿಸಿದ ಜೈನನಾಗವರ್ಮನೊಬ್ಬನು, ಚಂದ್ರಚೂಡಾಮಣಿಶತಕವನ್ನು ಬರೆದ ಬ್ರಾಹ್ಮಣ ನಾಗವರ್ಮನೊಬ್ಬನು ಎಂದು ಅನನ್ಯರಾದ ನಾಗವರ್ಮರು ಮೂವರಾದರೂ ಇದ್ದರು ಎಂಬಲ್ಲಿ ಸಂಶಯವಿಲ್ಲ"[೪] ಎನ್ನುತ್ತಾರೆ.

ಶ್ರೀ ಎ. ವೆಂಕಟಸುಬ್ಬಯ್ಯನವರು "ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಕಂಡುಬಂದ ಕಾದಂಬರಿ–ಛಂದೋಂಬುಧಿ–ಕಾವ್ಯಾವಲೋಕನಾದಿಗಳನ್ನು ಬರೆದ ನಾಗವರ್ಮನು ಒಬ್ಬನೆ. ಆ ನಾಗವರ್ಮನು ಜಯಸಿಂಹಜಗದೇಕಮಲ್ಲನ ಬಳಿಯಲ್ಲಿ ಕಟಕೋಪಾಧ್ಯಾಯನಾಗುವುದಕ್ಕಿಂತ ಮುಂಚೆಯೇ ಅವನು ಭೋಜರಾಜನ ಸಭೆಗೆ ಹೋಗಿ ತಾನು ಬರೆದಿದ್ದ ಕಾದಂಬರಿಯನ್ನು ಅಲ್ಲಿ ಓದಿ ಅವನಿಂದ ಬಹುಮಾನವನ್ನು ಪಡೆದಿದ್ದನು. ಹೀಗೆಯೇ ಛಂದೋಂಬುಧಿಯನ್ನೂ ಕೂಡ ಅವನು ಕಟಕೋಪಾಧ್ಯಾಯನಾಗುವುದಕ್ಕಿಂತ ಪೂರ್ವದಲ್ಲಿಯೇ ಬರೆದಿದ್ದನೆಂಬುದರಲ್ಲಿಯೂ ಯಾವ ಸಂದೇಹವೂ ಇಲ್ಲ. ಅವನು ಬರೆದ ಗ್ರಂಥಗಳಲ್ಲಿ ಇದೇ ಮೊದಲನೆಯದೆಂದು ನಮಗೆ ತೋರುವುದು. ಎಂದರೆ ನಾಗವರ್ಮನು ಕ್ರಿ. ಶ. ಸು. ೧೦೩೦–೧೦೪೦ರಲ್ಲಿ ಛಂದೋಂಬುಧಿ-ಕಾದಂಬರಿ-ಭಾಷಾಭೂಷಣಗಳನ್ನು ಬರೆದು ತದನಂತರ ಜಯಸಿಂಹಜಗದೇಕಮಲ್ಲನ ಆಳಿಕೆಯ ಅಂತ್ಯವರ್ಷಗಳಲ್ಲಿ ಅವನ ಬಳಿಯಲ್ಲಿ ಕಟಕೋಪಾಧ್ಯಾಯನಾಗಿದ್ದು ೧೦೪೧–೧೦೪೨ರಲ್ಲಿಯೋ ಅಥವಾ ೧೦೪೨ ರಿಂದ ಈಚೆಯೋ ವಸ್ತುಕೋಶ– ಕಾವ್ಯಾವಲೋಕನಗಳನ್ನು ಬರೆದನೆಂದು ನಮ್ಮ ಅಭಿಪ್ರಾಯ. ಜಿನೇಂದ್ರಪುರಾಣಕರ್ತೃವೆಂದು ಜನ್ನನಿಂದ ಹೇಳಲ್ಪಟ್ಟಿರುವ ನಾಗವರ್ಮನು ಇವನೇಯೋ ಅಥವಾ ಬೇರೆ ಒಬ್ಬ ನಾಗವರ್ಮನೋ ಎಂಬುದನ್ನು ಆ ಪುರಾಣವನ್ನು ನೋಡದೆ ಹೇಳಲಾಗುವುದಿಲ್ಲ"[೫] ಎಂದು ಹೇಳಿದ್ದಾರೆ. ಅಲ್ಲದೆ ಛಂದೋಂಬುಧಿ ಮತ್ತು ಅಭಿಧಾನವಸ್ತುಕೋಶಗಳಲ್ಲಿ ಬರುವ

ಜಿತಬಾಣಂ ಹರಿಯಂತಧಃಕೃತಮಯೂರಂ ತಾರಕಾರಾತಿಯಂ ।
ತತಿಮಾಘಂ ಶಿಶಿರಾಂತ್ಯದಂತೆ ಸುರಪಪ್ರೋಚ್ಚಂಡಕೋದಂಡದಂಡದಂ ।
ತೆ ತಿರೋಭೂತಗುಣಾಢ್ಯನಜ್ಜವನದಂತಾವಿರ್ಭವದ್ದಂಡಿ ಭಾ ।
ರತಿದಂತಾತ್ತಧನಂಜಯೈಕವಿಭವಂ ವಾಗ್ಗುಂಫದೊಳ್ ನಾಕಿಗಂ ॥

---

೪ ಕರ್ಣಾಟಕ ಸಾಹಿತ್ಯಪರಿಷತ್ಪತ್ರಿಕೆ, ಸಂಪುಟ–೨೦; ಸಂಚಿಕೆ–೨. ಪುಟ : ೧೬೦.

೫ ಕೆಲವು ಕನ್ನಡ ಕವಿಗಳ ಜೀವನಕಾಲವಿಚಾರ. ಪುಟ : ೧೭೮.

ಎಂಬ ಪದ್ಯದಲ್ಲಿ ತಾನು ಬರೆದ ಆರು ಗ್ರಂಥಗಳನ್ನು ಉಲ್ಲೇಖಿಸಿರುವನೆಂದು ಹೇಳುವರು[೬]. ಇಲ್ಲಿ ಬರುವ 'ಜಿತಬಾಣಂ'– ಬಾಣನನ್ನು ಜಯಿಸಿದವನು ಎಂಬುದು ಅವನಿಂದ ವಿರಚಿತವಾದ ಕಾದಂಬರಿಯನ್ನೂ, 'ತಿರೋಭೂತಗುಣಾಢ್ಯಂ'– ಗುಣಾಢ್ಯ ನನ್ನು ಹಿಂದೆಹಾಕಿದವನು ಎಂಬುದು ಕರ್ಣಾಟಭಾಷಾಭೂಷಣವನ್ನೂ, 'ಆವಿರ್ಭವ ದ್ದಂಡಿ' ಕಣ್ಣಮುಂದೆ ಬಂದಿರುವ ದಂಡಿ, ಪ್ರತ್ಯಕ್ಷದಂಡಿ ಎಂಬುದು ಕಾವ್ಯಾವಲೋಕನ ವನ್ನೂ, 'ಆತ್ತಧನಂಜಯೈಕವಿಭವಂ– ಧನಂಜಯನ ಏಕವಿಭವವನ್ನು ಸ್ವೀಕರಿಸಿದವನು ಎಂಬುದು ಅಭಿದಾನವಸ್ತುಕೋಶವನ್ನೂ, ಅತಿಮಾಘಂ–ಮಾಘನನ್ನು ಅತಿಶಯಿಸಿ ದವನು ಎಂಬುದು ಅವನು ಬರೆದಿರಬಹುದಾದ ಜೈನಪುರಾಣವನ್ನೂ, ಅಧಃಕೃತ ಮಯೂರಂ-ಮಯೂರನನ್ನು ಕೀಳ್ಪಡಿಸಿದವನು ಎಂಬುದು ಛಂದೋಂಬುಧಿಯನ್ನೂ ಸೂಚಿಸುವವು ಎಂದೆನ್ನುತ್ತಾರೆ. ಚಂದ್ರಚೂಡಾಮಣಿಶತಕದ ಕರ್ತೃವಿನ ಹೆಸರು ನಾಗ ವರ್ಮನಲ್ಲವೆಂದೇ ಅವರ ಅಭಿಪ್ರಾಯ.[೬A]

ಈ ರೀತಿಯಲ್ಲಿರುವ ಭಿನ್ನಾಭಿಪ್ರಾಯಗಳನ್ನು ತೂಗಿನೋಡುವ ಉದ್ದೇಶದಿಂದ ಈ ಲೇಖನಕ್ಕೆ ಕೈಹಾಕಲಾಗಿದೆ.

೧. ಚಂದ್ರಚೂಡಾಮಣಿಶತಕದ ನಾಗವರ್ಮ :

ಚಂದ್ರಚೂಡಾಮಣಿಶತಕದಲ್ಲಿ

ಉದಯಾದಿತ್ಯನ ಸಂಧಿವಿಗ್ರಹಿಲಲಾಮಂ ನಾಗವರ್ಮಂ ಸಮಂ
ತುದಯಾದಿತ್ಯನ ರಾಯಭಾರಿಯೆನಿಸಿರ್ದಾತ್ಮಾಗ್ರಜಂ ಭಾಸ್ಕರಂ ।
ಮೊದಲಾದೀಶ್ವರಭಕ್ತರಪ್ಪಿವರ್ಗೆ ಪೇಳ್ದೀ ಜ್ಞಾನಸಾರಂ ಸುಖಾ
ಸ್ಪದಮೊಲ್ದೋದುಗೆ ಭುಕ್ತಿಮುಕ್ತಿಫಲಮಂ ಶ್ರೀಚಂದ್ರಚೂಡಾಮಣೀ ॥

ಎಂಬ ಪದ್ಯವು ಬರುತ್ತದೆ. ಈ ಪದ್ಯವನ್ನು ಉಧೃತಮಾಡಿ ಶ್ರೀ ಆರ್. ನರಸಿಂಹಾ ಚಾರ್ಯರು "ಉದಯಾದಿತ್ಯನಲ್ಲಿ ಸಂಧಿವಿಗ್ರಹಿಯಾಗಿದ್ದ ನಾಗವರ್ಮನು ಆದೇ ಉದಯಾದಿತ್ಯನಲ್ಲಿ ರಾಯಭಾರಿಯಾಗಿದ್ದ ತನ್ನ ಅಣ್ಣ ಭಾಸ್ಕರ ಮೊದಲಾದವರಿ ಗೋಸ್ಕರ ಈ ಗ್ರಂಥವನ್ನು ಹೇಳಿದಂತೆ ತೋರುತ್ತದೆ" ಎಂದಿದ್ದಾರೆ. ಇದೂ ಅಲ್ಲದೆ "ಶಿಕಾರಿಪುರ ೧೪ನೆಯ ಶಾಸನದಿಂದ (೧೦೭೧) ಚಾಳುಕ್ಯರಾಜನಾದ ಭುವನೈಕಮಲ್ಲ ನಲ್ಲಿ (೧೦೬೯–೧೦೭೬) ಶ್ರೀಮನ್ಮಹಾಪ್ರಧಾನಂಹಿರಿಯಸಂಧಿವಿಗ್ರಹಿ ಮನೆವೆರ್ಗಡೆ ದಂಡನಾಯಕಂ ಬ್ರಹ್ಮಕ್ಷತ್ರಶಿಖಾಮಣಿ ರಾಜಾಧಿರಾಜಂ ಕೋಳಾಳಪುರವರೇಶ್ವರಂ ನಂದಿಗಿರಿನಾಥಂ' ಆದ ಉದಯಾದಿತ್ಯನು 'ಬನವಸೆ–೧೨೦೦೦, ಸಾಂತಳಿಗೆ–೧೦೦೦, ಪದಿನೆಂಟಗ್ರಹಾರಂ' ಆಳುತ್ತಿದ್ದಂತೆಯೂ ಅವನ ಕಾಲದಲ್ಲಿ ಬಹಳ ಪ್ರಸಿದ್ಧ

೬ ಪ್ರಬುದ್ಧ ಕರ್ಣಾಟಕ, ಸಂಪುಟ–೧೫, ಸಂಚಿಕೆ–೩;— ನಾಗವರ್ಮನ ಕೃತಿಗಳು.

೬A ಕೆಲವು ಕನ್ನಡ ಕವಿಗಳ ಜೀವನಕಾಲವಿಚಾರ– ನಾಗವರ್ಮಾಚಾರ್ಯ; ಪುಟ: ೨೩೨-೨೩೮

ನಾದ ಅದ್ವೈತಿಗುಣಗಳ್ಳ ನಾಗವರ್ಮಾಚಾರ್ಯನೆಂಬವನೊಬ್ಬನು ಇದ್ದಂತೆಯೂ ತಿಳಿಯುತ್ತದೆ. ಈ ನಾಗವರ್ಮನೇ ಕವಿಯಾಗಿರಬಹುದೆಂದು ಊಹಿಸುತ್ತೇವೆ. ಹಾಗಿದ್ದ ಪಕ್ಷದಲ್ಲಿ ಇವನು ಕ್ರಿ. ಶ. ೧೦೭೦ ರಲ್ಲಿ ಇದ್ದಿರಬೇಕು"[೭] ಎಂದಿದ್ದಾರೆ.

ಮೇಲಿನ ಪದ್ಯಕ್ಕೆ ಕವಿಚರಿತೆಕಾರರು ಮಾಡುವ ಅರ್ಥವನ್ನೇ ಶ್ರೀ ಎ. ವೆಂಕಟ ಸುಬ್ಬಯ್ಯನವರು ಅಲ್ಲಗಳೆದಿದ್ದಾರೆ. ಅವರು ಹೇಳುವುದು :

"ವಸ್ತುತಃ ಈ ಚಂದ್ರಚೂಡಾಮಣಿಶತಕವು ಒಬ್ಬ ನಾಗವರ್ಮನಿಂದ ರಚಿಸಲ್ಪಟ್ಟಿತೆಂಬ ವಿಷಯದಲ್ಲಿಯೇ ನಮಗೆ ಪ್ರಬಲವಾದ ಸಂದೇಹವಿರುವುದು. ಕವಿಚರಿತೆಕಾರರು ಈ ಮೇಲಿನ ಪದ್ಯದಲ್ಲಿ ಒಂದನೇ ಪಾದದಲ್ಲಿರುವ 'ಉದಯಾದಿತ್ಯನ ಸಂಧಿವಿಗ್ರಹಿಲಲಾಮಂ ನಾಗವರ್ಮಂ' ಎಂಬ ಪದಗಳನ್ನು ಮೂರನೆಯ ಪಾದದಲ್ಲಿರುವ 'ಪೇೞ್ದಿ' ಎಂಬ ಪದದೊಡನೆ ಅನ್ವಯಿಸಿ ಈ ಶತಕವನ್ನು ನಾಗವರ್ಮನು 'ಪೇೞಿದ'ನೆಂದು ಅರ್ಥ ಮಾಡಿರುವರು. ನಮಗಾದರೆ ಈ ಒಂದನೆಯ ಪಾದದ ಅಂತ್ಯದಲ್ಲಿರುವ 'ಸಮಂತು' ಎಂಬ ಪದವನ್ನು ಪರ್ಯಾಲೋಚಿಸಿದಲ್ಲಿ 'ಉದಯಾದಿತ್ಯನ ರಾಯಭಾರಿಯೆನಿಸಿರ್ದಾತ್ಮಾಗ್ರಜಂ ಭಾಸ್ಕರ'ನಂತೆಯೇ ಉದಯಾದಿತ್ಯನ ಸಂಧಿವಿಗ್ರಹಿಲಲಾಮನಾದ ನಾಗವರ್ಮನೂ ಮೂರನೆಯ ಪಾದದಲ್ಲಿ ಹೇಳಿರುವ ಈಶ್ವರಭಕ್ತರಲ್ಲಿ ಒಬ್ಬನಾಗಿದ್ದನೆಂದು ಅರ್ಥಮಾಡುವುದೇ ಯುಕ್ತವೆಂದು ತೋರುವುದು."[೮]

ಶ್ರೀ ವೆಂಕಟಸುಬ್ಬಯ್ಯನವರು ಹೇಳುವ ಅರ್ಥವು ಸರಿಯೆಂದಿಟ್ಟುಕೊಂಡರೆ ಜ್ಞಾನಸಾರವು ಯಾರು ಹೇಳಿದುದು ? ಭಾಸ್ಕರನು ಯಾರ ಆತ್ಮಾಗ್ರಜ ? ಎಂಬಿವುಗಳಿಗೆ ನೇರ ಅರ್ಥವೇ ಹೊರಡುವುದಿಲ್ಲ. ಆದುದರಿಂದ ನರಸಿಂಹಾಚಾರ್ಯರು ಮಾಡಿದ ಅರ್ಥವೇ ಯುಕ್ತವಾದುದೆಂದು ಹೇಳಬೇಕು; ಚಂದ್ರಚೂಡಾಮಣಿಶತಕವನ್ನು ರಚಿಸಿದವನು ನಾಗವರ್ಮನೆ. ಅವನು ಉದಯಾದಿತ್ಯನಲ್ಲಿ ರಾಯಭಾರಿಯಾಗಿದ್ದ ತನ್ನ ಅಣ್ಣ ಭಾಸ್ಕರಾದಿಗಳಿಗಾಗಿಯೇ ಜ್ಞಾನಸಾರವನ್ನು ಹೇಳಿರುವನು. ಈ ಶತಕವು "ಆದ್ಯಂತವಾಗಿ ಶಿವಭಕ್ತಿಪರವಾದ ಜ್ಞಾನಗ್ರಂಥವಾಗಿದ್ದು ಅದು ಈಶ್ವರ ಭಕ್ತರಿಗೆ ಹೇಳಲ್ಪಟ್ಟಿತೆಂಬುದರಿಂದ ಅದನ್ನು ಹೇಳಿದ ಬ್ರಾಹ್ಮಣನೂ ಶಿವಭಕ್ತನೂ ಆದ ಈ ನಾಗವರ್ಮನೂ, ಕಾವ್ಯಾವಲೋಕನಾದಿಗಳನ್ನು ರಚಿಸಿದ ನಾಗವರ್ಮನೂ ಅನ್ಯಾನ್ಯರೇ ಹೊರತು ಒಬ್ಬನೇ ಅಲ್ಲ" ಎಂಬುದು ಸ್ಪಷ್ಟವಿದೆ. ಉದಯಾದಿತ್ಯನೆಂಬ ಹೆಸರಿನ ಮೂವರು ನಾಲ್ವರ ಉಲ್ಲೇಖವು ಶಾಸನಗಳಲ್ಲಿ ಕಂಡುಬರುವುದರಿಂದ ಚಂದ್ರಚೂಡಾಮಣಿ ಗ್ರಂಥವು ಇಂತಹ ಕಾಲದಲ್ಲಿಯೇ ರಚಿತವಾಯಿತೆಂಬುದನ್ನು ನಿಶ್ಚಿತ ಸ್ವರೂಪದಲ್ಲಿ ಹೇಳಲಿಕ್ಕೆ ಬರುವುದಿಲ್ಲವೆಂಬುದು ಶ್ರೀ ವೆಂಕಟಸುಬ್ಬಯ್ಯನವರ ಅಭಿಪ್ರಾಯವಿದ್ದರೆ

೭ ಕರ್ಣಾಟಕ ಕವಿಚರಿತೆ I, ಪುಟ : ೮೭–೮೮.

೮ ಕೆಲವು ಕನ್ನಡ ಕವಿಗಳ ಜೀವನಕಾಲವಿಚಾರ, ಪುಟ : ೨೩೬.

೯ ಕೆಲವು ಕನ್ನಡ ಕವಿಗಳ ಜೀವನಕಾಲವಿಚಾರ, ಪುಟ : ೨೩೭.

ಇದರ ರಚನೆ ಕ್ರಿ.ಶ. ೧೧೦೫-೧೧೨೦ರೊಳಗೆ ಆಗಿರಬೇಕೆಂದು ಶ್ರೀ ಗೋವಿಂದ ಪೈಗಳ ಅಭಿಪ್ರಾಯವಿದೆ.[೧೦] ಈ ಪರಿಸ್ಥಿತಿಯಲ್ಲಿ ಈ ಶತಕವು ೧೧-೧೨ನೆಯ ಶತಮಾನ ದಲ್ಲಿ ರಚಿತವಾಯಿತೆಂದು ಸ್ಥೂಲವಾಗಿ ಹೇಳುವುದು ಯುಕ್ತವಾಗಿದೆ.

೨. ಕಾದಂಬರಿಯ ನಾಗವರ್ಮ :

ಕಾದಂಬರಿಯ ಕೊನೆಯಲ್ಲಿ "ಶ್ರೀನಾಗವರ್ಮವಿರಚಿತಮಪ್ಪ ಕರ್ಣಾಟಕಾದಂಬರಿ ಯೊಳ್" ಎಂದು ಬರುವುದರಿಂದ ಇದನ್ನು ರಚಿಸಿದವನು ನಾಗವರ್ಮನೆಂಬುದು ಸ್ಪಷ್ಟ ವಿದೆ. ಈ ಕವಿಯು ತನ್ನ ದೇಶ, ಕುಲ-ಗೋತ್ರ ಮೊದಲಾದವುಗಳನ್ನು ಗ್ರಂಥ ದಲ್ಲಿ ಎಲ್ಲಿಯೂ ಹೇಳಿಕೊಂಡಿರುವುದಿಲ್ಲ. ಕಾದಂಬರಿಯ ಅಂತ್ಯದಲ್ಲಿ ಬರುವ ಒಂದು ಪದ್ಯದಲ್ಲಿ 'ಭೋಜರಾಜನು ಈ ಕೃತಿಯನ್ನು ಮೆಚ್ಚಿ ಕವಿಗೆ ಕುದುರೆಗಳನ್ನು ಪಾರಿ ತೋಷಕ ಇತ್ತ'ನೆಂದು ಬರುತ್ತದೆ :

> ಇವು ನಾನಾ ಶಾಸನಂ ಸತ್ಕೃತಿ ವಸಿತೆಗಿದೌಚಿತ್ಯಮೆಂದಿತ್ತನತ್ಯು
> ತ್ಸವದಿಂ ವಿದ್ವತ್ಸಭಾಮಂಡಳಿ ತಣಿವಿನೆಗಂ ಭೋಜರಾಜ ಕ್ಷಿತೀಶಂ ॥ ೨.೮೨೫ ॥

ಕಾದಂಬರಿಯ ಕಾಲವನ್ನು ನಿರ್ಣಯಿಸಲು ಹೊರಟವರೆಲ್ಲ ಇಲ್ಲಿ ಹೇಳಲ್ಪಟ್ಟ ಭೋಜರಾಜನು ಮಾಳವದ ಪರಮಾರವಂಶದ ಭೋಜರಾಜನೆಂದು ತಿಳಿದು ಅವನ ಕಾಲಕ್ಕೆ ಕವಿಯ ಕಾಲವನ್ನು ಹೊಂದಿಸಲು ಹೊರಟಿದ್ದಾರೆ. ಶ್ರೀ ಆರ್. ನರಸಿಂಹಾ ಚಾರ್ಯರು ಕವಿಚರಿತೆಯ ಮೊದಲಭಾಗದಲ್ಲಿ (೧೯೨೪) 'ಧಾರಾಪುರದ ಭೋಜರಾಜನು ೧೦ನೆಯ ಶತಮಾನದ ಅಂತ್ಯಭಾಗದಲ್ಲಿ ಆಳುವುದಕ್ಕೆ ಆರಂಭಿಸಿದಂತೆ ತಿಳಿಯುವುದ ರಿಂದ ಈ ನಾಗವರ್ಮನು ಸುಮಾರು ೯೯೦ ರಲ್ಲಿ ಇದ್ದಿರಬೇಕು' ಎಂದು ಹೇಳಿದವರು ಮುಂದೆ ಗ್ರಂಥಶುದ್ಧಿಯಲ್ಲಿ ಧಾರಾಪುರದ ಭೋಜರಾಜನು ೧೦೧೦ರಲ್ಲಿ ಆಳುವುದಕ್ಕೆ ಪ್ರಾರಂಭಿಸಿದನು ಎಂದು ತಿದ್ದಿಕೊಂಡಿರುವ ವಿಷಯವನ್ನು ಈ ಮೊದಲು ಹೇಳಲಾಗಿದೆ. "ಕಾದಂಬರಿಯ ಅಂತ್ಯಪದ್ಯದಲ್ಲಿ ಸ್ತುತಿಸಿರುವ ಭೋಜರಾಜಕ್ಷಿತೀಶನು ಕವಿಚರಿತೆ ಕಾರರು ಹೇಳುವಂತೆ ಧಾರಾನಗರದ ಭೋಜರಾಜನೇ ಆಗಿದ್ದನೆಂಬುದರಲ್ಲಿ ಸಂದೇಹವೇ ಇಲ್ಲ. ಈ ಭೋಜರಾಜನು ಕ್ರಿ. ಶ. ೧೦೧೮ ರಿಂದ ೧೦೬೦ರ ವರೆಗೆ ಆಳುತ್ತಿದ್ದನೆಂದು ಡಾ. ವಿಂಟರನಿಟ್ಸರವರ ಗ್ರಂಥದಲ್ಲಿ ಹೇಳಲ್ಪಟ್ಟಿರುವುದು. ಆದ್ದರಿಂದ ನಾಗವರ್ಮನು ಮೇಲೆ ಹೇಳಿದ ತನ್ನ ಗ್ರಂಥವನ್ನು(ಕಾದಂಬರಿಯನ್ನು) ಕ್ರಿ.ಶ.ಸು. ೧೦೩೦-೧೦೫೦ ರಲ್ಲಿ ಬರೆದನೆಂದು ಹೇಳುವುದರಲ್ಲಿ ಪ್ರಾಯಶಃ ವಸ್ತುಸ್ಥಿತಿ ವಿರೋಧವೇನೂ ಇರ ಲಾರದು"[೧೧] ಎಂದು ಶ್ರೀ ಎ.ವೆಂಕಟಸುಬ್ಬಯ್ಯನವರು ಹೇಳುತ್ತಾರೆ. "ಕಾದಂಬರಿಯ ನಾಗವರ್ಮನ ಆ ಕಾವ್ಯಕ್ಕೆ ಮೆಚ್ಚಿ ಆತನಿಗೆ ಕುದುರೆಗಳನ್ನು ಉಚಿತವಾಗಿತ್ತ ಭೋಜ

---

೧೦ ಕರ್ಣಾಟಕ ಸಾಹಿತ್ಯಪರಿಷತ್ಪತ್ರಿಕೆ, ಸಂಪುಟ ೨೦- ಸಂಚಿಕೆ ೨, ಪುಟ : ೧೬೧.

೧೧ ಕೆಲವು ಕನ್ನಡಕವಿಗಳ ಜೀವನಕಾಲವಿಚಾರ, ಪು. ೧೭೬.

ನೆಂಬಾತನು ಸಮಸ್ತವಿದ್ಯಾಪಕ್ಷಪಾತಿಯಾದ ಧಾರಾನಗರದ ಪರಮಾರವಂಶೀಯ 'ಕವಿಕಾಮಧೇನು' ಎಂಬ ಭೋಜನೇ ಆಗಿರಬೇಕು. ಅತ ಏವ ಈ ನಾಗವರ್ಮನು ತನ್ನ ಕನ್ನಡ ಕಾದಂಬರಿಯನ್ನು........ಕ್ರಿ. ಶ. ೧೦೦೦ದಿಂದ ೧೦೦೫ರೊಳಗೆ ರಚಿಸಿರಬೇಕೆಂದು ಹೇಳಬಹುದು"[೧೨] ಎಂದು ಶ್ರೀ ಗೋವಿಂದ ಪೈಗಳು ಹೇಳುತ್ತಾರೆ.

ಕನ್ನಡದಲ್ಲಿ ಬರೆದ ಕಾದಂಬರಿಗೆ ಮಾಳವದ ಭೋಜರಾಜನು ಮೆಚ್ಚಿ ಬಹುಮಾನಿಸಿದನೆಂಬುದನ್ನು ನಂಬುವುದೇ ಕಷ್ಟ. ಕನ್ನಡನಾಡಿಗೂ ಮಾಳವಕ್ಕೂ ಆ ಕಾಲದಲ್ಲಿ ವಿಶೇಷ ಸಂಬಂಧವಿತ್ತೆಂದು ತಿಳಿದರೂ ಅದು ಎಂಥ ಸಂಬಂಧ ? ಅವಿಚ್ಛಿನ್ನವಾದ ಸಾಂಗ್ರಾಮಿಕ ಸಂಬಂಧ. ಈ ಸಂಬಂಧದಿಂದ ಭೋಜರಾಜನಿಗೆ ಕನ್ನಡ ಬರುತ್ತಿದ್ದಿತೆಂದೂ ತಿಳಿಯೋಣ. ಆತನು ಸಮಸ್ತ ವಿದ್ಯಾಪಕ್ಷಪಾತಿಯಾದುದರಿಂದ ಕಾದಂಬರಿಯನ್ನು ಓದಿಸಿ ಕೇಳಿ ಗೌರವಿಸಬೇಕಾದರೆ, ಈ ಕಾದಂಬರಿಯ ನಾಗವರ್ಮನೂ ಆ ಕಾಲದಲ್ಲಿ ಅಷ್ಟೊಂದು ಪ್ರಸಿದ್ಧ ಕವಿಯಾಗಿರಬೇಕಲ್ಲ ! ಹೀಗೆಂದು ಎಲ್ಲಿಯೂ ತಿಳಿದುಬಂದಿಲ್ಲ. ಕಾದಂಬರಿಯಲ್ಲಿ ಸಹ ಇಲ್ಲಿ ಉಧೃತವಾದ ಒಂದು ಪದ್ಯದಲ್ಲಲ್ಲದೆ ಬೇರೆಲ್ಲಿಯೂ ಭೋಜರಾಜನ ಹೆಸರು ಬರುವುದಿಲ್ಲ. ಇಲ್ಲಿ ಏನೋ ಒಂದು ಪ್ರಮಾದದಿಂದ ಭೋಜರಾಜನ ಹೆಸರು ಬಂದಿರಬೇಕೆಂದು ಊಹಿಸಲು ಸಾಕಷ್ಟು ಅವಕಾಶವಿದೆ. ಪಂಪ-ರನ್ನರು ತಮ್ಮ ವಿಕ್ರಮಾರ್ಜುನವಿಜಯ- ಗದಾಯುದ್ಧಗಳಲ್ಲಿ ತಮ್ಮ ಪೋಷಕರಾದ ಅರಿಕೇಸರಿ-ಸತ್ಯಾಶ್ರಯರನ್ನು ಅರ್ಜುನ-ಭೀಮರಿಗೆ ಹೋಲಿಸಿ ಕಾವ್ಯ ರಚಿಸಿದಂತೆ ನಾಗವರ್ಮನೂ ತನ್ನ ಕಾದಂಬರಿಯಲ್ಲಿ ತನ್ನ ಪೋಷಕನಾದ ಚಂದ್ರರಾಜನನ್ನು ಚಂದ್ರಾಪೀಡನಿಗೆ ಶ್ಲೇಷೆಯಿಂದ ಹೋಲಿಸಿ ಕಾವ್ಯ ರಚಿಸಿದುದು ಸ್ಪಷ್ಟವಾಗಿ ಕಂಡುಬರುತ್ತದೆ. ಕವಿಯು ಕಾವ್ಯದ ಪ್ರಾರಂಭದಲ್ಲಿಯೇ 'ಕೃತಿಪತಿ ನರೇಂದ್ರಚಂದ್ರಂ' ಎಂದು ಹೇಳಿಕೊಂಡಿದ್ದಾನೆ. ಅಲ್ಲದೆ ಕಾವ್ಯದ ಕೊನೆಯಲ್ಲಿ ಬರುವ ಪದ್ಯಗಳಲ್ಲೊಂದರಲ್ಲಿ ಚಂದ್ರರಾಜನಿಂದಲೇ ತನ್ನ ಕಾವ್ಯವು ಕನ್ನಡದಲ್ಲಿ ಪ್ರಸಿದ್ಧಿಪಡೆಯಿತೆಂದು ಪ್ರಾಂಜಲವಾಗಿ ಒಪ್ಪಿಕೊಂಡಿದ್ದಾನೆ.

.... ಮತ್ತೆ ಕರ್ಣಾಟ ಭಾಷಾ ॥
ಚತುರತ್ವಂ ಪೊರ್ದಿ ಕಾದಂಬರಿ ಪಸರಿಸಿ ರಾಜೇಂದ್ರ ಚಂದ್ರಾಂಕನೊಳ್ ಸಂ ।
ಗತಿವೆತ್ತುದಂ ತ್ರಿಲೋಕೀಸಹಚರಿಯೆನೆ ತಾಂ ಸಂದುವಾಚಂದ್ರತಾರಂ ॥೨-೮೨೪॥

ಇದರ ಮುಂದಿನ ಪದ್ಯದಲ್ಲಿಯೇ ಭೋಜರಾಜನ ಹೆಸರು ಅಡಕವಾಗಿದೆ (೨-೮೨೫). ಅದರ ಮುಂದಿನ ಪದ್ಯದಲ್ಲಿ ಕವಿಯು 'ಜಗತ್‌ಸ್ತುತನಾದ ನಾಗಪೂಜ್ಯಂ ಕೃತಿಪಂ ಸುಖದಿನಿರ್ಕೆ ಇನನಳಿಗೆವರಂ' (೨-೮೨೬) ಎಂದು ತನ್ನ ಪೋಷಕನಿಗೆ ಮಂಗಳ ಕೋರಿದ್ದಾನೆ. ಈ ಪದ್ಯದಲ್ಲಿ ಚಂದ್ರರಾಜನ ಹೆಸರಿನ ಉಲ್ಲೇಖವಿಲ್ಲ. ಈ ಮೂರು ಪದ್ಯಗಳಲ್ಲಿ ನಡುವಿನದರಲ್ಲಿ ಯಾವ ಕಾರಣವೂ ಇಲ್ಲದೆ ಭೋಜರಾಜನ ಹೆಸರು ಅಡಕವಾಗಲು

೧೨ ಕರ್ಣಾಟಕ ಸಾಹಿತ್ಯಪರಿಷತ್ಪತ್ರಿಕೆ, ಸಂಪುಟ ೨೨- ಸಂಚಿಕೆ ೧. ಪುಟ : ೬೧.

ಕಾರಣವೇನು ? ಇಲ್ಲಿ ಚಂದ್ರರಾಜನಿಂದ ತನ್ನ ಕಾವ್ಯವು ಪ್ರಚುರವಾಯಿತೆಂದೂ ಆ ಚಂದ್ರರಾಜನೇ ಮೆಚ್ಚಿ ತನಗೆ ಕುದುರೆಗಳನ್ನು ಕೊಟ್ಟನೆಂದೂ ಅವನು ಆಚಂದ್ರಾರ್ಕ ಸುಖವಾಗಿ ಬಾಳಲೆಂದೂ ಕವಿಯು ಹೇಳಿಕೊಂಡಿದ್ದರೆ ಅದೇನು ಅಸಹಜವಲ್ಲ. ಇಲ್ಲಿ ನಡುವಿನ ಪದ್ಯದಲ್ಲಿ ಚಂದ್ರರಾಜನ ಹೆಸರೇ ಉಲ್ಲೇಖಿಸಲ್ಪಟ್ಟಿರುವ ಸಂಭವ ಹೆಚ್ಚಿಗಿದೆ. ಅದು ವಿಕೃತಗೊಂಡು ಭೋಜರಾಜನ ಹೆಸರಾಗಿರಬೇಕೆಂದು ಊಹಿಸಿದರೆ ತಪ್ಪಾಗಲಿಕ್ಕಿಲ್ಲ. ಆ ಪದ್ಯದಲ್ಲಿ ಮೂಲತಃ '**ವಿದ್ವತ್ಸಭಾನುಂಡಲಿ ತಣಿವಿನನುಂಭೋಜರಾಜಂ ಕ್ಷಿತೀಶಂ**' ಎಂದಿದ್ದುದು ಪ್ರತಿಕಾರರ ಕೈಯಲ್ಲಿ 'ವಿದ್ವತ್ಸಭಾಮಂಡಲಿ ತಣಿವಿನೆಗಂ ಭೋಜರಾಜ ಕ್ಷಿತಿಶಂ' ಎಂದಾಗಿದೆಯೆಂದು ಹೇಳುವುದೇ ಯೋಗ್ಯ. ಕಾವ್ಯಕ್ಕೆ ಮೆಚ್ಚಿ ಕವಿಗೆ ಕುದುರೆಗಳನಿತ್ತವನು ಭೋಜರಾಜನಲ್ಲ; ಕವಿಯು ಪೋಷಕನಾದ ಅಂಭೋಜ ರಾಜ–ಚಂದ್ರರಾಜ. ಆದುದರಿಂದ ಭೋಜರಾಜನ ಜೀವಿತಕಾಲದಿಂದ ಕಾದಂಬರಿಯ ನಾಗವರ್ಮನ ಕಾಲವನ್ನು ನಿರ್ಣಯಿಸುವುದು ಸರಿಯಾಗಲಾರದು. ಅಂತೆಯೇ ಭೋಜ ರಾಜನ ಕಾಲಕ್ಕೂ ಕಾವ್ಯಾವಲೋಕನಾದಿಗಳನ್ನು ರಚಿಸಿದ ನಾಗವರ್ಮನ ಕಾಲಕ್ಕೂ ಹೊಂದಿಕೆಯಾಗುವುದರಿಂದ ಕಾವ್ಯಾವಲೋಕನಾದಿಗಳನ್ನು ರಚಿಸಿದ ಕವಿಯೇ ಕಾದಂಬರಿ ಯನ್ನು ರಚಿಸಿದನೆಂದು ಹೇಳುವುದೂ ಯುಕ್ತವಲ್ಲ. ಕಾವ್ಯಾವಲೋಕನಾದಿಗಳನ್ನು ರಚಿಸಿದವನು ಜೈನಧರ್ಮದ ನಾಗವರ್ಮನಾದರೆ, ಕಾದಂಬರಿಯನ್ನು ರಚಿಸಿದವನು ಬ್ರಾಹ್ಮಣನಾಗವರ್ಮ. ಕಾದಂಬರಿಯ ಆದಿಶ್ಲೋಕದಿಂದ ಅದರ ರಚಕನು 'ಜೈನನೋ ಅಲ್ಲವೋ ಎಂಬ ಸಂದೇಹವನ್ನು ಉಂಟುಮಾಡುತ್ತಾನೆ' ಎಂದು ಶ್ರೀ ಆರ್. ನರಸಿಂಹಾ ಚಾರ್ಯರು ಹೇಳಿದ್ದರೆ, ಶ್ರೀ ಗೋವಿಂದ ಪೈಗಳು "ಕಾದಂಬರಿಯ ನಾಗವರ್ಮನು ತನ್ನ ಮತವನ್ನು ಕುರಿತು ಏನೂ ಹೇಳಿಲ್ಲ. ಗ್ರಂಥಾವತಾರದಲ್ಲಿಯ ಶಿವಸ್ತುತಿಯಿಂದ ಆತನು ಬ್ರಾಹ್ಮಣನೆಂದೇ ತಿಳಿಯಬೇಕಾದರೂ ಅದನ್ನಾತನು ಪಂಪ-ರನ್ನರಂತೆ ತನ್ನ ಪೋಷಕನಾದ ಚಂದ್ರರಾಜನ ಪ್ರೀತ್ಯರ್ಥವಾಗಿ ಆತನ ಧರ್ಮಕ್ಕೆ ತಕ್ಕಂತೆ ಬರೆದಿರಬಹುದೇ ಎಂದು ಶಂಕೆಯಾದರೆ ಸಂಸ್ಕೃತ ಕಾದಂಬರಿಯಲ್ಲಿ ಉಜ್ಜಯನಿಯ ವರ್ಣನೆಯಲ್ಲಿ (ಪು. ೫೧) 'ಬೌದ್ಧಾನೇವ ಸರ್ವಾಸ್ತಿವಾದ ಶೂರೇಣ, ಸಾಂಖ್ಯಾಗವೇನೇವ ಪ್ರಧಾನ ಪುರುಷೋ ಹೇಳಿರುವ ಪೇತೇನ ಜಿನಧರ್ಮೇಣೇವ ಜೀವಾನುಕಂಪಿನಾ ವಿಲಾಸಿಜನೇನಾಧಿಷ್ಠಿತಾ' ಎಂದು ಆಯಾ ಮತಗಳ ಸರ್ವಥಾ ದೂಷಣೀಯುವಲ್ಲದೆ ಶ್ಲಾಘನೀಯುವೇ ಆಗಿರುವೀ ಉಪಮಾವಾಕ್ಯಗಳನ್ನು ಕನ್ನಡದಲ್ಲಿ ತೀರ ಬಿಟ್ಟಿರುವುದರಿಂದ, ಆತನು ಜೈನನಲ್ಲ ಬ್ರಾಹ್ಮಣನೇ ಆಗಿರಬೇಕೆಂದು ದೃಢವಾಗಿ ಹೇಳಬಹುದು"[೧೩] ಎನ್ನುತ್ತಾರೆ.

ಭೋಜರಾಜನ ಕಾಲಕ್ಕೂ ಕಾದಂಬರಿಯು ರಚಿತವಾದ ಕಾಲಕ್ಕೂ ತಳಕು ಹಾಕುವುದು ಸರಿಯಲ್ಲವೆಂದಾಯಿತು. ಇದನ್ನು ಬಿಟ್ಟರೆ ಕಾದಂಬರಿಯ ಕಾಲವನ್ನು ಗೊತ್ತುಪಡಿಸಲು ಉಳಿಯುವ ಸಂಗತಿಯೆಂದರೆ ಕವಿಯು ಪೋಷಕನಾದ ಚಂದ್ರರಾಜನ

---

೧೩ ಕರ್ಣಾಟಕ ಸಾಹಿತ್ಯಪರಿಷತ್ಪತ್ರಿಕೆ; ಸಂಪುಟ ೨೧- ಸಂಚಿಕೆ ೧, ಪುಟ : ೬೧-೬೨.

ಕಾಲ. ಶ್ರೀ ಆರ್. ನರಸಿಂಹಾಚಾರ್ಯರಾಗಲಿ, ಶ್ರೀ ಎ. ವೆಂಕಟಸುಬ್ಬಯ್ಯನವರಾಗಲಿ ಈ ಚಂದ್ರರಾಜನ ಕಾಲವನ್ನು ಕುರಿತು ವಿಚಾರಮಾಡಿಯೇ ಇಲ್ಲ. ಶ್ರೀ ಎಚ್. ಚೆನ್ನಕೇಶವ ಅಯ್ಯಂಗಾರ್ ಅವರು ಕಾದಂಬರಿಯಲ್ಲಿ ಚಂದ್ರರಾಜನ ಜೊತೆಗೆ ಶ್ಲೇಷೆಯಿಂದ ತ್ರಿಭುವನಮಲ್ಲನ ಹೆಸರನ್ನೂ ಸೇರ್ಪಡೆಮಾಡಲಾಗಿದೆಯೆಂಬುದನ್ನು ತೋರಿಸಿ "ಕಾದಂಬರಿಯ ನಾಗವರ್ಮನು ಕಲ್ಯಾಣಚಾಲುಕ್ಯರ ಶಿನ್ಯು ವಿಕ್ರಮಾದಿತ್ಯ ತ್ರಿಭುವನಮಲ್ಲನ ಕಾಲದಲ್ಲಿ (೧೦೭೯–೧೦೧೪) ಅವನ ಸಾಮಂತನೂ ಬನವಾಸಿಯ ನಾಗರಖಂಡದಲ್ಲಿ ಆಳುತ್ತಿದ್ದವನೂ ಆದ ಚಂದ್ರನೆಂಬ ರಾಜನ ಆಶ್ರಿತನಾಗಿದ್ದು ತನ್ನ ಗ್ರಂಥವನ್ನು ಬರೆದಿರುವನೆಂದೂ ಇದೇ ಕಾಲದಲ್ಲಿದ್ದ ಮಾಳವಾಧೀಶನಾದ ಧಾರಾಪುರದ ಪರಮಾರವಂಶದ ಭೋಜರಾಜನಿಂದ (೧೦೧೦–೧೦೫೦) ವಿದ್ವತ್‌ಸಭಾಮಂಡಲಿಯಲ್ಲಿ ಸನ್ಮಾನಿತನಾದನೆಂದೂ ಈ ಗ್ರಂಥಸ್ಥ ಪ್ರಮಾಣಗಳಿಂದ ತಿಳಿಯಬಹುದಾಗಿದೆ. ಕವಿಯು ಅದ್ವೈತ ಬ್ರಾಹ್ಮಣನೆಂಬುದೂ ಕೂಡ ಅದರಿಂದಲೇ ಸಿದ್ಧವಾಗುತ್ತದೆ"[೧೪] ಎಂದಿದ್ದಾರೆ. ಅವರು ಕಾದಂಬರಿಯಲ್ಲಿ ತ್ರಿಭುವನಮಲ್ಲನ ಹೆಸರು ಶ್ಲೇಷೆಯಿಂದ ಬರುವ ಸ್ಥಳಗಳನ್ನು ನಿರ್ದೇಶಿಸಿದ್ದಾರೆ :

i. 'ಕಂದಚಂದ್ರನೆನಲುಂ **ತ್ರೈಲೋಕ್ಯದಿಂ** ವಂದಸೀಯನೆ' (ತ್ರೈಲೋಕ್ಯ–ಚಾಳುಕ್ಯರಾಜ್ಯ ; ಉತ್ತರಭಾಗ ೭೯)– ಚಂದ್ರನು ಚಾಲುಕ್ಯಚಕ್ರವರ್ತಿಯ ಪ್ರಿಯ ಸಾಮಂತನೆಂಬ ಧ್ವನಿ.

ii. ಭುವನತ್ರಯದೊಳ್ (ಉ.ಭಾ.೮೦೫).

iii. ಎರೆಯಂ **ತ್ರೈಲೋಕ್ಯರಾಜ್ಯಕ್ಕೆ**ನಿಸಿದವಿಭುವಿಂಗೇನನೆತ್ತು...........
ರಾಜೇಂದ್ರ ಚಂದ್ರಂಗೆ (ಉ.ಭಾ.೮೧೦)

ಇದೇರೀತಿಯಲ್ಲಿ ತ್ರಿಭುವನ, ಭುವನತ್ರಯ, ತ್ರೈಲೋಕ್ಯ ಎಂಬ ಶಬ್ದಗಳು ಪೂ. ಭಾ. ೧೫, ೨೬, ೫೦, ೧೨೩, ೪೪೦, ೪೪೨, ೪೫೭, ೬೦೧, ೬೩೧, ೮೭೯; ಮತ್ತು ಉ. ಭಾ. ೧, ೧೧, ೫೪, ೧೧೧ ಈ ಪದ್ಯಗಳಲ್ಲಿಯೂ ಬರುವುದನ್ನು ಎತ್ತಿತೋರಿಸಿದ್ದಾರೆ.

ಶ್ರೀ ಗೋವಿಂದ ಪೈಗಳು ಕಾದಂಬರಿಯ ನಾಗವರ್ಮನ ಪೋಷಕನಾದ ಚಂದ್ರನು ಕೊಲ್ಹಾಪುರದ ಶಿಲಾಹಾರವಂಶದ ಚಂದ್ರರಾಜನೆಂದೂ ಅವನು ಧಾರಾನಗರದ ಅರಸನಾದ ಭೋಜರಾಜನ ಸರಿಗಾಲದವನೆಂದೂ ಹೇಳಿ, ಕಾದಂಬರಿಯು ೧೦೦೦ ದಿಂದ ೧೦೦೫ರೊಳಗೆ ರಚಿತವಾಗಿರಬೇಕೆನ್ನುತ್ತಾರೆ.

ಶ್ರೀ ಚೆನ್ನಕೇಶವ ಅಯ್ಯಂಗಾರರಾಗಲಿ, ಶ್ರೀ ಗೋವಿಂದ ಪೈಗಳಾಗಲಿ ಭೋಜರಾಜನ ಕಾಲವನ್ನು ಮೂಲದಲ್ಲಿ ಹಿಡಿದು ಅದಕ್ಕೆ ಅನುಸರಿಸಿ ಕಾದಂಬರಿಯ ನಾಗ

೧೪ ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ–೧೪. ಸಂಚಿಕೆ–೩, ಪುಟ : ೧೬೮.

ವರ್ಮನ ಪೋಷಕನಾದ ಚಂದ್ರರಾಜನನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಇದು ಸರಿಯಾದ ಮಾರ್ಗವಲ್ಲ. ಕವಿಯ ಪೋಷಕನಾದ ಚಂದ್ರರಾಜನು ಎಲ್ಲಿಯವನು, ಯಾವ ಕಾಲದವನು ಎಂಬುದನ್ನು ಇನ್ನೂ ಶೋಧಿಸಬೇಕಾಗಿದೆ.

ಶ್ರೀ ಚೆನ್ನಕೇಶವ ಅಯ್ಯಂಗಾರರು ಕಾದಂಬರಿಯಲ್ಲಿ ಬರುವ "ಮರಿಚಲತಾ ಪ್ರಚಯ (೯೫), 'ಸೊಕ್ಕನಾಳ್ದ ಕೇರಳಿಯರ ಕದಪಿನ ಬಣ್ಣಮಪ್ಪ ಚೆಂದಳಿರ್ದುರು ಗಲ್' (೯೬), 'ವಿಳಗೌಂಗಿಸ ಪೊಂಗೇದಗೆಯ ಬಳಸಿನೊಳಂ ಎಲೆವಳ್ಳಿಯ ತಳ್ಕಿಸಿಂ' (೯೭) ಇವೇ ಮುಂತಾದ ವರ್ಣನೆಗಳು ಬನವಾಸಿಯಲ್ಲಿ ಹುಟ್ಟಿ ಬೆಳೆದ ಕವಿಗೆ ಸಾಧ್ಯವೇ ಹೊರತು ಉಳಿದವರಿಗೆ ಸಹಜವಲ್ಲ. ಇವೆಲ್ಲ ಕಾರಣಗಳಿಂದ (ಕಾದಂಬರಿಯ) ನಾಗವರ್ಮನು ಬನವಾಸಿ ದೇಶದವನೇ ಆಗಿರಬೇಕು"[೧೫] ಎಂದಿದ್ದಾರೆ. ಶ್ರೀ ಗೋವಿಂದ ಪೈಗಳು ಕನ್ನಡ ಕಾದಂಬರಿಯಲ್ಲಿ ಬರುವ ಈ ಮಾತುಗಳು "ಮದಕಲ ಕುರರಕ ಕುಲದಶ್ಯಮಾನ ಮರಿಚ ಪಲ್ಲವಾ'(೧೯). 'ಮಧು ಮದೋಪರಕ್ತ ಕೇರಲೀ ಕಪೋಲ ಕೋಮಲಚ್ಛವಿನಾ' (ಪು. ೧೯) ಮೊದಲಾಗಿ ಸಂಸ್ಕೃತ ಕಾದಂಬರಿಯಲ್ಲಿಯೂ ಇರುವುದರಿಂದ, ಕನ್ನಡ ಕಾದಂಬರಿಕಾರನು ಇವನ್ನು ಸಂಸ್ಕೃತ ಮೂಲದಿಂದಲೇ ಎತ್ತಿ ಕೊಂಡನಲ್ಲದೆ ಇವು ಆತನವಲ್ಲವೆಂದು ಬೇರೆ ಹೇಳಬೇಕೆಂದಿಲ್ಲ. ಅತ ಏತ ಇವಾಗಲಿ ಸಂಸ್ಕೃತ ಕಾದಂಬರಿಯಲ್ಲಿರುವ ಇಂಥವೇ ಬೇರೆಯವಾಗಲಿ ಕನ್ನಡ ಕಾದಂಬರಿಯ ನಾಗವರ್ಮನ ಅಥವಾ ಆತನ ಪೋಷಕನ ದೇಶವಿಚಾರಕ್ಕೆ ಎಂದಿಗೂ ನೆರವಾಗ ಲಾರವು"[೧೬] ಎಂದಿದ್ದಾರೆ. ಕಾದಂಬರಿಯ ನಾಗವರ್ಮನ ದೇಶಕಾಲಗಳ ಬಗೆಗೆ ನಿಶ್ಚಿತ ಸ್ವರೂಪದಲ್ಲಿ ಹೇಳುವುದು ಈ ವರೆಗೆ ಸಾಧ್ಯವಾಗಿಲ್ಲ.

೩ ಕಾವ್ಯಾವಲೋಕನಾದಿಗಳ ನಾಗವರ್ಮ :

ನಾಗವರ್ಮನಿಂದ ರಚಿತವಾದ ಕಾವ್ಯಾವಲೋಕನದ ಕೊನೆಯಲ್ಲಿ

ಛಂದೋವಿಚಿತಿಯಲಂಕೃತಿ ।
ಸಂದಭಿಧಾ(ವಸ್ತು)ಕೋಶಯೆಂಬಿವು ವಾಕ್‌ಶ್ರೀ ।
ಸುಂದರಿಗೆ ರತ್ನಮಂಡನ ।
ದಂದದೊಳಿರ್ದಪುವು ನಾಗವರ್ಮನ ಕೃತಿಗಳ್ ॥ ೯೬೫ ॥

ಎಂಬ ಪದ್ಯವು ಬರುತ್ತದೆ. ಇದರಿಂದ ಕಾವ್ಯಾವಲೋಕನವನ್ನು ಬರೆದ ನಾಗವರ್ಮನೇ ಛಂದೋವಿಚಿತಿ, ಅಭಿಧಾನವಸ್ತುಕೋಶಗಳನ್ನು ರಚಿಸಿದನೆಂಬುದು ಸ್ಪಷ್ಟವಾಗುತ್ತದೆ. ಈ ಪದ್ಯದಲ್ಲಿ ಬರುವ 'ಅಭಿಧಾವಸ್ತುಕೋಶ' ಎಂಬುದೇ ಸಂಸ್ಕೃತ ಪದಗಳಿಗೆ ಅರ್ಥ ವನ್ನು ಹೇಳುವ ಪದ್ಯರೂಪವಾದ ಸಂಸ್ಕೃತ–ಕರ್ನಾಟಕ ನಿಘಂಟು.

೧೫ ಕರ್ನಾಟಕ ಸಾಹಿತ್ಯಪರಿಷತ್ಪತ್ರಿಕೆ. ಸಂಪುಟ– ೧೪, ಸಂಚಿಕೆ– ೩, ಪುಟ: ೧೮೪.

೧೬ ಕರ್ನಾಟಕ ಸಾಹಿತ್ಯಪರಿಷತ್ಪತ್ರಿಕೆ. ಸಂಪುಟ– ೨೧, ಸಂಚಿಕೆ– ೧, ಪುಟ : ೪೯.

"ಕಾವ್ಯಾವಲೋಕನವೂ ವಸ್ತುಕೋಶವೂ ಜಿನಸ್ತುತಿಯಿಂದ ಆರಂಭಿಸುವುದರಿಂದ ಅವು ಜೈನಕೃತಿಗಳು. ಅವೆರಡರಲ್ಲಿಯೂ ರಚಕನ ಹೆಸರು ನಾಗವರ್ಮನೆಂದೇ ಇದೆ. (ಕಾ. ಲೋ. ಪ. ೮೪೨, ೮೪೩, ೯೬೦, ೯೬೨; ವಸ್ತು. ಪು. ೧, ೯೬) ಇದಕ್ಕೆ ತಕ್ಕ ನಾಕಿಗ ಎಂಬ ಚಿಕ್ಕ ಹೆಸರೂ ಇದೆ (ಕಾವ್ಯಾ. ಪ. ೭೭೯, ೯೫೯; ವಸ್ತು. ಪು. ೯೭, ೧೪೧). ಕವಿಗೆ ಇದ್ದ 'ಪಂಡಿತ' ಎಂಬ ಬಿರುದೂ ಇದೆ (ಕಾವ್ಯಾ. ಪ. ೪೯೭; ವಸ್ತು. ಪು. ೧೧೭). ಕಾವ್ಯಾವಲೋಕನದ ರಚಕನು ತನ್ನನ್ನು 'ದಾಮೋದರತನಯ' ನೆಂದಿರುವನಾದರೆ (ಪ. ೯೬), ವಸ್ತುಕೋಶದಲ್ಲಿ (ಪು. ೧೧೬) 'ದಾಮೋದರಪ್ರಿಯ ಸುತ' ನೆಂದಿರುತ್ತಾನೆ. ಕವಿಯ 'ಕವಿತಾಗುಣೋದಯ' ಎಂಬ ಬಿರುದನ್ನು ಕಾವ್ಯಾವಲೋಕನದ ಪ್ರತ್ಯಧಿಕರಣದ ಕೊನೆಯ ಗದ್ಯದಲ್ಲಿ ಹೇಳಿರುವ ಮೇರೆಗೆ ವಸ್ತುಕೋಶದ ಪ್ರತಿಕಾಂಡದ ಕೊನೆಯ ಗದ್ಯದಲ್ಲಿಯೂ ಹೇಳಿದೆ. 'ಸಾರವಿಚಾರ' ಎಂಬ ಉತ್ಪಲಮಾಲೆಯೂ (ಕಾವ್ಯಾ. ಪ. ೪೯೭ ಮತ್ತು ವಸ್ತು. ಪು. ೧೧೭) 'ಶ್ರುತದೇವೀ ಮಕರಂದ ಕಲ್ಪಲಪನಂ' ಎಂಬ ಮತ್ತೇಭವಿಕ್ರೀಡಿತವೂ (ಕಾವ್ಯಾ. ಪ. ೭೭೯, ವಸ್ತು. ಪು. ೯೭) ಎರಡು ಕಾವ್ಯಗಳಲ್ಲಿಯೂ ಆಯಾ ಭಾಗಗಳ ಕೊನೆಯಲ್ಲಿವೆ. ಅತ ಏವ ಇವೆರಡೂ ಗ್ರಂಥಗಳು ಒಬ್ಬನೇ ನಾಗವರ್ಮನ ಕೃತಿಗಳೆಂಬಲ್ಲಿ ಸಂಶಯವಿರಲಾರದು. ಹಾಗೆಯೇ ಸಂಸ್ಕೃತ ಸೂತ್ರಗಳಿಂದ ರಚಿತವಾಗಿ ಸಂಸ್ಕೃತ ವೃತ್ತಿಯಿಂದಲೂ ಒಡಗೂಡಿರುವ ಭಾಷಾಭೂಷಣವೂ ಜಿನಸ್ತುತಿಯಿಂದಲೇ ಆರಂಭಿಸುತ್ತದೆ. ಅದರ ಕೊನೆಯ ಶ್ಲೋಕಗಳಿಂದ ಅದನ್ನು ಬರೆದಾತನು 'ನಾಗವರ್ಮ ಬುಧೋತ್ತಮ'ನೆಂದೂ ಅದು 'ಕೃತಿನಾ ನಾಗವರ್ಮಣಾ' ರಚಿತವಾಯಿತೆಂದೂ ತಿಳಿಯುವುದರಿಂದಲೂ ಅದು ಕಾವ್ಯಾವಲೋಕನದ ಮೊದಲನೆಯ ಅಧಿಕರಣವಾದ ಶಬ್ದಸ್ಮೃತಿಯಲ್ಲಿ ವ್ಯಕ್ತೀಕರಿಸುವ ಅವೇ ವ್ಯಾಕರಣವಿಷಯಗಳನ್ನು ಒಳಗೊಂಡಿರುವುದರಿಂದಲೂ ಅದೂ ಕೂಡ ಕಾವ್ಯಾವಲೋಕನಕಾರನ ಕೃತಿಯೇ ಆಗಿರಬಹುದು. ಅಂದರೆ ವಸ್ತುಕೋಶ, ಕಾವ್ಯಾವಲೋಕನ, ಭಾಷಾಭೂಷಣ ಎಂಬೀ ಮೂರೂ ಗ್ರಂಥಗಳನ್ನು ರಚಿಸಿದ ನಾಗವರ್ಮನೊಬ್ಬನೇ ಎಂದು ಒಪ್ಪಿಕೊಳ್ಳಲಿಕ್ಕೆ ತಕ್ಕಷ್ಟು ಅವಕಾಶವಿದೆ."[೧೭] ಇದು ಶ್ರೀ ಗೋವಿಂದ ಪೈಗಳ ಹೇಳಿಕೆ.

ಕಾವ್ಯಾವಲೋಕನ, ವಸ್ತುಕೋಶ, ಭಾಷಾಭೂಷಣಗಳನ್ನು ರಚಿಸಿದ ನಾಗವರ್ಮನು ಒಬ್ಬನೇ ಎಂಬ ಬಗೆಗೂ ಅವನು ಜೈನಧರ್ಮದವನೆಂಬ ಬಗೆಗೂ ಭಿನ್ನಾಭಿಪ್ರಾಯಗಳಿಲ್ಲ. ಆದರೆ ಅವನು ಜೀವಿಸಿದ ಕಾಲದ ಬಗೆಗೆ ಭಿನ್ನಾಭಿಪ್ರಾಯಗಳಿವೆ.

"ಕಾವ್ಯಾವಲೋಕನದಲ್ಲಿ ಬರುವ ಒಂದು ಪದ್ಯದಿಂದ ಆ ಗ್ರಂಥಕರ್ತನಿಗೆ ಅಭಿನವ ಶರ್ವವರ್ಮ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ಜನ್ನನು ಅನಂತನಾಥಪುರಾಣದಲ್ಲಿ

---

೧೭ ಕರ್ನಾಟಕ ಸಾ. ಪ. ಪ. ಸಂಪುಟ– ೨೨. ಸಂಚಿಕೆ- ೨. ಪುಟ: ೧೩೯–೧೪೦.

'ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವರ್ಮನಿದಾನೀಂತನ ಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯಂ' ಎಂಬುದರಿಂದ ಇದಾನೀಂತಶರ್ಮವರ್ಮನೆನಿಸಿದ ನಾಗವರ್ಮನು ಜನ್ನನಿಗೆ ಉಪಾಧ್ಯಾಯನಾಗಿದ್ದಂತೆಯೂ ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದಂತೆಯೂ ತಿಳಿಯುತ್ತದೆ. ಈ ನಾಗವರ್ಮನೇ ಕಾವ್ಯಾವಲೋಕನವನ್ನು ಬರೆದವನಾಗಿರಬೇಕು. ಚಾಳುಕ್ಯ ರಾಜರಲ್ಲಿ ಜಗದೇಕಮಲ್ಲ ಎಂಬವನು ೧೧೩೮ ರಿಂದ ೧೧೫೦ ರ ವರೆಗೆ ಆಳಿದ ಹಾಗೆ ತಿಳಿಯುತ್ತದೆ. ಆದುದರಿಂದ ಈ ನಾಗವರ್ಮನು ಸುಮಾರು ೧೧೪೫ ರಲ್ಲಿ ಇದ್ದಿರಬೇಕು. ಜನ್ನನು ೧೨೦೯ ರಲ್ಲಿ ಯಶೋಧರಚರಿತವನ್ನೂ ೧೨೩೦ ರಲ್ಲಿ ಅನಂತನಾಥಪುರಾಣವನ್ನೂ ಬರೆದಂತೆ ಆ ಗ್ರಂಥಗಳಿಂದ ತಿಳಿಯಬರುವುದರಿಂದ ಈ ನಾಗವರ್ಮನು ಜನ್ನನಿಗೆ ಉಪಾಧ್ಯಾಯನಾದಾಗ ಬಹಳ ವೃದ್ಧನಾಗಿರಬೇಕು"[೧೮] ಎಂಬುದು ಶ್ರೀ ಆರ್. ನರಸಿಂಹಾಚಾರ್ಯರ ಅಭಿಪ್ರಾಯ.

"ಭಾಷಾಭೂಷಣದ ೮೮ ನೆಯ 'ಆಸಾಂ ವ್ಯತ್ಯಯೋ ಬಹುಲಮ್' ಎಂಬ ಸೂತ್ರದ ವೃತ್ತಿಯಲ್ಲಿ ನಾಗಚಂದ್ರನ ಪಂಪರಾಮಾಯಣದಿಂದ 'ಬಹುತಾಪಕ್ಕೆ ಬಿಗುರ್ತುರ್ ವಿಷ್ಣು ಪಡೆದಂ ಮತ್ಸ್ಯಾವತಾರಕ್ಕೆ' ಎಂಬೀ ಪದ್ಯಭಾಗವನ್ನು ದ್ವಿತೀಯಾರ್ಥದ ಚತುರ್ಥೀ ವಿಭಕ್ತಿಗೆ ಉದಾಹರಿಸಿರುವುದರಿಂದ, ಭಾಷಾಭೂಷಣವು ಪಂಪರಾಮಾಯಣಕ್ಕಿಂತ ಈಚೆಯದಾಗಿರಬೇಕೆಂದು ಸ್ವಯಮೇವ ಸಿದ್ಧವಾಗುತ್ತದೆ. ಭಾಷಾಭೂಷಣದ ನಾಗವರ್ಮನ ಹೆಸರನ್ನಾದರೂ ಎತ್ತದೆ ಸ್ವತಂತ್ರವಾಗಿ ಮಾಡಿರುವ ನಾಗಚಂದ್ರನ ಕಾಲವಿಚಾರದಲ್ಲಿ ಆತನ ಪಂಪರಾಮಾಯಣವು ಕ್ರಿ. ಶ. ಸು. ೧೧೪೦ ರಲ್ಲಿ ರಚಿತವಾಯಿತೆಂದು ನಾನು ಅನ್ಯತ್ರ ನಿರ್ಧರಿಸಿರುವುದರಿಂದ (ಧಾರವಾಡದ ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದ 'ಅಭಿನವಪಂಪ'; ಜಯಕರ್ನಾಟಕ– ಫೆಬ್ರುವರಿ ೧೯೩೫–೧೩–೨–) ಈ ಪದ್ಯಭಾಗವನ್ನು ಉದಾಹರಿಸಿರುವ ಭಾಷಾಭೂಷಣವು ಕ್ರಿ.ಶ. ಸು. ೧೧೫೦ ರಿಂದ ಈಚೆ ರಚಿತವಾಗಿರಬೇಕು."[೧೯] "ಜನ್ನನು ತನ್ನ ಯಶೋಧರ ಚರಿತೆಯನ್ನು ರಚಿಸಿದುದು ಕ್ರಿ. ಶ. ೧೨೦೮ ರಲ್ಲಿ, ಅನಂತನಾಥ ಪುರಾಣವನ್ನು ಕ್ರಿ. ಶ. ೧೨೩೫ ರಲ್ಲಿ (ಪ್ರಸ್ತುತ ಲೇಖನದ ಪರಿಶಿಷ್ಟ ನೋಡಿ). ಯಶೋಧರ ಚರಿತೆಯಲ್ಲಿ ತನ್ನ ಪ್ರಥಮೋಪಾಧ್ಯಾಯನಾದ ನಾಗವರ್ಮನ ಹೆಸರನ್ನು ಹೇಳದೆ ಜನ್ನನು ತಾನು 'ಕವಿಸೋಮನೋಬಾಣನ ಮಗ'ನೆಂದಿರುವಲ್ಲಿ (೧–೨೩) ತನ್ನ ದ್ವಿತೀಯೋಪಾಧ್ಯಾಯನನ್ನು ಮಾತ್ರ ಆತನ ಬಿರುದಿನಿಂದ ಹೇಳಿರುವುದರಿಂದ ಈ (ಇದಾನೀಂತನ ಶರ್ವವರ್ಮ) ನಾಗವರ್ಮನು ಯಶೋಧರಚರಿತೆಯ ರಚನೆಗಿಂತ ಮುಂಚೆಯೇ ಅಂದರೆ ಕ್ರಿ. ಶ. ೧೨೦೮ರಿಂದ ಹಿಂದೆಯೇ ಕಾಲವಾಗಿರಬೇಕು. ಈತನು ತನ್ನ ಭಾಷಾ

೧೮ ಕವಿಚರಿತೆ I, ಪು. ೫೩

೧೯ ಕರ್ಣಾಟಕ ಸಾಹಿತ್ಯಪರಿಷತ್ಪತ್ರಿಕೆ. ಸಂಪುಟ-೨೦, ಸಂಚಿಕೆ-೨, ಪುಟ : ೧೪೭.

ಭೂಷಣವನ್ನು ಕ್ರಿ. ಶ. ಸು. ೧೧೫೦ ರ ನಂತರ ರಚಿಸಿರಬೇಕೆಂದು ಈ ಮೇಲೆ ಕಂಡಿರುವುದರಿಂದ ಈತನು ಕ್ರಿ. ಶ. ಸು. ೧೧೨೦–೧೨೦೦ ರೊಳಗೆ ಆಗಿ ಹೋಗಿರಬೇಕು"[೨೦] ಇದು ಶ್ರೀ ಗೋವಿಂದ ಪೈಗಳ ಅಭಿಪ್ರಾಯ.

ಶ್ರೀ ಆರ್. ನರಸಿಂಹಾಚಾರ್ಯರು ಮತ್ತು ಶ್ರೀ ಗೋವಿಂದ ಪೈಗಳು ಹೇಳುವ ಈ ನಾಗವರ್ಮನ ಕಾಲದಲ್ಲಿ ವಿಶೇಷ ಅಂತರವಿಲ್ಲ. ಆದರೆ ಶ್ರೀ ಎ. ವೆಂಕಟಸುಬ್ಬಯ್ಯನವರು ಹೇಳುವ ಕಾಲವೂ ಅದಕ್ಕಾಗಿ ಕೊಡುವ ಕಾರಣಗಳೂ ಭಿನ್ನವಾಗಿವೆ. ಅವರು ಕಾವ್ಯಾವಲೋಕನಾದಿಗಳನ್ನು ರಚಿಸಿದ ನಾಗವರ್ಮನ 'ಛಂದೋವಿಚಿತಿ' ಎಂಬ ಗ್ರಂಥವೇ ಛಂದೋಂಬುಧಿಯೆಂದು ಹೇಳಿ, ಕಾವ್ಯಾವಲೋಕನ–ಛಂದೋಂಬುಧಿಗಳ ರಚಕರಲ್ಲಿ ಭಿನ್ನತ್ವ ಕಲ್ಪಿಸದೆ ಛಂದೋಂಬುಧಿಯಲ್ಲಿ ಬರುವಂತಹವೆಂದು ಹೇಳುವ ಪದ್ಯಗಳನ್ನು ಆಧರಿಸಿ ಈ ಅಭಿನ್ನ ನಾಗವರ್ಮನು 'ತನ್ನ ಗ್ರಂಥಗಳನ್ನು ೧೦೩೦–೧೦೫೦ರಲ್ಲಿ ಬರೆದನೆಂದು ಹೇಳುವುದರಲ್ಲಿ ಪ್ರಾಯಶಃ ವಸ್ತುಸ್ಥಿತಿ ವಿರೋಧವೇನೂ ಇರಲಾರದು'[೨೧] ಎಂದಿದ್ದಾರೆ. ಭಿನ್ನಾಭಿಪ್ರಾಯವಿರುವ ಛಂದೋಂಬುಧಿಯ ನಾಗವರ್ಮನ ವಿಷಯವನ್ನೂ ಅದರಲ್ಲಿ ಬರುವ ಪದ್ಯಗಳಿಂದ ಸಿದ್ಧಪಡಿಸಲಾದ ಕಾಲವನ್ನೂ ಮುಂದೆ ಪ್ರತಿಪಾದಿಸಲಾಗಿದೆ. ಅದಕ್ಕೆ ಸಂಬಂಧಿಸಿದ ವಿಷಯವನ್ನುಳಿದು ಕಾವ್ಯಾವಲೋಕನವು ಕವಿಚರಿತೆಕಾರರು ಹೇಳುವಂತೆ ಕ್ರಿ.ಶ. ೧೧೪೫ರಲ್ಲಿ ಹುಟ್ಟಲಿಲ್ಲವೆಂದೂ ಅದು ಸುಮಾರು ೧೦೫೦ರಲ್ಲಿ ಬರೆಯಲ್ಪಟ್ಟಿತೆಂದೂ ಊಹಿಸುವುದಕ್ಕೆ ಶ್ರೀ ಎ. ವೆಂಕಟಸುಬ್ಬಯ್ಯನವರು ಕೊಟ್ಟ ಕಾರಣಗಳಿವು :

"೧. ಕ್ರಿ. ಶ. ೯೭೩ ರಿಂದ ಈಚೆಗೆ ರಾಜ್ಯವಾಳಿದ ಚಾಲುಕ್ಯ ರಾಜರಲ್ಲಿ ತೈಲಪ (ಕ್ರಿ. ಶ. ೯೭೩–೯೯೭), ಚಾಲುಕ್ಯ ಕಂಠೀರವ ಅಥವಾ ಇರಿವಬೆಡಂಗ ಸತ್ಯಾಶ್ರಯ (೯೯೭–೧೦೦೮), ವಿಕ್ರಮಾಂಕ (೧೦೦೯–೧೦೧೪) ಮತ್ತು ಜಯಸಿಂಹ (೧೦೧೫–೧೦೪೨) ಎಂಬ ನಾಲ್ಕುಜನ ಚಾಲುಕ್ಯರಾಜರು ಮಾತ್ರ ಈ ಗ್ರಂಥದಲ್ಲಿ ಸ್ತುತಿಸಲ್ಪಟ್ಟಿರುವರೇ ಹೊರತು ಈ ಜಯಸಿಂಹನಿಂದ ಈಚೆಗೆ ರಾಜ್ಯವಾಳಿದ ಸೋಮೇಶ್ವರ ತ್ರೈಲೋಕ್ಯಮಲ್ಲ (೧೦೪೨–೧೦೬೮), ಸೋಮೇಶ್ವರ ಭುವನೈಕಮಲ್ಲ (೧೦೬೮–೧೦೭೬), ೬ನೆಯ ವಿಕ್ರಮಾದಿತ್ಯ ತ್ರಿಭುವನಮಲ್ಲ (೧೦೭೬–೧೧೨೭), ಸೋಮೇಶ್ವರ ಭೂಲೋಕಮಲ್ಲ (೧೧೨೭–೧೧೩೬), ಪೆರ್ಮಜಗದೇಕಮಲ್ಲ (೧೧೩೬–೧೧೫೧) ಎಂಬ ರಾಜರಲ್ಲಿ ಒಬ್ಬನೂ ಸ್ತುತಿಸಲ್ಪಟ್ಟಿಲ್ಲ. 'ಸೋಮೇಶ್ವರ' ಎಂಬ ದೊರೆಯ ಹೆಸರು ಈ ಗ್ರಂಥದಲ್ಲಿಯೇ ಹೇಳಲ್ಪಟ್ಟಿಲ್ಲ. ೨. ಹೀಗೆಯೇ ಈ ಗ್ರಂಥದಲ್ಲಿ ಕ್ರಿ. ಶ. ೧೦೪೨ಕ್ಕಿಂತ ಹಿಂದೆ ಇದ್ದ ಪಂಪ, ೧ನೆಯ ನಾಗವರ್ಮ, ಪೊನ್ನ, ರನ್ನ ಮೊದಲಾದ ಕವಿಗಳ ಪದ್ಯಗಳು ಉದಾಹರಿಸಲ್ಪಟ್ಟಿರುವವೇ ಹೊರತು ೧೦೪೨ಕ್ಕಿಂತ ಈಚೆಗೆ ಜೀವಿಸಿದ್ದ ಕೀರ್ತಿ

೨೦ ಕರ್ಣಾಟಕ ಸಾಹಿತ್ಯಪರಿಷತ್ಪತ್ರಿಕೆ; ಸಂಪುಟ-೨೧, ಸಂಚಿಕೆ-೨, ಪುಟ : ೧೫೧.

೨೧ ಕೆಲವು ಕನ್ನಡಕವಿಗಳ ಜೀವನಕಾಲ ವಿಚಾರ. ಪುಟ : ೧೭೬.

ವರ್ಮ, ಬ್ರಹ್ಮಶಿವ, ಧರ್ಮಾಮೃತಕಾರನಾದ ನಯಸೇನ ಮೊದಲಾದವರ ಪದ್ಯಗಳಲ್ಲೊಂದೂ ಈ ಗ್ರಂಥದಲ್ಲಿ ಉದಾಹರಿಸಲ್ಪಟ್ಟಿಲ್ಲ. ಈ ಗ್ರಂಥಕರ್ತೃವಿಗೆ ಸಮಕಾಲೀನನಾಗಿದ್ದ ದುರ್ಗಸಿಂಹನ ಪಂಚತಂತ್ರದಿಂದಲೂ ಕೂಡ ವಸ್ತುತಃ ಯಾವ ಪದ್ಯವೂ ಇಲ್ಲಿ ಉದಾಹೃತವಾಗಿಲ್ಲ. ಈ ಕಾರಣಗಳಿಂದ ಕಾವ್ಯಾವಲೋಕನವು ಕ್ರಿ.ಶ. ಸುಮಾರು ೧೦೫೦ಕ್ಕಿಂತ ಹಿಂದೆ ರಚಿತವಾಯಿತೆಂದು ನಾವು ಊಹಿಸಬಹುದು."[೨೨]

ಮೇಲಿನ ಭಿನ್ನಾಭಿಪ್ರಾಯಗಳಲ್ಲಿ ಯಾವುದು ಸರಿಯೆಂಬುದನ್ನು ದೃಢಪಡಿಸುವುದು ಸುಲಭವಾಗಿಲ್ಲ. ಆದರೆ ಜನ್ನನು ಜಿನಪುರಾಣ ಕರ್ತೃಗಳಾದ ಗುಣವರ್ಮ, ಪಂಪ, ಪೊನ್ನ, ರನ್ನ, ನಾಗಚಂದ್ರ, ಅಗ್ಗಳ, ನೇಮಿ ಇವರ ಜೊತೆಗೆ ನಾಗವರ್ಮನನ್ನೂ ಸೇರಿಸಿ ಹೇಳಿದ್ದಾನಷ್ಟೆ. ಈ ನಾಗವರ್ಮನಿಂದ ರಚಿತವಾದ ವರ್ಧಮಾನಪುರಾಣವು ಇತ್ತೀಚೆಗೆ ಪ್ರಕಟವಾಗಿದ್ದು ಅದರಲ್ಲಿ ಬರುವ ಪದ್ಯದಿಂದ ಅದು ಶಾಲಿವಾಹನ ಶಕ ೯೬೪ ಚಿತ್ರಭಾನು ಸಂವತ್ಸರ ಅಶ್ವಯುಜ ಬಹುಳ ಷಷ್ಠೀ ಗುರುವಾರ ಅಭಿಜಿಲ್ಲಗ್ನದಲ್ಲಿ ಪೂರ್ಣವಾಯಿತಾಗಿ ಹೇಳಲಾಗಿದೆ (ಕ್ರಿ. ಶ. ೧೦೪೨ ಅಕ್ಟೋಬರ ೭). 'ಕಾವ್ಯಾವಲೋಕನಾದಿ ಗ್ರಂಥಗಳ ಜೊತೆಗೆ ಜೈನಪುರಾಣವನ್ನು ರಚಿಸಿದ ನಾಗವರ್ಮನು ೧೦೩೦-೧೦೫೦ರ ಅವಧಿಯಲ್ಲಿ ತನ್ನ ಗ್ರಂಥಗಳನ್ನು ರಚಿಸಿದನು' ಎಂಬ ಶ್ರೀ ಎ. ವೆಂಕಟಸುಬ್ಬಯ್ಯನವರ ಹೇಳಿಕೆಗೆ ಇದು ಹೊಂದಿಕೆಯಾಗುತ್ತದೆ ಇದೇ ಈ ನಾಗವರ್ಮನ ಕಾಲವೆಂಬುದು ಸ್ಪಷ್ಟವಿದೆ. ವರ್ಧಮಾನಪುರಾಣವು ರಚಿತವಾದ ಕಾಲವನ್ನು ತಿಳಿಸುವ ಪದ್ಯವಿದು :

ವಸುವರ್ಗಾಂಕಮಿದ [ವ್ಯ] ತೀತ [ಶ] ಕಭೂಭೃದ್ವತ್ಸರಂ ಚಿತ್ರಭಾ ।
ನುಸಮಾಖ್ಯಾಬ್ದಕಮಾಶ್ವಯುಗ್ಬಹುಳ ಷಷ್ಠೀವಾಸರಂ ತಾ ಪುನ ॥
ರ್ವಸು ರುಷಂ ಸುರಮಂತ್ರಿವಾರಮಭಿಜಿಲ್ಲಗ್ನೋದಯಂ ಕೂಡೆ ವ ।
ರ್ತಿಸೆ ಪೇಳ್ದಂ ಕವಿತಾಗುಣೋದಯನಿದಂ ಚೆಲ್ವಾಗೆ ತಾತ್ಪರ್ಯದಿಂ ॥[೨೩]

೪ ಛಂದೋಂಬುಧಿಯ ನಾಗವರ್ಮ :

ಕಾವ್ಯಾವಲೋಕನವನ್ನು ರಚಿಸಿದ ನಾಗವರ್ಮನು 'ಛಂದೋವಿಚಿತಿ' ಎಂಬ ಗ್ರಂಥವನ್ನು ತಾನು ರಚಿಸಿರುವುದಾಗಿ ಅದೇ ಗ್ರಂಥದಲ್ಲಿ ಹೇಳಿಕೊಂಡಿರುವ ವಿಷಯ ಮೇಲೆ ಬಂದಿದೆಯಷ್ಟೆ. 'ಛಂದೋವಿಚಿತಿ' ಎಂಬ ಗ್ರಂಥ ಈ ವರೆಗೆ ಉಪಲಬ್ಧವಾಗಿರುವುದಿಲ್ಲ. ಈಗ ಛಂದೋಂಬುಧಿಯೆಂದು ಪ್ರಸಿದ್ಧವಾಗಿರುವ ಗ್ರಂಥವೇ

---

೨೨ ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ ಪುಟ : ೧೬೬–೧೬೭.

೨೩ ಕನ್ನಡ ಸಾಹಿತ್ಯಪರಿಷತ್ಪತ್ರಿಕೆ; ಸಂಪುಟ-೬೦, ಸಂಚಿಕೆ-೨, ಡಿಸೆಂಬರ್ ೧೯೭೫. ಎರಡನೆಯ ನಾಗವರ್ಮನ ಕಾಲವಿಚಾರ ಎಂ. ವಿ. ಸೀತಾರಾಮಯ್ಯ; ವರ್ಧಮಾನ ಪುರಾಣ. ೧೬–೪೭; ಪುಟ : ೨೭೯.

ಕಾವ್ಯಾವಲೋಕನದ ನಾಗವರ್ಮನ ಛಂದೋವಿಚಿತಿ ಎಂಬುದು ಶ್ರೀ ಎ. ವೆಂಕಟ ಸುಬ್ಬಯ್ಯನವರ ಅಭಿಪ್ರಾಯವಾಗಿದೆ[೨೪]. ಶ್ರೀ ಆರ್. ನರಸಿಂಹಾಚಾರ್ಯರು ಇದನ್ನು ಒಪ್ಪುವುದಿಲ್ಲ. ಛಂದೋಂಬುಧಿಯನ್ನು ಬರೆದ ನಾಗವರ್ಮನೂ ಕಾವ್ಯಾವಲೋಕ ನಾದಿಗಳನ್ನು ಬರೆದ ನಾಗವರ್ಮನೂ ಭಿನ್ನರೆಂಬ ಅವರ ಹೇಳಿಕೆಯನ್ನು ಈ ಮೊದಲು ಕೊಡಲಾಗಿದೆ. ಅದಕ್ಕಾಗಿ ಅವರು ಕೊಡುವ ಕಾರಣಗಳಿವು :

i. "ಛಂದೋಂಬುಧಿಯನ್ನು ಬರೆದ ನಾಗವರ್ಮನು ತನ್ನ ತಂದೆ ವೆಣ್ಣಮಯ್ಯ ನೆಂದು ಹೇಳಿಕೊಂಡಿದ್ದಾನೆ. ಎರಡನೆಯ ನಾಗವರ್ಮನು ಕಾವ್ಯಾವಲೋಕನದ ಕೊನೆ ಯಲ್ಲಿ 'ಪೇಟ್ದಂ ದಾಮೋದರ ತನಯನೀ ವಚೋಲಂಕೃತಿಯಂ' ಎಂದು ಹೇಳಿಕೊಂಡಿ ದ್ದಾನೆ. ii. ಮೊದಲನೆಯ (ಛಂದೋಂಬುಧಿಯ) ನಾಗವರ್ಮನಿಗೆ ನಾಕಿ, ಸಯ್ಯಡಿ ಯಾತಂ ಎಂಬ ಹೆಸರುಗಳು ಇದ್ದಂತೆ ತಿಳಿಯುತ್ತದೆ. ಕಾವ್ಯಾವಲೋಕನಾದಿ ಗ್ರಂಥ ಗಳಲ್ಲಿ ಈ ಹೆಸರು ಸಿಕ್ಕುವುದಿಲ್ಲ. iii. ಮೊದಲನೆಯವನಿಗೆ 'ಕವಿರಾಜಹಂಸ' ಎಂಬ ಬಿರುದುಂಟು; ಎರಡನೆಯವನಿಗೆ 'ಕವಿತಾಗುಣೋದಯ' ಎಂಬ ಬಿರುದಿದೆ. iv. ಮೊದಲನೆಯವನು ಛಂದೋಂಬುಧಿಯ ಆದಿಭಾಗದ ಸ್ತೋತ್ರದಿಂದಲೂ ಅಧಿಕಾರಗಳ ಆದಿಪದ್ಯಗಳಿಂದಲೂ ಕೆಲವು ಓಲೆಯ ಪುಸ್ತಕಗಳ ಪ್ರಕಾರ ಅಧಿಕಾರಾಂತ್ಯದ ಗದ್ಯಗಳಿಂದಲೂ ಜೈನನೋ ಅಲ್ಲವೋ ಎಂಬ ಸಂದೇಹ ಉಂಟು ಮಾಡುತ್ತಾನೆ. ಎರಡನೆಯವನು ಜೈನನೆಂಬುದರಲ್ಲಿ ಸಂದೇಹವೇ ಇಲ್ಲ"[೨೫].

ಶ್ರೀ ಆರ್. ನರಸಿಂಹಾಚಾರ್ಯರು ಹೇಳುವ ಮೇಲಿನ ಮಾತುಗಳಲ್ಲಿ ಹುರುಳಿಲ್ಲ ವೆಂಬುದನ್ನು ಸಿದ್ಧಪಡಿಸಲು ಶ್ರೀ ಎ. ವೆಂಕಟಸುಬ್ಬಯ್ಯನವರು ಕೊಡುವ ಕಾರಣ ಗಳಿವು :

i. "ಛಂದೋಂಬುಧಿಯಲ್ಲಿ ನಾಗವರ್ಮನು ತಾನು ವೆಣ್ಣಮಯ್ಯನ ಜ್ಯೇಷ್ಠ ಪುತ್ರನೂ ದಾಮಮಯ್ಯನ ಪೌತ್ರನೂ ಎಂದು ಹೇಳಿಕೊಂಡಿರುವನಷ್ಟೆ. ಅದನ್ನೇ ಕಾವ್ಯಾವಲೋಕನದಲ್ಲಿ 'ದಾಮೋದರ ತನಯ' ಎಂದು ಹೇಳಿಕೊಂಡಿದ್ದಾನೆ. ಇಲ್ಲಿ ತನಯ ಎಂಬುದು ಮೊಮ್ಮಗ ಎಂಬರ್ಥದಲ್ಲಿ ಬಳಸಲ್ಪಟ್ಟಿದೆ. ii. ಛಂದೋಂಬುಧಿ ಯಲ್ಲಿ 'ಕವಿರಾಜಹಂಸಂ' ಎಂಬ ಬಿರುದನ್ನು ನಾಗವರ್ಮನು ತನಗೆ ಹೇಳಿಕೊಂಡ ಮಾತ್ರಕ್ಕೇ ಅವನು ಬರೆದ ಇತರ ಗ್ರಂಥಗಳಲ್ಲಿಯೂ ಈ ಬಿರುದನ್ನು ಹೇಳಿಕೊಳ್ಳ ಬೇಕೆಂದೂ ಬೇರೆ ಬಿರುದುಗಳನ್ನು ಹೇಳಿಕೊಳ್ಳಕೂಡದೆಂದೂ ನಿಯಮವೇನೂ ಇಲ್ಲ. (ಅಂತೆಯೆ) 'ಸಯ್ಯಡಿಯಾತ', 'ನಾಕಿ' ಎಂಬ ಪದಗಳನ್ನು ಕೂಡ ಹೀಗೆಯೇ ಅವನು ತನ್ನ ಇತರ ಗ್ರಂಥಗಳಲ್ಲಿಯೂ ಉಪಯೋಗಿಸಬೇಕೆಂಬ ನಿಯಮವಿಲ್ಲ. ಈಗಿನ ಕಾಲ

೨೪ ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ. ಪುಟ : ೧೬೩–೧೬೪.

೨೫ ಕರ್ನಾಟಕ ಕವಿಚರಿತೆ I, ಪುಟ : ೪೫೩-೫೪.

ದಲ್ಲಿ ಇರುವಂತೆ ವೈದಿಕಮಾರ್ಗಾನುಯಾಯಿಗಳು, ಜೈನರು ಮತ್ತು ಬೌದ್ಧರೆಂಬ ಪ್ರಭೇದಗಳು ಕ್ರಿ.ಶ. ೧೦–೧೩ನೆಯ ಶತಮಾನಗಳಲ್ಲಿ ಇರಲಿಲ್ಲ"[೨೬].

ಇಲ್ಲಿ ಛಂದೋಂಬುಧಿ ಗ್ರಂಥದ ಬಗೆಗೆ ಕೆಲವು ಮಾತುಗಳನ್ನು ಹೇಳುವುದು ಅವಶ್ಯವಿದೆ. ಈಗ ಉಪಲಬ್ಧವಿದ್ದ ಛಂದೋಂಬುಧಿಯ ಹಸ್ತಪ್ರತಿಗಳು ಸಗಡುಬಗಡು ಗಂಟಿನಂತಿವೆ. ಅವುಗಳಲ್ಲಿ ಒಂದು ಪ್ರತಿಗೂ ಇನ್ನೊಂದು ಪ್ರತಿಗೂ ಮೇಳ ಇರುವುದಿಲ್ಲ. ಅವುಗಳಲ್ಲಿ ೧೦ನೆಯ ಶತಮಾನದಿಂದ ೧೬-೧೭ನೆಯ ಶತಮಾನದ ವರೆಗೆ ರಚಿತವಾದ ಗ್ರಂಥಗಳೊಳಗಿನ ಪದ್ಯಗಳು ನುಸುಳಿಕೊಂಡಿವೆ. ಕನ್ನಡದಲ್ಲಿ ಈಗಾಗಲೇ ನಾಲ್ವರಿಂದ ಪ್ರಸಿದ್ಧಿಗೊಂಡ ಛಂದೋಂಬುಧಿಗಳಲ್ಲಿ ಭಿನ್ನಭಿನ್ನ ಪದ್ಯಗಳು ಪ್ರಕ್ಷಿಪ್ತಗಳೆಂದು ಗಣಿಸಲ್ಪಟ್ಟಿವೆ. ಈ ಪರಿಸ್ಥಿತಿಗೆ ಈ ಮುಂಚೆ ಅದೆಷ್ಟೋ ಕಾಲದಿಂದ ಛಂದೋಂಬುಧಿಯು ಕನ್ನಡ ಅಭ್ಯಾಸಿಗಳ ಪಠ್ಯಪುಸ್ತಕವಾಗಿ ಸಾಗಿಬಂದುದೇ ಕಾರಣ. ಹಿಂದಿನಕಾಲದ ಕನ್ನಡ ಅಭ್ಯಾಸಿಗಳು ಛಂದೋಂಬುಧಿಯನ್ನು ಪ್ರತಿಮಾಡಿಕೊಳ್ಳು ವಾಗ ತಮಗೆ ಆವಶ್ಯಕವೆನಿಸಿದ ಕೆಲವು ಹೊಸಹೊಸ ಪದ್ಯಗಳನ್ನು ಮೂಲಛಂದೋಂ ಬುಧಿಗೆ ಸೇರಿಸಿಕೊಂಡರು, ಅನಾವಶ್ಯಕವೆನಿಸುವುಗಳನ್ನು ಬಿಟ್ಟುಕೊಟ್ಟರು. ಹೀಗಾಗಿ ಒಬ್ಬೊಬ್ಬರು ಸಿದ್ಧಪಡಿಸಿಕೊಂಡ ಪ್ರತಿಗಳು ಒಂದೊಂದು ತೆರನಾದುವು. ಶ್ರೀ ಮರಿಯಪ್ಪ ಭಟ್ಟರು 'ಕನ್ನಡ ಛಂದೋಗ್ರಂಥಗಳು' ಎಂಬ ಲೇಖನದಲ್ಲಿ ೨ನೆಯ ನಾಗವರ್ಮನ ಛಂದೋವಿಚಿತಿಯ ಬಗೆಗೆ ಹೀಗೆ ಹೇಳಿದ್ದಾರೆ :

"ಸುಮಾರು ಕ್ರಿ. ಶ. ೧೧೪೫ರಲ್ಲಿದ್ದ ಎರಡನೆಯ ನಾಗವರ್ಮನು 'ಛಂದೋ ವಿಚಿತಿ' ಎಂಬ ಛಂದೋಗ್ರಂಥವೊಂದನ್ನು ಬರೆದಿರುವಂತೆ ತನ್ನಿಂದ ರಚಿತವಾದ ಕಾವ್ಯಾ ವಲೋಕನದ ಕೊನೆಯಲ್ಲಿ ಹೇಳುತ್ತಾನೆ. ಈ ಗ್ರಂಥ ಬೇರಾಗಿ ಈ ವರೆಗೆ ದೊರೆತಿಲ್ಲ. ಈತನು ಜೈನಮತೀಯನಾದುದರಿಂದ ಈ ಛಂದೋವಿಚಿತಿಯ ಆಶ್ವಾಸಾಂತ್ಯಗಳಲ್ಲಿರ ಬೇಕಾದ ಗದ್ಯ ಜೈನಸಂಪ್ರದಾಯವನ್ನು ಅನುಸರಿಸಿರಬೇಕು. ಈ ಗ್ರಂಥಕರ್ತನ ಹೆಸರು ನಾಗವರ್ಮನೇ ಇರುವುದರಿಂದ ಪ್ರಾಯಶಃ ಮುಂದಿನವರ ಭ್ರಮೆಯಿಂದ ಈ ಗ್ರಂಥಭಾಗವೂ ಈಗ ಮುದ್ರಿತವಾಗಿರುವ ಛಂದೋಂಬುಧಿಯಲ್ಲಿ ಐಕ್ಯವಾಗಿರ ಬಹುದು. (ಛಂದೋಂಬುಧಿಯ ಆಶ್ವಾಸಾಂತ್ಯ ಗದ್ಯವಾಗಿ ದೊರೆಯುವ) 'ಶ್ರೀಮದ್ಭಗವ ದರ್ಹತ್ಪರಮೇಶ್ವರ...' ಎಂಬುದು ೨ನೆಯ ನಾಗವರ್ಮ ವಿರಚಿತ ಛಂದೋವಿಚಿತಿಯ ಆಶ್ವಾಸಾಂತ್ಯಗದ್ಯವಾಗಿಯಾದರೂ ಇರಬಹುದು. ಹೀಗೆ ಒಟ್ಟಿನಲ್ಲಿ ಗುಣಗಾಂಕೀಯ, ಛಂದೋಂಬುಧಿ, ಛಂದೋವಿಚಿತಿ ಇವುಗಳ ತ್ರಿವೇಣಿಯೇ ಈಗ ಮುದ್ರಿತವಾಗಿರುವ ಛಂದೋಂಬುಧಿಯಾಗಿರಬಹುದೆಂಬ ಊಹೆಯಲ್ಲಿ ಯಾವ ವಿರೋಧವೂ ಇರ ಲಾರದು"[೨೭].

---

೨೬ ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ. ಪುಟ : ೧೬೩–೧೬೬.

೨೭ ಕನ್ನಡ ಸಂಸ್ಕೃತ ಮತ್ತು ಇತರ ಲೇಖನಗಳು (೧೯೬೭).

ಛಂದೋಂಬುಧಿಯ ಹಸ್ತಪ್ರತಿಗಳಲ್ಲಿ ಕವಿರಾಜಮಾರ್ಗ, ಕವಿಜಿಹ್ವಾಬಂಧನ, ರಾಜಶೇಖರವಿಳಾಸ ಮೊದಲಾದ ಗ್ರಂಥಗಳಲ್ಲಿಯ ಪದ್ಯಗಳೂ ಕಂಡುಬರುತ್ತವೆ. ಇದೆಲ್ಲವೂ ಛಂದೋಂಬುಧಿಯು ಯಾವ ರೀತಿಯಲ್ಲಿ ವಿದ್ರೂಪಗೊಳ್ಳುತ್ತಬಂದಿದೆ ಯೆಂಬುದನ್ನು ತೋರಿಸಿಕೊಡುತ್ತದೆ.

ಛಂದೋಂಬುಧಿಯಲ್ಲಿ ನಾಗವರ್ಮನ ವಂಶ, ಕುಲ–ಗೋತ್ರ, ಪೋಷಕ ಇವೆಲ್ಲ ಸಂಗತಿಗಳನ್ನು ವಿವರಿಸುವ ಪದ್ಯಗಳು ಬರುತ್ತವೆ. ರೆ. ಕಿಟೆಲ್, ಶ್ರೀ ರಾಮಾನುಜ ಅಯ್ಯಂಗಾರ್, ವಿದ್ವಾನ್ ಎಚ್. ಶೇಷ ಅಯ್ಯಂಗಾರ್ ಇವರ ಸಂಪಾದನೆಯ ಪ್ರತಿ ಗಳಲ್ಲಿ ಅವು ಮೂಲದಲ್ಲಿಯೇ ಸೇರ್ಪಡೆಯಾಗಿವೆ. ಪ್ರಕ್ಷಿಪ್ತವಾಗಿ ಎಣಿಸಲ್ಪಟ್ಟಿಲ್ಲ. ಈ ಪದ್ಯಗಳನ್ನು ವಿದ್ವಾನ್ ಎಚ್. ಶೇಷ ಅಯ್ಯಂಗಾರರು ಗದ್ಯದಲ್ಲಿ ಸಂಗ್ರಹಿಸಿ ಹೀಗೆ ಕೊಟ್ಟಿದ್ದಾರೆ :

“ಈತನು ತನ್ನನ್ನು ಈ ಗ್ರಂಥದಲ್ಲಿ ಸಯ್ಯಡಿಯಾತ, ತೆಂಕನಾಡಾತ ಎಂದೂ ಹೇಳಿಕೊಂಡಿರುವನು. 'ಫಣಿವರ್ಮ' ಎಂಬ ವ್ಯವಹಾರವೂ ಇದ್ದಂತೆ ತಿಳಿಯಬರು ವುದು. ಇವನು ವೆಂಗಿ ವಿಷಯದ ಸಪ್ತಗ್ರಾಮಕ್ಕೆ ಸೇರಿದ ವೆಂಗಿಪಟು ಎಂಬ ಅಗ್ರಹಾರದವನು. ಪ್ರಾಯಶಃ ಇವನು ವಾಸಮಾಡುವ ಅಗ್ರಹಾರಕ್ಕೆ ಅಥವಾ ಅಗ್ರಹಾರದ ಭಾಗಕ್ಕೆ ಸಯ್ಯಡಿಯೆಂಬ ಹೆಸರೂ ಇದ್ದಂತೆ ತಿಳಿಯಬರುವುದು. ಈತನು ತನ್ನ ಗ್ರಂಥದಲ್ಲಿ 'ಸಯ್ಯಡಿಯ ಪಿನಾಕಿ ಕೂರ್ತು ನಮಗೀಗೆ ಮಂಗಳಂ' ಎಂದು ಹೇಳಿಕೊಂಡಿರುವುದರಿಂದ ಸಯ್ಯಡಿಯ ಮಹೇಶ್ವರನೇ ಈತನ ಕುಲದೈವವೆಂದೂ ತಿಳಿದುಬರುವುದು. ಇವನು ಕೌಂಡಿನ್ಯಗೋತ್ರದ ವೇದವೇದಾಂಗಗಳಲ್ಲಿ ಪಾರಂಗತ ನಾಗಿದ್ದ ವೆಣ್ಣಮಯ್ಯ– ಕೌಂಡಿಕಬ್ಬೆಯರ ಮರಿಮಗನು, ದಾಮಮಯ್ಯ-ಕುಂದಕಬ್ಬೆ ಯರ ಮೊಮ್ಮಗನು, ವೆಣ್ಣಮಯ್ಯ ಪೋಳಕಬ್ಬೆಯರ ಮಗನು. ಈ ವೆಣ್ಣಮಯ್ಯನು ಲೌಕಿಕವೈದಿಕಶಾಸ್ತ್ರವಿವೇಕ ಕಲಾಭಿಜ್ಞನಾಗಿದ್ದನು. ಇವನ ಮಗನಾದ ನಾಗವರ್ಮನೂ ಕೂಡ ತನ್ನನ್ನು ಯುದ್ಧದಲ್ಲಿ ಅದ್ವಿತೀಯವೀರನು, ಶಾಸ್ತ್ರಗಳಲ್ಲಿ ನಿಪುಣನು, ವಿಶೇಷ ಸಿರಿವಂತನು, ಶೌಚ - ಸತ್ಯ - ಔದಾರ್ಯ ಗುಣಗಳಿಗೆ ಆಧಾರನು. ಸಾಹಿತ್ಯದಲ್ಲಿ ಅಸಮಾನನು, ಸಚ್ಚಾರಿತ್ರನು, ಸತ್ಕೀರ್ತಿಶಾಲಿಯೂ, ಕವಿತ್ವದಲ್ಲಿ ಕಾಳಿದಾಸನನ್ನೂ ಔದಾರ್ಯದಲ್ಲಿ ವಿಕ್ರಮಾದಿತ್ಯನನ್ನೂ ಮೀರಿಸುವವನು, ಅತಿಶಯ ವಾಕ್‌ಸಂಪನ್ನನು, ಶತಪತ್ರೋದ್ಭವ ಮಹಾವಂಶೋತ್ಪನ್ನನು, ಚತುರವಿಪ್ರಕುಲಲಲಾಮನು, ಬ್ರಹ್ಮ, ಬೃಹಸ್ಪತಿ ಇವರಿಗೆ ಸಮಾನನು, ಅಪ್ರತಿಮನು ಎಂದು ತನ್ನ ಗ್ರಂಥದಲ್ಲಿ ಹೇಳಿ ಕೊಂಡಿರುವನು. ನಾಗವರ್ಮನಿಗೆ ಅರಸನು ರಕ್ಕಸಗಂಗ. ಅಜಿತಸೇನ ಪಂಡಿತ ದೇವರು ಗುರುಗಳು. ಪೊರೆದವನು ಗಂಡರಮೂಗುತಿಯೂ ಮಂಡಳಿಪರ ಸಂಧಿ ವಿಗ್ರಹಿಯೂ ಮಂತ್ರಿಯೂ ಆದ ರಾಯನು”[೨೮]

---

೨೮ ಛಂದೋಂಬುಧಿ–ಮುನ್ನುಡಿ, ಪುಟ : ೧೪.

ಶ್ರೀಗಳಾದ ಆರ್. ನರಸಿಂಹಾಚಾರ್ಯರಾಗಲಿ, ಗೋವಿಂದ ಪೈಗಳಾಗಲಿ, ಎ. ವೆಂಕಟಸುಬ್ಬಯ್ಯನವರಾಗಲಿ ಇಲ್ಲಿಯ 'ಅರಸಂ ರಕ್ಕಸಗಂಗಂ' ಎಂಬ ಪದ್ಯದ ಆಧಾರದಿಂದಲೇ ಛಂದೋಂಬುಧಿಯ ನಾಗವರ್ಮನ ಕಾಲವನ್ನು ನಿಶ್ಚಿತಪಡಿಸಿದ್ದಾರೆ. ಆದರೆ ಶ್ರೀ ಎಲ್. ಬಸವರಾಜು ಅವರು ಕವಿಯ ವಂಶಾವಳಿ ಮೊದಲಾದವನ್ನು ಹೇಳುವ ಈ ಪದ್ಯಗಳೆಲ್ಲವು ಪ್ರಕ್ಷಿಪ್ತವಾದುವುಗಳೆಂದು ಹೇಳುತ್ತಾರೆ. ಅವರು "ಛಂದೋಂಬುಧಿಯುವನು ಹತ್ತನೆಯ ಶತಮಾನದ ರಕ್ಕಸಗಂಗನ ಕಾಲದವನು. ರಾಚಮಲ್ಲನ ಸೇನಾನಿ ಚಾವುಂಡರಾಯನ ಪೋಷಣೆಯಲ್ಲಿದ್ದವನು. ಇವರಿಬ್ಬರು ಜೈನಗುರುವಾದ ಅಜಿತಸೇನದೇವನ ಶಿಷ್ಯರಾಗಿದ್ದವರು ಮುಂತಾದ ಮಾತುಗಳೆಲ್ಲ ಛಂದೋವಿಚಿತಿಯೆಂಬ ಛಂದೋಗ್ರಂಥ (ಜೊತೆಗೆ ಕಾವ್ಯಾವಲೋಕನ ಮುಂತಾದ)ವನ್ನು ಬರೆದ ನಾಗವರ್ಮನೇ ಛಂದೋಂಬುಧಿಯನ್ನೂ ಬರೆದ ನಾಗವರ್ಮನಾಗಿರಬೇಕೆಂಬ ಅಥವಾ ಆಗಬೇಕೆಂಬ ಊಹೆ ಉದ್ದೇಶಗಳಿಂದ ಆಸ್ತಕರೂ ಅಶಕ್ತರೂ ಛಂದೋಂಬುಧಿಯ ಪ್ರತಿಗಳೊಳಕ್ಕೆ ಪ್ರಕ್ಷೇಪಿಸಿದ ಭಾಗಗಳ ಪಡಿನುಡಿಗಳು"[೨೯] ಎಂದು ಅರ್ಥವಿಸುತ್ತಾರೆ.

ಛಂದೋಂಬುಧಿಯ ನಾಗವರ್ಮನೂ ಛಂದೋವಿಚಿತಿಯ ನಾಗವರ್ಮನೂ ಒಬ್ಬನೇ ಎಂದು ಹೇಳಿದವರು ೨೦ನೆಯ ಶತಮಾನದ ಶ್ರೀ. ಎ. ವೆಂಕಟಸುಬ್ಬಯ್ಯನವರು. ಅವರು ಹಾಗೆ ಹೇಳಹೊರಟುದು ಛಂದೋಂಬುಧಿಯಲ್ಲಿ ನುಸುಳಿಕೊಂಡ ಜೈನಪರ ಪದ್ಯಗಳನ್ನು ಶಾಸನಸಾಹಿತ್ಯದ ಒರೆಗೆ ಹಚ್ಚಿ. ಹೀಗಿರಲು ಕೆಲವರು ಹಿಂದಿನ ಇತಿಹಾಸಕ್ಕೆ ಹೊಂದಿಕೊಳ್ಳುವಂತಹ ಆ ಪದ್ಯಗಳನ್ನು ರಚಿಸಿ ಛಂದೋಂಬುಧಿಯಲ್ಲಿ ದಬ್ಬಿದರೆಂದು ಹೇಗೆ ಹೇಳುವುದು ? ಶ್ರೀ. ಬಸವರಾಜು ಅವರ ಅಭಿಪ್ರಾಯದಲ್ಲಿ ಛಂದೋಂಬುಧಿಯು ರಚಿತವಾದ ಕಾಲದ ಪೂರ್ವಮಿತಿ ಕ್ರಿ. ಶ. ೧೨ನೆಯ ಶತಮಾನದ ತುದಿ. ಕಾವ್ಯಾವಲೋಕನಾದಿಗಳು ರಚಿತವಾಗಿ ಆಗಲೇ ೧೫೦–೨೦೦ ವರುಷಗಳು ಸಂದಿದ್ದುವು. ಆ ಹಿಂದಿನ ಕಾಲಕ್ಕೆ ಅನುಸರಿಸಿ ಪದ್ಯಗಳನ್ನು ರಚಿಸಿ ಅದರಲ್ಲಿ ದಬ್ಬುವ ಕುಹಕ ಕುಯುಕ್ತಿಯನ್ನು ಮಾಡಿದವರು ಕನಿಷ್ಠ ಇಲ್ಲಿಂದ ೫೦–೧೦೦ ವರ್ಷ ಈಚಿನವರಾಗಬೇಕು. ಅವರಿಗೆ ಆ ಹಿಂದಿನ ಇತಿಹಾಸ ಗೊತ್ತಿದ್ದಿತೆಂದು ನಂಬಬೇಕೆ ? ಹೀಗಾಗುವುದು ಅಸಂಭವವೆಂದು ಹೇಳುವುದೇ ಬೇಡ. ಅಂತೆಯೇ ೧೩–೧೪ನೆಯ ಶತಮಾನದ ವೆಂಗಿಪಟುನಾಡವರಿಗೆ ಕನ್ನಡದ ಛಂದೋಂಬುಧಿಕಾರನನ್ನು ತಮ್ಮವನನ್ನಾಗಿ ಮಾಡಿಕೊಳ್ಳುವಂತಹ ಪ್ರಾಂತೀಯ ಕಾಮಾಲೆಯಾಗಿತ್ತೆ ? ಅವರಿಗೆ ಆ ಕಾಲದಲ್ಲಿ ಕನ್ನಡಸಾಹಿತ್ಯದಲ್ಲಿ ಇಷ್ಟು ಅಭಿಮಾನವಿರುವುದು ಸಾಧ್ಯವೇ? ಇವೆಲ್ಲ ಒಂದಕ್ಕೊಂದು ಹೊಂದಿಕೆಯಾಗದ ಮಾತುಗಳೆಂಬುದು ಸ್ಪಷ್ಟವಿದೆ. ಕವಿಯು ವಂಶಾವಳಿ ಹೇಳುವ

---

೨೯ ಛಂದಸ್ಸಂಪುಟ– ಪೀಠಿಕೆ, ಪು : ೫೨.

ಪದ್ಯಗಳು ಛಂದೋಂಬುಧಿಯ ನಾಗವರ್ಮನವೂ 'ಅರಸಂ ರಕ್ಕಸಗಂಗಂ' ಎಂಬಿವು ಛಂದೋವಿಚಿತಿಯ ನಾಗವರ್ಮನವೂ ಆಗಿರಬಹುದೆಂಬುದು ಒಂದು ಊಹೆ ಎಂದಿಟ್ಟು ಕೊಳ್ಳುವಲ್ಲಿ ತಪ್ಪೇನಿಲ್ಲ. ಮುಂದೆ ಬೆಂಬಲ ದೊರೆತರೆ ಅವು ಸಿಶ್ಚಿತವಾದ ಆಧಾರಗಳಾಗ ಬಹುದು. ಇಲ್ಲವಾದರೆ ಬಿದ್ದುಹೋಗಬಹುದು. ಕುಹಕ ಕುಯುಕ್ತಿಯುವೆಂದಾಗಲಿ ಪ್ರಾಂತೀಯ ಕಾಮಾಲೆಯುವೆಂದಾಗಲಿ ಹಗುರಾಗಿ ಎಣಿಸಬೇಕಾಗಿಲ್ಲ. ಹಾಗೆ ಎಣಿಸುವು ದಕ್ಕೆ ಬಲವತ್ತರ ಕಾರಣಗಳೂ ಇರುವುದಿಲ್ಲ.

ಛಂದೋನುಶಾಸನ, ಮಾನಸೋಲ್ಲಾಸ, ಸಂಗೀತರತ್ನಾಕರ ಮೊದಲಾದ ಗ್ರಂಥಗಳಲ್ಲಿ ಅಂಶ ಗಣಗಳಿಗೆ ರತಿ, ಮದನ, ಬಾಣ ಎಂಬೀ ಸಂಜ್ಞೆಗಳಿರುವಾಗ ಛಂದೋಂಬುಧಿಯಲ್ಲಿ ಮಾತ್ರ ಅವುಗಳಿಗೆ ಬ್ರಹ್ಮ, ವಿಷ್ಣು, ರುದ್ರ ಎಂಬ ಸಂಜ್ಞೆಗಳು ಇರುತ್ತವೆ. ಈ ಸಂಜ್ಞೆಗಳು ಬ್ರಾಹ್ಮಣನಾದ ಛಂದೋಂಬುಧಿಯ ನಾಗವರ್ಮ ನಿಂದಲೇ ಕೊಡಲ್ಪಟ್ಟಿರಬೇಕೆಂಬ ವಿಚಾರವನ್ನು ನಾನು ಈ ಮೊದಲು 'ಜಯಕೀರ್ತಿ ನಾಗವರ್ಮರು' ಎಂಬ ಲೇಖನದಲ್ಲಿ ಮುಂದಿರಿಸಿದ್ದೇನೆ.[೨೦] ಶ್ರೀ ಎಲ್. ಬಸವರಾಜು ಅವರು ''ಇವನು ಜೈನೇತರನೆಂಬುದಷ್ಟೇ ಅಲ್ಲ, 'ಗುರುವೆಂಬುದು ಕೇಳ್ ತ್ರಿಯಂಬಕಂ ಲಘುಮುರಾಂತಕಂ' ಎಂದು ಶಿವಪಾರಮ್ಯವನ್ನು ಒಪ್ಪಿಕೊಂಡಿರುವ ಒಬ್ಬ ತೀವ್ರ ಶೈವನೆಂಬುದೂ ಯಾವ ಕಾರಣದಿಂದಲೇ ಆಗಲಿ ಅಲ್ಲಗಳೆಯಲಾಗದ ಸತ್ಯಸಂಗತಿ''[೨೧] ಎಂದೆನ್ನುತ್ತಾರೆ.

ಶ್ರೀಗಳಾದ ಆರ್. ನರಸಿಂಹಾಚಾರ್ಯರಾಗಲಿ, ಎ. ವೆಂಕಟಸುಬ್ಬಯ್ಯನವರಾಗಲಿ, ಗೋವಿಂದ ಪೈಗಳಾಗಿರಲಿ ಛಂದೋಂಬುಧಿಯ ನಾಗವರ್ಮನ ಕಾಲವನ್ನು ನಿರ್ಧರಿಸು ವಾಗ ಛಂದೋಂಬುಧಿಯಲ್ಲಿ ಬರುವ 'ಅರಸಂ ರಕ್ಕಸಗಂಗಂ' ಮತ್ತು 'ಗಂಡರ ಮೂಕುತಿ ಎನಿಸಿದ' ಎಂಬ ಪದ್ಯಗಳಿಗೆ ಪ್ರಾಧಾನ್ಯಕೊಟ್ಟಿದ್ದಾರೆಂದು ಈ ಮೊದಲು ಹೇಳಿದೆಯಷ್ಟೆ. ಈ ಪದ್ಯಗಳು ಛಂದೋವಿಚಿತಿಗೆ ಅನ್ವಯಿಸುವುವೆಂದು ಕೆಲವರು ಹೇಳಿದರೆ ಇನ್ನು ಕೆಲವರು ಕುಹಕ ಕುಯುಕ್ತಿಯುವು ಎನ್ನುತ್ತಾರೆಂಬುದನ್ನು ಮೇಲೆ ಹೇಳಿಯೇ ಇದೆ. ಇವುಗಳನ್ನು ಬಿಟ್ಟು ಛಂದೋಂಬುಧಿಯ ನಾಗವರ್ಮನ ಕಾಲವನ್ನು ನಿರ್ಧರಿಸಲು ಸಾಧ್ಯವೇ ? ಎಂಬುದನ್ನೀಗ ವಿಚಾರ ಮಾಡಬೇಕಾಗಿದೆ. ಕಾವ್ಯಾವ ಲೋಕನದಲ್ಲಿ ಉದಾಹೃತವಾಗಿ ಮುಂದಣ ಪದ್ಯವೊಂದು ಬರುತ್ತದೆ.

---

೨೦ ಕರ್ನಾಟಕ ಭಾರತಿ– ಸಂಪುಟ ೪, ಸಂಚಿಕೆ ೧.

೨೧ ಕನ್ನಡ ಛಂದಸ್ಸಂಪುಟ– ಪೀಠಿಕೆ, ಪುಟ ; ೫೨.

ಪ್ರಣುತಗುಣರೆನಿಪ ವಿಬುಧಾ। ಗ್ರಣಿಗಳ್ ಕೆಯ್ಕೊಂಡು ಪೊಗಟ್ ಸಲೆ ನೆಗಟ್ದುವು ಧಾ।
ರಿಣಿಯೊಳಗೆ ನಾಗವರ್ಮನ। ಗುಣವರ್ಮನ ಶಂಖವರ್ಮನಧ್ವಾನಂಗಳ್ ॥

ಇದನ್ನುದ್ಧರಿಸಿ ಶ್ರೀ ಆರ್. ನರಸಿಂಹಾಚಾರ್ಯರು "ಇದರಿಂದ ಈ ಗ್ರಂಥಕರ್ತೃವಾದ ನಾಗವರ್ಮನಿಗೆ ಹಿಂದೆಯೇ ಬೇರೆ ಒಬ್ಬ ಲಕ್ಷಣಗ್ರಂಥಕಾರನಾದ ನಾಗವರ್ಮನು ಪ್ರಖ್ಯಾತನಾಗಿದ್ದಾನೆಂಬುದು ವ್ಯಕ್ತವಾಗುತ್ತದೆ" ಎಂದಿದ್ದಾರೆ. ಈ ನಾಗವರ್ಮನೇ ಛಂದೋಂಬುಧಿ, ಕಾದಂಬರಿಗಳನ್ನು ರಚಿಸಿದ ಮೊದಲನೆಯ ನಾಗವರ್ಮ ಎಂದು ಅವರಿಗೆ ಹೇಳಬೇಕಾಗಿದೆ. 'ಛಂದೋಂಬುಧಿಯು ರಚಿತವಾದ ಕಾಲದ ಪೂರ್ವಮಿತಿ ೧೨ನೆಯ ಶತಮಾನದ ತುದಿ' ಎಂದು ಹೇಳುವ ಶ್ರೀ. ಎಲ್. ಬಸವರಾಜು ಅವರು ತಾವು ಆ ರೀತಿ ಹೇಳುವುದಕ್ಕೆ ಮುಂದಣ ಕಾರಣಗಳನ್ನು ಕೊಡುತ್ತಾರೆ :

"ನಾಗವರ್ಮನು ಪಿಂಗಳ, ಜಯದೇವಾದಿಗಳನ್ನು ಅನುಸರಿಸುವುದಾಗಿ (ಛಂ. ೧-೬ ಮತ್ತು ೬-೧) ತಾನೇ ಹೇಳಿಕೊಂಡಿರುವನಾದರೂ ಪಿಂಗಳನೊಬ್ಬನನ್ನೇ ಲಕ್ಷಣದಲ್ಲಿ ಸಂದರ್ಭಿಸುವುದು. ಹೀಗಿರುವಲ್ಲಿ ಅವನು 'ಜಯದೇವಾದಿಗಳು' ಎಂಬಲ್ಲಿ ಮತ್ತೆ ಯಾರನ್ನು ಸಂಭಾವಿಸಿರುವನೋ ? ಜಯದೇವನಾದ ಮೇಲೆ ಸಂಸ್ಕೃತ ಛಂದಃಕ್ಷೇತ್ರದಲ್ಲಿ ಪ್ರಸಿದ್ಧರಾದವರೆಂದರೆ ಕಾಲಕ್ರಮದಲ್ಲಿ ಕೇದಾರಭಟ್ಟ, ಜಯಕೀರ್ತಿ, ಹೇಮಚಂದ್ರ. ಇಷ್ಟೂ ಜನರನ್ನು ನಾಗವರ್ಮನ 'ಆದಿ'ಪದಪ್ರಯೋಗ ಸೂಚಿಸುತ್ತಿರುವುದೆನಿಸುವುದು. ಪಿಂಗಳನೆಂಬವನು ಬಹಳ ಪ್ರಾಚೀನನು, ಕೇದಾರಭಟ್ಟ ಮುಂತಾದವರು ೧೦-೧೨ನೆಯ ಶತಮಾನದವರು. ಇವರನ್ನೆಲ್ಲ ಅನುಸರಿಸುವ ಛಂದೋಂಬುಧಿಯ ನಾಗವರ್ಮ ೧೨ನೆಯ ಶತಮಾನಕ್ಕಿಂತ ಹಿಂದಿನವನಲ್ಲ. (ಇವನು ಅನುಸರಿಸಿರುವ ಸಂಸ್ಕೃತ ಛಾಂದಸರಲ್ಲಿ ಒಬ್ಬನಾದ ಹೇಮಚಂದ್ರ ಸತ್ತದ್ದು ಸು. ಕ್ರಿ.ಶ. ೧೧೭೩ ಎಂದು ವೇಲಣಕರ್ ಅಭಿಪ್ರಾಯಪಡುವರು, ಜಯದಾಮನ್ ಪೀಠಿಕೆ. ಪುಟ : ೪೬.) ಆದ್ದರಿಂದ ಛಂದೋಂಬುಧಿ ರಚಿತವಾದ ಕಾಲದ ಪೂರ್ವಮಿತಿ ಕ್ರಿ. ಶ. ೧೨ನೆಯ ಶತಮಾನದ ತುದಿ. ಈ ಛಂದೋಂಬುಧಿಯ ಕರ್ತೃವಾದ ನಾಗವರ್ಮನ ಸಂಬಂಧವಾದ ಯಾರು-ಏನುಗಳನ್ನು ಆಮೇಲೆ ನೋಡೋಣ. ಈಗ ಅವನು ಜಯಕೀರ್ತಿ ಮುಂತಾದವರನ್ನು ಅನುಸರಿಸಿರುವನೆಂಬುದನ್ನು ಪುಷ್ಟೀಕರಿಸುವ ಅಂಶಗಳತ್ತ ಗಮನ ಹರಿಸುವಾ. ಮೊದಲನೆಯದಾಗಿ ಜಯಕೀರ್ತಿ, ಹೇಮಚಂದ್ರರು ಒಬ್ಬೊಬ್ಬರೇ ಅಥವಾ ಇಬ್ಬರೂ ಹೇಳಿರುವ ವೃತ್ತಗಳನ್ನು ನಾಗವರ್ಮನು ಯತಿ ಹೆಸರುಗಳ ದೃಷ್ಟಿಯಿಂದ ತದ್ವತ್ತಾಗಿ ಅಥವಾ ಯತಿಯನ್ನು ಬದಲಿಸಿ, ಹೆಸರನ್ನು ಯಥಾವತ್ತಾಗಿರಿಸಿ ಅನುಸರಿಸಿದ್ದಾನೆ. ಕೇದಾರಭಟ್ಟನನ್ನೂ ಅಷ್ಟೇ. ಅಂಥವುಗಳ ಪಟ್ಟಿ ಈ ಕೆಳಗಿದೆ :

ವೃತ್ತ ಮತ್ತು	ಅಕ್ಷರ ಸಂಖ್ಯೆ	ವೃತ್ತ ಪ್ರದರ್ಶಕ	ಯತಿ	ವೃತ್ತನಾಮ ಪ್ರವರ್ತಕ	ಯತಿ	ನಾಗವರ್ಮ	ಹೆಸರು	ಯತಿ
ದ್ರುತಪದ	೧೨	ಜಯಕೀರ್ತಿ	೪			೨–೬೮	ಅದೇ	೮
ವನಲತಿಕಾ	೨೬	ಜಯಕೀರ್ತಿ	೮/೮			೨–೧೨೪	ವನಲತೆ	೮/೮
ಲಲಿತಪದ	೧೨		ಇಲ್ಲ	ಜಯಕೀರ್ತಿ		೨–೬೯	ಅದೇ	೮
ವನಮಯೂರ	೧೪		ಇಲ್ಲ	ಜಯಕೀರ್ತಿ		೨–೮೦	ಅದೇ	೧೪
ಖಚರಪ್ಲುತ	೧೯	ಜಯಕೀರ್ತಿ (ಶಾರ್ಙ್ಗ) ಹೇಮಚಂದ್ರ (ಊರ್ಜಿತ)	೧೦			೨–೧೦೨	ಖಚರಪ್ಲುತ	೧೫
ಅಂಗರುಚಿ	೧೩	ಜಯಕೀರ್ತಿ, ಹೇಮಚಂದ್ರ	ಇಲ್ಲ			೨–೭೩	ಅದೇ	೯
ಅರವಿಂದ	೧೮	ಜಯಕೀರ್ತಿ (ಪಂಕಜಮುಕ್ತಾ) ಹೇಮಚಂದ್ರ (ಪಂಕಜವಕ್ತ್ರಾ)	೪/೯			೨–೯೮	ಅದೇ ಅರವಿಂದ	೯
ಅನವದ್ಯ	೨೦	ಜಯಕೀರ್ತಿ(ಮುದ್ರಾ,ಉಜ್ವಲ) ಹೇಮಚಂದ್ರ (ಮುದ್ರಾ)	೧೧			೨–೧೦೪	ಅನವದ್ಯ	೧೧
ಲಲಿತ	೨೪	ಜಯಕೀರ್ತಿ (ಲಲಿತಲತಾ) ಹೇಮಚಂದ್ರ (ಲಲಿತಲತಾ)	೭/೭			೨–೧೧೭	ಲಲಿತ	೭/೭
ಹಂಸಗತಿ	೨೩			ಜಯಕೀರ್ತಿ (ಹಂಸಗತಿ) ಮಹಾತರುಣೀದಯಿತಾ ಹೇಮಚಂದ್ರ (ಹಂಸಗತಿ)		೨–೧೧೪	ಹಂಸಗತಿ	೮/೮
ಲಲಿತಪದ	೧೬	ಜಯಕೀರ್ತಿ (ಕಮಲದಲ)	೫	(ಹೇಮಚಂದ್ರ ಲಲಿತ ಪದ)	ಇಲ್ಲ	೨–೮೮	ಲಲಿತಪದ	೧೦
ಕುಸುಮಾಂಘ್ರಿಪ	೧೪	ಹೇಮಚಂದ್ರ (ಸಿಂಹ)			ಇಲ್ಲ	೨–೭೯	ಕುಸುಮಾಂಘ್ರಿಪ	೯
ಸೈನಿಕ	೧೧		ಇಲ್ಲ	ಪ್ರಾಕೃತ ಪೈಂಗಲ (ಸೇನಿಕ)		೨–೫೮	ಸೈನಿಕ	೬
ಚಂದ್ರಿಕೆ*	೧೧	ಕೇದಾರಭಟ್ಟ	ಇಲ್ಲ			೨–೬೧	ಚಂದ್ರಿಕೆ	೮
ಭದ್ರಕ*	೨೨	ಕೇದಾರಭಟ್ಟ	೧೦/೧೨			೨–೧೧೧	ಭದ್ರಕ	೧೫

* ಈ ವೃತ್ತದ ಈ ಹೆಸರುಗಳು ವೃತ್ತರತ್ನಾಕರದ ಕೆಲವು ಪ್ರತಿಗಳಲ್ಲಿ ಮಾತ್ರ ಸಿಗುವ ಪಾಠಾಂತರಗಳು. ವೇಲಣಕರರ ಸ್ವೀಕೃತ ಪಾಠಗಳು ಭದ್ರಿಕಾ ಮತ್ತು ಮದ್ರಕ. ಬಹುಶಃ ಈ ಪಾಠಾಂತರಗಳನ್ನು ಒಳಗೊಂಡ (ವೃತ್ತರತ್ನಾಕರದ) ಪ್ರತಿಗಳನ್ನು ನಾಗವರ್ಮ ಅನುಸರಿಸಿರಬೇಕು.

ಮೇಲಿನ ಪಟ್ಟಿಯನ್ನು ಕೊಟ್ಟು ಶ್ರೀ ಎಲ್. ಬಸವರಾಜು ಅವರು "ಇಷ್ಟರಿಂದ ನಾಗವರ್ಮನು ಪಿಂಗಳ, ಜಯದೇವರನ್ನೇ ಅಲ್ಲದೆ ಕೇದಾರಭಟ್ಟ,ಜಯಕೀರ್ತಿ, ಹೇಮ ಚಂದ್ರರನ್ನೂ ಹಲವೆಡೆ ತನ್ನ ಛಂದೋಂಬುಧಿಯಲ್ಲಿ ಅನುಸರಿಸಿರುವುದು ನಿಸ್ಸಂಶಯ" ಎನ್ನುತ್ತಾರೆ. ಈ ರೀತಿ ದೃಢವಾಗಿ ಹೇಳುವಂಥ ಸಂಬಂಧವು ಮೇಲಿನ ಪಟ್ಟಿಯಲ್ಲಿ ಏನಿದೆ ? ಮೇಲಿನ ಪಟ್ಟಿಯಲ್ಲಿ ಕೇದಾರಭಟ್ಟನ ವೃತ್ತರತ್ನಾಕರದ ಎರಡು ವೃತ್ತನಾಮ ಗಳಿಗೂ ನಾಗವರ್ಮನ ಛಂದೋಂಬುಧಿಯ ವೃತ್ತನಾಮಗಳಿಗೂ ಹೊಂದಿಕೆಯಾಗು ವುದನ್ನು ತೋರಿಸಿದ್ದಾರೆ. ಇವು ಸಹ ಯಾವುದೋ ಒಂದು ಪ್ರತಿಯ ಪಾಠ. ಪ್ರಾಕೃತ ಪೈಂಗಲದ ಸೇನಿಕಾ ಎಂಬುದನ್ನು ಛಂದೋಂಬುಧಿಯ ಸೈನಿಕ ಎಂಬುದಕ್ಕೂ ಹೊಂದು ವುದನ್ನು ಎತ್ತಿತೋರಿಸಿದ್ದಾರೆ. ಶ್ಯೇನಿ ಎಂಬುದು ಈ ಶಬ್ದದ ಮೂಲ. ಅದು ಪ್ರಾಕೃತ ಪೈಂಗಲದಲ್ಲಿ ಸೇನಿಕ ಆಯಿತು, ಕನ್ನಡದ ಛಂದೋಂಬುಧಿಯಲ್ಲಿ ಸೈನಿಕ ಎಂದಾಗಿದೆ. ಇಲ್ಲಿ ಪ್ರಾಕೃತ ಪೈಂಗಲದ ಅನುಸರಣೆ ಎಲ್ಲಿ ಬಂದಿತು ? ಪ್ರಾಕೃತ ಪೈಂಗಲವು ೧೪ನೆಯ ಶತಮಾನದಲ್ಲಿ ರಚಿತವಾದುದು. ಅದರ ಅನುಸರಣೆಮಾಡಿರುವ ನಾಗವರ್ಮನು ಅಲ್ಲಿಂದೀಚೆಯವನೆಂದಾಗುವುದು. ಇದು ಒಪ್ಪತಕ್ಕ ಮಾತೇ ಅಲ್ಲ. ಜಯಕೀರ್ತಿಯು ವೃತ್ತಪ್ರವರ್ತಕ ಇಲ್ಲವೆ ವೃತ್ತನಾಮಪ್ರವರ್ತಕ ಎಂದು ಹೇಳುವ ದ್ರುತಪದ, ಲಲಿತಪದ ಇವು ವರಾಹಮಿಹಿರನ ಬೃಹಜ್ಜಾತಕದ ವೃತ್ತಿಕಾರನಾದ ಉತ್ಪಲನ ಹೆಸರುಗಳೂ ಆಗಿವೆ. ಇದೂ ಇರಲಿ. ಇಲ್ಲಿ ಉಧೃತವಾದ ೧೫ ವೃತ್ತಗಳಲ್ಲಿ ಜಯಕೀರ್ತಿ, ಹೇಮಚಂದ್ರರ ವೃತ್ತನಾಮ ಮತ್ತು ಯತಿ, ನಾಗವರ್ಮನ ವೃತ್ತನಾಮ ಮತ್ತು ಯತಿ ಇವುಗಳಲ್ಲಿ ಹೊಂದಿಕೆಯಾಗುವುದು ಒಂದು ವೃತ್ತದಲ್ಲಿ ಮಾತ್ರ. ಅದರಲ್ಲಿಯೂ ಸ್ವಲ್ಪ ಕೊಂಕು ಇದ್ದೇ ಇದೆ. ಜಯಕೀರ್ತಿ, ಹೇಮಚಂದ್ರರು 'ಲಲಿತಲತಾ' ಎಂದು ಹೇಳಿದರೆ ನಾಗವರ್ಮ 'ಲಲಿತ' ಎಂದಿದ್ದಾನೆ. ಐದು ವೃತ್ತಗಳ ಹೆಸರಿನಲ್ಲಿ ಹೊಂದಿಕೆ ಇದ್ದರೆ ಯತಿಸ್ಥಾನದಲ್ಲಿ ಹೊಂದಿಕೆಯಿಲ್ಲ. ಒಂದೆರಡರಲ್ಲಿ ಯತಿಸ್ಥಾನದಲ್ಲಿ ಹೊಂದಿಕೆ ಇದ್ದರೆ, ಹೆಸರಿನಲ್ಲಿ ಹೊಂದಿಕೆಯಿಲ್ಲ. ಇದು ಒಬ್ಬರನ್ನು ಮತ್ತೊಬ್ಬರು ಅನುಸರಿಸಿದ ಲಕ್ಷಣವೇ ? ಜಯಕೀರ್ತಿ, ಹೇಮಚಂದ್ರ, ನಾಗವರ್ಮ ಇವರು ಒಂದೇ ಪರಿಸರದವರಾದುದರಿಂದ ಉಳಿದ ಛಂದೋಗ್ರಂಥಗಳಲ್ಲಿ ದೊರೆಯದ ಕೆಲವು ವೃತ್ತಗಳು ಇವರಲ್ಲಿಯೇ ದೊರೆಯುವುದು ಅಸಹಜವೇನಲ್ಲ. ಅವುಗಳಲ್ಲಿ ಕೆಲವು ತೆಲುಗಿನ ಅಪ್ಪಕವೀಯದಲ್ಲಿಯೂ ದೊರೆಯುತ್ತವೆ. ಛಂದೋಗ್ರಂಥಗಳಲ್ಲಿ ಹೀಗೆ ಕೆಲವು ವೃತ್ತನಾಮಗಳಲ್ಲಿ ಹೋಲಿಕೆ ಕಂಡುಬಂದಷ್ಟಕ್ಕೇ ಅದನ್ನು ಅನುಸರಣೆ ಎಂದು ಹೇಳುವುದು ಯುಕ್ತವಾಗದು. ಉಕ್ತಾ, ಅತ್ಯುಕ್ತಾ, ಮಧ್ಯಾ ಎಂಬ ಮೊದಲಿನ ಮೂರು ಛಂದ ಕೂಡಿ ಹುಟ್ಟುವ ೧೪ ವೃತ್ತಗಳನ್ನೂ ಜಯಕೀರ್ತಿಯು ತನ್ನ ಛಂದೋನು ಶಾಸನದಲ್ಲಿ ಕೊಡುತ್ತಾನೆ. ಇವುಗಳಿಗೆ ಹೇಮಚಂದ್ರ, ಕೇದಾರಭಟ್ಟ, ನಾಗವರ್ಮ ಇವರು ಕೊಡುವ ಹೆಸರುಗಳನ್ನು ಹೋಲಿಸಿ ನೋಡಿ :

ವೃತ್ತಪ್ರಸ್ತಾರ	ವೃತ್ತನಾಮಗಳು			
	ಜಯಕೀರ್ತಿ	ನಾಗವರ್ಮ	ಕೇದಾರಭಟ್ಟ	ಹೇಮಚಂದ್ರ
ಗ –	ಶ್ರೀ	ಶ್ರೀ	ಶ್ರೀ	ಶ್ರೀ
ಲ ⏑	ಸ್ವಿಹಿ	×	×	×
ಗಗ – –	ಪದ್ಮ	ಗರ್ವ	ಸ್ತ್ರೀ	ಸ್ತ್ರೀ
ಲಗ ⏑ –	ಸುಖ	ದಿಗಂತಗ	×	ಸುಖ
ಗಲ – ⏑	ಜತ್ರು	×	×	ದುಃಖ
ಲಲ ⏑⏑	ವಲಿ	ಗಿರಿಧರ (ಹರಿವರ)	×	ಮದ
ಮ – – –	ಶ್ಯಾಮಾಂಗೀ	ವಾಮಾಂಗಂ	ನಾರೀ	ನಾರೀ
ಯ ⏑ – –	ವನ	ರತಾಂತ	(ಕೇಸಾ)	ಕೇಶಾ
ರ – ⏑ –	ಸುಧೀ	ಪಾವನಂ	ಮೃಗೀ	ಮೃಗೀ
ಸ ⏑⏑ –	ಪ್ರವರ	ಪ್ರವರಂ	×	ಮದನ
ತ – – ⏑	ಸೇನಾ	×	×	×
ಜ ⏑ – ⏑	ಸುವಸ್ತು	×	×	×
ಭ – ⏑⏑	ಹೃದ್ಯ	×	×	×
ನ ⏑⏑⏑	ದೃಕ್	ಪರಮ (ಪರಮೆ)	×	×

ಮೇಲಿನ ಹದಿನಾಲ್ಕು ವೃತ್ತಗಳಲ್ಲಿ ನಾಲ್ಕು ವೃತ್ತಗಳನ್ನು ಉಳಿದ ಮೂವರು ಹೇಳಿರುವುದೇ ಇಲ್ಲ. ನಾಲ್ವರಲ್ಲಿಯೂ ವೃತ್ತನಾಮವು ಹೊಂದಿಕೆಯಾಗುವುದು ಒಂದೇ ಒಂದು ವೃತ್ತ. ಅದೂ ಪ್ರಾರಂಭದ 'ಶ್ರೀ' ಎಂಬುದು. ಅದು ಮೊದಲವೃತ್ತವಾದುದರಿಂದ ಶ್ರೀ ಎಂಬ ಹೆಸರು ಸಹಜವಾಗಿಯೇ ಬಂದುದಾಗಿದೆ. ಇದನ್ನು ಬಿಟ್ಟರೆ ಜಯಕೀರ್ತಿ, ನಾಗವರ್ಮರ ವೃತ್ತನಾಮಗಳಲ್ಲಿ ಹೊಂದಿಕೆಯಾಗಿರುವುದು ಪ್ರವರ ವೃತ್ತ ಮಾತ್ರ. ಕೇದಾರಭಟ್ಟ, ಹೇಮಚಂದ್ರರ ಹೆಸರುಗಳಲ್ಲಿ ಒಂದೂ ನಾಗವರ್ಮನ ಹೆಸರಿನ ಜೊತೆಗೆ ಹೊಂದಿಕೆಯಾಗುವುದಿಲ್ಲ. ಇದರಿಂದ ನಾಗವರ್ಮನು ಜಯಕೀರ್ತಿ, ಕೇದಾರಭಟ್ಟ, ಹೇಮಚಂದ್ರ ಇವರಲ್ಲಿ ಯಾರನ್ನೂ ಅನುಸರಿಸಿಲ್ಲವೆಂಬುದು ವ್ಯಕ್ತವಾಗುವುದಿಲ್ಲವೆ ?

ಅಂಶಗಣಾತ್ಮಕ ಕರ್ಣಾಟವಿಷಯಜಾತಿಗಳು ಪ್ರಚಾರದಲ್ಲಿ ಇದ್ದ ಕಾಲದಲ್ಲಿ ಛಂದೋಂಬುಧಿಯು ರಚಿತವಾಗಿರಬೇಕು. ಕನ್ನಡದ ಅಂಶಗಣಾತ್ಮಕಜಾತಿಗಳು ಎಂದಿನಿಂದಿಂದಿಗೂ ಸಾಗಿ ಬಂದುವಲ್ಲ. ಸಂಸ್ಕೃತದ ಅಕ್ಷರವೃತ್ತಗಳು ಸುಮಾರು

ಎರಡುಸಾವಿರ ವರುಷಗಳ ಹಿಂದಿನಿಂದ ಇಂದಿನವರೆಗೂ ಸಾಗಿಬಂದಿವೆ. ಸಂಸ್ಕೃತ ದಲ್ಲಷ್ಟೇ ಅಲ್ಲ, ಭಾರತೀಯ ಇನ್ನಿತರ ಭಾಷೆಗಳಲ್ಲಿಯೂ ಅವುಗಳ ಬಳಕೆಯಿದೆ. ಕರ್ಣಾಟವಿಷಯಜಾತಿಗಳಾದರೂ ಅವು ಪ್ರಚಾರದಲ್ಲಿದ್ದ ಕಾಲದಲ್ಲಿಯೇ ಕಾವ್ಯಗಳಲ್ಲಿ ಅಲ್ಲೊಂದು ಇಲ್ಲೊಂದು ಬಳಸಲ್ಪಟ್ಟಿವೆ. ತ್ರಿಪದಿಯಂತಹ ಒಂದೆರಡು ಜಾತಿಗಳು ಮಾತ್ರಾಗಣದ ಪ್ರಭಾವದಲ್ಲಿ ಈ ವರೆಗೆ ಸಾಗಿಬಂದಿವೆ. ಜಯಕೀರ್ತಿಯ ಕಾಲ ದಲ್ಲಿಯೇ ಕೆಲವು ಕರ್ಣಾಟವಿಷಯಜಾತಿಗಳು ಬಳಕೆಯಿಂದ ಜಾರಿದ್ದುವು. ಅದಕ್ಕಾಗಿಯೇ ಜಯಕೀರ್ತಿಯು ಇಂತಿಂತಹ ಕರ್ನಾಟವಿಷಯಜಾತಿಗಳು ಇಂತಿಂತಹ ಕಾವ್ಯಗಳಲ್ಲಿ ನೋಡಲು ಸಿಕ್ಕುವುವೆಂದು ಹೇಳಬೇಕಾಯಿತು. ಅಕ್ಷರಜಾತಿಗಳಲ್ಲಿ ಅಲ್ಪಾಕ್ಷರ, ಅಂತರಾಕ್ಷರ, ಮಧ್ಯಮಾಕ್ಷರ, ಸಮಾನಾಕ್ಷರ ಇವು ಇಂತಿಂತಹ ಕನ್ನಡಕಾವ್ಯಗಳಲ್ಲಿ ನೋಡಲು ಸಿಕ್ಕುತ್ತವೆಂದು ಹೇಳಿದ ಜಯಕೀರ್ತಿ, ಮಹಾಕ್ಷರದ ಬಗೆಗೆ ಹಾಗೆ ಹೇಳಿಲ್ಲ. ಅದು ಜಯಕೀರ್ತಿಯ ಕಾಲದಲ್ಲಿ ಬಳಕೆಯಲ್ಲಿದ್ದುದೇ ಇದಕ್ಕೆ ಕಾರಣವಾಗಿರಬೇಕು. ಪಾಂಡಿತ್ಯಪ್ರದರ್ಶಕ ಚಂದ್ರರಾಜನ ಮದನತಿಲಕದಲ್ಲಿ (ಕ್ರಿ. ಶ. ಸು. ೧೦೭೯) ಮಾತ್ರ ಮೇಲಿನ ಅಕ್ಷರಗಳ ಒಂದೆರಡು ಉದಾಹರಣೆಗಳು ದೊರೆಯುತ್ತವೆ. ೧೨ನೆಯ ಶತಮಾನದ ಹಾಗೂ ಅದರೀಚೆಯ ಕಾವ್ಯಗಳಲ್ಲಿ ಇವು ಎಲ್ಲಿಯೂ ಕಂಡುಬರುವುದಿಲ್ಲ. ಗುಣಚಂದ್ರನ ಛಂದಸ್ಸಾರದಲ್ಲಿ 'ಮಾತ್ರಾವಿಶೇಷಗಣ' ಎಂದು ಹೇಳಿ ಅಂಶಗಣಗಳ ಲಕ್ಷಣ ಕೊಡಲಾಗಿದೆ. ಆದರೆ ಅದು ಆ ಪೂರ್ವದ ಬ್ರಹ್ಮ, ವಿಷ್ಣು, ರುದ್ರಗಣಗಳಿಗೆ ಪೂರ್ಣವಾಗಿ ಹೊಂದಿಕೆಯಾಗುವುದಿಲ್ಲ. ಕವಿಜಿಹ್ವಾಬಂಧನದಲ್ಲಿಯೂ ನಂದಿಛಂದಸ್ಸಿನಲ್ಲಿಯೂ ಸೀಸ, ದ್ವಿಪದ ಇವುಗಳ ಲಕ್ಷಣವನ್ನು ಅಂಶಗಣದಲ್ಲಿ ಹೇಳಲಾಗಿದ್ದರೂ ಅದು ತೆಲುಗು ಛಂದೋಗ್ರಂಥಗಳ ಅನುಕರಣೆ ಮಾತ್ರ. ಇದನ್ನೆಲ್ಲ ಪರಿಶೀಲಿಸಿದರೆ ೧೨ನೆಯ ಶತಮಾನದ ತುದಿಯು ಛಂದೋಂಬುಧಿಯು ರಚಿತವಾದ ಕಾಲದ ಉತ್ತರಮಿತಿ ಎಂದು ಹೇಳಬೇಕು.

ಅಂಶಗಣದ ಕರ್ಣಾಟವಿಷಯಜಾತಿಗಳನ್ನು ಪ್ರಸ್ತಾಪಿಸುವ ಉಪಲಬ್ಧ ಛಂದೋಗ್ರಂಥಗಳು ಎರಡು. ಒಂದು : ನಾಗವರ್ಮನ ಕನ್ನಡ ಛಂದೋಂಬುಧಿ, ಇನ್ನೊಂದು ಸಂಸ್ಕೃತದಲ್ಲಿ ರಚಿತವಾದ ಜಯಕೀರ್ತಿಯ ಛಂದೋನುಶಾಸನ. ಕಾವ್ಯಾವಲೋಕನಾದಿಗಳನ್ನು ರಚಿಸಿದ ನಾಗವರ್ಮನ ಛಂದೋವಿಚಿತಿಯು ಉಪಲಬ್ಧವಾಗಿದ್ದರೆ ಛಂದೋಂಬುಧಿಯ ಕಾಲವನ್ನು ನಿರ್ಣಯಿಸಲು ಅನುಕೂಲವಾಗುತ್ತಿತ್ತು. ಜಯಕೀರ್ತಿಯು ಕ್ರಿ. ಶ. ೯೦೦ರ ಆಚೆ ಈಚೆ ಇರಬೇಕೆಂಬ ಶ್ರೀ ಗೋವಿಂದ ಪೈಗಳ ಅಭಿಪ್ರಾಯದಲ್ಲಿ ತಥ್ಯವಿದೆಯೆಂದು ನಾನು 'ಜಯಕೀರ್ತಿ-ನಾಗವರ್ಮರು' ಎಂಬ ಲೇಖನದಲ್ಲಿ ವಿವರಿಸಿದ್ದೇನೆ. ಜಯಕೀರ್ತಿ, ನಾಗವರ್ಮರು ಒಬ್ಬರಿಂದಿನ್ನೊಬ್ಬರು ವಿಷಯ ಸಂಗ್ರಹಿಸಿರುವುದಿಲ್ಲವೆಂಬುದನ್ನು ಅದರಲ್ಲಿ ತೋರಿಸಿದ್ದೇನೆ. ಇವರಿಬ್ಬರಲ್ಲಿ ಇಂತಹರೇ ಮುಂಚಿನವರೆಂದು ಹೇಳುವುದೂ ಸಾಧ್ಯವಿಲ್ಲ. ಶ್ರೀ ಗೋವಿಂದ ಪೈಗಳು

"ವೆಂಗಿಪಟುವಿನವನಾದ ಈತನು (ಛಂದೋಂಬುಧಿಯ ನಾಗವರ್ಮನು) ತನ್ನ ಗ್ರಂಥಾವತಾರದಲ್ಲಿ ಗೆಯ್ದಿರುವ ವಿಷ್ಣು, ಶಿವ, ಭಗವತಿ, ಸೂರ್ಯ, ಸರಸ್ವತಿಯರ ಸ್ತುತಿಗಳನ್ನು (೧, ೨, ೪, ೫, ೬) ಓದಿದೊಡನೆ ಅವಕ್ಕೂ ಈತನಂತೆಯೇ ವೆಂಗಿಪಟುವಿನವನಾದ ಪಂಪನ ವಿಕ್ರಮಾರ್ಜುನವಿಜಯದಲ್ಲಿಯ (I ೧, ೨, ೬, ೩, ೫) ಅವೇ ದೇವತೆಗಳ ಸ್ತುತಿಗಳಿಗೂ ಅಚ್ಚುಕಟ್ಟಾದ ಸಂಬಂಧವಿದೆ. ಅವನಲ್ಲಿಯ ಅವೇ ವೃತ್ತಗಳು, ಸರಸ್ವತಿಯ ಸ್ತುತಿಯನ್ನು ಬಿಟ್ಟರೆ ಹೆಚ್ಚುಕಡಿಮೆ ಅವೇ ಮಾತುಗಳು, ಅವೇ ಭಾವನೆಗಳು ಇವನಲ್ಲಿವೆ ಎಂದು ಭಾಸವಾಗದಿರದು'' ಎಂದಿದ್ದಾರೆ. ಪಂಪನು ವಿಕ್ರಮಾರ್ಜುನವಿಜಯದ ಕೊನೆಯಲ್ಲಿ ಹೇಳಿಕೊಂಡಿರುವಂತೆಯೇ ಛಂದೋಂಬುಧಿಯ ನಾಗವರ್ಮನು ಛಂದೋಂಬುಧಿಯ ಪ್ರಾರಂಭದಲ್ಲಿ ತನಗೆ ಹಿಂದಿನ ಮೂರು ತಲೆಮಾರಿನಿಂದ ವಂಶಾವಳಿಯನ್ನು ಹೇಳಿಕೊಂಡಿದ್ದಾನೆ. ಇದನ್ನು ನೋಡಿದರೆ ಇವರಿಬ್ಬರಲ್ಲಿ ಒಬ್ಬರು ತಮ್ಮ ಮೊದಲಿಗನ ಇಲ್ಲವೇ ಸಮಕಾಲೀನನ ಗ್ರಂಥದಿಂದ ಸೂಚನೆ ಪಡೆದಿದ್ದಾರೆಂದು ಊಹಿಸಲು ಅವಕಾಶವಿದೆ. ಹಾಗಾಗಿದ್ದರೆ ನಾಗವರ್ಮನು ಪಂಪನ ಅನುಕರಣ ಮಾಡಿರುವುದು ಹೆಚ್ಚು ಸಂಭವನೀಯ. ಆದುದರಿಂದ ಛಂದೋಂಬುಧಿಯ ನಾಗವರ್ಮನು ಪಂಪನಿಗೆ (ಕ್ರಿ.ಶ.೯೪೧) ಸಮಕಾಲೀನನಾಗಿಯೋ ಸ್ವಲ್ಪ ಈಚೆಯೋ ಇದ್ದು ೧೦ನೆಯ ಶತಮಾನದ ಕೊನೆಯ ಒಳಗಾಗಿ ಛಂದೋಂಬುಧಿಯನ್ನು ರಚಿಸಿದನೆಂದು ಹೇಳಬಹುದು. ಕಾವ್ಯಾವಲೋಕನಾದಿಗಳನ್ನು ಬರೆದ ನಾಗವರ್ಮನು ಹೇಳಿಕೊಂಡಿರುವ ಆತನ ಪೂರ್ವದ ನಾಗವರ್ಮನು ಇವನೇ ಆಗಿರಲೂಬಹುದು.

• •

ಕನಸುಗಳು

• ಎನ್. ವಿ. ಭಾಗ್ಯಲಕ್ಷ್ಮಿ

ಧೂಳು ಬಿಸಿಲು ಮುಳ್ಳು ತುಂಬಿದ ದಾರಿಗುಂಟ
ಸಾಗಿದೆ ಬಲವಂತ ಪಯಣ
ಹಸಿರುಬುತ್ತಿಯಿಲ್ಲ ಗಂಟಲಲಿ ತಂಪಿಲ್ಲ ನೆತ್ತಿ ಕಾದಿದೆ
ಧೂಳು ಬಿದ್ದದ್ದಕ್ಕೆ
ಕಣ್ಣಲ್ಲಿ ನೀರು ಜಿನುಗಿದರೆ ಹೀರಿ ಆರಿಸುತ್ತದೆ
ಬಿಸಿಲ ಧಗೆ ಬಾಯಾರಿ
ಅಂತರಾಳದಲ್ಲಿ ಕಾವೇರಿ
ನದಿಯನ್ನ ಇಡಿಯಾಗಿ ಕುಡಿದು ಕಡಲಲ್ಲಿ ಮುಳುಗುವ
ಬಯಕೆ ನನಗೆ
ಜೀವ ನಿಲ್ಲಿಸಲಿಲ್ಲಿಲ್ಲ ತೊಟ್ಟು ನೀರು.

ಮರ ಬೇಕು ಆಸರೆಗೆ ನೆರಳನ್ನಪ್ಪಿ ಮಲಗಬೇಕು
ಕಲಕಲ ಪಕ್ಷಿನಾದಕ್ಕೆ ಎದೆತೆರೆದು ಭಾರವಿಳಿಯಬೇಕು
ಇಲ್ಲಿದೆ ಬೋಳುಮರಗಳ ಸಾಲು
ಬರೀ ಶಬ್ದ
ಮುಳ್ಳುಗಿಡ ಹಲವು ಸೆರಗೆಳೆದು ಚುಡಾಯಿಸುತ್ತವೆ
ಬಿಡಿಸಿ ಸಾಗಿದ್ದೇನೆ
ಕಣ್ಣು ತುಂಬಿಲ್ಲ ಹಸಿರು.

ಬೋಳುಮರದ ಕೊಂಬೆಯಲ್ಲಿ ಕೇಳಬಹುದೇ
ಚಿಗುರೊಡೆದ ಸದ್ದು ?

• •

ತುಳುದೇಶದ ಬಸದಿಗಳ ವಿವರಣೆ

• ಎಸ್. ಡಿ. ಶೆಟ್ಟಿ

'ಜೈನಾಚಾರ' ಹೆಸರಿನ ಕೃತಿ, ೩೨ ಕಥೆಗಳನ್ನೊಳಗೊಂಡ ಒಂದು ಸಾಂಗತ್ಯ ರಚನೆ. ಇದರ ಕರ್ತೃ ಬಿದಿರೆಯ (ಮೂಡಬಿದಿರೆ) ಚಂದಯ್ಯೋಪಾಧ್ಯಾಯ. ಗ್ರಂಥಾಂತ್ಯದಲ್ಲಿ "ನಿಧಿಗತಿಗಿರಿಚಂದ್ರಶಕದೊಳ್........ ಕೃತಿ ಸಂಪೂರ್ಣವದು ಜೈನಾಚಾರವು" ಎಂಬ ಮಾತು ಬರುವುದರಿಂದ ಶಕ ೧೭೪೯ ರಲ್ಲಿ ಅಂದರೆ ಕ್ರಿ. ಶ. ೧೮೨೭ ರಲ್ಲಿ ಈ ಕೃತಿ ಸಂಪೂರ್ಣವಾದಂತೆ ಕಂಡುಬರುತ್ತದೆ. ಗ್ರಂಥದ ಪೀಠಿಕಾಸಂಧಿಯಲ್ಲಿ ಕವಿಯ ಜೀವನ ಸಂಗತಿ ಹೀಗೆ ಬರುತ್ತದೆ: ಬಿದಿರೆಯಲ್ಲಿ ನೆಲ್ಲಿಚಂದಯ್ಯಶೆಟ್ಟರು. ಅವರ ಪತ್ನಿ ತಂಗಮ್ಮ. ಇವರದು ವೈಶ್ಯ ವೃತ್ತಿ. ಇವರ ಮಗ ವಣಿಜಶ್ರೇಷ್ಠ ಅಂಕಣಶೆಟ್ಟಿ. ಪತ್ನಿ ಪದುಮಕ್ಕ. ಇವರ ಮಗನೇ ಈ ಗ್ರಂಥದ ಕರ್ತೃವಾದ ಚಂದಯ್ಯ. ಇವನ ಗುರು ಬಿದಿರೆಯ ಚಾರುಕೀರ್ತಿಮುನೀಂದ್ರ. ಈ ಮುನೀಂದ್ರನ ಚರಿತ್ರೆ ಹೀಗಿದೆ: ಬಿದಿರೆಯ ಪಡುಬಸದಿಯ ಅರ್ಚಕರಾದ ಪದುಮಯ್ಯಇಂದ್ರ ಹಾಗೂ ಪತ್ನಿ ಪದ್ಮಾವತಿಯರ ಮಗ ಪದುಮಯ್ಯೋಪಾಧ್ಯಾಯ. ಇವನು ಚಾರುಕೀರ್ತಿಮುನೀಂದ್ರರ ಶಿಷ್ಯನಾಗಿ ಅವರ ಆದೇಶದಂತೆ ಅನೇಕ ಶಾಸ್ತ್ರಗ್ರಂಥಗಳನ್ನು ರಚಿಸಿದ. ಆಮೇಲೆ ಇವನು ಚಾರುಕೀರ್ತಿ ಹೆಸರಿನ ಮುನೀಂದ್ರನಾದ. ಈತನ ಶಿಷ್ಯನೇ ಪ್ರಸ್ತುತ ಗ್ರಂಥದ ಕರ್ತೃ ಚಂದಯ್ಯೋಪಾಧ್ಯಾಯ.

ಈ ಗ್ರಂಥ ಬರೆಯಲು ಪ್ರೇರಣೆನೀಡಿದವರನ್ನು 'ಪ್ರೇರಕ-ಪಾಲಕೋದಯ ಸಂಧಿ'ಯಲ್ಲಿ ವಿವರವಾಗಿ ಹೇಳುತ್ತಾನೆ. ಜೈನಕಾಶಿಯಾದ ಬಿದಿರೆಯ ದಕ್ಷಿಣಕ್ಕೆ ಒಂದು ಯೋಜನ ದೂರದಲ್ಲಿ 'ಮಳಲಿ' ಎಂಬ ಊರು. ಅಲ್ಲಿ ಚಾಟರಾಜೇಂದ್ರ ಅರಸನಾಗಿದ್ದ. ಕೆಲವು ತಲೆಮಾರು ಗತಿಸಿದ ಮೇಲೆ ಗುಮ್ಮಣ್ಣಶೆಟ್ಟಿ ಎಂಬವನು 'ಕಲಿಯುಗ ಮಹಾಮಂಡಲೇಶ್ವರ' ಎಂಬ ಹೆಸರಿನಿಂದ ಅಧಿಕಾರಕ್ಕೆ ಬಂದನು. ಇವನ ಮಗನು ಸಕಲಶಾಸ್ತ್ರಕೋವಿದನಾದ ನೇಮಣ್ಣ. ಕವಿಗೆ ಕಾವ್ಯ ಬರೆಯಲು ಈತ ಪ್ರೇರಣೆ ನೀಡಿದ. ಗುಮ್ಮಣ್ಣನ ತಂಗಿಯಾದ ಬಿಮ್ಮಕ್ಕನ ಮೊಮ್ಮಗಳು ಕಲಿಯುಗ ದಾನಚಿಂತಾಮಣಿಯಾದ ಬಿಮ್ಮಕ್ಕ. ಇವಳೇ ಕವಿಗೆ ಕಾವ್ಯ ಬರೆಯುವಲ್ಲಿ ಸಕಲ ನೆರವನ್ನು ಒದಗಿಸಿದವಳು. ಇವರಿಬ್ಬರನ್ನು ಕವಿ ಅತ್ಯಂತ ಅಭಿಮಾನದಿಂದ ಕೊಂಡಾಡಿದ್ದಾನೆ.

ಇಲ್ಲಿಯ ಕಥೆಗಳು ಹೆಚ್ಚಾಗಿ ಜೈನಗ್ರಂಥಗಳಲ್ಲಿ ಬಂದವುಗಳಾಗಿದ್ದರೂ ಕೆಲವು ಕಥೆಗಳು ಐತಿಹಾಸಿಕ ಮಹತ್ವದಿಂದ ಕೂಡಿವೆ. ಈ ಕೃತಿಗೆ ನಿದರ್ಶನವೆನಿಸುವ, ತುಳುದೇಶದ ಬಸದಿಗಳ ವಿವರಣೆಯನ್ನೊಳಗೊಂಡ ಒಂದು ಸಂಧಿ ಹೀಗಿದೆ :

ಶ್ರೀರಮಾರಮಣ ಮೂರ್ಲೋಕವಂದಿತಪಾದ । ಕಾರುಣ್ಯಾಮೃತಮಯವಾದ ।
ಮೂರುಲೋಕವನೊಳಕೊಂಡ ಕೇವಲಬೋಧ । ಪಾರಿಶ್ವಜಿನಗತಭೇದಾ ॥೧॥

ಕಲಿಯುಗದೋಷದಿ ಛಪ್ಪನ್ನದೇಶವ । ನುಳಿದು ಸಿದ್ಧಾಂತವು ಬಂದು ।
ತುಳುದೇಶ ಮಧ್ಯದೊಳ್ಬಿದಿರೆಯ ನಗರದಿ । ನೆಲಸಿದ ಕಾರಣದಿಂದ ॥೨॥

ಮೇದಿನಿಯೊಳು ಕ್ಷೇತ್ರವಪ್ಪುವದರಿಂದ । ಆದಿಯೊಳದನೆ ವರ್ಣಿಪೆನು ।
ಶೋಧಿಸಿ ತುಳುದೇಶದೊಳಗಿಪ ಬಸದಿಗ । ಳೋದಿಪೇಳುವೆ ಕಡೆಗೆಲ್ಲ ॥೩॥

ಅರುಹನ ಮತಲಕ್ಷ್ಮೀವೊಗದಂತೆ ಬಿದುರೆಯು । ಗುರುಗಳ ಬಸದಿ ನಾಸಿಕವು ।
ವರನಾಸಾಮಣಿಯಂತೆ ಪಾರಿಶ್ವಜಿನಪತಿ । ಸ್ಥಿರವಾಗಿಯಿಹನದರೊಳಗೆ ॥೪॥

ಪಾರಿಶ್ವಜಿನರಿಗೆ ಮೊದಲು ವಂದಿಸಿ ಮತ್ತೆ । ಶಾರದೆಗೆರಗುತ್ತ ಬಳಿಕ ।
ಸಾರಭಕ್ತಿಯೊಳಿನ್ನು ಗಣಧರರ್ಗೊಂದಿಸಿ । ಓರಂತೆ ಜಿನರ ಪೇಳುವೆನು ॥೫॥

ಗುರುಬಸದಿಯಲಿ ಪ್ರಾಕಾರ ಒಳಗೊಂಡು । ಹರಿಪೀಠ ವಾಮದೊಳುಂಟು ।
ಇರುತಿಹರದರೊಳು ಚವ್ವೀಸ ಜಿನರಡಿ । ಸರಸಿಜಕೆರಗುವೆ ನಲವಿಂ ॥೬॥

ಹರಿಪೀಠದೆಡಬಲದೊಳು ಪದ್ಮಾವತಿವಾಣಿ । ಯಿರುತಿಹರತಿಶಯವೆತ್ತು ।
ಧರೆಗೆಲ್ಲ ಪರವಿತ್ತು ಸಲಹುವರವರಿಗೆ । ಎರಗುವೆ ಗುರುಬಸದಿಯೊಳು ॥೭॥

ಮೇಗಣ ನೆಲೆಯು ಸಿದ್ಧಾಂತ ಪಾರಿಶ್ವೇಶ । ಬೂಗಧಿನಾಥನಾಗಿಹನು ।
ಆ ಗಂಧಕುಟಿ ಪಾರಿಶ್ವೇಶಮಂದಿರಮುಂಟು । ಬೇಗ ಎಲ್ಲರಿಗೊಂದಿಪೆನು ॥೮॥

ಪರಿಪರಿ ಶಿಲೆಗಳ ನಾನಾ ವಿಚಿತ್ರದಿ । ಅರುಹನ ಪ್ರತಿಮೆ ಮಾಡಿಟ್ಟ ।
ವರಸಿದ್ಧಕೂಟವುಂಟದರೊಳಗಿರುವ ಶ್ರೀ । ವರಸಿದ್ಧರಾಶಿಗೊಂದಿಪೆನು ॥೯॥

ಗುರುಬಸದಿಯ ಬಲದೊಳಗೊಂದು ಕೋಟಿ । ಸೆಟ್ಟರಬಸದಿಯೊಳು ನೇಮೀಶ ।
ಕಿರುವಡಕದೊಳತಿಶಯದೊಳು ತೊಳಗಿಹ ಶ್ರೀ । ಚರಣಾರವಿಂದಕೊಂದಿಪೆನು ॥೧೦॥

ಎಡೆಯಿಲ್ಲದೆರಕಾದ ಪೆಟ್ಟಿಗೆಯಂದದಿ । ಬಡಗಣಬಸದಿಯೊಪ್ಪಿಹುದು ।
ನುಡಿಯಲೇನದರೊಳಗಿಹ ಚಂದ್ರಜಿನಪನ । ಅಡಿಗೆರಗುವೆನು ಭಕ್ತಿಯೊಳು ॥೧೧॥

ಎರಡನೆ ನೆಲೆಯೊಳು ಶಂಭವತೀರ್ಥೇಶ । ರಿರುತಿಹರವರಂಘ್ರಿಯುಗಕೆ ।
ಸುರಪದವಾಗಬೇಕೆಂದೆರಗುವೆ ಭಕ್ತಿ । ಭರದೊಳಗನುದಿನ ಮುದದಿ ॥೧೨॥

ಶೆಟ್ಟರಬಸದಿ ಭಾಗೋತ್ತಮಶೆಟ್ಟಿಯು । ಕಟ್ಟಿಸಿ ಪ್ರಾಕಾರದೊಳಗೆ ।
ಒಟ್ಟಾಗಿಯೆರಡಿವೆ ಒಂದರೊಳಗೆ ವೀರ । ಕೊಟ್ಟು ರಕ್ಷಿಸುಗೆ ಸಂಪದವ ॥೧೩॥

ಎರಡನೆ ಬಸದಿಯೊಳ್ ಚವ್ವೀಸಜಿನರುಂಟು । ವರಪದ್ಮಾವತಿ ಸಹಿತಾ ।
ಇರುತಿಪರೆಡಬಲದೊಳಗೆ ನಾನವರಿಗೆ । ಎರಗುವೆ ಸುಖವೀವುದೆಂದು ॥೧೪॥

ಹಿರಿಬಸದಿಯೆಂದೊಡತಿಪೂರ್ವದಾಲಯ । ದಿರವು ನೋಡಲುಯೆರಡುಂಟು ।
ಅರುಹ ಶಾಂತೀಶನೊಂದರೊಳ್ ಮೃಣ್ಮಯವಾದ । ಹರಿಪೀಠ ಚವ್ವೀಸಜಿನರು ॥೧೫॥

ವರ ಲೆಪ್ಪದೆಡಬಲ ಪದ್ಮಿಸಿವಾಣಿಯು । ಎರಡನೆ ನೆಲೆಯೊಳು ಬೇರೆ ।
ಹರಿಪೀಠ ಕಿರಿದಾಗಿಯುಂಟು ಮೃಣ್ಮಯವಲ್ಲಿ । ಎರಗುವ ಚವ್ವೀಸಜಿನರ್ಗೆ ॥೧೬॥

ಬೆಟ್ಟಕೇರಿಯ ಪೇಟೆಯೊಳಗೊಂದು ಇಹುದದು । ಬೆಟ್ಟಕೇರಿಯಬಸದಿಯೊಳು ।
ದಿಟ್ಟ ಶ್ರೀವಿರಜಿನೇಶ ಪರ್ಯಂಕವ । ಗೊಟ್ಟಿರುತಿಹನಿಗೊಂದಿಪೆನು ॥೧೭॥

ಕೆರೆಯಗ್ರದೊಳಗಿರುವುದರಿಂದ ಭವನಕ್ಕೆ । ಕೆರೆಬಸದಿಯೆಂಬರೊಲಿದು ।
ಕಿರಿಯಡಕದೊಳಿದೆಯದರೊಳು ಶ್ರೀಮಲ್ಲಿ । ಯರುಹನಿರ್ದಪನಿಗೊಂದಿಪೆನು ॥೧೮॥

ವರಬೈಂಕಣಧಿಕಾರಿ ಬಸದಿಯೊಳು ತನ್ನ । ಪುರವಾದಿ ಚವ್ವೀಸಜಿನರು ।
ಸರಗಟ್ಟಿದಂತೆ ಪ್ರಭಾವಲಯದೊಳುಂಟು । ಸ್ಮರಿಪೆ ಮಧ್ಯದನಂತಜಿನಗೆ ॥೧೯॥

ಸುತ್ತ ಭಾವಳಿಯದಿ ಚವ್ವೀಸಜಿನರುಂಟು । ನಿತ್ತಿಹ ನಡುವೆ ಆದೀಶಾ ।
ಸತ್ಯದ ಮಾತೆಂದು ಮಹದೇವಬಸದಿಯ । ಚಿತ್ತದೊಳಿಟ್ಟು ಭಾವಿಪುದು ॥೨೦॥

ಚೋಳಶೆಟ್ಟಿಯ ಬಸದಿಯೊಳೆರಡುಂಟು ಶ್ರೀ । ಮೂಲನಾಯಕ ಪದ್ಮಪ್ರಭನು ।
ಕೀಲಿಸಿದಂತಿಹ ಹರಿಪೀಠಕೆರಗುವೆ । ಸಾಲಾಗಿ ಚವ್ವೀಸಜಿನರಾ ॥೨೧॥

ಕಲ್ಲನ್ನು ಕೊರೆದ ಮಂದಿರದಂತೆ ಭದ್ರದಿ । ಕಲ್ಲುಬಸದಿಯೊಳಿರುವಾತ ।
ಬೆಳ್ಳನೆ ತೋರುವ ಚಂದ್ರನಾಥನ ದಿವ್ಯ । ಮೆಲ್ಲಡಿ ಸುಖವೀವುದೆಮಗೆ ॥೨೨॥

ಕಿರುವಡಕದೊಳು ವಿಕ್ರಮಶೆಟ್ಟಿಬಸದಿಯೊ । ಳೆರಡುಂಟು ಮೂಲನಾಯಕನು ।
ಪುರುಜಿನ ಮತ್ತೊಂದು ಹರಿಪೀಠ ಚವ್ವೀಸ । ವರಜಿನರಡಿಗೆರಗುವೆನು ॥೨೩॥

ಅರಮಲ್ಲಿಮುನಿಸುವ್ರತರಗೂಡಿ ಚವ್ವೀಸ । ಪರಿಯಂಕಾಸನ ಜಿನರಿರುವ ।
ವರದೇವರಾಯನ ಬಸದಿಯ ಮನದೊಳು । ಸ್ಮರಿಸುವೆ ಭಾವಪೂರ್ವಕವ ॥೨೪॥

ಲೆಪ್ಪದ ಬಸದಿಯೊಳ್ಮೃಣ್ಮಯವಾದ ಚಂ । ದ್ರಪ್ರಭಜಿನ ಮತ್ತೆಡದಿ ।
ಲೆಪ್ಪದ ಜ್ವಾಲಿನಿಯಿರುತಿಹರವರಿಗೆ । ನೆಪ್ಪಿನೊಳಿಟ್ಟು ಧ್ಯಾನಿಪೆನು ॥೨೫॥

ಪಡುವಣಬಸದಿಯೊಳ್ವಿಮಲನಾಥನು ಧರ್ಮ । ಎಡಬಲದೊಳಗೆ ನಿತ್ತಿರಲು ।
ನಡುವಿನೊಳಿರುವನನಂತನಾಥನು ದಿವ್ಯ । ಅಡಿದಾವರೆಗಳ ವಂದಿಪೆನು ॥೨೬॥

ಇನ್ನೊಂದು ಬಸದಿಯುಂಟದನು ಕಡೆಯೊಳಿಟ್ಟು । ವರ್ಣಿಪೆ ಕಲಶದಂದದೊಳು ।
ಇನ್ನೇಕೆ ಹೊಸಬಸದಿಯ ಚಂದ್ರಜಿನನಿಲ್ಲಿ । ವರ್ಣಿಪುದೆಂದತ್ತ ಪೇಳ್ವ ॥೨೭॥

ಬಿದುರೆಯಿಂದುತ್ತರ ಒಂದುಯೋಜನ ಪೋಗ । ಲದುವೆ ಕಾರಕಳಯೆಂಬುವದು ।
ಅದರೊಳನೇಕ ಶ್ರೀಜಿನಮಂದಿರಗಳು । ಪುದಿದಿಹುವವನು ವರ್ಣಿಪೆನು ॥೨೮॥

ವರಪೂರ್ಜಯಂತಗಿರಿಯ ನೇಮಿನಾಥಗೆ । ಸರಿಯಾಗಿ ಪ್ರತುಮೆಯಿಂದೆಸೆವ ।
ಹಿರಿಯ ಬಸದಿ ನೇಮಿಜಿನರಡಿದಾವರೆ । ಗೆರಗಿನ್ನು ಪೇಳುವೆ ಮುಂದೆ ॥೨೯॥

ಬೆಟ್ಟದೆಣೆಕೆಬಿಲ್ಲು ನಿಡಿದಾಗಿ ನಿತ್ತಿಪ । ನಿಟ್ಟಿಪರಕ್ಷಿಗುತ್ಸವದಿ ।
ಬೆಟ್ಟದ ಭುಜಬಲಿಗೊಂದಿಸಿ ಸಮ್ಮುಖ । ಗೊಟ್ಟಾಜಿಗೊಲಿದೆರಗುವೆನು ॥೩೦॥

ಅವರೆಡಬಲನೊಳು ಶೀತಳಪಾರಿಶ್ವ । ಭವಹರ ಬಸದಿಗಳುಂಟು ।
ವಿವರಿಸಲತ್ತ ಚತುರ್ಮುಖಬಸದಿಯು । ಪವಿಚಂದದಂತಿರುತಿಹುದು ॥೩೧॥

ಅರಮಲ್ಲಿಮುನಿಸುವ್ರತರೊಂದಾಗಿ । ನರರುದ್ದ ನಾಲ್ದೆಸೆಗಳೊಳು ।
ಮೆರೆದಿಪವದರೊಳು ನಿತ್ತಿರುತಿಹ ಪ । ನ್ನೆರಡು ಬಿಂಬಗಳೇನೆಂಬೆ ॥೩೨॥

ಹಲ್ಲಾರಬಸದಿಯುಚವ್ವೀಸಶ್ರೀಜಿನ । ವಲ್ಲಭರಿರುತಿರರಲ್ಲಿ ।
ಉಳ್ಳಿಡಬಲಬಸದಿಯು ಚಂದ್ರವೃಷಭ ಶ್ರೀ । ವಲ್ಲಭರಡಿಗೆರಗುವೆನು ॥೩೩॥

ಗುರುಮೂರ್ತಿ ಪನ್ನೆರವೊಂಡೆಯೊಳಗಿಹ । ಕಿರಿದು ನಿಶಿದಿಯೊಂದುಂಟು ।
ಅರಶಾಂತಿಕುಂಥು ರತ್ನತ್ರಯ ಬಸದಿಯೊ । ಳಿರುತಿಹರೇನು ಬಣ್ಣಿಪೆನು ॥೩೪॥

ಕೇಶಣ್ಣ ಬಸವಣ್ಣ ತಮ್ಮರಸನು ಜಿನ । ವಾಸವಾದಲ್ಲಿ ಕಟ್ಟಿಸಲು ।
ದೇಶಿಗರಡ್ಡಕೇರಿಯ ಬಸ್ತಿಯೆನಲಲ್ಲಿ । ವಾಸವಾಗಿಹ ಪಾರಿಶ್ವೇಶಾ ॥೩೫॥

ಬಿರುಮಳ್ಳ ಕಂಬ ಪನ್ನೆರಡರ ಬಸದಿಯೊ । ಳಿರುಹನನಂತಜಿನೇಶಾ ।
ಪುರುಜಿನಬಸದಿಯು ಒತ್ತಿನೊಳೊಂದಿದೆ । ಕಿರುವಡಕದೊಳೇನನೆಂಬೆ ॥೩೬॥

ಗುರುರಾಯಬಸದಿಯೊಳ್ಚಂದ್ರಜಿನೇಂದ್ರನು । ನೆರೆಯೊಳೊಪ್ಪಿಹುದು ಮತ್ತೊಂದು ।
ಕರೆವರು ಗುಂಪತಿಕಾರಿಬಸದಿಯೆಂದು । ಅರುಹನಲ್ಲಿ ಪಾರಿಶ್ವೇಶಾ ॥೩೭॥

ಅಬ್ಬಕ್ಕದೇವಿಯ ಬಸದಿಯಾಧೀಶ್ವರ । ಕಬ್ಬುವಿಲ್ಲನ ಮುರಿದಾತ ।
ಉಬ್ಬಿದೈಸಿರಿಯ ಶ್ರೀಸ್ವಾಮಿರಾಯರ ಬಸ್ತಿ । ಗರ್ಭಾಗಾರದಿ ಚಂದ್ರನಾಥ ॥೩೮॥

ಪಾರಿಶ್ವಜಿನಪತಿ ಬೊಂಬರಾಜನ ಬಸ್ತಿ । ಸೇರಿಪನಂತೆಲ್ಲಗೂಡಿ ।
ಕಾರಕಳದಿ ಪದಿನೆಂಟುಬಸದಿಗಳ । ಮೂರುಕಾಲದೊಳೆರಗುವೆನು ॥೩೯॥

ಅತ್ತಲುತ್ತರ ಪತ್ತುಯೋಜನ ಪರ್ಯಂತ । ವರ್ತಿಪ ಬಸದಿಗಳಿರುವಾ ।
ಬಿತ್ತರದೊಳು ನಡುಬಸ್ತಿದೇವರ ಪೆಸ । ರೆತ್ತಿ ಪೇಳುವೆನು ಲಾಲಿಪುದು ॥೪೦॥

ಕೆರೆವಾಸೆ ಬಸದಿಯ ವೀರಜಿನೇಶನು । ಇರುವೆಡಬಲಬಸ್ತಿಗಳೊಳು ।
ಪುರುಜಿನ ಪಾರಿಶ್ವಜಿನರಿಪರೊಂದಿಪೆ । ಸ್ಥಿರ ಭೈರವೇಂದ್ರನಿಗಲ್ಲಿ ॥೪೧॥

ಮುಂಡೇಲಬಸ್ತಿ ಶ್ರೀವಿರಜಿನೇಶನ । ಕೊಂಡಾಡಿ ಮೂಡರ ಬಸದಿ ।
ಮಂಡಿತವಾದನನಂತಜಿನೇಶನ । ಮಂಡೆಯೊಳೆರಗಿ ಪೂಜಿಪೆನು ॥೪೨॥

ಆದೀಶನಿಪ ಬಜರಕ್ಕಳ ಬಸದಿಯೊಳ್ಸಾ । ಧಿಸೆಯುದರೊತ್ತಿನೊಳಗೆ ।
ವಾದಿಪೆಯುಬ್ಬರಿಯರ ಬೆಟ್ಟು ಪಾರಿಶ್ವ । ಶ್ರೀಧವನಿಪ ಬಸದಿಯೊಳು ॥೪೩॥

ಕೇಶಣ್ಣ ಬಸವಣ್ಣ ಬೊಮ್ಮರಸನು ಜೈನ । ಭೂಸುರರೊಂದಾಗಿ ಜಿನರ ।
ವಾಸನಲ್ಲೂರೊಳಗೊಂದು ಮಾಡಿಸಿ ಪಾರಿ । ಶ್ವೇಶನಿಗಿಟ್ಟಿಹರಲ್ಲಿ ॥೪೪॥

ಇರವತ್ತೂರೆಂಬಲ್ಲಿಯಾದೀಶರೆಂಜಾಳ । ವರ ಬಸದಿಯು ಚಂದ್ರನಾಥಾ ।
ಸುರಚಿರಮೂರ್ತಿಗಳಾಗಿರುತಿಹರಿಗೆ । ಸರಿಯಿಲ್ಲದಾನೆರಗುವೆನು ॥೪೫॥

ಭಜಿಸುವೆ ಮಧುರಪಟ್ಟಣ ಚಂದ್ರನಾಥಗೆ । ನಿಜಸುಖವಾಗಬೇಕೆಂದು ।
ಅಜಕರಬಸದಿಯನಂತಜಿನೇಶನ । ತ್ರಿಜಗಗಂದೊಳೆರಗುವೆನು ॥೪೬॥

ಬಡಗವಿಂಶತಿಪುರದರುಹನಾಲಯದೊಳು । ಬೆಡಗಿನಿಂದಿಹ ಚಂದ್ರನಾಥ ।
ಒಡನೆ ಮಂಡಲಿಬಸದಿಯ ಪುರುಜಿನಪತಿ । ಕೊಡುಗೆ ಸಾಮ್ರಾಜ್ಯಸಂಪದವ ॥೪೭॥

ಪುರುಜಿನ ನಾಲ್ಕೂರ ಬಸದಿಯೊಳಿಹನತ್ತ । ಆರೆಗಾವುದದೊಳು ವಾರಂಗ ।
ಪುರಯಿಹುದದರೊಳು ಹಿರಿಯಬಸದಿ ನೇಮಿ । ಶ್ವರನಿಹ ಅತಿಸುಂದರದೊಳು ॥೪೮॥

ಕೆರೆಯ ಮಧ್ಯದೊಳೊಂದು ರಥದಂತೆ ನಾಲ್ಮೊಗ । ದರುಹನ ಬಸದಿ ನಾಲ್ದೆಸೆಗೆ ।
ಪುರುವೀರ ಪಾರಿಶ್ವನಂತತೀರ್ಥಕರಲ್ಲಿ । ಇರುತಿಹರತಿ ಶೋಭೆವಡೆದು ॥೪೯॥

ಎರಡಿದೆ ಬಸದಿಗಳಂಗಡಿಚಾರೆಂಬ । ಪುರದೊಳ ಮಂದಿರಂಗಳೊಳು ।
ಪುರುಜಿನಪತಿಯೊಂದರೊಳು ಚಂದ್ರನಾಥನು । ಎರಡರೊಳಿರ್ವರೊಪ್ಪಿಹರು ॥೫೦॥

ಕರಚೆಲುವೆತ್ತ ಸುರಾಲ ಶ್ರೀಜಿನರ ಮಂ । ದಿರದೊಳು ಪಾರಿಶ್ವನಿಹನು ।
ಎರಡುಯೋಜನದೊಳು ಮುಂದೆ ಹಟ್ಯಂಗಡಿ । ಇರಲದರೊಳು ಚಂದ್ರನಾಥ ॥೫೧॥

ಕಾರಣಿಕದ ಮೂರ್ತಿ ಭೈರವನಿಹನಲ್ಲಿ । ಧಾರುಣಿಗತಿಚೋದ್ಯವಾಗಿ ।
ದಾರಿ ಮುಂದೆರಡುಯೋಜನ ಪೋಗಲದುವೆ ಬೈಂ । ದೂರು ಪಾರಿಶ್ವನಾಲಯವು
॥೫೨॥

ಮುಂದೊಂದು ಯೋಜನ ಭಟ್ಟಕಳದಲ್ಲಿ । ಒಂದಾಗಿ ಬಸದಿ ಮೂರುಂಟು ।
ಚಂದದಿ ಪಾರಿಶ್ವನಾಥನಬಸದಿ ಬೇ । ರೊಂದು ಶಾಂತೀಶನಾಲಯವು ॥೫೩॥

ಜಟ್ಟಿನಾಯಕನ ಬಸದಿಯೊಳಗರಮಲ್ಲಿ । ಯೊಟ್ಟಾಗಿ ಸುವ್ರತಸಹಿತ ।
ನೆಟ್ಟನೆ ಮುಂದರ್ಧಯೋಜನ ಹೋದಡೆ । ಗುಟ್ಟೇನು ಹಾಡವಳ್ಳಿಹುದು ॥೫೪॥

ಒಂಬತ್ತು ಬಸದಿಯುಂಟಾದರು ಹಿರಿಬಸ್ತಿ । ಎಂಬುದರೊಳು ಚಂದ್ರನಾಥ ।
ಗಂಭೀರತಾ ಮಾಡಿ ಬಸದಿನೇಮಿಶನು । ತುಂಬಿದ ಸೊಗಹಿನೊಳಿಹನು ॥೫೫॥

ಚಿಕ್ಕಬಸದಿಯೊಳು ಶಾಂತೀಶನಿಹ ಮತ್ತೆ । ಮಿಕ್ಕಾತಿಕಾರಿ ಬಸದಿಯೊಳು ।
ಅಕ್ಕರಿಂದಿಹ ಚಂದ್ರನಾಥನು ಮೇಗಣ । ಚೊಕ್ಕಬಸದಿ ಚಂದ್ರನಾಥ ॥೫೬॥

ಗುಂಡಣಬಸದಿಯೊಳ್ಪಾರಿಶ್ವಜಿನ ಮತ್ತೆ । ಮಂಡಿತ ಹರಿಪೀಠದೊಳಗೆ ।
ತಂಡಗಳ್ಸಮನಾಗಿ ಚವ್ವೀಸಜಿನರುಂಟು । ಕೊಂಡಾಡಿ ನುತಿಪೆನರ್ತಿಯೊಳು ॥೫೭॥

ಚಂದ್ರಗಿರಿಯೊಳುಳ್ಳ ಚಂದ್ರಜಿನೇಶ । ಇಂದ್ರಗಿರಿಯ ಗಣಧರರ ।
ವಂದಿಸಿಯುವರ ಪಾದುಕಗಳ ನೋಡಲು । ಕುಂದಿ ಜಾರುವದಘನಿಕರ ॥೫೮॥

ಮುಂದೊಂದು ಹರದಾರಿಯಲಿ ಮುರುಡೇಶ್ವರ । ಎಂದೆಂಬರೊಳು ಪಾರಿಶ್ವೇಶಾ ।
ಒಂದುಯೋಜನ ಪೋಗೆ ಮಂಕಿಯೆಂಬೂರೊಳು । ಚಂದ್ರಜಿನೇಂದ್ರನೊಪ್ಪಿಹನು ॥೫೯॥

ಹರದಾರಿನಾಲ್ಕು ಮುಂದೊತ್ತಿ ಪೋಗಲು ಹಳ್ದಿ । ಪುರವಿಹುದಲ್ಲಿ ನೇಮೀಶಾ ।
ಗೆರಗಿ ಮುಂದೆರಡುಕೋಶದೊಳು ಮುಟ್ಟದ ಬಸ್ತಿ । ಹರಿಪೀಠ ಚವ್ವೀಸಜಿನರು ॥೬೦॥

ಬೇರೊಂದು ಮತ್ತಲ್ಲಿ ಪಾರಿಶ್ವಜಿನಪನಾ । ಗಾರದೊಳಗೆ ಪದ್ಮಾವತಿಯು ।
ಧಾರುಣಿಗಿಷ್ಟಾರ್ಥಪಾಲಿಪಳ್ಮುಂದತ್ತ । ಸಾರಲು ಒಂದುಯೋಜನದಿ ॥೬೧॥

ಕಡೆತಾನಾಗಿಹುದೊಂದು ಗೇರ್ಸೊಪ್ಪೆಯೊಳು ನಾಲ್ಕು । ದೃಢವಾಗಿ ಬಸದಿಗಳುಂಟು ।
ಪೊಡವಿಗಗ್ಗಳವಾದ ಹಿರಿಬಸ್ತಿಪಾರಿಶ್ವ । ನಡಿಯ ಭಾವಿಸಿ ಭವ್ಯಜನರು ॥೬೨॥

ಕೆಳಗಿನಬಸದಿಯೊಳ್ಚಂದ್ರಜೀನೇಂದ್ರನು । ಚೆಲುವನಾಗಿಹನಲ್ಲಿ ಮತ್ತೆ ।
ಸಲೆ ಚತುರ್ಮುಖಬಸ್ತಿಯೊಳಗುಳ್ಳ ಜಿನರಡಿ । ದಳಿರೆಮ್ಮ ಪಾಲಿಪುದೊಲವಿಂ ॥೬೩॥

ಬೇರೊಂದುಬಸದಿಯೊಳಗೆ ನೇಮೀಶನು । ಸೇರಿ ಪರ್ಯಂಕದೊಳಿಹನು ।
ಕಾರೆಕಾಳದ ನೇಮಿನಾಥಸಿಗಗ್ಗಳ । ಭೂರಿಮಾತಲ್ಲಿದು ಸಿದ್ಧ ॥೬೪॥

ಬಿದುರೆಯಿಂದುತ್ತರಘಟ್ಟದ ಕೆಳಗಿಪ । ಸದಮಲದರುಹನಾಲಯವು ।
ಮುದವೆತ್ತು ಪೇಳಿದೆ ಭವ್ಯರು ಪ್ರತಿದಿನ । ಹೃದಯದೊಳಿಟ್ಟು ಭಾವಿಪುದು ॥೬೫॥

ಬಿದುರೆಗೆ ಪೂರ್ವದಿಗ್ಭಾಗದೊಳಿಪ ಜಿನ । ಸದನವ ಪೇಳುವೆನೊಲವಿಂ ।
ಹೃದಯಾಬ್ಜದೊಳಗಿಟ್ಟು ಭಾವಿಸಿದವರಿಗೆ ಶ್ರೀ । ಪದವಿ ಕೈಸೇರುವುದಹುದು ॥೬೬॥

ಬಿದುರೆಗೆ ಸೇರಿ ಹೊಸಂಗಡಿಯೊಳು ಜಿನ । ಸದನದೊಳಿಹ ಪಾರಿಶ್ವೇಶಾ ।
ಅದರ ಹತ್ತಿರ ನೊಪ್ಪಿನಂಗಡಿಪುಷ್ಪದಂತನ । ಸದನವೊಂದಿಹುದತಿಶಯದಿ ॥೬೭॥

ಕೇಳದಂಗಡಿಬಸದಿಯೊಳನಂತೇಶನು । ಪೇಳುವುದೇನು ಮುಂದಿರುವ ।
ಕಾಲ ವಿಜಯಾನು ಪೇರಾಡಿ ಪಾರಿಶ್ವೇಶ । ಜ್ವಾಲತಿಶಯದೊಳೊಪ್ಪಿಹನು ॥೬೮॥

ನಿಣೂರೆಂಬೂರೊಳು ಬೆಟ್ಟದ ಭುಜಬಲಿ । ತಾನೇಳುಮಾರುದ್ದನಾಗಿಹನು ।
ಪನೆಂಬೆ ಎಡಬಲದೊಳು ಚಂದ್ರಶಾಂತೀಶ । ಭೂನುತರಾಲಯವಿಹುದು ॥೬೯॥

ಒತ್ತಿನ ಬಸದಿಯೊಳ್ಪಾರಿಶ್ವೇಶನಾಥನು । ನಿತ್ತಿಹನತಿಶಯಗೂಡಿ ।
ಮತ್ತೊಂದು ಕಡೆಯೊಳು ಶಾಂತೀಶನಾಲಯ । ಕತ್ತಿತ್ತ ಬಸದಿಗಳೆರಡು ॥೭೦॥

ಹರಿಪೀಠಚವ್ವೀಸಜಿನರಲ್ಲಿ ಬಲದೊಳು । ಪುರುವಿಗಜಾಧೀಶನೆಂದು ।
ಕರೆವರಾತನು ಪಾಮುದೊಳಗೆ ಪರ್ಯಂಕದಿ । ಕುಳಿತಿಪನತಿಪೂರ್ವನಾಗಿ ॥೭೧॥

ವೀರಜಿನೇಶನು ವರಾನೂರೆಂಬೂರೊಳು । ಬೇರೊಂದುಕೆಲ್ಲ ಪುತ್ತಿಗೆಯು ।
ಊರೊಳನಂತಜಿನೇಶನು ಬೇರಳ । ಊರೊಳು ಪುರುಜಿನನಿಹನು ॥೭೨॥

ನೆಲ್ಲಿಕಾರೆಂಬಪೇಟೆಯೊಳುಳ್ಳನಂತಶ್ರೀ । ಪಲ್ಲಭ ಬಸದಿಯೊಳಿಹನು ।
ಅಲ್ಲಿಂದ ಮುಂದೆ ಮಾಳದ ಬಸ್ತಿಯಾದೀಶ । ಸಲ್ಲಲಿತಾಂಗನೊಪ್ಪಿಹನು ॥೭೩॥

ಸೂಳಿಕೇರಿಬಸದಿನೇಮಿಶನಾರಾದಿಯು । ಸುಲಲಿತ ಬಸದಿಯುಂಟೆರಡು ।
ನೆಲಸಿಹ ಧರ್ಮನಾಥನು ಒಂದರೊಳು ಶಾಂತಿ । ಕಲಿಲರಿಜಿನಪನೊಪ್ಪಿಹನು ॥೭೪॥

ಪುರುಷಗುಡ್ಡೆಯೊಳೊಂದು ಶಾಂತೀಶನಾಲಯು । ಇರುತಿದೆ ಅಳಿಯುದಂಗಡಿಯು ।
ಅರುಹನಾಲಯದೊಳು ಪಾರಿಶ್ವಜಿನರುಂಟು । ಗಿರಿಯೊಳಗಜನುಪಾರಿಶ್ವ ॥೭೫॥

ಪುರುಜಿನರಾಲಯು ಶ್ರವಣೆಂಬೂರೊಳ । ಗಿರುತಿದೆ ಬೇರಡವಿಯೊಳು ।
ಸುರಿವತೀರ್ಥದ ಮೇಲೆಯಾದೀಶ ನಿತ್ತಿಹ । ಧರೆಗತಿಶಯದೋರುತ್ತಲ್ಲಿ ॥೭೬॥

ಮಂಗಲಕರದ ಪಡಂಗಾಡಿಯೆಂಬಲ್ಲಿ । ಕಂಗೊಳಿಸುವ ಪಾರಿಶ್ವೇಶಾ ।
ಅಂಗಜರಿಪುಚಂದ್ರನಾಥನುನರಸಿನ । ಅಂಗಡಿಬಸದಿಯೊಳಿಹನು ॥೭೭॥

ಮೂರುಂಟು ಬಸದಿಯು ಬೆಳತಂಗಡಿಯೊಳಲ್ಲಿ । ಸೇರಿಹ ಶಾಂತೀಶ ನಡುವೆ ।
ತೋರುವುದತ್ತಿತ್ತ ಚಂದ್ರನಾಥನು ಮತ್ತೆ । ಪಾರಿಶ್ವಜಿನಕಂಬದಜನು ॥೭೮॥

ನಿಡುಗಲ್ಲಬಸದಿಕೇಶಣ್ಣಾದಿಗಳು ಕೃತ । ಒಡೆಯನದಕೆ ಶಾಂತಿನಾಥ ।
ಕುಡುಮದಬಸದಿಯೊಳ್ಚಂದ್ರಜಿನೇಂದ್ರನು । ದೃಢವಾಗಿ ಶೋಭಿಸುತ್ತಿಹನು ॥೭೯॥

ಅತ್ತ ಬೈಲಂಗಡಿ ಜಿನರ ಮಂದಿರದೊಳು । ನಿತ್ತಿಹ ಪಾರಿಶ್ವಜಿನಪ ।
ಮತ್ತೊಂದು ಕರಚೋದ್ಯಮಾಗಿಹ ಸ್ಥಳವುಂಟು । ಗೊತ್ತಾಗಿ ತೋರುವೆನಿಲ್ಲಿ ॥೮೦॥

ಬಂಗವಾಡಿಯ ಚೈತ್ಯಾಲಯದೊಳು ಶಾಂತೀಶ । ಶೃಂಗಾರಾಕಾರದೊಳಿಹನು ।
ಮಂಗಲರತ್ನತ್ರಯದ ಬಸದಿಯೊಳತಿ । ಕಂಗೊಳಿಸುವವೇನನೆಂಬೆ ॥೮೧॥

ವರಪದ್ಮಪ್ರಭನು ಪಾರಿಶ್ವಚಂದ್ರಪ್ರಭ । ರಿರುತಿಹರಾ ಮಂದಿರದೊಳು ।
ಪುರದೊತ್ತಿನಡುವಿಗೆ ಶ್ರವಣಗುಂಡೆಂಬರು । ಇರುತಿಪನದರೊಳು ಬ್ರಹ್ಮ ॥೮೨॥

ಬೆಂಡು ನೀರೊಳು ಮುಳುಗುವದಲ್ಲಿ ಮತ್ತೊಮ್ಮೆ । ಗುಂಡು ಪ್ರತ್ಯಕ್ಷ ತೇಲುವುದು ।
ಭಂಡಮಾತಲ್ಲಿದು ಜನವೆಲ್ಲ ಬಲ್ಲುದು । ಮಂಡಲಕತಿಚೋದ್ಯವಮುದು ॥೮೩॥

ಮರದಾಳಬಸದಿಯ ಚಂದ್ರನಾಥನು ಮತ್ತೆ । ನೆರೆ ಬಂಡಿಹೊಳೆಯೆಂಬೂರೊಳಗೆ ।
ಅರುಹನಂತಜಿನೇಶನು ಮತ್ತೊರ್ವ । ನೆರೆ ಬ್ರಹ್ಮರಾಯನಲ್ಲಿಪನು ॥೮೪॥

ನೇರಂಕಿಚಂದ್ರನಾಥನುಯಿಜಲಂಪಾಡಿ । ಊರೊಳನಂತಜಿನೇಶ ।
ಪಾರಿಶ್ವನಾಥನು ಒಳಲೆಂಬ ನಾಡೊಳು । ಬೇರೊಂದು ಮೊಗರಾದಿನಾಥ ॥೮೫॥

ನೆಲ್ಯಾಡಿನೇಮೀಶ ಬೈಪಾಡಿಶಾಂತೀಶ । ಬಲ್ಲನಾಡಾದೀಶನೇಶಿಲಾ ।
ಚೆಲುವೆತ್ತ ಚಂದ್ರಜಿನೇಂದ್ರನು ಶಿರಾಡಿ । ಯಲ್ಲಿ ಚಂದ್ರಜಿನೇಶ ॥೮೬॥

ಎಣಗಲ್ಲೆಂಬಲ್ಲಿಯಿರುವನನಂತೇಶ । ತಾನೆ ಕನ್ನರಪಾಡಿಯೊಳಗೆ ।
ಕಾಣುವನಂತಜಿನೇಶ ಪಂಜದೊಳಿರ । ಡಾಣೆಸಿ ಬಸದಿಗಳುಂಟು ॥೮೭॥

ದೊಡ್ಡಂಗಡಿಯ ಚಂದ್ರನಾಥ ಚಿಕ್ಕಂಗಡಿ । ದೊಡ್ಡಿಪನಂತಜಿನೇಶ ।
ಅಡ್ಡತ್ತ ಬೆಳ್ಳಾರಿಯಾದಿಜಿನೇಶನು । ಅಡ್ಡಿಯಾಗಿಪ ನಾಥ ಬಳಿಕ ॥೮೮॥

ಕೊಂಬಾರ ಪಾರಿಶ್ವನಾಥ ಪ್ರದುಬೆಟ್ಟು । ಎಂಬೂರೊಳವನೆ ಪಾರಿಶ್ವ ।
ನಂಬುಗೆ ನೆರಿವೊಗರೊಳಗನಂತೇಶನು । ಎಂಬುದು ಪ್ರಸಿಯಲ್ಲ ದಿಟವು ॥೮೯॥

ಒಪ್ಪುವ ಪುತ್ತೂರಬಸದಿ ಶಾಂತೀಶನು । ಉಪ್ಪರಂಗಡಿ ಚಂದ್ರನಾಥ ।
ಮುಪ್ಪೊಪ್ಪಡವೀಶ ಶ್ರೀಹೊಸಮುಗರೆಂಬಲ್ಲಿ । ಇಪ್ಪಾದಿನಾಥಗೊಂದಿಪೆನು ॥೯೦॥

ಮೂಡಣದೆಸೆಗಳೊಳಿಪ ಬಸದಿಗಳೆಲ್ಲ । ಆಡಿತೋರಿದೆ ಬಳಿಕಿನ್ನು ।
ರೂಢಿಯಾಗಿಪ ದಕ್ಷಿಣದೊಳುಳ್ಳ ಬಸದಿಯ । ಜೋಡಿಸಿ ಪೇಳ್ವೆ ಲಾಲಿಪುದು ॥೯೧॥

ಬಳ್ಳಬಂಜದ ಬಸದಿಯೊಳು ಪ್ರಸನ್ನತೆ । ಯುಳ್ಳ ಶ್ರೀಪಾರಿಶ್ವಜಿನಪ ।
ಸೊಲ್ಲಿಪೆಯುಜ್ಜಿಬೆಟ್ಟೆಂಬಲ್ಲಿಯಾದೀಶ । ಸಲ್ಲಲಿತಾಂಗನಾಗಿಹನು ॥೯೨॥

ನೋಡಲು ಕಾವಳದೊಳಗನಂತೇಶನು । ಕೂಡುಬೈಲೊಳು ಪಾರಿಶ್ವೇಶಾ ।
ಪಾಡಾದ ಮಣಿಬಸದಿಯೊಳು ಪಾರಿಶ್ವೇಶ । ಜೋಡಾಗಿ ಪದ್ಮಿನಿ ಸಹಿತ ॥೯೩॥

ವರಪಂಜಿಕಲ್ಲೊಳು ಪುರುಜಿನ ಬಂಟ್ವಾಳ । ಯರುಹನಾಲಯಾಧೀಶ ।
ಕಿರುತರದೊಳು ಯಲಿಯದನಂತನಾಥ ಮೂ । ಲರ ಪಟ್ಟಣದಿ ಚಂದ್ರನಾಥ ॥೯೪॥

ಪುರುಜಿನ ಬಾಳಿಕಳದ ಬಸದಿಯೊಳಿಹ । ವರಪಾಣಿಮಂಗಳೂರೊಳಗೆ ।
ಅರುಹನನಂತಜಿನೇಶ ನಂದಾವರ । ಪುರದೊಳು ಶಾಂತೀಶನಿಹನು ॥೯೫॥

ವಿಟ್ಟಲದೊಳು ಚಂದ್ರಜಿನಪನಜಪದೊಳಿಹ । ದಿಟ್ಟನನಂತಜಿನೇಶ ।
ನೆಟ್ಟಾನೆ ಹೋಗಲು ಆರ್ಕುಳವೆಂಬಲ್ಲಿ । ಸಿಟ್ಟಿಯರುಹನನಂತ ॥೯೬॥

ವರಮಂಜೇಶ್ವರದ ಚತುರ್ಮುಖಾಲಯದೊಳು । ಪುರುಚಂದ್ರ ಶಾಂತಿ ಶ್ರೀವೀರ ।
ಸಿರುತಿಹ ನಾಲ್ದೆಸೆಗಳೊಳು ಬೇರೊಂದು ಮಂ । ದಿರದಲ್ಲಿ ಪಾರಿಶ್ವನಾಥ ॥೯೭॥

ಬಲ್ಲಿದ ಉಚ್ಚಿಲದೊಳು ಪಾರಿಶ್ವೇಶನು । ಉಲ್ಲಾಳದೊಳಗಾದಿನಾಥ ।
ಸಲ್ಲಲಿತಾಂಗನು ಕೋಡಿಯಾಲ ಬಸದಿಯೊ । ಳುಳ್ಳ ಶ್ರೀ ಶಾಂತೀಶ ಮತ್ತೆ ॥೯೮॥

ಬೆಲುವನೂರ್ಲಂಗಡಿ ಚಂದ್ರನಾಥನು । ಮಳಲಿಯಾನಂತ ಜಿನೇಶ ।
ತಿಳುಪುವೆ ಮುಂದೆ ಬಸದಿ ವಿಸ್ತಾರವ । ಕಲಿಯುಗಕತಿಶಯವಾಗಿ ॥೯೯॥

ದಕ್ಷಿಣಭಾಗದೊಳಿಪ ಬಸದಿಗಳೆಲ್ಲ । ಈ ಕ್ಷಿತಿಗರುಪಿದೆ ಮುಂದೆ ।
ಸುಕ್ಷೇಮದೊಳು ಪಡುವಣಬಸದಿಗಳ ವಿ । ಪಕ್ಷಿಪೆ ಜನರರಿಕೆಯಲಿ ॥೧೦೦॥

ಮೂಲಕೆತ್ತುರದೊಳು ಜಿನರಮಂದಿರಗಳು । ಏಳುಂಟು ವಿವರಿಪೆನಿಲ್ಲಿ ।
ಮೂಲನಾಯಕನಂತನಾಥನ ಬಸದಿಯು । ಸಾಲದಂಗಣದೊಳಗಿಹವು ॥೧೦೧॥

ಅರಮನೆಸುಪ್ರತರೊಂದರೊಳಿಹರಲ್ಲಿ । ಎರಡನೆ ಬಸದಿಯೊಳ್ವೀರ
ಬೆರೆದುಜ್ಜ ಪ್ರಭನು ಪಾರಿಶ್ವಚಂದ್ರಪ್ರಭ । ರಿರಲೊಂದರೊಳಗಂತು ನಾಲ್ಕು ॥೧೦೨॥

ಪಾರಿಶ್ವನಾಥನು ಗುಡ್ಡ ಬಸದಿಯೊಳಿಹ । ಕಾರುಪಾಡಿಯನಂತನಾಥ ।
ಬೇರೆಬೈಲಂಗಡಿ ಬಸದಿಯೊಳ್ನೆಲೆಯಾಗಿ । ತೋರುವ ಚಂದ್ರಜಿನೇಂದ್ರ ॥೧೦೩॥

ವರಪಡುಬಿದಿರೆಯ ಬಸದಿಯೊಳ್ಸುವ್ರತ । ಪುರುಜಿನ ನಂದಿಕುರೊಳಗೆ ।
ಯುರವಾಳ ಬಸದಿ ಶ್ರೀಚಂದ್ರನಾಥನು ಮತ್ತೆ । ಪರಿದತ್ತ ಕಾಪೆಂಬೂರೊಳಗೆ ॥೧೦೪॥

ಇರುತಿಹ ಧರ್ಮನಾಥನು ಕಟ್ಟುಪಾಡಿಯು । ಪುರದೊಳನಂತ ಜಿನೇಶ ।
ಎರಡುಂಟು ಹೊಸಬೆಟ್ಟೆಂಬಲ್ಲಿ ಬಸದಿಗಳು । ವರನಂತಪಾರಿಶ್ವರಿಹರು ॥೧೦೫॥

ಬೋಳದ ಬಸದಿಯು ವೀರಜಿನೇಶನು । ಲೀಲೆಯೊಳಿರುತಿಹನಲ್ಲಿ ।
ಪೇಳಿದೆ ಪಶ್ಚಿಮಭಾಗದೊಳಿಹ ಜಿನ । ರಾಲಯಗಳನೆಲ್ಲ ಬಿಡದೆ ॥೧೦೬॥

ಮೂಡಲು ಗಾವುದ ತೆಂಕ ಮೂರ್ಗಾವುದ । ಕೂಡಲ್ಲಿ ಪಡುಗಾವುದೆರಡು ।
ಜೋಡೇಳು ಗಾವುದುತ್ತರ ಬಿದಿರೆಯ ಸುತ್ತ । ಆಡಿದ ಬಸದಿಗಳೆಲ್ಲ ॥೧೧೭॥

ಮಣಿಮಯಮಕುಟದಂತೊಪ್ಪುವ ಬಿದಿರೆಯ । ಜನಪದ ಮಧ್ಯದೇಶದೊಳು ।
ಘನವಾದ ತ್ರಿಭುವನತಿಲಕಚೂಡಾಮಣಿ। ಯೆನಿಪೊಂದು ಬಸದಿಯೊಪ್ಪಿಹುದು ॥೧೦೮॥

ಹರದಾರಿಯಗಲ ಪ್ರಾಕಾರದ ನಡುವೆ ತಾ । ಸುರಗಿರಿ ನಿಂದಂತೆ ಮೆರೆವ ।
ಬರದಂತೆ ನೆಲೆ ಮೂರಾಗಿಹ ಹೊಸಬದಿಯೊ । ಳಿರುತಿಹ ಶ್ರೀಚಂದ್ರನಾಥ ॥೧೦೯॥

ಮುಂದೆ ಮಂಟಪದೊಳು ಸಾಲ್ಕಂಭವ ನೆಮ್ಮಿ । ನಿಂದಿಹರನು ಪೇಳ್ವೆ ಮುದದಿ ।
ಚಂದ್ರಶೀತಲಪುರುಭುಜಬಲಿಯಿಹರಲ್ಲಿ । ನಿಂದಿಹ ಭೈರವ ಹೊರಗೆ ॥೧೧೦॥

ನಡುನೆಲೆಯೊಳಗೆ ಸುಪಾರಿಶ್ವ ಕಡೆಯೊಳು । ಸಿಡುದಾದ ಮೇರುಮಂದರವು ।
ಎಡಬಲ ಗಂಧಕುಟಿಗಳೊಳು ನಿತ್ತಿಹ । ರೊಡೆಯಾದಿ ಪಾರಿಶ್ವಜಿನರು ॥೧೧೧॥

ಸುಂದರಾಕಾರದೊಳೊಂದಿದೆ ತುದಿನೆಲೆ । ಎಂದೆನಲದು ಸ್ವರ್ಗಲೋಕ ।
ಒಂದಾಗಿ ಬಂದು ನಿಂದಂತೆ ತೋರುವದಲ್ಲಿ । ಚಂದ್ರಜಿನೇಂದ್ರನೊಪ್ಪಿಹನು ॥೧೧೨॥

ಪರಿಪರಿ ಚಿತ್ರವಿಚಿತ್ರದಿ ಶಿಲೆಗಳ । ಕೊರೆದು ಮಾಡಿಟ್ಟ ಬೊಂಬೆಗಳು ।
ನರರೊಮ್ಮೆ ನೋಡಿದ ಮಾತ್ರಕೆ ಸರ್ಗದ । ಸುರಸುಖ ಪಡೆವರರ್ಥಿಯೊಳು ॥೧೧೩॥

ಕೋಟಿಬಿಂಬಗಳೊಂದೆ ರಾಶಿಯಾಗಿರೆ ಸಿದ್ಧ । ಕೂಟವೆಂದೊರೆವರು ಜಗದಿ ।
ನೋಟಕರದು ಮೋಕ್ಷಸಿದ್ಧಕ್ಷೇತ್ರವೆಯೆಂದು । ಪಾಟಿಪರತಿಶಯ ಕಂಡು ॥೧೧೪॥

ಮೂರುಲೋಕದ ಮೇಲೆ ಮೋಕ್ಷವುಂಟೆಂಬುದು । ತೋರಿಸಿದಂತೆ ಪ್ರತ್ಯಕ್ಷ ।
ಮೂರನೆ ನೆಲೆಯಗ್ರದೊಳು ಸಿದ್ಧಕೂಟ ಪಿ । ಸ್ತಾರದಿ ರಾಜಿಸುತ್ತಿಹುದು ॥೧೧೫॥

ಗೋಪುರದ್ವಾರಕವಾಟಭಿತ್ತಿಗಳೊಳು । ರೂಪಿಸಿ ಮೆರೆವ ಚಿತ್ರಗಳು ।
ಆ ಪುರದೊಳು ಪುಟ್ಟಿದರು ಪೂರ ಕಾಣರು । ಏ ಪೇಳ್ವೆಯುದರ ವಿಸ್ತರವ ॥೧೧೬॥

ಮುಕ್ತಿಗೆ ಹಾರುವರಿಲ್ಲಯಿೀ ಕಲಿಯೊಳು । ಮುಕ್ತಿಯಿಂದೇರಲೇನು ।
ಮುಕ್ತಿಕನ್ಯೆಯುರದವಿಳುಹಿದುದೆಂಬಂತೆ । ವ್ಯಕ್ತಿಯಿಂ ಶೋಭಿಸುತ್ತಿಹುದು ॥೧೧೭॥

ಘಟ್ಟಿವಜ್ರುವ ಕೊರೆದು ಮೂರಂತರ । ಪೆಟ್ಟಗೆಯನು ಮಾಡಿ ಬಳಿಕಾ ।
ಸೃಷ್ಟಿಯೊಳಗೆಯಿದ್ದ ಕೌಶಲ ಚಿತ್ರಗಳ ತುಂಬಿ । ಇಟ್ಟನೆಂಬಂತೆ ರಾಜಿಪುದು ॥೧೧೮॥

ಇಳೆಯ ಜನರು ಭವಾಂಬುಧಿಯೊಳಜ್ಞಾನದಿ । ಮುಳುಗಿ ಸಾವರ ಕಂಡು ಸುರಪ ।
ಉಳಿಸಲೆಂದಿಳಿಸಿದ ಹಡಗು ತಾನೆಂಬಂತೆ । ಕಲಿಲಾರಿಬಸದಿ ರಾಜಿಪುದು ॥೧೧೯॥

ಒಟ್ಟುಪಮಾತಿಗೆ ಸ್ವರ್ಗ ಬೇಕೆಂಬವರು ಪೋಗಿ । ಸಿಟ್ಟಿಸಿದಾಕ್ಷಣವಹುದು ।
ಗುಟ್ಟೇನು ಜಗವೆಲ್ಲ ಬಲ್ಲುದು ಸುರಲೋಕ । ಮುಟ್ಟಿಯನಂತದೊಳೊಪ್ಪಿಹುದು ॥೧೨೦॥

ಕಿರಿದಾನು ಪಿರಿದೆಂಬ ಚತುರತೆಯಲ್ಲ । ಪರಮಾರ್ಥಪ್ರಮಾಣ್ಯವಾಗಿ ।
ಇರುವಷ್ಟು ಪೇಳಿದೆ ಭವ್ಯರು ಲಾಲಿಸಿ । ಸುರಸುಖ ಪ್ರಾಪ್ತರಾಗುವರು ॥೧೨೧॥

ಮೂರುಕಾಲವೊಳಿದ ಬಿಡದೋದಿ ಕೇಳ್ವರೆ । ನೂರುಪವಾಸ ಫಲವು ।
ಸೇರುವುದನುದಿನ ಕಡೆಗೆ ಕೈವಲ್ಯಯೆಂ । ಬೂರನಾಳುವರಿದು ಸಿದ್ಧ ॥೧೨೨॥

ಬಿದುರೆಯ ಚಂದಯ್ಯೋಪಾಧ್ಯಾಯ ಪೇಳಿದ । ಸದಮಲತೀರ್ಥಯಾತ್ರೆಯನು ।
ಮುದವೆತ್ತು ಮನವಿಟ್ಟು ಕೇಳಿ ಲಾಲಿಸೆ ಮುಕ್ತಿ । ಪದವಿ ಕೈಸೇರುವುದಹುದು ॥೧೨೩॥

ತೀರ್ಥಸಾಮ್ರಾಜ್ಯ ವೈಭವಯುತ ಸುಜ್ಞಾನ । ಮಾರ್ತಾಂಡ ಮಹಿಮಾವತಾರ ।
ಅರ್ಥವ ಕೆಡಿಸಿ ಮುಕ್ತಿಯನಾಳ್ದೆ ಶ್ರೀಜಿನ । ಸ್ವಾರ್ಥಕೊಟ್ಟೆಮ್ಮ ರಕ್ಷಿಪುದು ॥೧೨೪॥

ಕವಿ ಚಂದ್ರಸಾಗರವರ್ಣಿ ಹಾಗೂ ಅವನ ಕೃತಿಗಳು

● ಬಿ. ಬಿ. ಮಹೀಶವಾಡಿ

ಇವರು ಜೈನಕವಿ, ಗುರು ಕೊಲ್ಲಾಪೂರದ ಲಕ್ಷ್ಮೀಸೇನ; ಸ್ಥಳ ತೋವಿನಕೆರೆ. ಧರ್ಮಾಖ್ಯಪುರದ (ತೋವಿನಕೆರೆಯ) ಚಂದ್ರಪ್ರಭಸ್ವಾಮಿಯ ಅನುಗ್ರಹದಿಂದ ಕೆಲವು ಗ್ರಂಥಗಳನ್ನು ಬರೆದುದಾಗಿ ಕವಿ ಹೇಳಿಕೊಳ್ಳುತ್ತಾನೆ. ಜಿನಮುನಿ ಎಂಬ ಗ್ರಂಥದಲ್ಲಿ ತಾನಿನ್ನೂ ಗೃಹಸ್ಥನಿದ್ದಾಗ ೧. ಸ್ಮರಕೊರವಂಜಿ ೨. ನಾಗಕುಮಾರ ಷಟ್ಪದಿ ೩. ಬ್ರಹ್ಮಶತಕೋಶ ೪. (ಜಿನ)ಭಾರತಗಳನ್ನು ಬರೆದೆನೆಂದು ಹೇಳುತ್ತಾನೆ.[೧] ದೀಕ್ಷೆ ತೆಗೆದುಕೊಂಡು ಮುನಿಯಾದ ಮೇಲೆ ೧. ರುದ್ರಯಕ್ಷಗಾನ ೨. ಮುಲಾಶಾಸ್ತ್ರ ೩. ಪರಶುರಾಮಭಾರತ ೪. ಭವ್ಯಾಮೃತ ೫. ಚಂದನೆಯ ಯಕ್ಷಗಾನ ಎಂಬ ಐದು ಕೃತಿಗಳನ್ನು ಬರೆದುದಾಗಿ ಹೇಳುತ್ತಾನೆ.[೨] ಇವನೇ ೧. ಜಿನರಾಮಾಯಣ ೨. ವಿಕ್ರಮಂಧರಕಾವ್ಯ ೩. ಚಾವುಂಡರಾಯನ ಕಥೆ ೪. ವಿಭೀಕ್ಷಣಬುದ್ಧಿ ೫. ವಸಂತ ತಿಲಕೆ ೬. ಧರ್ಮಪರೀಕ್ಷೆ ಮುಂತಾದ ಗ್ರಂಥಗಳನ್ನೂ ಬರೆದಿರುವುದಾಗಿ ಕವಿಚರಿತೆ ಕಾರರು ಗ್ರಂಥಶುದ್ಧಿಯಲ್ಲಿ ತಿದ್ದಿಕೊಂಡಿದ್ದಾರೆ. ಶ್ರೀ ಟಿ. ಕೆ. ಸೀತಾರಾಮ ಜೋಯಿಸರು ಬರೆದು ತಿಳಿಸಿದ ಮೇರೆಗೆ ಈ ತಿದ್ದುಪಡಿ ಮಾಡಿಕೊಂಡಿರುವುದಾಗಿ ಕವಿಚರಿತೆ ಕಾರರು ಹೇಳುತ್ತಾರೆ. ಆದರೆ ಜೋಯಿಸರು ಸರಿಯಾದ ಆಧಾರ ಕೊಟ್ಟಿಲ್ಲವೆಂದು ಹೇಳುತ್ತಾರೆ.[೩]

ಈ ಮೇಲೆ ಉಲ್ಲೇಖ ಮಾಡದೆ ಇದ್ದ ಇನ್ನೂ ಕೆಲವು ಕೃತಿಗಳನ್ನು ಚಂದ್ರಸಾಗರ ವರ್ಣಿಯೆ ಬರೆದುದಾಗಿ ಹೇಳಿ ಕವಿಚರಿತೆಕಾರರು ಕೆಲವನ್ನು ಮತ್ತೆ ಸೇರಿಸಿಕೊಂಡಿದ್ದಾರೆ; ೧. ಜಿನಭಕ್ತಿಸಾರ ೨. ಕದಂಬಪುರಾಣ ೩. ಪುರಾಣಸ್ತೋತ್ರ ೪. ಹಿಮಶೀತಳನ ಕಥೆ (ಅಕಲಂಕಚರಿತೆ) ೫. ಬೆಟ್ಟವರ್ಧನಚರಿತೆ (೬) ವಾಸುದೇವ ಪಾರಿಜಾತ ಅಲ್ಲದೆ, ಶಬ್ದಾರ್ಥಮಂಜರಿ ಎಂಬ ಗ್ರಂಥವನ್ನು ಅವನು ಬರೆದಿಲ್ಲ ಎಂದು ತಿದ್ದುಪಡಿ ಮಾಡಿ

೧, ೨ ಆರ್. ನರಸಿಂಹಾಚಾರ್ಯ : ಕರ್ನಾಟಕ ಕವಿಚರಿತೆ, III (ತಿದ್ದಿದ ದ್ವಿ.ಮು. ೧೯೭೪) ಪು. ೧೬೦.

೩ ಅದೇ, (ಪ್ರ. ಮು. ೧೯೨೯) ಪು. ೪೭೩ (ಮತ್ತು ದ್ವಿ. ಮು. ೧೯೭೪) ಪು. ೧೬೦ರ ಅಡಿಟಿಪ್ಪಣಿ.

ಕೊಂಡಿದ್ದಾರೆ.[೪] ಬಿಜ್ಜಣರಾಯ ಪುರಾಣವನ್ನೂ ಚಂದ್ರಸಾಗರವರ್ಣಿಯೇ ಬರೆದನೆಂದು ಕವಿಚರಿತೆಕಾರರಿಗೆ ತರುವಾಯ ತಿಳಿದಿದೆ. ಅದರ ಬಗ್ಗೆ ವಿವರ ಕೊಟ್ಟಿದ್ದಾರೆ.[೫]

ಆರ್. ನರಸಿಂಹಾಚಾರ್ಯರು "ಬ್ರಹ್ಮಣಾಂಕ"ನೆಂಬ ಕವಿಯ ಬಗ್ಗೆ ಬರೆಯುತ್ತ, ಈತನು ೧. ಜಿನಭಾರತ ೨. ಕಂದರ್ಪಕೊರವಂಜಿ ಎಂಬ ಕೃತಿಗಳನ್ನು ಬರೆದಿದ್ದಾನೆ ಎಂದು ಹೇಳಿದುದಲ್ಲದೆ, ಬ್ರಹ್ಮಯ್ಯ ವಿರಚಿತ ದ್ವಾದಶಾನುಪ್ರೇಕ್ಷೆ ಬ್ರಹ್ಮ-ಣಾಂಕನ ಕೃತಿಯೆ ಆಗಿರಬಹುದೋ ಏನೋ ತಿಳಿಯದು ಎಂದಿದ್ದಾರೆ.[೬] ಈತನು ಜೈನಕವಿ. ಇವನ ಅಜ್ಜ ಚಂದ್ರನಾಥ, ತಂದೆ ಚಂದ್ರಣ್ಣ, ತಾಯಿ ಪೊಂಬುಜೆ, ಸಹೋದರರು— ಚಂದ್ರನಾಥ, ಬ್ರಹ್ಮ, ಪದ್ಮ ಎಂಬವರು. ಇವನ ಪೂರ್ವಿಕರು ತುಂಗ-ಭದ್ರಾ ಸಮೀಪದ ಹುಲಿಗೆ(ಇಂದಿನ ಮುನಿರಾಬಾದ)ಯಲ್ಲಿ ಇದ್ದರೆಂದೂ, ಇಕ್ಷ್ವಾಕು ವಂಶದವರೆಂದೂ, ಇವನ ಸ್ಥಳ ತೋವಿನಕೆರೆಯೆಂದೂ ವಿವರವನ್ನು ಕವಿಯ ಹೇಳಿಕೆಯ ಆಧಾರದಿಂದಲೇ ಕವಿಚರಿತೆಕಾರರು ಒದಗಿಸಿದ್ದಾರೆ.

ಇಂದು ತೋವಿನಕೆರೆ ತುಮಕೂರು ಜಿಲ್ಲೆಯ ಕೊರಟಗೆರೆ ತಾಲೂಕಿನಲ್ಲಿದೆ. ಬ್ರಹ್ಮಣಾಂಕನ ಪೂರ್ವಜರು ಮುನಿರಾಬಾದ (ಹುಲಿಗೆ) ದಿಂದ ಯಾವುದೋ ಕಾರಣದಿಂದ ತೋವಿನಕೆರೆಗೆ ಬಂದು ನೆಲಸಿದರು. ಅಲ್ಲಿ ಬ್ರಹ್ಮಣಾಂಕನು ಶ್ರಾವಕಧರ್ಮವನ್ನು (ಗೃಹಸ್ಥಾಶ್ರಮ) ಅನುಸರಿಸುತ್ತಿರುವಾಗ ಆ ಊರಿನ ಜಿನಮಂದಿರದ ಚಂದ್ರಪ್ರಭಸ್ವಾಮಿಯ ಅನುಗ್ರಹದಿಂದ ಕಂದರ್ಪಕೊರವಂಜಿ, ಜಿನಭಾರತ ಮುಂತಾದ ಕೃತಿಗಳನ್ನು ರಚಿಸಿ, ಮುಂದೆ ಕೊಲ್ಲಾಪುರದ ಚಂದ್ರಪ್ರಭ ಮಂದಿರದಲ್ಲಿ ಲಕ್ಷ್ಮೀಸೇನರಿಂದ ಜಿನದೀಕ್ಷೆಯನ್ನು ತೆಗೆದುಕೊಂಡು ಚಂದ್ರಸಾಗರವರ್ಣಿ ಎಂಬ ಜಿನಮುನಿಯ ಹೆಸರಿನಿಂದ (ಸನ್ಯಾಸಾಶ್ರಮದ ಹೆಸರಿನಿಂದ) ಅನೇಕ ಕೃತಿಗಳನ್ನು ಬರೆದನು. ಜೈನಧರ್ಮದ ಪದ್ಧತಿಯಂತೆ ಶ್ರಾವಕ–ಬ್ರಹ್ಮಣಾಂಕನು ಹೆಸರು ಬದಲಿಸಿ, ಜಿನಮುನಿ–ಚಂದ್ರಸಾಗರವರ್ಣಿಯಾದುದು ಜಿನಮುನಿ ಎಂಬ ಅವನ ಗ್ರಂಥದಿಂದಲೇ ತಿಳಿಯುತ್ತದೆ. ಹೀಗಿದ್ದರೂ ಆರ್. ನರಸಿಂಹಾಚಾರ್ಯರಿಗೆ ಈ ವಿಷಯ ಸ್ಪಷ್ಟವಾಗಿ ತಿಳಿದಿರಲಿಲ್ಲ. ಅಂತೆಯೇ ಅವರು ಬ್ರಹ್ಮಣಾಂಕ (ಸು. ೧೮೦೦) ಮತ್ತು ಚಂದ್ರಸಾಗರವರ್ಣಿ (೧೮೧೦) ಭಿನ್ನವ್ಯಕ್ತಿಗಳೆಂದು ಭಾವಿಸಿದ್ದರು. ಬ್ರಹ್ಮಣಾಂಕ ಮತ್ತು ಚಂದ್ರಸಾಗರವರ್ಣಿ ಎಂಬ ಹೆಸರುಗಳು ಒಂದೇ ವ್ಯಕ್ತಿಗೆ ಸಂಬಂಧಿಸಿದವು ಎಂಬ ವಿಷಯವನ್ನು ಹಂಪ ನಾಗರಾಜಯ್ಯನವರು ಆಗಲೆ ಸ್ಪಷ್ಟಪಡಿಸಿದ್ದಾರೆ.[೭] ಅಲ್ಲದೆ ಚಂದ್ರಸಾಗರವರ್ಣಿಯನ್ನು ಕುರಿತು ವಿವರಗಳನ್ನು 'ಪರಿಷತ್ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.[೮]

---

೪ ಅದೇ, (ಪ್ರ. ಮು. ೧೯೨೯) ಪು. ೪೭೧.

೫ ಅದೇ. (ಪ್ರ. ಮು. ೧೯೨೯) ಪು. ೨೫೯ ಮತ್ತು (ದ್ವಿ. ಮು. ೧೯೭೪) ಪು. ೧೬೫.

೬ ಅದೇ. (ದ್ವಿ. ಮು. ೧೯೭೪) ಪು. ೧೪೮.

೭ ಹಂಪ ನಾಗರಾಜಯ್ಯ : ಬ್ರಹ್ಮಣಾಂಕನೇ ಚಂದ್ರಸಾಗರವರ್ಣಿ (ವಿವೇಕಾಭ್ಯುದಯ ಸಪ್ಟೆಂಬರ ೧೯೭೧).

೮ ಹಂಪ ನಾಗರಾಜಯ್ಯ : ಕ. ಸಾ. ಪರಿಷತ್ ಪತ್ರಿಕೆ, ೫೮–೨, ಪು. ೬೪.

ಇಂದಿನವರೆಗೆ ಉಪಲಬ್ಧವಿರುವ ಎಲ್ಲ ಆಧಾರಗಳ ಮೇಲಿಂದ ಕವಿ ಚಂದ್ರಸಾಗರ ವರ್ಣಿ (ಬ್ರಹ್ಮಣಾಂಕ) ಬರೆದ ಗ್ರಂಥಗಳ ಸಮಗ್ರ ಪಟ್ಟಿಯನ್ನು ಸಿದ್ಧಪಡಿಸುವುದು ಸಾಧ್ಯವಿದೆ; ಚಂದ್ರಸಾಗರವರ್ಣಿಯ ಗ್ರಂಥಗಳ ಸಂಖ್ಯಾನಿರ್ಣಯವೇ ಒಂದು ಸಮಸ್ಯೆಯಾಗಿರುವುದರಿಂದ ಅವನ ಗ್ರಂಥಗಳ ಸಮಗ್ರ ಪಟ್ಟಿಯನ್ನು ಸಿದ್ಧಮಾಡುವದೂ ಮಹತ್ವಪೂರ್ಣವಾದುದಾಗಿದೆ.

೧. ಪರಶುರಾಮ ಭಾರತ (೧೮೧೦) : ಭಾ.ಷ. ಅಧ್ಯಾಯ ೨೪, ಪದ್ಯ ೧೩೬೯

೨. ಜಿನಭಾರತ : ಭಾ.ಷ. ಸಂಧಿ ೮೪, ಪದ್ಯ ೪೬೨೮, ೧೮೮೭ರಲ್ಲಿ ಅಚ್ಚಾಗಿದೆ.

೩. ಜಿನರಾಮಾಯಣ (ಕಾಲ?) : ಭಾ. ಷ. ಆಶ್ವಾಸ ೭೪, ಪದ್ಯ ೪೩೯೯, ೧೯೩೯ ರಲ್ಲಿ ಅಚ್ಚಾಗಿದೆ.

೪. ಜಿನಮುನಿ (ಫಣಿಸುತಚರಿತೆ) (೧೮೧೪) : ಭಾ.ಷ. ಸಂಧಿ ೫೦, ಪದ್ಯ ೨೫೫೧, ೧೮೮೪ ರಲ್ಲಿ ಅಚ್ಚಾಗಿದೆ.

೫. ವಿಕ್ರಮಂಧರ ಕಾವ್ಯ (ಕಾಲ?) : ಭಾ. ಷ. ಪದ್ಯ ೩೦೪೪.
(ನಾಗಕುಮಾರ ಷಟ್ಪದಿ)

೬. ಬಿಜ್ಜಣರಾಯ ಪುರಾಣ (ಕಾಲ?) : ಭಾ. ಷ. ಆಶ್ವಾಸ ೮, ಪದ್ಯ ೪೯೮, ೧೯೧೦ ರಲ್ಲಿ ಅಚ್ಚಾಗಿದೆ.

೭. ಕದಂಬಪುರಾಣ (೧೮೩೩?) : ಭಾ. ಷ. ೨೦೦ ಪದ್ಯಗಳು, ಅಚ್ಚಾಗಿದೆ.

೮. ಹಿಮಶೀತಳನ ಕಥೆ (ಅಕಳಂಕಚರಿತೆ) : ಸಾಂಗತ್ಯ, ೮೭ ಪದ್ಯಗಳು.

೯. ಚಾವುಂಡರಾಯನ ಕಥೆ

೧೦. ಬೆಟ್ಟವರ್ಧನ ಚರಿತೆ (ವಿಷ್ಣುವರ್ಧನ ಕಥೆ) : ಸಾಂಗತ್ಯ, ೧೨೧ ಪದ್ಯಗಳು.

೧೧. ಭವ್ಯಾಮೃತ : ಒಟ್ಟು ೧೧೦ ಕಂದಪದ್ಯಗಳು.

೧೨. ಜಿನಭಕ್ತಿಸಾರ : ಭಾ. ಷ. ೫೧ ಪದ್ಯಗಳು.

೧೩. ಪುರಾಣಸ್ತೋತ್ರ : ವಾ. ಷ. ೫೧ ಪದ್ಯಗಳು.

೧೪. ಬ್ರಹ್ಮಶತಕೋಶ

೧೫. ಶಬ್ದಾರ್ಥಮಂಜರಿ

೧೬. ವಿಭೀಕ್ಷಣ ಬುದ್ಧಿ

೧೭. ಮುಲ್ಲಾಶಾಸ್ತ್ರ : ಭಾ. ಷ. ಆಶ್ವಾಸ ೮, ಪದ್ಯ ೪೦೦.

೧೮. ವಸಂತತಿಲಕೆ

೧೯. ದ್ವಾದಶಾನುಪ್ರೇಕ್ಷೆ

೨೦. ಧರ್ಮಪರೀಕ್ಷೆ

೨೧. ಚಂದನೆಯ ಯಕ್ಷಗಾನ

೨೨. ರುದ್ರಯಕ್ಷಗಾನ

೨೩. ವಸುದೇವ ಪಾರಿಜಾತ ಯಕ್ಷಗಾನ

೨೪. ಮನ್ಮಥ (ಸ್ಮರ) ಕೊರವಂಜಿ ಯಕ್ಷಗಾನ

೨೫. ರೋಹಿಣಿ ಸ್ವಯಂವರ ಯಕ್ಷಗಾನ

೨೬. ಭವ್ಯಜನ ಚಿಂತಾಮಣಿ (?)– ೧೯೧೮, ಚಂಪೂಕಾವ್ಯ.

೨೭. ಯಶೋಧರ ಷಟ್ಪದಿ

೨೮. ಪಂಚಪರಮೇಷ್ಠಿಗಳ ವ್ಯಾಖ್ಯಾನ*

೨೯. ವಿಂಶತಿಪ್ರರೂಪಣೆ ಟೀಕೆ (ಮೂಲ-ಪದ್ಮಪ್ರಭ ತ್ರೈವಿದ್ಯ) ೧೮೫೦.*

ಈ ಕೃತಿಗಳಲ್ಲಿ ಶಬ್ದಾರ್ಥಮಂಜರಿಯ ಬಗ್ಗೆ ಬರೆಯುತ್ತ ಕವಿಚರಿತೆಕಾರರು ಚಂದ್ರಸಾಗರವರ್ಣಿ ಈ ಕೃತಿಯನ್ನು ಬರೆದಿದ್ದಾನೆ ಎಂದು ಒಪ್ಪಿ ಹಿಂದಿನಿಂದ ಬರೆದಿಲ್ಲವೆಂದು ನಿರಾಕರಿಸಿದ್ದಾರೆ. ಆದರೆ ಜಿನಮುನಿ ಕಾವ್ಯದಲ್ಲಿ ಶಬ್ದಾರ್ಥಮಂಜರಿಯ ಉಲ್ಲೇಖವಿದೆ. ರೋಹಿಣಿ ಸ್ವಯಂವರ ಎಂಬ ಯಕ್ಷಗಾನವು ವಸುದೇವ ಪಾರಿಜಾತಾಂತರ್ಗತ ಕಥಾವಸ್ತುವಾಗಿದೆ. ಆದ್ದರಿಂದ ವಸುದೇವ ಪಾರಿಜಾತದಲ್ಲಿಯೇ ಅದನ್ನು ಸೇರಿಸುವುದೂ ಉಂಟು. ಮತ್ತು ಪ್ರತ್ಯೇಕ ಕೃತಿಯೆಂದು ಪರಿಗಣಿಸಬಹುದು. ಜಿನಮುನಿ (ಫಣಿಸುತಚರಿತೆ) ಮತ್ತು ವಿಕ್ರಮಂಧರ ಕಾವ್ಯ (ನಾಗಕುಮಾರ ಷಟ್ಪದಿ) ಗಳಲ್ಲಿ ಕಥಾವಸ್ತು ಒಂದೇ ಇದ್ದರೂ ಎರಡೂ ಭಿನ್ನಕೃತಿಗಳೆಂದು ಸ್ಪಷ್ಟವಾಗಿದೆ. ಫಣಿಸುತ ಎಂದರೆ ನಾಗಕುಮಾರ. ಹೆಸರು ಒಂದೇ ಆದ್ದರಿಂದ ಗೊಂದಲ ಉಂಟಾಗುತ್ತದೆ. ಆದರೆ ಒಂದು ವಾರ್ಧಿಕ ಷಟ್ಪದಿಯಲ್ಲಿದೆ, ಇನ್ನೊಂದು ಭಾಮಿನಿ ಷಟ್ಪದಿಯಲ್ಲಿದೆ. ಚಂದನಾದೇವಿಯ ಕಥೆ, ಚಂದನೆಯಕ್ಷಗಾನ ಎಂದರೆ ಒಂದೇ ಕೃತಿ. ಮನ್ಮಥಕೊರವಂಜಿ ಕೆಲವು ಕಡೆಗೆ ಸ್ಮರಕೊರವಂಜಿ, ಕಂದರ್ಪ ಕೊರವಂಜಿ ಎಂದು ಉಲ್ಲೇಖವಾಗಿದೆ. ಅದು ಒಂದೇ ಕೃತಿ. ಹಿಮಶೀತಳನ ಕಥೆ ಎಂದರೆ ಅಕಳಂಕ ಚರಿತೆ. ವಿಷ್ಣುವರ್ಧನ ಕಥೆ ಎಂದರೆ ಬೆಟ್ಟವರ್ಧನನ ಚರಿತೆ. ಭವ್ಯಜನಚಿಂತಾಮಣಿ ಚಾರುಕೀರ್ತಿ ಪಂಡಿತರದಲ್ಲ; ಚಂದ್ರಸಾಗರವರ್ಣಿಯದೇ ಕೃತಿ ಎಂಬುದು ಕವಿ ಚರಿತೆ III ಯಲ್ಲಿ ಹೇಳಲಾಗಿದೆ.[೯] ಯಶೋಧರ ಷಟ್ಪದಿ ಚಂದ್ರಸಾಗರವರ್ಣಿಯ

* ಈ ಗ್ರಂಥ ನನ್ನ ಬಳಿ ತಾಡವೋಲೆಯ ರೂಪದಲ್ಲಿ ಇದೆ. ಈಚೆಗೆ ಇದು ದೊರೆತಿದೆ.

* ಇದು ಲಕ್ಷ್ಮೀಸೇನಮಠ (ಕೊಲ್ಹಾಪುರ)ದ ಹಸ್ತಪ್ರತಿ ಸಂಗ್ರಹದಲ್ಲಿದೆ.

೯ ಆರ್. ನರಸಿಂಹಾಚಾರ್ಯ : ಕರ್ಣಾಟಕ ಕವಿಚರಿತೆ III (ದ್ವಿ. ಮು. ೧೯೭೪) ಪು. ೧೭೫, ಅಡಿಟಿಪ್ಪಣಿ.

ಕೃತಿ ಎಂದು "ಹೊಸಗನ್ನಡದ ಅರುಣೋದಯ"ದಲ್ಲಿ ಶ್ರೀನಿವಾಸ ಹಾವನೂರರು ಉಲ್ಲೇಖಿಸಿದ್ದಾರೆ.[೧೦] ಅಂತೂ ಚಂದ್ರಸಾಗರವರ್ಣಿ ಬರೆದ ಕೃತಿಗಳ ಬಗ್ಗೆ ಕೆಲವೊಂದು ಅಸಂದಿಗ್ಧತೆ ಕಂಡಿದೆಯಾದರೂ ಈಗ ಅದು ಸ್ಪಷ್ಟವಾಗಿದೆ. ಸುಮಾರು ೨೯ ಕ್ಕಿಂತ ಹೆಚ್ಚು ಗ್ರಂಥಗಳನ್ನು ಅವನು ಬರೆದಿದ್ದಾನೆ ಎಂಬುವುದು ನಿರ್ಧರಿಸಲ್ಪಟ್ಟಿದೆ. ಅಲ್ಲದೆ ಇನ್ನೂ ಕೆಲವು ಗ್ರಂಥಗಳನ್ನು ಅವನು ಬರೆದಿರಲೂಬಹುದು.

ಆಯಾ ಕೃತಿಗಳನ್ನು ಬರೆದ ಕಾಲ, ಕೆಲವು ಕೃತಿಗಳನ್ನು ಬಿಟ್ಟು, ಸ್ಪಷ್ಟವಾಗಿ ತಿಳಿದಿಲ್ಲವಾದ್ದರಿಂದ ಕಾಲಕ್ರಮಕ್ಕನುಗುಣವಾಗಿ ಕೃತಿಗಳನ್ನು ಪಟ್ಟಿ ಮಾಡುವುದು ಸಾಧ್ಯವಾಗಿಲ್ಲ. ಉದಾ : ಪರಶುರಾಮಭಾರತ (೧೯೧೦) ಮೊದಲಕೃತಿಯಾಗಿರಲಿಕ್ಕಿಲ್ಲ; ಭವ್ಯಚಿಂತಾಮಣಿ (೧೯೧೮) ಮತ್ತು ಯಶೋಧರಚರಿತೆಗಳು ಕೊನೆಕೊನೆಯ ಕೃತಿಗಳಾಗಿರಲಿಕ್ಕಿಲ್ಲ.

ಪರಶುರಾಮಭಾರತ ಜೈನಶಾಸ್ತ್ರಾನುಗತವಾದ ಪರಶುರಾಮನ ಚರಿತೆಯಾಗಿದೆ. ಅವನ ಕತೆ ೧೮ನೆಯ ಆದಿನಾಥ ತೀರ್ಥಂಕರನ ಕಾಲಕ್ಕೆ ಸಂಬಂಧಿಸಿದುದು. ಅವನು ಸಹಸ್ರ ಬಾಹುವನ್ನು ಯುದ್ಧದಲ್ಲಿ ಸೋಲಿಸಿ. ಭೂಮಿಯಮೇಲಿನ ಸಕಲ ಕ್ಷತ್ರಿಯರನ್ನು ೨೧ ಸಾರೆ ಸೋಲಿಸಿ, ಕೊನೆಯಲ್ಲಿ ಸುಭೌಮ ರಾಜನಿಂದ ಸೋತು ಹತನಾದನು. ಪ್ರಾರಂಭದಲ್ಲಿ ಚಂದ್ರನಾಥ, ಸುಪಾರ್ಶ್ವನಾಥ, ಅರನಾಥ ತೀರ್ಥಂಕರರ ಸ್ತುತಿ ಇದೆ. ಚರಿತ್ರೆ ನಿರರ್ಗಳವಾಗಿ ಓಡುತ್ತದೆ. ಶೈಲಿ ಮಧ್ಯಮ ತರಗತಿಯದಾಗಿದೆ. ಅಲ್ಲಲ್ಲಿ ಪ್ರಕೃತಿ ವರ್ಣನೆ ಇದೆ.

ಜಿನಭಾರತವು ಚಂದ್ರಸಾಗರವರ್ಣಿ (ಬ್ರಹ್ಮಣಾಂಕ)ಯ ಕೃತಿಗಳಲ್ಲಿ ಅತ್ಯಂತ ಹಿರಿದಾದ ಗಾತ್ರ ಉಳ್ಳದ್ದು. ಪಾಂಡವ ಕೌರವರ ಚರಿತ್ರೆ, ಕೃಷ್ಣನೇಮಿನಾಥರ ಚರಿತ್ರೆ ಜೈನ ಸಂಪ್ರದಾಯದಂತೆ ಇದರಲ್ಲಿ ಹೇಳಿದೆ. ನೇಮಿಚಂದ್ರ, ಕರ್ಣಪಾರ್ಯ, ಮಂಗರಸ ಮುಂತಾದ ಹಲವು ಜೈನ ಕವಿಗಳು ಜಿನಭಾರತವನ್ನು ಬರೆದಿದ್ದಾರೆ. ನೇಮಿನಾಥ ತೀರ್ಥಂಕರ ಚರಿತ್ರೆಯೇ ಭಾರತದ ಕಥೆಯಾಗಿದೆ. ಹಿಂದಿನವರನ್ನು ಅನುಸರಿಸಿ ಚಂದ್ರಸಾಗರವರ್ಣಿ ಮತ್ತೊಂದು ಭಾರತ ನಿರ್ಮಿಸಿದುದರಲ್ಲಿ ವೈಶಿಷ್ಟ್ಯವೇನೂ ಇಲ್ಲ. ಆದರೆ ಕುಮಾರವ್ಯಾಸ ಕವಿಯ ಪ್ರಭಾವ ಮುದ್ರೆ ಅಲ್ಲಲ್ಲಿ ಎದ್ದು ಕಾಣುತ್ತದೆ. ''ಈ ಕವಿಯ ಜಿನಭಾರತಕ್ಕೆ ವಸ್ತುವಿನ ದೃಷ್ಟಿಯಿಂದ ಪ್ರತ್ಯೇಕ ಸ್ಥಾನ ದೊರೆಯುತ್ತದೆ. ಆದರೆ, ಒಂದು ವ್ಯತ್ಯಾಸವನ್ನು ಗುರುತಿಸುವುದು ಅಗತ್ಯ. ಹರಿವಂಶವನ್ನು ಬಿಟ್ಟು ಕೇವಲ ಕುರುವಂಶವನ್ನಷ್ಟೇ ಕಥೆಯಾಗಿ ಅವಲೋಕಿಸಿದ ಕಾವ್ಯ ಬ್ರಹ್ಮಣಾಂಕನದು (ಚಂದ್ರಸಾಗರವರ್ಣಿಯದು). ಇದರಲ್ಲಿ ಮಂಗರಸನ ಮೇಲ್ಪಂಕ್ತಿಯನ್ನಿಟ್ಟು

೧೦ ಶ್ರೀನಿವಾಸ ಹಾವನೂರ : ಹೊಸಗನ್ನಡದ ಅರುಣೋದಯ (ಪ್ರ. ಮು. ೧೯೭೪) ಪು. ೨೦೩

ಕೊಂಡಿದ್ದರೂ ಬ್ರಹ್ಮಣಾಂಕನು (ಚಂದ್ರಸಾಗರವರ್ಣಿ) ಅನೇಕ ನವೀನಾಂಶಗಳನ್ನು ಕಾವ್ಯಶರೀರದಲ್ಲಿ ಸಮಾವೇಶಗೊಳಿಸಿದ್ದಾನೆ" ಎಂದಿದ್ದಾರೆ ಹಂಪ ನಾಗರಾಜರು.[೧೧]

ಜಿನರಾಮಾಯಣವು ಜೈನ ಸಂಪ್ರದಾಯದ ರಾಮನ ಕಥೆ. ಕೃತಿ ಸಾಮಾನ್ಯವಾಗಿ ಉಳಿದ ಕೃತಿಗಳಂತೆ ಚಂದ್ರನಾಥಾದಿಗಳ ಸ್ತುತಿಯಿಂದ ಪ್ರಾರಂಭ. ಬ್ರಹ್ಮಣಾಂಕ ಕವಿಯು ಕೊಲ್ಲಾಪೂರದ ಲಕ್ಷ್ಮೀಸೇನರಿಂದ ದೀಕ್ಷೆ ಪಡೆದು ಚಂದ್ರಸಾಗರವರ್ಣಿ ಎಂಬ ಹೆಸರನ್ನು ಹೊಂದಿದ ವಿಷಯ ೧:೨೧ರಲ್ಲಿ ಬಂದಿದೆ. ಜಿನಮುನಿ ಕಾವ್ಯದಲ್ಲಿಯೂ ಈ ವಿಷಯ ೧:೧೪ರಲ್ಲಿ ಸ್ಪಷ್ಟವಾಗಿದೆ. ಜಿನಮುನಿ ಮತ್ತು ವಿಕ್ರಮಂಧರ ಕಾವ್ಯಗಳಲ್ಲಿ ಜೈನ ಕಾಮದೇವರಲ್ಲಿ ಒಬ್ಬನಾದ ನಾಗಕುಮಾರನ ಚರಿತ್ರೆ ಬಂದಿದೆ. ಒಂದೇ ಕಥಾವಸ್ತುವಿನ ಮೇಲೆ ಎರಡು ಹಿರಿಯಗಾತ್ರದ ಕೃತಿಗಳನ್ನು ಕವಿ ರಚಿಸಿದುದೇಕೋ ತಿಳಿಯದು. ತುಲನಾತ್ಮಕ ಅಭ್ಯಾಸ ಇನ್ನೂ ನಡೆದಿಲ್ಲ.

ಬಿಜ್ಜಣರಾಯ ಪುರಾಣವು ಭಾಮಿನಿ ಷಟ್ಪದಿಯಲ್ಲಿ ಬರೆದ ಒಂದು ಚಿಕ್ಕ ಚರಿತ್ರ ಕಾವ್ಯ. ಚಾರಿತ್ರಿಕ ಅಂಶಗಳಲ್ಲಿ ಹಾಗೂ ಕಾವ್ಯಾಂಶಗಳಲ್ಲಿ ಶ್ರೇಯಸ್ಸು ಉಂಟಾಗುವ ಕೃತಿಯೇನೂ ಅಲ್ಲ.

ಕದಂಬ ಪುರಾಣವು ಒಂದು ಚಮತ್ಕಾರಿಕ ಪುಟ್ಟ ಕಾವ್ಯ. ಇನ್ನೂರು ಪದ್ಯಗಳುಂಟು. ಮೊದಲಿನ ೧೬೨ ಪದ್ಯಗಳು ಭಾಮಿನಿ ಷಟ್ಪದಿಯಲ್ಲಿಯೂ, ಮುಂದಿನ ೪೦ ಪದ್ಯಗಳು (೧೬೩–೨೦೦) ಸಾಂಗತ್ಯದಲ್ಲಿಯೂ ಇವೆ. ಕೊನೆಯಲ್ಲಿ ಸಂಸ್ಕೃತ ಅಕಲಂಕ ಸ್ತೋತ್ರ (೧೦ ಪದ್ಯ) ಜೋಡಿಸಲ್ಪಟ್ಟಿದೆ. ಬಳ್ಳಾರಿಯಲ್ಲಿ ಅಚ್ಚೂ ಆಗಿದೆ. ಕಾಲ ಸರಿಯಾಗಿ ನಮೂದಿಸಲ್ಪಟ್ಟಿಲ್ಲ.

ಬೌದ್ಧ, ಶ್ವೇತಾಂಬರ, ರಾಮಾನುಜ, ರಜಪೂತ, ಲಿಂಗಾಯತ, ಹೆಗ್ಗಾಣಿಗ ಮತಗಳು ಹುಟ್ಟಿದ ವಿಷಯವನ್ನೂ, ಯಲ್ಲಮ್ಮ ಪರಶುರಾಮರ ಕಥೆ, ಕೃಷ್ಣನಿಗೆ ದೇವತ್ವವುಂಟಾದ ಕಥೆ, ಮುಲ್ಲಾಶಾಸ್ತ್ರ ನಿರ್ಮಾಣವಾದ ಕಥೆ, ಶಿವಕೋಟಿ–ಭೋಜರಾಜ–ವಿಷ್ಣುವರ್ಧನ–ಕೂನಪಾಂಡ್ಯ–ಬಿಜ್ಜಳರಾಯ–ವೀರಬಲ್ಲಾಳ–ಚಾವುಂಡರಾಯ–ಕೊಡಗಿನ ದೊರೆ ಮುಂ. ಮಹತ್ವದ ಐತಿಹಾಸಿಕ ವ್ಯಕ್ತಿಗಳ ಕಥೆಗಳನ್ನು ೧–೨ ಪದ್ಯಗಳಲ್ಲಿ ಹೇಳಿ ಓದುಗರ ಕುತೂಹಲವನ್ನು ಕವಿ ಕೆರಳಿಸುತ್ತಾನೆ. ಈ ಕೃತಿ ಪರಿಷ್ಕರಣದೊಂದಿಗೆ ಪುನರ್ಮುದ್ರಣ ಹೊಂದುವುದು ಅವಶ್ಯವೆನಿಸುತ್ತಿದೆ. ಅನೇಕ ವಿಷಯಗಳ ಮೇಲೆ ಬೆಳಕು ಬೀಳುವಂತಿದೆ.

ಮುಲ್ಲಾಶಾಸ್ತ್ರವೂ ಒಂದು ವಿಚಿತ್ರ ಕೃತಿ. ಇಂದ್ರನು ಬೇರೊಬ್ಬನಿಗೆ ಗಣಧರ ಪದವಿಯನ್ನು ಕೊಡಲು ಪಾರ್ಶ್ವಭಟ್ಟಾರಕನಿಗೆ ಕೋಪ ಬಂದು ಮುಲ್ಲಾಶಾಸ್ತ್ರವನ್ನು

೧೧ ಹಂಪ ನಾಗರಾಜಯ್ಯ : ಚಂದ್ರಸಾಗರವರ್ಣಿ (ಕ.ಸಾ.ಪ.ಪತ್ರಿಕೆ, ೫೮:೨, ಪು.೬೭).

ನಿರ್ಮಿಸಿದನಂತೆ; ಎಂಟು ಆಶ್ವಾಸಗಳ ನಾನೂರು ಪದ್ಯಗಳಿಂದ ಕೂಡಿದ ಭಾಮಿನಿ ಷಟ್ಪದಿಯ ಈ ಚಿಕ್ಕ ಚರಿತ್ರಕಾವ್ಯ ಐತಿಹಾಸಿಕ ಪ್ರಾಮಾಣ್ಯವನ್ನು ಪಡೆಯದಿರ ಬಹುದು. ಆದರೆ ಚಂದ್ರಸಾಗರವರ್ಣಿಯ ಕಲ್ಪನಾಚಮತ್ಕೃತಿಯ ದಾಖಲೆಗಾಗಿ ಯಾದರೂ ಕೃತಿಯನ್ನು ಉಳಿಸಿಕೊಳ್ಳಬೇಕಾಗುತ್ತದೆ.

ಹಿಮಶೀತಳ (ಅಕಳಂಕ)ನ ಕಥೆ, ಚಾವುಂಡರಾಯನ ಕಥೆ, ಬೆಟ್ಟ(ವಿಷ್ಣು)ವರ್ಧನ ಚರಿತೆ ಪುಟ್ಟ ಗಾತ್ರದ ಇತಿಹಾಸ ಕಾವ್ಯಗಳು. ಈ ಚರಿತ್ರೆಗಳ ಹಿನ್ನೆಲೆಯಲ್ಲಿ ಮತೀಯ ಭಾವನೆ ಅಡಗಿದ್ದರೂ ಸಹ ಮಹತ್ವಪೂರ್ಣ ಅಂಶಗಳನ್ನು ಇವು ಪ್ರಕಟಿಸುತ್ತಿವೆ. ನಮ್ಮ ನಾಡಿನ ಸಾಂಸ್ಕೃತಿಕ ಇತಿಹಾಸದ ಅಭ್ಯಾಸದಲ್ಲಿ ಹಾಗೂ ಸಂಶೋಧನೆಯಲ್ಲಿ ಇಂಥ ಕೃತಿಗಳು ಹೊಸ ಬೆಳಕು ಬೀರಲು ಸಹಾಯ ಸಲ್ಲಿಸಬಹುದಾಗಿದೆ.

ಭವ್ಯಾಮೃತವು ೧೧೦ ಕಂದ ಪದ್ಯಗಳ ಒಂದು ತತ್ವನಿರೂಪಣೆಯ ಸುಂದರ ನೀತಿ ಶತಕವಾಗಿದೆ. ಜಿನಭಕ್ತಿಸಾರವೂ ಅಂಥದೇ ಕೃತಿ (೧೦೮ ಪದ್ಯಗಳು). ಆದರೆ ಕನಕದಾಸರ ಹರಿಭಕ್ತಿಸುಧೆಯ ಮಾದರಿಯಲ್ಲಿದೆಯೆಂದು ಶ್ರೀನಿವಾಸ ಹಾವನೂರರು ಹೇಳಿದುದು ಸರಿಯಲ್ಲ.[೧೨] ಭವ್ಯಾಮೃತ ಮತ್ತು ಜಿನಭಕ್ತಿಸಾರ ಈ ಎರಡು ಶತಕಗಳು ಜೈನ ಶ್ರಾವಕ ಧರ್ಮವನ್ನು ಎತ್ತಿಹಿಡಿದಿರುವುದರಿಂದ ಅವು ಬಹಳ ಜನಪ್ರಿಯವಾಗಿವೆ. ಕವಿಗೆ ಕೀರ್ತಿ ತಂದಿವೆ. ಆದರೆ ಭವ್ಯಾಮೃತ ಹಸ್ತಪ್ರತಿ (ಕೊಲ್ಲಾಪುರ) ಯಲ್ಲಿ 'ನಿರಂಜನಸಿದ್ಧ' ಎಂಬ ಅಂಕಿತವಿದೆ.[೧೩]

ದ್ವಾದಶಾನುಪ್ರೇಕ್ಷೆ, ಧರ್ಮಪರೀಕ್ಷೆ, ಯಶೋಧರ ಷಟ್ಪದಿಗಳು ತಾತ್ವಿಕ ಅಂಶ ಗಳಿಂದ ಸಾಮಾನ್ಯ ಓದುಗರ ಮನಸ್ಸಿಗೆ ಹಿಡಿಯುತ್ತವೆ. ಚಂದನೆಯ ಯಕ್ಷಗಾನ, ರುದ್ರ ಯಕ್ಷಗಾನ, ವಸುದೇವ ಪಾರಿಜಾತ ಯಕ್ಷಗಾನ, ಮನ್ಮಥ ಕೊರವಂಜಿಯ ಯಕ್ಷಗಾನ – ಎಂಬ ನಾಲ್ಕು ಕೃತಿಗಳು ಚಂದ್ರಸಾಗರವರ್ಣಿಯ ಜಾನಪದ ರಂಗ ಭೂಮಿಯ ಸೇವೆಗೆ ಮೀಸಲಾದ ಬಯಲಾಟಗಳು. 'ಜೈನರ ವಿರಕ್ತಿ ಪ್ರತಿಪಾದಕವಾದ ಚಂದನೆಯ ಕಥೆ.... ಮುಂತಾದವು.... ಯಕ್ಷಗಾನ ಪ್ರಸಂಗ ರಚನೆಗೆ ಸೂಕ್ತವಲ್ಲ'ವೆಂದು ಶ್ರೀನಿವಾಸ ಹಾವನೂರರು ಹೇಳಿದುದು ಅರ್ಥವಿಲ್ಲದ ಮಾತು.[೧೪] ಚಂದನೆಯ ಕಥೆ ಯಕ್ಷಗಾನ– ಬಯಲಾಟದಲ್ಲಿಯೇ ಒಂದು ವೈಶಿಷ್ಟ್ಯಪೂರ್ಣವಾದ ರೋಮಾಂಚಕ ಕಥಾನಕದಿಂದ ಕೂಡಿದ ಹಾಗೂ ಪ್ರಯೋಗದಲ್ಲಿ ಯಶಸ್ವಿಯಾದ ಕೃತಿಯಾಗಿದೆ.

೧೨ ಶ್ರೀನಿವಾಸ ಹಾವನೂರ : ಹೊಸಗನ್ನಡದ ಅರುಣೋದಯ (ಪ್ರ. ಮು. ೧೯೭೪) ಪು. ೨೦೩.

೧೩ ಕೊಲ್ಲಾಪುರ ಲಕ್ಷ್ಮೀಸೇನಮಠದ ಕನ್ನಡ ಹಸ್ತಪ್ರತಿ ಸಂಗ್ರಹದಲ್ಲಿ ಭವ್ಯಾಮೃತ ಪ್ರತಿ ನೋಡಿರಿ.

೧೪ ಶ್ರೀನಿವಾಸ ಹಾವನೂರ : ಹೊಸಗನ್ನಡದ ಅರುಣೋದಯ (ಪ್ರ. ಮು. ೧೯೭೪) ಪು : ೨೫೮.

ಚಂದ್ರಸಾಗರವರ್ಣಿ ಆ ಕಾಲದ ಯಕ್ಷಗಾನ ಕಲಾವಿದರಲ್ಲಿ ಪ್ರಸಿದ್ಧಿಯನ್ನು ಪಡೆದ ವ್ಯಕ್ತಿ. ಅಂತೆಯೆ ಧರ್ಮಸ್ಥಳದ ಹೆಗ್ಗಡೆಯವರು ಮೈಸೂರು ಮುಮ್ಮಡಿ ಕೃಷ್ಣ ರಾಜರ ಬಳಿಗೆ ಹೋಗುವಾಗ ಬೆಳುಗೊಳದಲ್ಲಿದ್ದ ಚಂದ್ರಸಾಗರವರ್ಣಿಗೆ ಭೆಟ್ಟಿಗಾಗಿ ಯಕ್ಷಗಾನ ಮೇಳಗಳನ್ನು ತೆಗೆದುಕೊಂಡೇ ಹೋಗುತ್ತಿದ್ದುದು,[೧೫] ತುಂಬ ಪ್ರಸಿದ್ಧ ವಾದ ಸಂಗತಿ. ಚಂದ್ರಸಾಗರವರ್ಣಿಯ ವಸುದೇವ ಪಾರಿಜಾತ, ಮನ್ಮಥ ಕೊರವಂಜಿ ಗಳು ಸಹ ಒಳ್ಳೆಯ ಕೃತಿಗಳು. ರುದ್ರಯಕ್ಷಗಾನ ಕುತೂಹಲ ಕೆರಳಿಸುವ ಕೃತಿ. ತುಂಬ ನಾಟಕೀಯವಾಗಿದೆ. ರೋಹಿಣಿ ಸ್ವಯಂವರ ವಸುದೇವಪಾರಿಜಾತದಲ್ಲಿಯೇ ಅಂತರ್ಗತವಾಗಿದೆ. ಒಟ್ಟಿನಲ್ಲಿ ಯಕ್ಷಗಾನ ಸಾಹಿತ್ಯಕ್ಕೆ ಚಂದ್ರಸಾಗರವರ್ಣಿ ತನ್ನ ನಾಲ್ಕು ಉತ್ತಮ ಕೃತಿಗಳಿಂದ ಮರೆಯಲಾಗದ ಕಾಣಿಕೆ ಸಲ್ಲಿಸಿದ್ದಾನೆ. ಈ ನಾಲ್ಕೂ ಕೃತಿಗಳು ತಾಡಓಲೆಯಲ್ಲಿ ಉಪಲಬ್ಧವಾಗಿವೆ.[೧೬] ಅವುಗಳ ಹೆಚ್ಚಿನ ಪರಿಚಯ ಕನ್ನಡಿಗರಿಗೆ ಇನ್ನೂ ಆಗಬೇಕಾಗಿದೆ.

ಭವ್ಯಜನಚಿಂತಾಮಣಿಯ ಕರ್ತೃ ಚಂದ್ರಸಾಗರವರ್ಣಿಯೇ ಎಂದು ನಿಶ್ಚಯಿಸ ಬಹುದಾಗಿದೆ. ಅದು ಶ್ರವಣಬೆಳುಗೊಳದ ಚಾರುಕೀರ್ತಿಯ ಹೆಸರಿನಲ್ಲಿ ಬಂದಂತೆ ತೋರುವುದಾದರೂ, ಚಂದ್ರಕೀರ್ತಿಯೇ ಬರೆದುದಾಗಿದೆ. ೧೬ ಆಶ್ವಾಸಗಳುಳ್ಳ ಚಂಪೂಕೃತಿ. ಬಾಹುಬಲಿ ಸನ್ನಿಧಿಯಲ್ಲಿ ಕೃತಿಪೂರ್ಣವಾಯಿತೆಂದು ತಿಳಿಯುತ್ತದೆ. ಜಿನೇಶ್ವರನ ಅರ್ಚನೆಯಿಂದ ಸುಖವನ್ನು ಹೊಂದಿದವರ ಕಥೆಗಳ ಸಂಗ್ರಹವಿದು.

ಪೂರ್ವದ ಯಾವುದೋ ಕವಿಯು 'ಭವ್ಯಾಮೃತ'ವನ್ನು, ಅನಂತಕವಿ (೧೮೦೦)ಯ "ಮನ್ಮಥಕೊರವಂಜಿ"ಯನ್ನೂ, ಚಾರುಕೀರ್ತಿಯ "ಭವ್ಯಜನಚಿಂತಾಮಣಿ"ಯನ್ನೂ, ಚಂದ್ರಸಾಗರವರ್ಣಿ ಬರೆಯದೆ, ಕೇವಲ ಪ್ರತಿಕಾರನಾಗಿರಬೇಕು – ಎಂಬ ಸಂಶಯ ವೊಂದು ಮೂಡಿ ಮಾಯವಾಗುತ್ತದೆ. ಹಾಗೇನೂ ಆಗಿರಲಿಕ್ಕಿಲ್ಲ. ಆದರೂ ಹೆಚ್ಚಿನ ಅಭ್ಯಾಸ ನಡೆದು ಚಂದ್ರಸಾಗರವರ್ಣಿಯ ಸ್ಥಾನಮಾನ ನಿರ್ಧರಿಸುವ ಅವಶ್ಯಕತೆ ಉಂಟಾಗಿದೆ. ಜೈನಕವಿಗಳ ಸಂಖ್ಯೆ ಕಡಿಮೆಯಾದ ಕಾಲದಲ್ಲಿ ಚಂದ್ರಸಾಗರವರ್ಣಿ ಹತ್ತಾರು ಕವಿಗಳು ಮಾಡುವ ಕೆಲಸವನ್ನು ಒಬ್ಬನೇ ಮಾಡಿ ಕೊರತೆಯನ್ನು ತುಂಬಿರು ವುದು ಹಿತವಾದ ಆಶ್ಚರ್ಯದ ಘಟನೆಯಾಗಿದೆ. ವಿಷಯ ವೈವಿಧ್ಯ, ಕೃತಿಗಳ ಬೃಹತ್ತು ಮಹತ್ತುಗಳ ದೃಷ್ಟಿಯಿಂದ ಯಾರ ಮನಸ್ಸನ್ನಾದರೂ ಸೆಳೆಯುವ ಕವಿ ಚಂದ್ರಸಾಗರ ವರ್ಣಿ. ಅವನ ಕೃತಿಗಳಲ್ಲಿ ಮುಕ್ಕಾಲು ಪಾಲಿಗಿಂತ ಹೆಚ್ಚಿನ ಕೃತಿಗಳು ಉಪಲಬ್ಧ ವಾಗಿವೆ. ತಾಡಓಲೆಗಳಲ್ಲಿ, ಕೋರೆ ಕಾಗದಗಳಲ್ಲಿ ಅನೇಕ ಪ್ರತಿಗಳು ಕೊಲ್ಲಾಪುರದಿಂದ ಶ್ರವಣಬೆಳುಗೊಳದ ವರೆಗೆ ಇರುವ ಕರ್ನಾಟಕದ ವಿಶಾಲ ಪ್ರದೇಶದಲ್ಲಿ ದೊರೆತಿವೆ;

೧೫ ಅದೇ, ಪು. ೨೫೫.

೧೬ ಕ.ವಿ.ವಿ. ತಾಡಓಲೆಯ ಸಂಗ್ರಹದಲ್ಲಿವೆ.

ಇನ್ನೂ ದೊರೆಯುತ್ತಲೂ ಇವೆ. ಅವುಗಳಲ್ಲಿ ಕೆಲವನ್ನು ಸ್ವತಃ ಚಂದ್ರಸಾಗರವರ್ಣಿಯೇ ಬರೆದಿರುವುದುಂಟು. ಅಲ್ಲದೆ, ಕೆಲವು ಕೃತಿಗಳು ಕನ್ನಡ ನಾಡಿಗೆ ಮುದ್ರಣಯಂತ್ರ ಬಂದ ಹೊಸದರಲ್ಲಿಯೇ (೧೯ ನೆಯ ಶತಕದಕೊನೆಯಲ್ಲಿ ಮತ್ತು ೨೦ ನೆಯ ಶತಕದ ಪ್ರಾರಂಭದಲ್ಲಿ) ಅಚ್ಚಾಗಿವೆ. ಅಂತೂ ಚಂದ್ರಸಾಗರವರ್ಣಿ ಜೈನ ಧಾರ್ಮಿಕ ವಾಙ್ಮಯ ದಲ್ಲಿ ಅಭೂತಪೂರ್ವ ಕಾರ್ಯವೆಸಗಿದ ಒಬ್ಬ ಪ್ರಚಂಡ ಕವಿ ಎಂಬುವುದನ್ನು ಎಂದಿಗೂ ಮರೆಯುವ ಹಾಗಿಲ್ಲ. ಒಳ್ಳೆಯ ಪರಿಷ್ಕರಣದೊಂದಿಗೆ ಅವನ ಎಲ್ಲ ಕೃತಿಗಳು ಪ್ರಕಟ ವಾದರೆ ನಿಜಕ್ಕೂ ಕನ್ನಡ ಸಾಹಿತ್ಯ ಪ್ರಪಂಚದ ಈ ಕಾಲದ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.

• •

ಪಕ್ಷಿಗಳು ಮತ್ತು ಜನಪದ ಮೂಢನಂಬಿಕೆಗಳು

● ಎಂ. ಜಿ. ಬಿರಾದಾರ

ಜನಪದಬದುಕಿನ ಪದರುಪದರುಗಳಲ್ಲಿ ಮೂಢನಂಬಿಕೆಗಳು ಮನೆಮಾಡಿಕೊಂಡಿವೆ. ಪ್ರಕೃತಿಯ ಪ್ರತಿ ಹೊಯ್ದಾಟಕ್ಕೂ ಒಂದು ಅರ್ಥ ಕಲ್ಪಿಸುತ್ತಾರೆ. ಕಾರ್ಯಕ್ಕೊಂದು ಕಾರಣ ಕಲ್ಪಿಸುತ್ತಾರೆ. ಆದರೆ ಅದು ವೈಜ್ಞಾನಿಕವಾದುದಲ್ಲ. ಅಲ್ಲಿ ತರ್ಕ–ಬುದ್ಧಿಗಳಿಗೆ ಆಸ್ಪದವಿಲ್ಲ. ಕೇವಲ ಪರಂಪರೆಯಿಂದ ಬಂದ ನಂಬಿಕೆಯೇ ಅದಕ್ಕೆ ಆಧಾರ. ಒಂದು ಕಾಲ ಇತ್ತು; ಹಿರಿಯರ ಅನುಭವವನ್ನೋ ಹೇಳಿಕೆಯನ್ನೋ ಸತ್ಯಸ್ಯ ಸತ್ಯವೆಂದು ನಂಬಲೇಬೇಕಾಗುತ್ತಿತ್ತು. ಕಾರಣ ಜ್ಞಾನದ ಆಕರ, ಹಿರಿಯರ ಬದುಕಿನ ಅನುಭವ ಒಂದೇ ಆಗಿತ್ತು. ಅಲ್ಲದೆ ಹಿರಿಯರ ಹೇಳಿಕೆಯನ್ನು, ಅವರಲ್ಲಿಯ ಗೌರವಕ್ಕಾಗಿ ಪ್ರಶ್ನಿಸದೆ, ಒರೆದುನೋಡದೆ ವೇದವಾಕ್ಯದಂತೆ ಜನ ಒಪ್ಪುತ್ತಿದ್ದರು. ಹಿರಿಯರ ಅನುಭವ ಕಿರಿಯರ ಬಾಳಿಗೆ ಬೆಳಕಾಗುತ್ತಿತ್ತು. ಇಂದೂ ಸಹಿತ ಚಿಕ್ಕವರಿದ್ದಾಗ ನಮ್ಮ ಹಿರಿಯರು ಹೇಳಿದ ಒಂದು ವಿಷಯವನ್ನು, ವೈಜ್ಞಾನಿಕವಾಗಿ ಕಾರ್ಯ– ಕಾರಣ ಸಂಬಂಧವಿಲ್ಲದ್ದು ಎಂದು ಖಚಿತವಾಗಿದ್ದರೂ ಅದನ್ನು ನಿರಾಕರಿಸುವಷ್ಟು ನಮ್ಮ ಮನಸ್ಸು ಬಲಯುತವಾಗಿಲ್ಲ. ಇಂಥ ಮನೆಯಲ್ಲಿ ದೆವ್ವ ಇದೆ ಎಂದು ಎಂದೋ ಯಾರೋ ಹೇಳಿದ್ದನ್ನು ವೈಜ್ಞಾನಿಕವಾಗಿ ದೆವ್ವದ ಅಸ್ತಿತ್ವವನ್ನು ನಂಬದ ಪ್ರೌಢರೂ ಸುಶಿಕ್ಷಿತರೂ ಸುಸಂಸ್ಕೃತರೂ ಆದ ನಾವು ಆ ಮನೆಯ ಮುಂದೆ ಹೋದಾಗ ಚಿಕ್ಕವರಿದ್ದಾಗಿನ ಆ ಅಳುಕು ನಮ್ಮೆದೆಯಲ್ಲಿ ಸುಸುಳದಿರದು. ಇಷ್ಟು ಬಂಧುರ, ಬಾಲ್ಯದ ಈ ನಂಬಿಕೆ.

ಯಾವುದೋ ಒಂದು ವಿಚಾರವನ್ನು ತಲೆಬುಡವಿಲ್ಲದೆ ನಂಬುವುದಕ್ಕೆ ಮೂಢನಂಬಿಕೆ ಎನ್ನಬೇಕಾಗುತ್ತದೆ. ಎತ್ತಿಗೆ ಬರೆಕೊಟ್ಟರೆ ಎಮ್ಮೆಗೆ ಗುಣವಾಗುತ್ತದೆಂದು ನಂಬುವುದು ಮೂಢನಂಬಿಕೆಯಲ್ಲದೆ ಮತ್ತೇನು ? ಆಕಾಶದಲ್ಲಿ ಧೂಮಕೇತು ಕಾಣಿಸಿಕೊಂಡರೆ ಭೂಮಿಯ ಮೇಲಿನ ಪ್ರಮುಖವ್ಯಕ್ತಿ ಸಾಯುತ್ತಾನಂತೆ ! ತರ್ಕದ ತಳಹದಿ ಇಲ್ಲದೆ ಕಾರ್ಯ ಕಾರಣಕ್ಕೆ ತಳುಕುಹಾಕುವುದು.

ಮೂಢನಂಬಿಕೆಯ ಮುಖ್ಯ ಕಾರಣ ಅಜ್ಞಾನ. ಮಕ್ಕಳಿದ್ದಾಗಿನ ಅಚ್ಚಳಿಯದ ನಂಬಿಕೆ ಒಂದೆಡೆ ಇರಲಿ. ಜ್ಞಾನ, ಅನುಭವ ಇಲ್ಲದ ಪ್ರೌಢರಲ್ಲಿಯೂ ಈ ಮೂಢನಂಬಿಕೆಗಳನ್ನು ದಟ್ಟವಾಗಿ ಕಾಣುತ್ತೇವೆ. ಇದು ಭಾರತದಲ್ಲೇ ಇದೆ, ಬೇರೆಡೆ

ಇಲ್ಲವೆಂದು ತಿಳಿಯಲಾಗದು. ಮಾನವಕುಲಕ್ಕೇ ಈ ಮೂಢನಂಬಿಕೆಯು ನಂಟು ಇದೆ. ಯಾವುದೇ ದೇಶ ಕಾಲವನ್ನವಲೋಕಿಸಿದರೂ ಅಲ್ಲಿ ಮೂಢನಂಬಿಕೆ ಮನೆಮಾಡಿ ಕೊಂಡಿರುವುದನ್ನು ಕಾಣುತ್ತೇವೆ.

ಕ್ರಿ. ಶ. ಪೂರ್ವದ ಗ್ರೀಕರ ನಾಟಕದಿಂದ ಒಡಿದು ಭಾಸ, ಕಾಳಿದಾಸ, ಶೇಕ್ಸ ಪಿಯರ ನಾಟಕಗಳನ್ನೊಳಗೊಂಡು ಇಂದಿನ ಕುವೆಂಪು ಅವರ ಕಾವ್ಯದವರೆಗೂ ಈ ಮೂಢನಂಬಿಕೆಗಳು ಮೂಡಿಬಂದುದನ್ನು ಕಾಣುತ್ತೇವೆ. ಆದರೆ ಈ ಮೂಢ ನಂಬಿಕೆಗಳು ದೇಶದಿಂದ ದೇಶಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ, ಧರ್ಮದಿಂದ ಧರ್ಮಕ್ಕೆ ಬೇರೆಯಾಗುವುದುಂಟು. ಕೆಲವರಿಗೆ ಅಮಂಗಲವಾದುದು ಇನ್ನೂ ಕೆಲವರಿಗೆ ಮಂಗಲವಾಗಬಹುದು.

ಜನಪದ ಕಥೆಗಳಲ್ಲಿ ಮೂಢನಂಬಿಕೆಗಳಿಗೆ ಮಿತಿ ಇಲ್ಲ. ಕೆರೆ ಬಾವಿ ಅಗಿಸುವಾಗ ಕೋಟೆ ಕಟ್ಟಿಸುವಾಗ ನರಬಲಿಕೊಡುತ್ತಿದ್ದರೆಂಬ ವಿಚಾರ ಸಾಕಷ್ಟುಕಡೆ ಬರುತ್ತದೆ. ಇಂದೂ ಸಹಿತ ದೊಡ್ಡದೊಡ್ಡ ಸೇತುವೆ ಮೊದಲಾದವನ್ನು ಕಟ್ಟಿಸುವಾಗ ನರಬಲಿ ಕೊಡುತ್ತಾರೆಂಬ ಕಲ್ಪನೆ ಬಹಳ ಜನರಿಗಿದೆ. ಈಗ ಬಲಿಕೊಡದಿದ್ದರೆ ಮುಂದೆ ಹಲವಾರು ನರಬಲಿಯನ್ನು ಅದು ಬೇಡುತ್ತದೆಂದು ನಂಬುವುದುಂಟು.

ಈ ಮೂಢನಂಬಿಕೆಗಳನ್ನು ಅಂಜುಬುರುಕು ಅಶಕ್ತಮನಸ್ಸಿನ ಪರಿಣಾಮ ವೆಂದು ಹೇಳುವುದಕ್ಕಿಂತ, ದೃಢನಂಬಿಕೆಯ ದ್ಯೋತಕವೆನ್ನುವುದು ಹೆಚ್ಚು ಸಮಂಜಸ.

ಈ ಮೂಢನಂಬಿಕೆಗಳು ಹೇಗೆ ಹುಟ್ಟಿದವು ? ಎಂದು ಹುಟ್ಟಿದವು ? ಎಂಬು ದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟವಾದರೂ ಅವುಗಳನ್ನು ಅಲ್ಪಜ್ಞಾನಿಗಳು ಅಜ್ಞಾನಿಗಳನ್ನು ವಂಚಿಸಲು ಬಳಸಿಕೊಂಡು ಬಂದಿರಬೇಕೆಂದು ಮಾತ್ರ ಹೇಳಬಹುದು. ಅದಕ್ಕಾಗಿಯೇ ಅದಕ್ಕೊಂದು ಧರ್ಮದ ಸ್ವರೂಪಕೊಟ್ಟು ಪರಿಹಾರೋಪಾಯಗಳನ್ನು ಕಲ್ಪಿಸಿ ಅದರ ಲಾಭ ಪಡೆದು ಹಲವುಜನ ಸುಖದಿಂದ ಬದುಕಿದರು.

ಪ್ರಸ್ತುತ ಪ್ರಬಂಧದಲ್ಲಿ, ನಮ್ಮ ಹಳ್ಳಿ ಹೊಲಗಳಲ್ಲಿ ಹಲವಾರು ಪಕ್ಷಿಗಳು ಜನಪದ ಬದುಕಿನ ಹಲವಾರು ಮೂಢನಂಬಿಕೆಗಳಿಗೆ ಕಾರಣವಾದುದನ್ನು ಪ್ರಸ್ತಾಪಿಸ ಲಾಗಿದೆ.

ಗುಬ್ಬಿ :

ಬೇಕಾದವರ ಮನೆಯಲ್ಲಿ ನಿರ್ಭೀತಿಯಿಂದ ಮನೆಕಟ್ಟಿಕೊಂಡು ಬದುಕಿರುವ ಗುಬ್ಬಿ ಮನುಷ್ಯರಿದ್ದಲ್ಲೆಲ್ಲ ಇರುವ ಪಕ್ಷಿ. ಕಾಳುಕಡಿ ಮುಸುರೆ ತಿಂದು ಬದುಕಿದ ಈ ಗುಬ್ಬಿ, ನಾವು ಸಾಕಿದಂತೆ ನಮ್ಮೊಡನೆ ಸಹಜೀವನ ಮಾಡುತ್ತದೆ. ಇದು ಅಲ್ಲಲ್ಲಿ

ನಿಂತ ನೀರಲ್ಲಿ ಸ್ನಾನ ಮಾಡುವುದು ಸ್ವಾಭಾವಿಕ. ಆದರೆ ಗುಬ್ಬಿ ನೆಲದ ಮೇಲೆ ಕುಳಿತು ಕಾಲಿನಿಂದ ಮಣ್ಣನ್ನು ಕೆದರಿ ರೆಕ್ಕೆ ಹಾರಿಸಿ ಮಣ್ಣಿನ ಜಳಕ ಮಾಡುತ್ತಿದ್ದರೆ ಮಳೆ ಬರುತ್ತದೆಂಬ ಮೂಢನಂಬಿಕೆ ಉತ್ತರಕರ್ನಾಟಕದ ಹಳ್ಳಿಗರಲ್ಲಿ ರೂಢಿಯಲ್ಲಿದೆ.

ಕಾಗೆ :

ಜನಪದಬದುಕಿನ ತೀರ ಪರಿಚಿತವಾದ ಇನ್ನೊಂದು ಪಕ್ಷಿ ಕಾಗೆ. ಇದನ್ನು ಕುರಿತು ಇರುವಷ್ಟು ಮೂಢನಂಬಿಕೆಗಳು ಇನ್ನಾವ ಪಕ್ಷಿಗಳನ್ನೂ ಕುರಿತು ಇಲ್ಲ. ಗುಬ್ಬಿಯಷ್ಟು ನಿಕಟವರ್ತಿ ಇದಲ್ಲದಿದ್ದರೂ ಮನುಷ್ಯನ ಸುತ್ತುಮುತ್ತ ನಿತ್ಯಬದುಕಿದ ಪಕ್ಷಿ. ಕಣ್ಣುಗುಡ್ಡಿ ಒಂದೇ ಆದರೂ ಮೈತುಂಬ ಕಣ್ಣುಳ್ಳ ಪಕ್ಷಿ ಇದು. ಊರಲ್ಲಷ್ಟೇ ಸಾಲದೆ, ಹೊಲದಲ್ಲಿ ನಾವು ಒಯ್ದ ಬುತ್ತಿಯನ್ನೂ ತಿಂದೊ ನೀರನ್ನೂ ಕುಡಿದೊ ಕಾಟಕೊಡುತ್ತಿದೆ. ಆದರೆ ತನಗೆ ಸಿಕ್ಕ ಆಹಾರವನ್ನು ತಾನೊಂದೇ ತಿಂದು ಹೋಗದೆ ತನ್ನ ಬಳಗವನ್ನೆಲ್ಲ ಕರೆದು ಜೊತೆಗೂಡಿ ತಿನ್ನುವ ಇದರ ಸ್ವಭಾವ ಮಾನವನಿಗೊಂದು ಆದರ್ಶ. 'ಕಾಗೆಯೊಂದಗುಳಕಂಡರೆ ಕರೆಯದೆ ತನ್ನ ಬಳಗವ ? ಒಂದ್ಯ ಗೂಗಿ ಮಠದಾನ ಕಾಗಿ' ಎಂದು ಮಕ್ಕಳು ತಮ್ಮ ಓರಿಗೆಯವರನ್ನು ಹಂಗಿಸುವುದುಂಟು. ಬಹಳ ಜನ ತಲೆಗೊಂದು ಮಾತನಾಡುತ್ತಿದ್ದರೆ "ಎಲ್ಲಾರು ಕಾಗಿಗತೆ ಕವಕವ ಮಾಡತಾರ" ಎನ್ನುವದುಂಟು. ಹೀಗೆ ಕಾಗೆಯ ಸ್ವಭಾವವನ್ನು ಮನುಷ್ಯನಿಗೆ ಆರೋಪಿಸುವ ಪಡೆನುಡಿಗಳು ಜನಪದದಲ್ಲಿ ಸಾಕಷ್ಟಿವೆ.

ಕಾಗೆಯನ್ನು ಕುರಿತಿರುವ ಸರ್ವಸಾಮಾನ್ಯ ಮೂಢನಂಬಿಕೆ : ಕಾಗೆ ಮನೆಯ ಕುಂಬಿಯ ಮೇಲೆ ಕುಳಿತು ಒದರಿದರೆ ಯಾರಾದರೂ ಬೀಗರು, ಅತಿಥಿಗಳು ಮನೆಗೆ ಬಂದೇ ಬರುತ್ತಾರೆಂಬ ತಿಳುವಳಿಕೆ.

ಎರಡನೆಯದಾಗಿ, ಯಾವುದಾದರೂ ಕಾರ್ಯಕ್ಕೆ ಹೊರಟಾಗ ಕಾಗೆ ಬಲಕ್ಕೆ ಹೋದರೆ ಶುಭ, ಎಡಕ್ಕೆ ಹೋದರೆ ಅಶುಭ ಎಂಬ ಕಲ್ಪನೆ ಸರ್ವಸಾಮಾನ್ಯವಾಗಿ ಬಹಳ ಜನರಲ್ಲಿದೆ.

ಕಾಗೆಗಳನ್ನು ಕುರಿತಾದ ಇನ್ನೊಂದು ದಟ್ಟವಾಗಿ ರೂಢಿಯಲ್ಲಿರುವ ಮೂಢನಂಬಿಕೆ ಎಂದರೆ ಕಾಗೆಗಳ ಕೂಟ(ರತಿಕ್ರೀಡೆ)ವನ್ನು ನೋಡಬಾರದೆಂಬುದು. ಅವು ಕೂಡಿದಾಗ ಕಿಡಿಹಾರುತ್ತವೆಂಬ ವದಂತಿಗಳೂ ಸಾಕಷ್ಟು. ಕಾಗೆಗಳು ಕೂಡಿದ್ದನ್ನು ನೋಡುವುದು ಬಹಳಷ್ಟು ಅಶುಭ. ನೋಡಿದವನ ಜೀವಕ್ಕೆ ಗಂಡಾಂತರ ಒದಗಿ ಅವನ ಬಳಗಕ್ಕೆ ದುಃಖತರದೆ ಹೋಗುವುದಿಲ್ಲವೆಂಬ ನಂಬಿಕೆ. ಅದಕ್ಕಾಗಿ ಯಾರು ಅವುಗಳ ಕೂಟ ನೋಡುವರೊ ಅವರು ಸತ್ತರೆಂಬ ಸುದ್ದಿಯನ್ನು ಅವರ ಆತ್ಮೀಯರಿಗೆ ಹೇಳಿಕಳಿಸುತ್ತಾರೆ ! ಅವರು ಕಣ್ಣೀರಿಟ್ಟಾಗ ಆ ಅಶುಭ ಪರಿಹಾರವಾಗಿ ನೋಡಿದ

ವ್ಯಕ್ತಿ ಗಂಡಾಂತರದಿಂದ ಪಾರಾಗುತ್ತಾನಂತೆ ! ಈ ತೆರನಾದದ್ದೊಂದು ಕಲ್ಪನೆಯನ್ನು ಭಾಸನ ಪ್ರತಿಮಾನಾಟಕದಲ್ಲಿ ಕಾಣಬಹುದು. (ದಶರಥನ ಶಾಪವಿಮೋಚನೆಗಾಗಿ ಕೈಕೇಯಿಯು ಬಾಯಿಂದ ರಾಮನಿಗೆ ವನವಾಸ ಬೇಡಿಸುವ ಸನ್ನಿವೇಶ.) ಅವನು ಸಾವಿನಿಂದ ಪಾರಾಗುವದಿರಲಿ. ಆ ಸುದ್ದಿ ಕೇಳಿದ ಆತ್ಮೀಯರು ಹೃದಯ ವಿಕಾರದಿಂದ ಸತ್ತ ಉದಾಹರಣೆಗಳೂ ಹಳ್ಳಿಗಳಲ್ಲುಂಟು ! ಅದಕ್ಕಾಗಿ ಈ ಸುದ್ದಿಯನ್ನು ಮನೆಯಲ್ಲಿ ಮುಪ್ಪಿನವರಿಗೆ ತಿಳಿಸಿ ಕಣ್ಣೀರು ಕರೆಯಿಸುವ ಪ್ರಯತ್ನಗಳೇ ಹೆಚ್ಚು. ಎಷ್ಟೋ ವೇಳೆ ತರುಣರು ತೀರಿಕೊಂಡ ಸುದ್ದಿ ಆಕಸ್ಮಿಕವಾಗಿ ಬಂದರೆ ಹಳ್ಳಿಗಳಲ್ಲಿ ಅದನ್ನು ನಂಬುವುದೇಕಷ್ಟ. ಕಾರಣ ಕಾಗೆ ಕೂಡಿದ ಸುದ್ದಿ ಅಥವಾ ಹಾವು ಕೂಡಿದ ಸುದ್ದಿ ಇರಬೇಕೇನೊ ಎಂದುಕೊಳ್ಳುವವರುಂಟು. ಈ ಮೂಢನಂಬಿಕೆ ಬಹಳ ಕಡೆಗಳಲ್ಲಿ ರೂಢಿಯಲ್ಲಿದೆ.

ಕಾಗೆ ತಲೆಯ ಮೇಲೆ ಕುಳಿತರೆ ಮಹಾ ಅನಿಷ್ಟವಂತೆ! ಅದು ಮನೆಯಲ್ಲಿ ಹೊಕ್ಕರೆ ಆ ಮನೆ ಅವನತಿಗೆ ಹೋಗುವದೆಂಬ ನಂಬಿಕೆಯೂ ಉಂಟು. ಕಾಗೆಯನ್ನು ಕುರಿತಿರುವಷ್ಟು ಮೂಢನಂಬಿಕೆಗಳು ಇನ್ನಾವ ಪಕ್ಷಿಗಳನ್ನು ಕುರಿತು ಇಲ್ಲ. ಭಾರತದಾದ್ಯಂತ ಕಾಗೆಯ ವಿಷಯದಲ್ಲಿ ಒಂದಿಲ್ಲೊಂದು ಮೂಢನಂಬಿಕೆಗಳು ಇದ್ದೇ ಇವೆ. ಈ ಪಕ್ಷಿಯ ಕಪ್ಪು ಬಣ್ಣವೇ ಅಶುಭ ಎಂದು ನಂಬುವವರುಂಟು.

ಕೆಲವು ಸಮಾಜಗಳಲ್ಲಿ ಪಿಂಡಕೊಡುವ ರೂಢಿ. ತೀರಿದ ವ್ಯಕ್ತಿಗೆ ಪಿಂಡ ಕೊಡಲು ಹೋದಾಗ ಕಾಗೆ ಬಂದು ಅದನ್ನು ತಿಂದರೆ ಸತ್ತಜೀವ ಸದ್ಗತಿಗೆ ಸೇರುತ್ತದಂತೆ. ಕಾಗೆಗಳು ಆ ಪಿಂಡವನ್ನು ಮುಟ್ಟದಿದ್ದರೆ ಆ ವ್ಯಕ್ತಿಗೆ ನರಕವೇ ಗತಿ ಎಂಬ ಮೂಢನಂಬಿಕೆಯೂ ಇದೆ.

ಹೀಗೆ ಕಾಗೆ ಮೂಢನಂಬಿಕೆಗಳ ಸಾಕಾರವೇ ಆಗಿದೆ ಎಂದರೆ ತಪ್ಪಲ್ಲ.

ಬಳುವು :

ಇದು ಪಾರಿವಾಳ ಜಾತಿಗೆ ಸೇರಿದ ಪಕ್ಷಿ. ಇದರಲ್ಲಿ ಒಂದು ಊರಬಳುವು; ಇನ್ನೊಂದು ಅಡವಿ ಬಳುವು. ಅಡವಿ ಬಳುವು ಪಾರಿವಾಳಕ್ಕಿಂತ ಸ್ವಲ್ಪ ದೊಡ್ಡ ಗಾತ್ರದಿದ್ದು ಬಿಳಿ ಬೂದು ಬಣ್ಣದ್ದಿರುತ್ತದೆ. ಕೊರಳಲ್ಲಿ ಕರಿಮಣಿಯಸರ ಕಟ್ಟಿದಂತೆ ಕಪ್ಪು ರೇಖೆ ಬೇರೆ. ಊರ ಬಳುವು ಪಾರಿವಾಳಕ್ಕಿಂತ ಗಾತ್ರದಲ್ಲಿ ಚಿಕ್ಕದಾಗಿದ್ದು ಮಸಾರಿ ಮಣ್ಣಿನ ಬಣ್ಣದ್ದಿರುತ್ತದೆ. ಇದು ಹಾಳುಗೋಡೆ, ಕಳ್ಳಿ, ಕಂಟಿಗಳಲ್ಲಿ ವಾಸಿಸುತ್ತಿದೆ. ಆದಷ್ಟು ನಿರ್ಜನ ಪ್ರದೇಶದಲ್ಲಿ ಇದರ ವಾಸ. ಇದು ಮನೆಯಲ್ಲಿ ಗೂಡುಕಟ್ಟುವದೊತ್ತಟ್ಟಿಗಿರಲಿ, ಮನೆಯನ್ನು ಪ್ರವೇಶಿಸಬಾರದು. ಇದು ಮನೆ ಹೊಕ್ಕರೆ ಇಡೀ ಮನೆತನವೇ ಹಾಳಾಗುತ್ತದೆಂಬ ನಂಬಿಕೆ. 'ಬಳುಹೊಕ್ಕ ಮನಿ

ಆಳು(ವ್ರು)' ಎಂಬ ಗಾದೆಯೇ ಸೃಷ್ಟಿಯಾಗಿದೆ. ಯಾವನಾದರೂ ಇನ್ನೊಬ್ಬರ ಮನೆಯ ಕಾರಭಾರ ಮಾಡಿ ಆ ಮನೆಯ ಅವನತಿಗೆ ಕಾರಣನಾಗಿದ್ದರೆ 'ಅಂವ ಬಳು ಇದ್ದಂಗ ಹೊಕ್ಕಮನಿ ಅಳು ಇಡತಾನ' ಎಂದು ಹಳ್ಳಿಗಳಲ್ಲಿ ಆಡಿಕೊಳ್ಳುವದುಂಟು. ಈ ಬಳುವು ಮನೆಹೊಕ್ಕ ಅಶುಭ ಪರಿಹಾರಕ್ಕೆ ಎರಡು ಮಾರ್ಗಗಳು. ಮನೆಹೊಕ್ಕ ಬಳುವನ್ನು ಹೊರಗೆ ಹಾರಿ ಹೋಗದಂತೆ, ಕೊಂದು ಮನೆಯಲ್ಲೇ ಅದನ್ನು ಹುಗಿಯುವುದು. ಅದು ಹಾರಿ ಪಾರಾಗಿ ಹೋದರೆ ಮನೆಯ ಬಾಗಿಲು ಹಾಕಿ ಮುಳ್ಳು ಹಚ್ಚಿ ಮೂರುದಿನ ಅಥವಾ ಏಳುದಿನ ಎಲ್ಲರೂ ಮನೆಬಿಡುವುದು. ಆಮೇಲೆ ಮನೆಯನ್ನು ಶುದ್ಧೀಕರಣಗೊಳಿಸಿ ಪೂಜೆಮಾಡಿ ಗೃಹಪ್ರವೇಶಮಾಡುವುದು. ಮನೆತನವೇ ಹಾಳಾಗಬೇಕಾದ ಈ ಅಶುಭವನ್ನು ಸಾಂಕೇತಿಕವಾಗಿ ಪೂರೈಸಿ ಪರಿಹಾರ ಹುಡುಕುವುದನ್ನು ಇಲ್ಲಿಯೂ ಕಾಣುತ್ತೇವೆ.

ಗೂಗೆ :

ಜನಪದದಲ್ಲಿ ದಟ್ಟವಾದ ಮೂಢನಂಬಿಕೆಗಳಿಗೆ ಕಾರಣವಾದ ಮತ್ತೊಂದು ಪಕ್ಷಿ ಗೂಗೆ. ಸರ್ವಸಾಮಾನ್ಯವಾಗಿ ಇದು ಅಶುಭಪಕ್ಷಿ ಎಂದು ಎಲ್ಲರದೂ ತಿಳಿವಳಿಕೆ. ಹದ್ದಿನ ಆಕಾರದ ಬೂದು ಬಣ್ಣದ ಈ ಪಕ್ಷಿಗೆ ಮನುಷ್ಯನಮುಖದಂಥ ಮುಖವಿದೆ. ನಿರ್ಜನ ಪ್ರದೇಶದ ಹಾಳುಭಾವಿ, ದೊಡ್ಡದೊಡ್ಡ ಗಿಡಗಳ ಪೊದರಿನಲ್ಲಿ ಈ ನಿಶಾಚರ ಪಕ್ಷಿ ವಾಸಿಸುತ್ತದೆ. ಅಗಲವಾದ ಮುಖದಲ್ಲಿ ಮಿನುಗುವ ಕಣ್ಣುಗಳು ನೋಟ ಮಾತ್ರಕ್ಕೆ ಹೆದರಿಕೆಯನ್ನು ಹುಟ್ಟಿಸುತ್ತವೆ. ಇದರ ದರ್ಶನ ಅಪರೂಪವಾದರೂ ಅಪಶಕುನವೆಂಬುದನ್ನು ಎಲ್ಲರೂ ಬಲ್ಲರು. ರಾತ್ರಿಯಲ್ಲಿ ತೋಟ, ಹೊಲಗಳಲ್ಲಿ ಗಿಡಗಳ ಮೇಲೆ ಕುಳಿತೊ, ಊರಲ್ಲಿ ಮನೆಯ ಕುಂಬಿಗಳ ಮೇಲೆ ಕುಳಿತೊ 'ಗುಕ್, ಗುಕ್' ಎಂದು ಒದರುವುದನ್ನು ಬಹಳ ಜನ ಕೇಳಿದುದುಂಟು. ಅದು ಮನುಷ್ಯರ ಧಾಟಿಯಲ್ಲಿ ಜೋಗುಳವನ್ನೂ ಹಾಡುತ್ತದೆ.

ಅದು ಯಾರ ಮನೆಯ ಮೇಲೆ ಕುಳಿತು ಕೂಗುವುದೊ ಅವರ ಮನೆಯಲ್ಲಿ ಮೃತ್ಯು ಸಂಭವಿಸುವುದೆಂಬ ಮೂಢನಂಬಿಕೆ ಬಹಳ ಜನಜನಿತವಾಗಿದೆ. ಯಾರ ಮನೆಯಲ್ಲಾದರೂ ರೋಗದಿಂದ ಮಲಗಿದ್ದರೆ ಆ ಮನೆಯ ಮೇಲೆ ಕುಳಿತು ಗೂಗೆ ಕೂಗಿದರೆ ಅವರ ಸಾವು ಖಚಿತವೆಂದು ನಂಬುತ್ತಾರೆ.

ಹಾಲಕ್ಕಿ :

ಇದು ಸ್ವರೂಪದಲ್ಲಿ ಗೂಗೆಯಂಥದಾದರೂ ಗಾತ್ರದಲ್ಲಿ ಮಾತ್ರ ಚಿಕ್ಕದು. ಇದಕ್ಕೂ ಕತ್ತಲಲ್ಲೇ ಕಣ್ಣು ಬರುತ್ತವೆ. ಹಾಳುಮನೆಗಳ ಸಂದುಗಳಲ್ಲಿ, ಗಿಡಗಳ ಪೊದರಿನಲ್ಲಿ ಇದರ ವಾಸ. ನೀರವ ಸ್ಥಳದಲ್ಲಿ ಇದರ ಹಾರಾಟ. ಹಾಲಕ್ಕಿಗೆ ಶಕುನದ

ಹಕ್ಕಿ ಎಂದೂ ಹೆಸರು ಇದೆ. ಬುಡಬುಡಕಿಯುವರು ಈ ಹಕ್ಕಿಯು ಪಣ ಕಟ್ಟಿ ಶಕುನ ಹೇಳುತ್ತಾರಂತೆ! ಹಕ್ಕಿಯು ಕೂಗಿನ ರೀತಿ ಕೂಗಿದ ದಿಕ್ಕುಗಳ ಮೇಲೆ ಶಕುನ ಸಂಗ್ರಹ ಮಾಡುತ್ತಾರೆ. ಈ ಹಕ್ಕಿಯು ಕೂಗೂ ಅಪಶಕುನವೆಂಬ ನಂಬಿಕೆ ಬಹಳ ಜನರಲ್ಲಿದೆ. ಆದರೂ ಗೂಗಿಯುಷ್ಟು ಭಯಾನಕವಲ್ಲ.

ಮೂರುವ ಸಂಜೀಲಿ ಮುತ್ತೈದಿ ಬಾಯಿಲಿ
ಕೇಳಿಬಾ ತಮ್ಮ ಶಕುನವ । ನಿನತಂಗಿ
ಹಾಲಕ್ಕಿಹಾಂಗ ನುಡಿವೊಳು ॥

ಹಂಗು (Jay) :

ಹಂಗನ್ನು ಬಹಳಷ್ಟು ಜನರು ನೋಡಿರಲು ಸಾಕು. ಇದಕ್ಕೆ ನೀಲಕಂಠಪಕ್ಷಿ ಎಂದೂ ಹೇಳುತ್ತಾರೆ. ಇದು ಹಗಲಿನಲ್ಲಿ ಹಾರಾಡುವ ವಿಶೇಷ ಬಣ್ಣದ ಹಕ್ಕಿ, ಯಾರ ಕಣ್ಮನವನ್ನೂ ಸೆಳೆಯುವಂಥದು. ಕುಳಿತಾಗ ಬೂದುಬಣ್ಣದ್ದಾಗಿ ಕಂಡರೂ ಗರಿಬಿಚ್ಚಿ ಹಾರಾಡುವಾಗ ನೀಲಿ ಹಸಿರು ಬಣ್ಣಗಳ ವೈಖರಿಯನ್ನು ಕಾಣಬಹುದು. ಪಾರಿವಾಳಕ್ಕೂ ಸ್ವಲ್ಪ ಚಿಕ್ಕದಾದ ಈ ಹಕ್ಕಿ 'ಕೊರ್ ಕೊರ್' ಎಂದು ಒದರುತ್ತ, ಕಂಟಿಗಳ ಮೇಲೆ, ವಿದ್ಯುತ್‌ತಂತಿಗಳ ಮೇಲೆ, ಊರ ಹೊರವಲಯದಲ್ಲಿ ವಾಸಿಸುತ್ತದೆ. ಮನುಷ್ಯರು ಸಮೀಪ ಹೋದರೂ ತಟ್ಟನೆ ಹಾರಿಹೋಗದ ಧೈರ್ಯ ಅದಕ್ಕಿದೆ. ಇದು ಮೀಂಗುಲಿಹಕ್ಕಿಯಂತೆ ಇದ್ದರೂ ಚುಂಚು ಮಾತ್ರ ಅಷ್ಟು ಉದ್ದಾಗಿರುವದಿಲ್ಲ.

ಯಾವುದಾದರೂ ಕಾರ್ಯಕ್ಕೆ ಹೊರಟಾಗ ಹಂಗು ಎಡಕ್ಕೆ ಹಾರಿದರೆ ಕಾರ್ಯ ಆದಂತೆಯೇ ಸರಿ. ಬಲಕ್ಕೆ ಹಾರಿದರೆ ಮುಂದೆ ಹೆಜ್ಜೆಯನ್ನೇ ಇಡಲಾಗದು. ಕಾರ್ಯ ಆಗುವುದೇ ಶಕ್ಯವಿಲ್ಲ. ಅದರ ಇನ್ನೊಂದು ವಿಶೇಷವೆಂದರೆ ಅದನ್ನು ಎಡಕ್ಕೆ ಮಾಡಿಕೊಂಡೇ ಹೋಗಬೇಕೆಂದರೆ ಅದೆಂದೂ ಶಕ್ಯವಿಲ್ಲದ ಮಾತಂತೆ! ಹಂಗನ್ನು ಎಡಕ್ಕೆ ಮಾಡಿಕೊಂಡೇ ಹೋಗಬೇಕೆಂದವ, ಕೊನೆಗೂ ಅದು ಸಾಧ್ಯವಾಗದೆ ಪಟ್ಟ ಸಂಕಷ್ಟಗಳ ಪ್ರಸ್ತಾಪ ಹಲವಾರು ಜನಪದಕಥೆಗಳಲ್ಲಿದೆ. ಅದಕ್ಕಾಗಿಯೇ ಜನಪದದಲ್ಲಿ 'ಹಂಗಾಗಿ ಕಾಡು' ಎಂಬ ಪಡೆನುಡಿ ರೂಢಿಯಲ್ಲಿದೆ. ಇದನ್ನು 'ದಸರಾ' ಮೊದಲಾದ ಕೆಲವು ವಿಶೇಷ ದಿನಗಳಂದು ನೋಡುವುದೂ ಶುಭವೆಂಬ ಕಲ್ಪನೆ ಇದೆ.

ಬಡಿಗನ ಹಕ್ಕಿ (The wood-Pecker) :

ಇದಕ್ಕೆ ಕನ್ನಡದಲ್ಲಿ 'ಮರಕುಟವಕ್ಕಿ'. 'ಮರಕುಟ್ಟಿಗ' ಎಂದು ಕರೆದರೆ 'ಶತಪತ್ರಕ', 'ದಾರ್ವಾಘಟ' ಎಂದು ಸಂಸ್ಕೃತದಲ್ಲಿ ಕರೆಯುತ್ತಾರೆ. ಹಳ್ಳಿಗರು ಇದಕ್ಕೆ 'ಬಂಗ' ವೆಂದೂ ಹೇಳುವದುಂಟು. 'ಹಂಗ ಎಡಕ್ಕೆ ಬಂಗ ಬಲಕ್ಕೆ' ಎಂಬ ಗಾದೆಯೂ

ಉಂಟು. ತೀರ ವಿರಳವಾಗಿ ಕಾಣಲು ದೊರೆಯುವ ಈ ಹಕ್ಕಿ ತೋಟ, ಗದ್ದೆಗಳಲ್ಲಿ ಮಾತ್ರ ಇರುವಂಥದು. ಸುಂದರವಾದ ಈ ಹಕ್ಕಿಯು ಬದಾಮು ಬಣ್ಣದ ಗರಿಗಳಿಗೆ ದುಂಡಾದ ಕಪ್ಪುಚುಕ್ಕೆಗಳಿರುತ್ತವೆ. ಇದಕ್ಕೆ ಉದ್ದಾದ ಚುಂಚು ಇರುವುದರಿಂದ ಮರವನ್ನು ಸಹಜವಾಗಿ ಕೊರೆಯುಬಲ್ಲದು. ಅದಕ್ಕಾಗಿಯೇ ಇದನ್ನು ಬಡಿಗಸಹಕ್ಕಿ ಎಂದು ಕರೆಯುವದು. ಗಂಡುಹಕ್ಕಿಯು ತಲೆಯ ಮೇಲೆ ತುರಾಯಿ ಇದ್ದು ಸಿಟ್ಟು ಬಂದಾಗ, ಸಂತೋಷವಾದಾಗ ಅದನ್ನು ತೆರೆದು ತನ್ನ ಭೀಕರತೆಯನ್ನೂ ಬೆಡಗನ್ನೂ ಪ್ರದರ್ಶಿಸುತ್ತದೆ. ಆದರ ಚುಂಚು ಮತ್ತು ತುರಾಯಿ ಸರಳರೇಖೆಯಲ್ಲಿದ್ದು ಉದ್ದಾಗಿ ಕಾಣುತ್ತವೆ.

ಈ ಹಕ್ಕಿ ಬಲಕ್ಕೆ ಹಾರಿದರೆ ಹೊರಟ ಕಾರ್ಯ ನಿಶ್ಚಯವಾಗಿ ಆಗುತ್ತದೆಯಂತೆ. ಎಡಕ್ಕೆ ಹಾರಿದರೆ ಅನಿಷ್ಟ ಕಟ್ಟಿಟ್ಟದ್ದೇ ಎಂಬ ತಿಳುವಳಿಕೆ. ಈ ಹಕ್ಕಿಯ ದರ್ಶನವೂ ಶುಭವೆನ್ನುವ ನಂಬಿಕೆ ಇದೆ.

ಸಂಬರಗಾಗಿ :

ಕೇವಲ ದರ್ಶನ ಮಾತ್ರದಿಂದಲೇ ಶುಭವನ್ನೀಯುವ ಇನ್ನೊಂದು ಪಕ್ಷಿ ಸಂಬರ ಗಾಗಿ. ಹಳ್ಳಿಗರು ಇದಕ್ಕೆ ಕುಂಬಾರಕಾಗಿ ಎಂದು ಹೇಳಿದರೆ ಕೆಲವರು ಇದನ್ನು ರತ್ನಪಕ್ಷಿ ಎಂದೂ ಕರೆಯುತ್ತಾರೆ. ನವಿಲು, ಕೋಳಿಗಳ ಜಾತಿಗೆ ಸೇರಿದ ಈ ಹಕ್ಕಿಗೆ ದೂರದವರೆಗೆ ಹಾರಲು ಬರುವದಿಲ್ಲ. ಗಿಡದಿಂದ ಗಿಡಕ್ಕೆ ಮಾತ್ರ ಹಾರ ಬಲ್ಲದು. ಕಾಗೆಗಿಂತ ಸ್ವಲ್ಪ ಉದ್ದವಾಗಿ ಕಂಡರೂ, ಎತ್ತರದಲ್ಲಿ ಅದಕ್ಕೂ ಸ್ವಲ್ಪ ಕಿರಿದಾದ ಈ ಹಕ್ಕಿ ಕೆಂಪುಮಾಸು ಬಣ್ಣದ್ದಿರುತ್ತದೆ. ಇದರ ವೈಶಿಷ್ಟ್ಯವೆಂದರೆ, ಬಿಸಿಲಲ್ಲಿ ಹೊರಗೆ ಬರದಿರುವದು. ದಟ್ಟವಾದ ಪೊದೆ, ತೋಪುಗಳಲ್ಲಿ ವಾಸಿಸುವ ಈ ಹಕ್ಕಿ ಆದಷ್ಟು ಮನುಷ್ಯನ ದೃಷ್ಟಿಯಿಂದ ದೂರಿರಬಯಸುವುದು. ಅದಕ್ಕಾಗಿಯೇ ಇದರ ದರ್ಶನ ಶುಭಕಾರಿ ಎಂದು ತಿಳಿಯುತ್ತಿರಬೇಕು. ಬಯಲು ಸೀಮೆಯಲ್ಲಂತೂ ಇದು ನೋಡಲೂ ಸಿಗುವದಿಲ್ಲ.

ಯುಗಾದಿ ಮತ್ತು ದಸರೆಯ ದಿನ ಮುಂಜಾನೆ ಇದರ ದರ್ಶನವಾದರೆ ಇಡೀ ವರ್ಷ ಅವರಿಗೆ ಶುಭದಾಯಕವಾಗಿರುತ್ತದಂತೆ! ಯುಗಾದಿಯಂದು ಇದನ್ನು ನೋಡಬಯಸಿ ಮುಂಜಾನೆ ಎಷ್ಟೋ ಜನ ಹುಡುಕುತ್ತ ಹೋಗುವದುಂಟು.

ಕುಂಬಾರಹಕ್ಕಿ (Drango) :

ಕಾಗೆಗಿಂತ ಚಿಕ್ಕದೂ ಗುಬ್ಬಿಗಿಂತ ದೊಡ್ಡದೂ ಆದ ಈ ಹಕ್ಕಿ ಪೂರ್ಣ ಕಪ್ಪಗಿರು ತ್ತದೆ. ಇದಕ್ಕೆ ಒಂದೆ ಎರಡು ಉದ್ದಾದ ಗರಿಗಳಿದ್ದು, ಅವು ಕೋರೆಮೀಸೆಯ

ಆಕಾರದಂತಿರುತ್ತವೆ. ಇದು ದನಗಳ ಮೇಲೆ ಕುಳಿತು ಉಣ್ಣೆ ತಿನ್ನುವುದು, ತೆನೆಗಳ ಮೇಲೆ ಕುಳಿತು ಹುಳು–ಹುಪ್ಪಡಿ, ಕಾಳು ತಿನ್ನುವುದು. ಆದರೆ ಅದು ನೆಲದ ಮೇಲೆ ಕೂಡುವುದನ್ನು ಯಾರೂ ನೋಡಿದಂತೆ ಕಾಣುವುದಿಲ್ಲ.

ಈ ಕುಂಬಾರಹಕ್ಕಿ, ಮಳೆ ಆದಾಗ ಸುಡುಗಾಡಿನಲ್ಲಿಯ ತಲೆಬುರುಡೆಯಲ್ಲಿ ನಿಂತ ನೀರನ್ನು ಕುಡಿದು ಹಾರಿ ಯಾವುದೇ ಪ್ರಾಣಿಯ ಮೇಲೆ ಕುಳಿತರೆ, ಹಾರಿಹೋದರೆ ಆ ಪ್ರಾಣಿಯು ಸೊಂಟ ಹೋಗುತ್ತದೆಂಬ ನಂಬಿಕೆ ಹಳ್ಳಿಗಳಲ್ಲಿದೆ. ಸೊಂಟ ಹೋದ ದನಕರು, ಆಡು, ನಾಯಿ ಮೊದಲಾದವುಗಳಿಗೆ 'ಹಕ್ಕಿ ಹಾರಿದೆ' ಎಂದು ಹೇಳುತ್ತಾರೆ. ಮನುಷ್ಯರಿಗೂ ಒಮ್ಮೊಮ್ಮೆ ಹೀಗೆ ಹೇಳುವುದುಂಟು.

ಈ ಹಕ್ಕಿ ಅಥವಾ ಕರಿಗುಬ್ಬಿಯನ್ನು ಆದಿತ್ಯವಾರ ಅಮಾವಾಸ್ಯೆಯದಿನ ಕೊಂದು, ಅದರ ರಕ್ತವನ್ನು ಯಾವುದರಲ್ಲಾದರೂ ಹಾಕಿ ಮೂರು ದಿನ ತಿಪ್ಪೆಯಲ್ಲಿ ಹುಗಿದು ತೆಗೆದು ಯಾರಿಗಾದರೂ ಹಚ್ಚಿದರೆ ಅದು 'ಮೆಚ್ಚು ಮದ್ದಾ'ಗಿ ಪರಿಣಮಿಸುತ್ತದೆಂಬ ವಿಚಿತ್ರ ಮೂಢನಂಬಿಕೆಯೂ ಜನಪದದಲ್ಲಿದೆ. ಇದಕ್ಕೆ ತಳವಾರಹಕ್ಕಿ, ವಾಲೀಕಾರ ಹಕ್ಕಿ ಎಂದೂ ಹೇಳುತ್ತಾರೆ.

ಟೀಂವಕ್ಕಿ (ಟಿಟ್ಟಿಭ ಪಕ್ಷಿ) :

ಹಳ್ಳಿಯ ಸುತ್ತು ಮುತ್ತಲಿನ ಬೈಲಡವಿಯಲ್ಲಿ, ಹಳ್ಳದ ದಂಡೆಯಲ್ಲಿ ಇರುವ ಈ ಹಕ್ಕಿ 'ಟೀಂವ' 'ಟೀಂವ' ಎಂದು ಕೂಗುವುದರಿಂದ ಈ ಹೆಸರು ಬಂದಂತಿದೆ. ಇದು ಹಗಲು ಹಾರಾಡುವ ಹಕ್ಕಿಯಾದರೂ, ವಿಶೇಷವಾಗಿ ಬೆಳುದಿಂಗಳಲ್ಲಿ ಇದು ಕೂಗುತ್ತ ಹಾರಾಡುತ್ತದೆ. ಇದಕ್ಕೆ ತೇನೆವಕ್ಕಿ ಎಂದೂ ಹೆಸರು. ಕಾಲೆತ್ತರದ, ಬಿಳಿ ಎದೆಯ ಕಪ್ಪುಮಸಕುರೆಕ್ಕೆಯ ಈ ಹಕ್ಕಿಯ ಕೂಗನ್ನು ಬಹಳ ದೂರದಿಂದಲೇ ಕೇಳಬಹುದು. ಹಗಲು ಬೈಲು ಹೊಲಗಳಲ್ಲಿ ಈ ಹಕ್ಕಿಗಳು ಕೂಗುತ್ತ ನೆಲಕ್ಕಿಳಿದು ಕುಕ್ಕುವುದು ಮತ್ತು ಮೇಲಕ್ಕೇಳುವುದು ನೋಡಿದರೆ ಅಲ್ಲಿ ಹಾವು, ಉಡುವು, ಮುಂಗಲಿಯಂಥ ಪ್ರಾಣಿ ಹರಿದಾಡುತ್ತಿರಬೇಕೆಂಬುದನ್ನು ದೂರದಿಂದಲೇ ನಾವು ಖಚಿತಪಡಿಸಿ ಕೊಳ್ಳಬಹುದು.

ಮಕ್ಕಳಿಗೆ ಕೋಡಿಗೆಗೆಮ್ಮು ಹತ್ತಿದ್ದರೆ ಮೂರೂಸಂಜೆಯಹೊತ್ತಿನಲ್ಲಿ ಟೀಂವಕ್ಕಿ ಕೂಗುವಾಗ ತಟ್ಟನೆ ಬಗ್ಗಿ ಕೈಗೆ ಸಿಕ್ಕ ಹರಳನ್ನು ತೆಗೆದುಕೊಂಡು, ಮೌನ ವಾಗಿಯೇ ಬಂದು ಅದನ್ನು ಕೆಮ್ಮು ಹತ್ತಿದ ಕೂಸಿನ ಕೊರಳಲ್ಲಿ ಕಟ್ಟಿದರೆ ಮೂರು ದಿನದಲ್ಲಿ ಕೆಮ್ಮು ನಿಲ್ಲುತ್ತದೆಂಬ ಮೂಢನಂಬಿಕೆ ಹಳ್ಳಿಗಳಲ್ಲಿದೆ.

ಹದ್ದು :

ಹದ್ದುಗಳಲ್ಲಿ ಹಲವು ತೆರ. ಊರ ಹದ್ದು (ಇದಕ್ಕೆ ಹಳೆದ್ದು ಅನ್ನುವರು.) ರತಿಕೇಳಿ ಆಡುವುದನ್ನು ನೋಡಿದರೆ ಏನಾದರೂ ಕೆಡಕಾಗುವುದೆಂದು ಕೆಲವು ಜನ ಹೇಳುವುದುಂಟು. ರಣಹದ್ದುಗಳು ಗುಂಪುಗೂಡಿ ಸತ್ತಪ್ರಾಣಿಯನ್ನು ತಿನ್ನುತ್ತಿದ್ದರೆ, ಅದನ್ನು ನೋಡಿ ಮುಂದೆ ಹೋದರೆ ಅನಿಷ್ಟವೆಂದು ತಿಳಿದು ಪ್ರವಾಸವನ್ನು ನಿಲ್ಲಿಸುವವರೂ ಉಂಟು.

ಗಿಳಿ :

ಬಸಿರಿದ್ದ ಹೆಣ್ಣುಮಕ್ಕಳಿಗೆ ಬಯಕೆಯೂಟ ಒಯ್ಯುವಾಗ, ಇಲ್ಲವೆ ಕುಪ್ಪಸ ಮಾಡಲಿಕ್ಕೆ ಹೋಗುವಾಗ ಗಿಳಿಗಳು ಎದುರಾದರೆ, ಆ ಹೆಣ್ಣುಮಗಳಿಗೆ ಗಂಡುಮಗು ಆಗುವುದೆಂಬ ಕಲ್ಪನೆ ಕರ್ನಾಟಕದ ಕೆಲವು ಭಾಗಗಳಲ್ಲಿದೆ.

ಈ ರೀತಿಯ ಹಲವಾರು ಮೂಢನಂಬಿಕೆಗಳು ಪ್ರಾದೇಶಿಕವಾಗಿ, ಇನ್ನೂ ಕೆಲವು ಪಕ್ಷಿಗಳ ವಿಷಯದಲ್ಲಿ ದೊರೆಯುತ್ತವೆ. ಕಾಗೆ ಗೂಗೆಗಳಂಥ ಪಕ್ಷಿಗಳ ವಿಷಯದಲ್ಲಿ ದಟ್ಟವಾಗಿ ಪ್ರಚಾರದಲ್ಲಿರುವ ಮೂಢನಂಬಿಕೆಗಳು ಮಾತ್ರ ಇಡೀ ಭಾರತೀಯ ಜನಪದದಲ್ಲಿ ಕಾಣದೊರೆಯುತ್ತವೆ. ಗೂಗೆಯನ್ನಂತೂ ಯಾವ ದೇಶದವರೂ ಅಶುಭವೆಂದು ಗಣಿಸುವಂತಿದೆ. ಅದಕ್ಕಾಗಿ ಈ ಪಕ್ಷಿಗಳು ಸಂಕೇತಗಳಾಗಿ, ಪ್ರತಿಮೆಗಳಾಗಿ ಕಾವ್ಯಲೋಕದಲ್ಲಿಯೂ ಸಾಕಷ್ಟು ಕಡೆ ಕಾಣಿಸಿಕೊಳ್ಳುತ್ತವೆ.

• •

ಭರತಚಕ್ರೇಶ್ವರನ ಧವಳಶೋಭನ

● ಬಿ. ಆರ್. ಹಿರೇಮಠ
● ವ್ಹಿ. ಎಂ. ವಾಲಿ

ಮಂಗಲಪ್ರಸಂಗಗಳಲ್ಲಿ ಹಾಡುವ 'ಧವಳ' ಎಂಬ ಜನಪದ ಸಾಹಿತ್ಯಪ್ರಕಾರ, ೧೧-೧೩ನೆಯ ಶತಮಾನಗಳಲ್ಲಿ ಪ್ರಚಲಿತವಿದ್ದಿತೆಂಬುದಕ್ಕೆ ರನ್ನನ ಗದಾಯುದ್ಧ[೧], ರಾಘವಾಂಕನ ಸಿದ್ಧರಾಮಚಾರಿತ್ರ[೨]ಗಳು ಆಧಾರವನ್ನೊದಗಿಸುತ್ತಿವೆ. ಡಾ. ಎಂ. ಎಂ. ಕಲಬುರ್ಗಿ ಅವರು ''ಹಲವು ಹೆಸರುಗಳಲ್ಲಿ ಹರಡಿನಿಂತ, ಜನಪದದಲ್ಲಿ ಹಾಸುಹೊಕ್ಕಾಗಿ ನಿಂತ ಈ ಧವಲಸಾಹಿತ್ಯ, ಪಂಪಪೂರ್ವಯುಗದ ಜಾನಪದಸಾಹಿತ್ಯ ಪ್ರಭೇದವಾಗಿರುವ ಸಂಭವವಿದೆ''[೩] ಎಂದು ಹೇಳಿ, ಧವಳಸಾಹಿತ್ಯದ ಪ್ರಾಚೀನತೆಯತ್ತ ಗಮನ ಸೆಳೆದಿದ್ದಾರೆ. ಹೀಗೆ ಪಂಪಪೂರ್ವಯುಗದಿಂದ ಹಿಡಿದು ರಾಘವಾಂಕನ ವರೆಗೆ ನಡೆದು ಬಂದ 'ಧವಳ'ದ ಲಕ್ಷಣ, ಪ್ರಭೇದಗಳನ್ನು ಸೋಮೇಶ್ವರನ ಮಾನಸೋಲ್ಲಾಸ, ಹೇಮಚಂದ್ರನ ಛಂದೋನುಶಾಸನ, ಶಾರ್ಙ್ಗದೇವನ ಸಂಗೀತರತ್ನಾಕರಗಳಲ್ಲಿ ಹೇಳಲಾಗಿದೆ.

ತೆಲುಗಿನಲ್ಲಿಯೂ ಸ್ಥಾನಪಡೆದ ಈ ಧವಳಸಾಹಿತ್ಯವನ್ನು ಕುರಿತು ಡಾ. ಡಿ. ಎಲ್. ಎನ್. ''ಕನ್ನಡದಲ್ಲಿಯೂ 'ಧವಳಹಾಡು' ಜನಪದಸಾಹಿತ್ಯದಲ್ಲಿಯೂ ಹೆಂಗಳೆಯರ ಹಾಡಿನಲ್ಲೂ ಬಳಕೆಯಲ್ಲಿದ್ದಂತೆ ಕಾಣುತ್ತದೆ. 'ಧವಳಹಾಡು ಮುಂತಾದವು' ಎಂಬ ಹೆಸರಿನ ಒಂದು ಗ್ರಂಥ, ಮದ್ರಾಸ ಓರಿಯಂಟಲ್ ಲೈಬ್ರರಿಯಲ್ಲಿರುವಂತೆ ಆ ಸಂಸ್ಥೆಯ ಕನ್ನಡ ಕೈಬರಹದ ಗ್ರಂಥಗಳ ಸೂಚಿಯಿಂದ ಗೊತ್ತಾಗುತ್ತದೆ (A Descriptive Catalogue of the Kannada Manuscripts vol.III No. 364). ಇದರಲ್ಲಿ ಸೀಮಂತಧವಲ, ಜಾತಕರ್ಮಧವಲ, ಉಪನಯನಧವಲ

---

* ಈ ಲೇಖನದ ಬರೆವಣಿಗೆಯಲ್ಲಿ ಸೂಕ್ತ ಸಲಹೆ-ಸೂಚನೆಗಳನ್ನು ನೀಡಿದ ಡಾ. ಎಂ.ಎಂ. ಕಲಬುರ್ಗಿ ಅವರಿಗೆ ಕೃತಜ್ಞತೆಗಳು.

೧ ಆಶ್ವಾಸ : ೫, ಪದ್ಯ : ೪೧.

೨ ಸಂಧಿ : ೮, ಪದ್ಯ : ೮೭, ೮೯.

೩ ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯ, ಪುಟ : ೨೯೧.

ಭರತೇಶ್ವರನ ಧವಲ ಮುಂತಾದ ಹಾಡುಗಳಿವೆ"[೪] ಎಂದು ಹೇಳಿ, ತ್ರುಟಿತದಾದ ೬ ಹಾಡುಗಳನ್ನು ಉದಾಹರಿಸಿದ್ದಾರೆ. 'ಭರತಚಕ್ರೇಶ್ವರನ ಧವಳಶೋಭನ' ಹೆಸರಿನ ಒಂದು ಧವಳಹಾಡು, ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಜೈನಮಠದ ಹಸ್ತಪ್ರತಿ ಭಾಂಡಾರದ ತಾಳೆಗರಿ ಕಟ್ಟಿ(ನಂ. ೧೪೭)ನಲ್ಲಿದೆ. ಪ್ರಸ್ತುತ "ಭರತ ಚಕ್ರೇಶ್ವರನ ಧವಳಶೋಭನ" ಹಾಡು, ಡಿ.ಎಲ್.ಎನ್. ಉದ್ಧರಿಸಿದ "ಭರತೇಶ್ವರನ ಧವಲ" ಹಾಡಿಗಿಂತ ಸಂಪೂರ್ಣ ಭಿನ್ನವಾಗಿರುತ್ತದೆ. ಇಲ್ಲಿ, ಈ ಹಾಡಿಗೆ 'ಧವಳ ಶೋಭನ' ಎಂದು ಹೆಸರಿಸಿರುವುದನ್ನು ಗಮನಿಸಬೇಕು. ಹೀಗೆ ಅಪೂರ್ವ ಹಾಗೂ ಅಪರೂಪವಾಗಿರುವ "ಭರತಚಕ್ರೇಶ್ವರನ ಧವಳಶೋಭನ" ಹಾಡನ್ನು ಪರಿಚಯಿಸಿ, ಪ್ರಕಟಿಸುವುದು ಈ ಲೇಖನದ ಉದ್ದೇಶ.

ಮದ್ರಾಸ ಓರಿಯಂಟಲ್ ಲೈಬ್ರರಿಯ ಕೈಬರೆಹದ ಗ್ರಂಥಸೂಚಿಯಿಂದ ಉದ್ಧೃತವಾಗಿ, ಮುದ್ರಿತವಾಗಿರುವ ೪ ಪಾದಗಳುಳ್ಳ ಮಾತ್ರಾಗಣಾನ್ವಿತವಾದ 'ಧವಳ' ಹಾಡಿನ ೬ ತ್ರುಟಿತ ಉದಾಹರಣೆಗಳನ್ನು ಉಲ್ಲೇಖಿಸಿದ ಡಾ. ಡಿ.ಎಲ್.ಎನ್. ಅವರು, ತೆಲುಗುಸಾಹಿತ್ಯದಲ್ಲಿರುವ 'ಧವಳ'ದ ಲಕ್ಷಣವನ್ನು ಗಮನಿಸಿ "ತೆಲುಗಿನ ಧವಳಕ್ಕೂ ಕನ್ನಡದ ಧವಳಕ್ಕೂ ಸಮಾನವಾದ ಲಕ್ಷಣವಿದೆಯೆಂದೂ ಅದರ ಪ್ರಯೋಗ ದಲ್ಲಿಯೂ ಸಮಾನತೆಯಿದೆಯೆಂದೂ ತೀರ್ಮಾನಿಸಬಹುದು"[೫] ಎಂಬ ಹೇಳಿಕೆ ನೀಡಿ, ಕನ್ನಡ 'ಧವಳ' ಹಾಡು ಮಾತ್ರಾಗಣಸ್ವರೂಪವುಳ್ಳುದೆಂಬ ತೀರ್ಮಾನಕ್ಕೆ ಅಡಿಗಲ್ಲನ್ನು ಹಾಕುವಷ್ಟರಲ್ಲಿಯೇ "ಈ ಲಕ್ಷಣವನ್ನು ಇನ್ನೂ ಹೆಚ್ಚು ಪರಿಷ್ಕಾರವಾಗಿ ಹೇಳುವು ದಕ್ಕೆ ಹಲವಾರು ಲಕ್ಷ್ಯಗಳು ದೊರೆತಾಗ ಸಾಧ್ಯವಾದೀತು. ಕನ್ನಡದ ಯಕ್ಷಗಾನ ಗಳನ್ನೂ ಹೆಣ್ಣುಮಕ್ಕಳ ಹಾಡುಗಳನ್ನೂ ಜಿದಕಿನೋಡಿದರೆ ಧವಳಹಾಡುಗಳು ಇನ್ನೂ ಹೇರಳವಾಗಿ ಸಿಕ್ಕಬಹುದು. ಹಾಗೆ ದೊರೆತಾಗ ಆ ಹಾಡು ಮಾತ್ರಾಗಣ ಘಟಿತವಾದದ್ದೇ, ಅಂಶಗಣಘಟಿತವಾದದ್ದೇ ಎಂಬ ವಿಚಾರಕ್ಕೆ ಅವಕಾಶವಾಗುವು ದಲ್ಲದೆ ಅದು ಆರಂಭದಲ್ಲಿ ಅಂಶಗಣಯುಕ್ತವಾಗಿದ್ದು ಕಾಲಕ್ರಮದಲ್ಲಿ ಮಾತ್ರಾಗಣಕ್ಕೆ ತಿರುಗಿದ್ದರೂ ಇರಬಹುದೆಂಬುದಕ್ಕೂ ಆಧಾರ ದೊರೆಯಬಹುದು"[೬] ಎಂಬ ಮತ್ತೊಂದು ಅಭಿಪ್ರಾಯಕ್ಕೆ ಕೈಚಾಚಿದ್ದಾರೆ.

ಹೀಗೆ ಮೊದಲು ಅಂಶಗಣಯುಕ್ತವಾದ ಈ ಧವಳಹಾಡು, ಮುಂದೆ ಮಾತ್ರಾಗಣಯುಕ್ತವಾಗಿರಬಹುದೆಂಬ ಡಿ.ಎಲ್.ಎನ್. ಊಹೆಗೆ ಅಂಶಗಣಯುಕ್ತವಾದ ಪ್ರಸ್ತುತ "ಭರತಚಕ್ರೇಶ್ವರನ ಧವಳಶೋಭನ" ಹಾಡು ಆಧಾರವಾಗಿ ನಿಲ್ಲುತ್ತದೆ.

೪ ಪೀಠಿಕೆಗಳು, ಲೇಖನಗಳು. ಪುಟ : ೬೮೧.

೫ ಅದೇ.

೬ ಪೀಠಿಕೆಗಳು, ಲೇಖನಗಳು. ಪುಟ : ೬೮೪.

ಇಲ್ಲಿಯು ಕೆಲವು ಪದ್ಯಗಳ ಚರಣಗಳು ಮೂಲದಲ್ಲಿ ಬಿಟ್ಟುಹೋಗಿರುವುದನ್ನೂ ಜೊತೆಗೆ ಅಲ್ಲಲ್ಲಿ ಛಂದಸ್ಸಿಗೆ ಚ್ಯುತಿ ಬಂದಿರುವುದನ್ನೂ ಗಮನಿಸಬೇಕು.

ಡಿ. ಎಲ್. ಎನ್. ಉದ್ಧರಿಸಿದ ಧವಳಹಾಡುಗಳು ೪ ಪಾದ ಹಾಗೂ ಮಾತ್ರಾಗಣಾನ್ವಿತವಾದವುಗಳಾಗಿದ್ದರೆ, ಪ್ರಸ್ತುತ "ಭರತಚಕ್ರೇಶ್ವರನ ಧವಳಶೋಭನ" ಹಾಡು ೬ ಪಾದಗಳನ್ನೊಳಗೊಂಡಿದ್ದು, ಅಂಶಗಣಾನ್ವಿತವಾಗಿದೆ. ಇದನ್ನು "ಭರತೇಶ್ವರ ಧವಳಾರ", "ಡವಳಾಗಮ", "ಡವಳಶೋಭಾನ" ಎಂದೂ ಹೆಸರಿಸಲಾಗಿದೆ. ಹೀಗೆ ಭಿನ್ನರೂಪದಲ್ಲಿ ದೊರೆಯುವ ಅಪೂರ್ವವಾದ "ಭರತಚಕ್ರೇಶ್ವರನ ಧವಳ ಶೋಭನ" ಹಾಡು ಹೀಗಿದೆ :

ಶ್ರೀಮದನಾದಿ ವಸ್ತುವಿಗೆ । ಸ್ವಾಮಿ ಸರ್ವಜ್ಞಸಿದ್ಧರಿಗೆ ।
ಕಾಮಮದೇಭಹರಿಗೆ ಪರಬ್ರಹ್ಮಗೆ ।
ಕಾಮಿತಫಲಗಳನೀವ ಚಿನ್ಮಯನಿಗೆ ।
ಪ್ರೇಮದಿ ಸಾಷ್ಟಾಂಗದೊ[ಳ]ಗೆರಗುವೆನು। ದ್ದಾಮ ಸನ್ಮತಿಯ ಸಲಿಸೆಂದು ॥೧॥

ಶಂಬರಾರಿಯ ಮದಹರಗೆ । ಶಂಭು ಚಿದಂಬರೇಶನಿಗೆ ।
ಅಂಬರಸದೃಶ ದಿಗಂಬರ ಪುರುಷಗೆ ।
ಕುಂಭಿನಿಜನನಿಕುರುಂಬ ಪೂಜಿತನಿಗೆ ।
ನಂಬಿ ಸಾಷ್ಟಾಂಗದೊಳೆರಗಿ ನುತಿಸುವೆ ಕೃ । ಪಾಂಬುಧಿ ಪಾದಕ್ಕನುದಿನ ॥೨॥

ಶ್ರೀಗುರು ಪಂಚಪದಗಳ । ಶ್ರೀಗೆ ನಿಲಯ ನಿಗಮಂಗಳ ।
ರಾಗ ರಸದಿ ಡವಳಾಗಮದಿಂದ ।
ಪೂಗಿ ಕದಳಿ ಸಾರಂಗಗಳಿಂದ ।
ಬಾಗಿ ಶ್ರೀಚರಣಾಂಬುಜಗಳನರ್ಚಿಪೆ । ಶ್ರೀಗಣನಾಥ ಕೃಪೆದೋರು ॥೩॥

ಚಂಪಕ ಕುಂದಕುಟ್ಮಳವಾ । ತಂಪಿನ ಗಂಧ ಸೌರಭದ ।
ಸೊಂಪಿನ ಸುರಭಿಯ ಗುಂಪಿನಿಂದೆಸೆವ ।
ಇಂಪಿನ ಚರುವಿ ಧೂಪ ಸತ್ಫಲವಾ ।
ಕೆಂಪ ಶ್ರೀಯಾಂದೇವಿಯ ಪದಕರ್ಚಿಪೆ । ಪೆಂಪಿನ ಸುಮತಿಯ ಸಲಿಸೆಂದು ॥೪॥

ಗಣಧರ ಗುಣಗಣಧರರ । ಪ್ರಣುತ ಭವ್ಯಾಬ್ಜಭಾಸ್ಕರರ ।
ಅಣಿಯರನಷ್ಟವಿಧಾರ್ಚನೆಗಳಲಿ ।
ಮಣಿದೆರಗುವೆ ಭಾವಿಸಿ ಭಕ್ತಿಯಲಿ ।
ಪ್ರಣಮದಖಿಲ ತ್ರಿದಶೇಂದ್ರವಂದಿತರಡಿ । ಗಣುಗತನಾಗಿ ನುತಿಸುವೆ ॥೫॥

ಚಂಡಮದೇಭ ಕಂಠೀರವನು । ದ್ದಂಡ ಮಹಾನೀಲೋರಗನು ।
ಅಂಡಲೆವಘತತಿವಿಪಿನಧನಂಜಯು ।
ತಂಡತಂಡದ ಭವ್ಯಾತ್ಮರ ಪಾಲಿಪ ।
ಪಂಡಿತಜನನುತ ಶ್ರೀಲಕ್ಷ್ಮೀಸೇನ ಭೂ। ಮಂಡಲಾಚಾರ್ಯ ಕೃಪೆದೋರು ॥೬॥

ಪದಿನಾಲ್ಕನೆಯ ಮನುಕುಲಜ । ನುದಯಂಗೈದಿ ನಾಭಿರಾಜ ।
ಸುದತಿ ಶಿರೋಮಣಿ ಮರು[ದೇ*]ವಿಯಮ್ಮನ ।
ನುದರ ಸುಧೋದಯನಾದೀಶ್ವರನ ।
ಪದುಳ ಪದಂಗಳ ನುತಿಸಿ ಪ್ರಥಮಯುಗ । ಗಧಿದೇವರೆಂದು ಪೊಗಳುವೆ ॥೭॥

ಪರಮೇಶನುದರಾಬ್ಧಿಚಂದ್ರ । ನೆರೆ ಚಕ್ರಿ ಭರತರಾಜೇಂದ್ರ ।
ನರಸುರ ನಾಗಲೋಕವ ಸಾಧಿಸಿದ ।
ಧರೆಗಾದಿಕುವರನ ಡವಳಶೋಭಾನವ ।
ನೊರೆವೆ ಲಾಲಿಪುದು ರಸಿಕರು ।[೧]. . . . .[೧] ॥೮॥

ಮೆರೆವಿಂದ್ರನೀಲವೇದಿಕೆಯ । ವರ ರತ್ನೋಜ್ವಲ ಸ್ವರ್ಣನಿಲಯ ।
ಉರುಮಣಿಕೂಟಪರ್ವತನೆ ತರಿದು ।
ಸುರರು ನಿರ್ಮಿಸಿದರಮನೆಯನೆ ಮೆರೆದು ।
ಧರಣಿಗಚ್ಚರಿವಡೆದಿಹ ಮಣಿಮಂಟಪ । ತರಣಿಮಂಡಲವ ಪಳಿವುದು ॥೯॥

ಪಚ್ಚೆಯ ಪಾದಪೀಠಗಳು । ಸ್ವಚ್ಛಪ್ರವಾಳ ಕಂಭಗಳು ।
ಅಚ್ಚರಿ ಮರಕತ ಮಣಿಬೋದಿಗೆಗಳು ।
ಚೆಚ್ಚಂತಿಹ ವೈಡೂರ್ಯದ ತೊಲೆಗಳು ।
ಮುಚ್ಚುವಲಗೆ ಗೋಮೇಧಿಕ ವಜ್ರದ। ಗುಚ್ಚರುಚಿಲೋವೆ ಮೆರೆದುದು ॥೧೦॥

ಮಾಣಿಕಮಣಿ ಪುತ್ಥಳಿಗಳು । ಏಣಾಂಕಾಯತ ದರ್ಪಣಗಳು ।
ಠಾಣಠಾಣದ ಝಲ್ಲಿ ಕುಚ್ಚು ಪೂಮಾಲೆಯು ।
ಮಾಣದೆ ನಭವ ಚುಂಬಿಪ ಧ್ವಜಪಂಕ್ತಿಯು ।
ಕ್ಷೋಣಿಗಪ್ರತಿಗೀರ್ವಾಣರು ರಚಿತ ಕ । ಟ್ಟಾಣಿಮಂಟಪ ಮೆರೆದುದು ॥೧೧॥

ಇಂತಪ್ಪ ವಿಭವಮಂದಿರದಿ । ಸಂತತ ನರಸುರಮ್ಮದದಿ ।
ಚಿಂತಾಮಣಿ ರೂಪಾಂತೊಲು ಬಂದರು ।
ದಂತಿಗಮನೆಯರು ಭಾಗಿನವಾಂತರು ।
ಮುಂತೆ ಮಾಧುರ್ಯ ಪೋಷಣೆಯೊಳಗಿಂದ್ರರ। ಸಂತತಿ ಬಂದು ನೆರೆದುದು॥೧೨॥

೧–೧ ಮೂಲದಲ್ಲಿ ಈ ಸಾಲು ಬಿಟ್ಟುಹೋಗಿದೆ.

ಮುತ್ತು ಮಾಣಿಕ್ಯ ವೈಡೂರ್ಯದಲಿ । ವೃತ್ತಕುಚೆಯರು ಚೆಲ್ವಿನಲಿ ।
ಬಿತ್ತರಿಸಿದರತಿ ಚಿತ್ರದ ಹಸೆಯ ।
ಉತ್ತಮ ನವಮಣಿಖಚಿತದಿಂದೆಸೆಯೆ ।
ಸುತ್ತ ಸೌರಭ ಕಸ್ತೂರಿಯ ಸಾರಣೆ ಮುದ।ವೆತ್ತು ರಂಜಿಸಲು ರಚಿಸುತ ॥೧೩॥

ರನ್ನದೋಲೆಯು ರತ್ನಾಭರಣ । ಚೆನ್ನಚಿದಂಬರವರಣ ।
ವನ್ನು ತಾಳ್ದಾರ್ಯಖಂಡದ ಸೊಬಗಿಯ ।
ರುನ್ನತ ಸ್ವರ್ಣಕಳಶ ಕನ್ನಡಿಯ ।
ಚೆನ್ನೆಯರೆಯ್ದಿದರಕ್ಷಯಸುಖಸಂ । ಪನ್ನ ಚಿತ್ತೈಸು ಮುದದಿಂದ ॥೧೪॥

ಭುವನವಚ್ಚರಿವಡುವಂತಾ । ಭವನವಾಸಿಕರ ತತ್ಕಾಂತಾ ।
ನಿವಹ ದಿವ್ಯಾಂಬರ ಭೂಷಣದಿಂದ ।
ನವಮಣಿದೊಡಿಗೆಯ ಮುಯ್ಯಗಳ ತಂದ ।
ನವಯೌವನೆಯರು ಸಹ ಬಂದರು । ರವಿಕಾಂತಿತೇಜ ಹಸೆಗೇಳು ॥೧೫॥

ವಿದ್ಯುಲ್ಲತೆಯ ರೂಪಾಂತೊಲು । ವಿದ್ಯಾಧರ ದಂಪತಿಗಳು ।
ಆದ್ಯಂತರು ದಿವ್ಯಾಭರಣಗಳಿಂ ।
ವಿದ್ಯುತ್ಕಾಂತೆಯರಿಳಿವಂದಗಳಿಂ ।
ಸದ್ಯ ಬಂದರು ಮೂಲೋಕದವರಿಗು । ಪಾಧ್ಯ ಬಂದೇರೊ ಹಸೆಯನು ॥೧೬॥

ಕಿನ್ನರೇಂದ್ರನು ಗಂಧರ್ವೇಂದ್ರ । ಸನ್ನುತ ಗರುಡ ಯಕ್ಷೇಂದ್ರ ।
ಸ್ವರ್ಣಾಂಬರ ದಿವ್ಯರತ್ನಭೂಷಣವ ।
ಕಿನ್ನರಿಯರು ತೊಟ್ಟು ದಿವ್ಯಭೂಷಣವ ।
ಚೆನ್ನೆಯರಾಂತು ಪಾಡುತ ಬಂದರು ಸುಪ್ರ । ಸನ್ನ ಗುಣರನ್ನ ಹಸೆಗೇಳು ॥೧೭॥

ಜ್ಯೋತಿಯ ರೂಪಾಂತವೊಲು । ಜ್ಯೋತಿರ್ಲೋಕದ ದಂಪತಿಗಳು ।
ಭೂತಳ ಬೆರಗಪ್ಪಾಭರಣಗಳಿಂ ।
ಮಾತುಳುಂಗವು ಖರ್ಜೂರ ಫಲಗಳಿಂ ।
ಪ್ರೀತಿಯೊಳೈತಂದರು ತ್ರಿಭುವನ ವಿ । ಖ್ಯಾತ ಬಂದೇರೊ ಹಸೆಯನು ॥೧೮॥

ಕಲ್ಪಾಮರೇಂದ್ರಮರಿಯರು । ಸ್ವಲ್ಪ ಮಧ್ಯದ ಭಗಿನಿಯರು ।
ಶಿಲ್ಪ ಸುವಿದ್ಯಾಭೂಷಣ ದಿವ್ಯಾಂಬರ ।
ದೊಲ್ಪಿಲಿ ದಿವ್ಯಕಾಂತಿಯ ಬೆಳಗುವರ ।
ಕಲ್ಪವೃಕ್ಷದ ವಸ್ತುವ ತಂದರು ಸುರ । ರೊಳ್ಪ ಸೂಚಿಪನೆ ಹಸೆಗೇಳು ॥೧೯॥

ಹರಳೋಲೆ ಹಸ್ತಕಡಗವ । ಬೆರಲವುುದ್ರಿಕೆ ಹಾರ ಮೆರೆವಾ ।
ಚರಣನೂಪುರ ಚಿತ್ರಾಂಬರಸುಡಿಸಿ ।
ವರ ಮೋಹನಕರ ಕಂಚುಕಿ ತೊಡಿಸಿ ।
ಉರಗಿಣಿಯುರು ಷಟ್ಖಂಡದರಸುಗಳ । ಪರಿಪಾಲಿಪನರಸಿಯು ಕರೆತನ್ನಿ ॥೨೦॥

ಪೊಂಬರಹದ ಪೀತಾಂಬರದಿಂ ಇಂದು । ಬಿಂಬಾನನೆಯರು ಕಂಬುಕಂಠೆಯರು ।
ಅಂಬರಚರಿಯರು ಅಮರಾಂಗನೆಯರು ।
೨. . . . . .೨।
೨. . . . . .೨। ರಂಭೆಯು ಹಸೆಗೆ ಕರೆತನ್ನಿ । ॥೨೧॥

ಮೃಗಮದಗಂಧಗಂಧಿಯರು । ಮೃಗಧರಾಯತವದನೆಯರು ।
ಅಗಿಲು ಕುಂಕುಮ ಮೃಗಮದವನು ತೀಡಿ ।
ಮಗಮಗಿಪಲರ್ಗಳ ಮಾಲೆಯ ಸೂಡಿ ।
ಧಗಧಗಿಸುವ ರತ್ನಹಾರಭೂಷಣವಿಟ್ಟು । ನಗೆಮೊಗದರಸಿಯು ಕರೆತನ್ನಿ ॥೨೨॥

ಚಂದ್ರಮುಖಿಯು ಚಿಂತಾಮಣಿಯು । ರುಂದ್ರಕಲೆಯು ಕಾಂತಿಕಣಿಯು ।
ಇಂದ್ರಾಣಿಯ ಮಣಿಪೀಠವನಡರಿಸಿ ।
ಇಂದ್ರವೈಭವದ ನರೇಂದ್ರರೊತ್ತಿನೊಳೀ ಹ ।
ಸ್ತ್ರೀಂದ್ರಗಮನೆಯರ್ನುತಿಸಿರೆ ।೨. . . . . .೨ ॥೨೩॥

ಗಂಗಾದೇವಿಯುು ಸಿಂಧುದೇವಿ । ಅಂಗನಾಮಣಿ ಶಶಿದೇವಿ ।
ಬೆಂಗಡೆಯೊಳು ಬೆಳ್ಳಿಲೆಗಳಿಗೆಯನು ।
ಕಂಗೊಳಿಪೆಲೆ ಕರ್ಪೂರ ಸಾರವನು ।
ಇಂಗದೆ ಈವ ಬೆಡಂಗಿಯರೆಸೆಯೆ । ಬೆಳ್ದಿಂಗಳ ಕಾಂತಿ ಪಳಿಯುತ್ತ ॥೨೪॥

ಇತ್ತೆರ ಬತ್ತೀಸ ಚಾಮರಗ । ಳೆತ್ತಿ ಢಾಳಿಸುವ ನಾರಿಯರ ।
ಮೊತ್ತವೆ ಕ್ಷೀರಾಂಬುಧಿ ಚಾಮರ ತಲೆ ।
ಯೊತ್ತಿಲಿ ಚಂದ್ರಮ ರೋಹಿಣಿಯಂತಿರೆ ।
ಎತ್ತಿದ ಮುತ್ತಿನ ಛತ್ರಚ್ಛಾಯದಿ । ಪುರುಷೋತ್ತಮನೆಸೆದನಸಿಯುಳೆ ॥೨೫॥

ಆವುಜ ಚೆಂಗು ಮೃದಂಗ । ತೀವಿದ ಸ್ವರವುಪ್ಪಾಂಗ ।
ಭಾಮೆಯರಾಳಾಪವು ತಾಳದಂಡಿಗೆ ।
ಭೂವಳಯದ ಬಹುವಾದ್ಯಘೋಷಣೆಗೆ ।
ದೇವಗಣಿಕೆಯರು ನರ್ತನಮಾಡುವ । ಭಾವವನೆಂತು ಪೊಗಳುವೆ ॥೨೬॥

೨–೨ ಮೂಲದಲ್ಲಿ ಈ ಭಾಗ ಬಿಟ್ಟುಹೋಗಿದೆ,

ಓರವ ಮಾಧುರ್ಯ ಘೋಷಣದಿ । ಉರಗಿಣಿಯರ ಚಮತ್ಕರದಿ ।
ತರಿಝುಂ ಝುಕ್ಕಿಟಕಿಟತತ್ತೋಗಿಣ ।
ತರಿಕುತದ್ದಿಣಧಣ ಝುಣಾಂತರಿಕ್ಕಣ ।
ತರಿಚೆಂತರಿಝೋಝೋಂತ್ಕಣತಮೆಸ್ನುತ । ಮೆರೆವ ನರ್ತಕಿಯರೆಸೆವರು ॥೨೭॥

ತತ್ತತೇಂಗಿಣಧಿಮಿಕೆನುತ । ವೃತ್ತಕುಚೆಯರಾಳಾಪಿಸುತ ।
ತಿತ್ತಿತ್ತೈತ್ತೈತದಿಂತರಿಕ್ಕಣ ।
ತತ್ತೋಂಗಿಣ ತರಿಕಿಟಕಿಟಧಿಕ್ಕಿಟ ತಕ ।
ಧಿತ್ತಾಂ ಧಿಗಿಧಿಗಿ ಝುಣಾಂತರಿಕ್ಕಿಣ । ಧಿತ್ತಿತ್ತೋಂಗೆನುತ ನಟಿಸುತ ॥೨೮॥

ಸರಿಗಮಪದನಿಯೆಂಬೇಳು । ಸ್ವರಗಳ ತಾಳಮೇಳದೊಳು ।
ಮೆರೆವ ನರ್ತಕಿಯರ ಬಹುವಿದ್ಯಾಧರ ।
ರುರುತರ ದಿವ್ಯಾವಳಿಗಳ ತೋರ್ಪರ ।
ಪರಿಪರಿಹಾಸ್ಯರಚನೆಯೊಳು ಸಭೆಗ । ಚ್ಚರಿಯ ಪ್ರಮೋದಕರವಾಗೆ ॥೨೯॥

ತಂಬಟಕೋಟಿ ಸೂಳೈಸೆ । ತುಂಬಿಪಾಠಕರುಗ್ಗಡಿಸೆ ।
ಕೊಂಬು ಕಾಳೆಗಳೊದರಲು ನಿಸ್ಸಾಳವು ।
ಕುಂಭಿನಿಯೆದುರು ದುಂಬಿರವವು ।
ಬೊಂಬಾಯುಮಾನವೆಸದುದು । [1]. . . . .[1] ॥೩೦॥

ಮಲಯಪರ್ವತ ವಿಜಯಾರ್ಧ । ಕುಲಗಿರಿಗಳೊಳುದಿಸಿರ್ದ ।
ಕಲಿತ ರಜನಿ ಕುಂಕುಮ ಹಿಮಸಾರವು ।
ನೆಲಸಿದ ಕಮ್ಮೆಣ್ಣೆಯು ಫಲಕುಸುಮವು ।
ಸುಲಲಿತ ಗಂಧ ಕದಂಬ ಸಹಿತ ಸುರ । ನಿಲಯಜರೆಲ್ಲ ನೆರೆದರು ॥೩೧॥

ಸುರಭಿ ಸುಗಂಧದೆಣ್ಣೆಯನು । ಸುರಗಿ ಸೇವಂತಿಗೆಗಳನು ।
ಸುರಕಾಂತೆಯರು ಪರಂಜೆಯ ಬಟ್ಟಲೊ ।
ಳರಸಿನ ಗಂಧ ಕದಂಬವ ತೀಡಿ ।
ಸುರವಿದ್ರುಮಫಲಪುಂಜವನಿರಿಸಲು । ಪರಿಮಳ ಸಭೆಯ ಮುಸುಕಲು ॥೩೨॥

ಮಲ್ಲಿಗೆ ಗಂಧದೆಣ್ಣೆಯನು । ಮೊಲ್ಲೆಮಲ್ಲಿಗೆ ಮಾಲೆಯನು ।
ಘಲ್ಲುಘಲ್ಲೆಂಬಂದುಗೆಗಳ ರವದೊಳು ।
ಸಲ್ಲಲಿತಾಂಗಿಯರ್ನಲಿಯುತಯಿಳಿಪಲು ।
ಪಲ್ಲವಪಾಣಿಯ ರಚಿಸುವ । ಸಂಜ್ಞೆಗಳಲ್ಲಿಯುಣ್ಮಿದವು ಸಭೆಯಲ್ಲಿ ॥೩೩॥

೧–೧ ಮೂಲದಲ್ಲಿ ಈ ಭಾಗ ಬಿಟ್ಟುಹೋಗಿದೆ.

ಸಂಪಿಗೆ[ಯೆಣ್ಣೆಯು*]ರಿಸಿನವ । ಕಂಪೆಸೆವಲರ ಕುಟ್ಮಳವ ।
ತಂಪಿನ ಗಂಧಕದಂಬ ಕರ್ಪುರವ ।
ತಂಪಿನ ದ್ರಾಕ್ಷೆ ಖರ್ಜೂರದ ಫಲವ ।
ಕೆಂಪೆಯರಾಂತು ಬಂದರು ಭಾಗ್ಯದ ಬಹು। ಕೆಂಪಿನ ಮೊಗದ ಸತಿಯರು ॥೩೪॥

ಪರಲ್ಕಚಿತದ ಪೊಂಬಟ್ಟಲೊಳು । ಸುರಭಿ ಸುಗಂಧ ವೀಥಿಗಳು ।
ವರನಾರಂಗಫಲವು ಕಮ್ಮೆಣ್ಣೆಯು ।
ಉರುತರ ಕದಳಿ ಸುಪಕ್ವ ಫಲಗಳು ।
ವೆರಸಿ ಷಟ್ಖಂಡಚಕ್ರೇಶ್ವರ । ಗರಿಪಿನೆಣ್ಣೆಯನು ತಿಗುರಿದರು ॥೩೫॥

ಅರಸಿನೆಣ್ಣೆಯ ಹದಮಾಡಿ । ಅರಸಿಯರುಭಯಕರಗೂಡಿ ।
ದರಹಸಿತಾನನಕೊರಸಿ ಮಿಂಚೆಣ್ಣೆಯ ।
ಕರಚರಣಕೆ ತಿಗುರಿಡೀ ಕತ್ತುರಿಯ ।
ವಿರಚಿಸಿ ಪಣೆಯೊಳು ತೀಡೆ ಸುಗಂಧವ। ದೊರೆರಾಯನುರಕೆ ಅಸಿಯಳೆ ॥೩೬॥

ಮಗಮಗಿಪಲರ್ಗಳ ಸೂಡಿ । ಅಗಿಲು ಕುಂಕುಮ ಸಾರ ತೀಡಿ ।
ಬಗೆಬಗೆ ಫಲಪುಂಜವ ಮುದಗೂಡಿ ।
ಜಗದೊಡೆಯನ ಮುಮ್ಮಡಿಲೊಳಗೂಡಿ ।
ಪೊಗಲೊರೆವಾಣಿಮುತ್ತಿನ ಸೇಸೆಯನಿ । ಕ್ಕಘಹರನಡಿಗೆ ಹರಸುತ ॥೩೭॥

ಉಲಿಯೆ ಕಂಕಣ ಝಣತ್ಕಾರ । ಮೊಳಗೆ ನೂಪುರದ ಚೀತ್ಕಾರ ।
ತೊಳಗುವ ಕರತಳವನು ಪಿಡಿದೆತ್ತಿ ।
ಥಳಥಳಿಸುವ ತೋಳ್ಗಳಚ್ಚವಿ ಮುತ್ತೆ ।
. . . .।. . . . . ॥೩೮॥

ಹೆಂಗಳ ಕುಲಶಿರೋಮಣಿಗೆ ಶೃಂಗಾರ । ಸೊಬಗಿನ ಕಣಿಯಿಗೆ ।
ಅಂಗನೆಯರು ನೆರೆದಿಂಗಳವದನೆಗೆ ।
ಕಂಗೊಳಿಸುವ ಕಮ್ಮೆಣ್ಣೆಯನುರಕೆ ।
ಓಂಗದೆ ತಿಗುರಿಡುತಗಿಲು ಕುಂಕಮ । ಮೂಲ್ಯಂಗಳ ಸೂಡಿ ಸೊಬಗಿಂದ ॥೩೯॥

ಕಸ್ತೂರಿತಿಲಕವನಿಟ್ಟು । ವಿಸ್ತಾರ ಮುತ್ತಿನ ಬೊಟ್ಟು ।
ಸಿಸ್ತಾಗಲು ಫಲಪುಂಜವ ಕೊಟ್ಟು ।
ಮಸ್ತಕ ಕಡಿಯಿಂದ ಸೇಸೆಯನಿಟ್ಟು ।
ವಸ್ತುವಾಹನ ಸಾಮ್ರಾಜ್ಯ ಸುಪುತ್ರರು । ರಸ್ತೆಂದು ಹರಸಿ ಮುದದಿಂದ ॥೪೦॥

೪–೪ ಮೂಲದಲ್ಲಿ ಈ ಭಾಗ ಬಿಟ್ಟುಹೋಗಿದೆ.

ಜಯದಿಗ್ವಿಜಯವು ರಸ್ತೆಂ । ಬಯಭವ ವಿಜಯರಾಗೆಂದು ।
ನಯಯುಗವಿನಯಮುದುದಾರರು ಸೇಸೆಯ ।
ಪ್ರಿಯದಂಪತಿಗಳಿಗಿಕ್ಕೆಯುತ್ಸಹದಿ ।
ದಯಾಗುಣನಿಧಿ ರಿಪುವಿಪಿನಧನಂಜಯ। ಜಯರಾಮೆಗೊಡೆಯ ಸಲಹೆಂದು ॥೪೧॥

ಭಕ್ತರೊಡೆಯ ಭವ್ಯರೊಡೆಯ । ಶಕ್ತರೊಡೆಯ ಶಾಂತರೊಡೆಯ ।
ಯುಕ್ತಿಯೊಳಿಹ ಪರಲೋಕವ ಸಾಧಿಸಿ ।
ವ್ಯಕ್ತಿಯೊಳಖಿಲಕರ್ಮಂಗಳ ಕೆಡಿಸಿ ।
ರಕ್ತಿರಮಣಿಯರ ತೊರೆದು ಸರ್ವತ್ರ ವಿ । ರಕ್ತಿಯಿಂ ಮುಕ್ತಿಸತಿಯೊಳು ॥೪೨॥

ಶ್ರೀಮಹಾಭರತರಾಜೇಂದ್ರ । ಶ್ರೀಮದಮಿತಗುಣಸಾಂದ್ರ ।
ಆ ಮಹಾಪುರುಪರಮೇಶನ ಕಂದ ।
ಈ ಮಹಿಗಾದಿಕುಮಾರಕನಾದ ।
ಭಾವಿಸಿ ಜನನಿಜಕಾಮಕಾಮಿತಫಲ । ಕಾ ಮಹಾಕಲ್ಪಕುಜನಾದೆ ॥೪೩॥

ಮಣಿಖಚಿತಪರಂಜಿಪಾತ್ರೆ । ಗಣಿಮಾಡೆ ಸರಸಿಜನೇತ್ರೆ ।
ಅಣಿಯರ ನವಮಣಿಖಚಿತದಾರತಿಯ ।
ಗಣಿಸಬಾರದ ಚಿತ್ರಗೆಲಸದಾರತಿಯ ।
ಪ್ರಣುತ ಕರ್ಪುರದಾರತಿ ಮೃಗದಾರತಿ । ಫಣಿವೇಣಿಯರೆತ್ತಿ ಬೆಳಗಿರೆ ॥೪೪॥

ಮಂಗಳ ಮಹಿಪರೊಡೆಯಗೆ । ಮಂಗಳ ಸುಜನಪಾಲನಿಗೆ ।
ಮಂಗಳ ರಿಪುಭಯ ತಿಮಿರ ಪತಂಗಗೆ ।
ಮಂಗಳ ಮುನಿಪಾದಾಂಬುಜಭೃಂಗಗೆ ।
ಮಂಗಳ ತ್ರಿಭುವನವಿಭವಕಗೆ ಜಯ । ಮಂಗಳಾರತಿಯ ಬೆಳಗಿರೆ ॥೪೫॥

ಮೆರೆವ ಷಟ್ಖಂಡಮಂಡಲಕೆ । ಅರಸು ತಾನಾಗಿಹವರಕೆ ।
ಗುರುವೆನಿಪಮರಾಜೇಂದ್ರರ ತಿಳುಹಿ ।
ಧರಣಿ ಮೂರರ ಭವ್ಯಾತ್ಮರನುಳುಹಿ ।
ಕರುಣದಿ ಸರ್ವಾತ್ಮರ ರಕ್ಷಿಪ ಜಗ । ದ್ಗುರುವಿಗಾರತಿಯ ಬೆಳಗಿರೆ ॥೪೬॥

ಧರೆಗಾದಿಕುವರಾದಿರಾಜ । ವರವಿದ್ಯಾಧರರ್ಗಧಿರಾಜ ।
ಮೆರೆವ ಚೌಷಷ್ಟಿವಿದ್ಯಕ್ಕಧಿರಾಜ ।
ನೆರೆ ನವನಿಧಿಯಕ್ಷರಿಗಧಿರಾಜ ।
ಸುರನರಯಕ್ಷರ ಹೃತ್ಕಮಲಕೆ । ದಿನರಾಜಗಾರತಿಯ ಬೆಳಗಿರೆ ॥೪೭॥

ಶರನಿಧಿ ಸಮನೆ ಗಂಭೀರಕೆ । ಧರಣಿ ಸಾಟಿಯೆ ಕ್ಷಮಾಗುಣಕೆ ।
ಸುರತರುವುದಾರಕೆ ಪಾಸಟಿಯುಹುದೆ ।
ವರ ಮಂದರ ಧೈರ್ಯಕೆ ಸರಿಬಹದೆ ।
ನೆರೆ ಚಿಂತಾಮಣಿ ಸುರಧೇನುವು ಮಹಾ । ಪುರುಷನಿಗೆಣೆಯೆ ಪೊಗಳಲು ॥೪೮॥

ಧರೆ ಮೇರು ಶರಧಿ ತಾರೆಗಳು । ತರಣಿ ಚಂದ್ರಮನು ಸ್ವರ್ಗಗಳು ।
ಸ್ಥಿರಕರವಿರುವನ್ನವು ವೈಭವಗಳು ।
ನಿರುತ ಮಂಗಲ ಕಲ್ಯಾಣಶೋಭನಗಳು ।
ಪರಮರುಹನ ಚರಣವ ನಂಬಿದರಿಗೆ । ನೆರೆವುದು ನಿರುತ ಸಖಿಯುಳೇ ॥೪೯॥

ದಶದಿಕ್ಪಾಲಕರ ಕರ್ಣಗೃಹವು । ಮಿಸುಪನ್ನ ಸುಜನರ ಗೃಹವು ।
ಒಸಗೆ ಮೇಲೊಸಗೆಯ ಉತ್ಸಾಹದೊಳು ।
ಕಸವರ ನವವಿಧಪರ ವೃಷ್ಟಿಗಳು ।
ಎಸೆವುವು ಶಾಸನದೇವರ್ಕಳ ನಡಸುವ । ರಸಿಯುಳೆ ಭವ್ಯಜನರಿಗೆ ॥೫೦॥

ದೇವದುಂದುಭಿಗಳ ರವದಿ । ದೇವದೇವಿಯರು ಉತ್ಸಹದಿ ।
ಆವಾಗಳು ನಿಮ್ಮಾಲಯಗಳಲಿ ।
ಪೂವಿನಮಳೆ ಸುವರ್ಣವೃಷ್ಟಿಯಲಿ ।
ಶ್ರೀಮಂತರು ಜಯವಂತರಾಗಿರಿಯೆಂದು । ದೇವರ್ಕಳೆಲ್ಲ ಹರಸುತ ॥೫೧॥

ಧರಣಿತ್ರಯದ ಬುಧಜನರು । ಸರಸ ಸದ್ಗುಣ ಧನಾಸ್ತು ಧನಾಶಯರು ।
ಭರತಚಕ್ರೇಶ್ವರನ ಧವಳಶೋಭನವ ।
ನಿರುತದಿ ಪಠಿಸುವ ಬಿಡದೆ ಲಾಲಿಸುವ ।
ಪರಮಪುರುಷರು ಪೂರ್ಣಾಯು ಪುತ್ರೋತ್ಸವ ।
ಸಿರಿಯು ಸೌಭಾಗ್ಯಯುತರಲ್ತೆ ॥೫೨॥

ನಿತ್ಯಮಂಗಲ ನಿತ್ಯವಿಭವ । ನಿತ್ಯಕಲ್ಯಾಣ ಸಂಪದವ ।
ನಿತ್ಯೋತ್ಸವ ನಿರ್ಮಲ ನಿರುಪಮ ।
ನಿತ್ಯಾನಂದನಿಭಾಸಸದಯ ಸದ್ಧರ್ಮ ಸೌಭಾಗ್ಯ ಸಂ ।
ಗತ್ಯದಿಂ ನಿತ್ಯಸುಖಿಯಾಗಿ ।*. . . . .* ॥೫೩॥

ಭರತೇಶ ಧವಳಶೋಭನ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ

• •

_ ಮೂಲದಲ್ಲಿ ಈ ಸಾಲು ಬಿಟ್ಟುಹೋಗಿದೆ.

ಚಿಕ್ಕಲಿಗರ ಸೋಗು

● ಶ್ರೀರಾಮ ಇಟ್ಟಣ್ಣವರ

ಕನ್ನಡ ಜಾನಪದಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಸಂಗ್ರಹ, ಸಂಪಾದನೆಗಳು ಬಿರುಸಾಗಿ ಸಾಗಿವೆ. ಅಧ್ಯಯನದಲ್ಲಿ ಶಾಸ್ತ್ರೀಯದೃಷ್ಟಿ ಮೊಳೆತಿದೆ. ಆದರೆ ಜಾನಪದ ಅಭ್ಯಾಸಿಗಳ ದೃಷ್ಟಿ ಇದುವರೆಗೆ 'ಚಿಕ್ಕಲಿಗರ ಸೋಗಿ'*ನತ್ತ ಹರಿದಂತೆ ಕಾಣಲಿಲ್ಲ. ಅನೇಕ ಜನಪದಕಲೆಗಳಂತೆ ಪ್ರಕೃತ ಕಲೆಯೂ ನಶಿಸಿಹೋಗುತ್ತಿದೆ. ವಿಕೃತಗೊಂಡೂ ಬಹಳ ದಿನ ಕಳೆದುವು. ಕೇವಲ ಒಂದು ಜನಾಂಗಕ್ಕೆ ಮಾತ್ರ ಸೀಮಿತವಾಗಿದ್ದ ಚಿಕ್ಕಲಿಗರ ಸೋಗು, ಕಾಲಕ್ರಮೇಣ ತನ್ನ ವ್ಯಾಪ್ತಿಯನ್ನು ವಿಸ್ತರಿಸಿ ಕೊಂಡಿತು. ಆದರೆ ಪ್ರಸಾರ-ಪ್ರದೇಶ ಮಾತ್ರ ಪರಿಮಿತವಾಗಿಯೇ ಉಳಿಯಿತೆಂದು ತೋರುತ್ತದೆ. ವಿಜಾಪುರ ಜಿಲ್ಲೆಯ ಮಹಾಲಿಂಗಪುರ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ 'ಚಿಕ್ಕಲಿಗರು' ಎಂಬುದೊಂದು ಜನಾಂಗ ಅಸ್ತಿತ್ವ ಪಡೆದುಕೊಂಡಿದೆ. ಇದು ಅಲೆಮಾರಿ ಜನಾಂಗ. ಎತ್ತಿನ ಕೋಡು ಸವರುವುದು, ಕೊಳಗ ಕಡಿಯುವುದು, ಎಮ್ಮಿ ಬೋಳಿಸುವುದು ಇವರ ಉದ್ಯೋಗ. ಈ ಉದ್ಯೋಗದೊಂದಿಗೆ ಹಳ್ಳಿ ಹಳ್ಳಿ ತಿರುಗುತ್ತಿದ್ದ ಇವರು ತಮ್ಮದೇ ಆದ ಕೊಡುಗೆಯನ್ನು ಜಾನಪದಕಲೆಗೆ ಇತ್ತರು.

ಚಿಕ್ಕಲಿಗರು ತಮ್ಮ ಉದ್ಯೋಗದ ಪ್ರಚಾರದ ಮಾಧ್ಯಮವಾಗಿ ಈ ಕಲೆಯನ್ನು ಬೆಳೆಯಿಸಿಕೊಂಡರೋ ಅಥವಾ ಇದೂ ಒಂದು ಅವರಿಗೆ ಹೊಟ್ಟೆಹೊರಕೊಳ್ಳುವ ಸಾಧನವಾಗಿದ್ದಿತೋ ಹೇಳುವುದು ಕಷ್ಟ. ಚಿಕ್ಕಲಿಗರ ಸೋಗು ಇತ್ತೀಚಿನ ದಿನಮಾನ ಗಳಲ್ಲಿ ಕಡಿಮೆಯಾಗುತ್ತಿರುವುದರಿಂದ ಹಾಗೂ ಅದು ತನ್ನ ಮುಂಚಿನ ಸ್ವರೂಪವನ್ನು ಕಳೆದುಕೊಳ್ಳುತ್ತಿರುವುದರಿಂದ ಈ ಜಾನಪದಕಲೆಯ ಉಗಮ, ಉದ್ದೇಶ ಕುರಿತಾದ ನಿಖರ ಹೇಳಿಕೆ ಕಷ್ಟಸಾಧ್ಯ.

ಗಂಡಸರು ತಮ್ಮ ಉದ್ಯೋಗಕ್ಕಂಟಿಕೊಂಡು ಹಳ್ಳಿಗಳಲ್ಲಿ ಓಣಿಓಣಿ ತಿರುಗುತ್ತಿರುವಾಗ ಆ ಕುಟುಂಬಗಳಿಗೆ ಸಂಬಂಧಿಸಿದ ಹೆಂಗಸರು ಈ ಸೋಗು ಹಾಕುತ್ತಿದ್ದರಂತೆ.

---

* ಇದನ್ನು 'ಚಿಕ್ಕಲಿಗರ ವೇಷ' ಎಂದೂ ಕರೆಯಬಹುದು. ಆದರೆ ಆಡುನುಡಿಯಾಗಿ ಬಳಕೆಯಲ್ಲಿರುವ 'ಚಿಕ್ಕಲಿಗರ ಸೋಗು' ಎಂಬುದನ್ನೇ ಲೇಖನದುದ್ದಕ್ಕೂ ಬಳಸಲಾಗಿದೆ.

ಇದರಲ್ಲಿ ಪ್ರಮುಖವಾಗಿ ಎರಡು ಅಂಗಗಳನ್ನು ಕಾಣಬಹುದು. ಒಂದು ನಟನೆ, ಇನ್ನೊಂದು ಹಾಡು. ಮುಂದೆ ಇಬ್ಬರು ಹೆಣ್ಣುಮಕ್ಕಳು ಹಾಡುತ್ತಿದ್ದರು. ಇವರು ಸೆರಗನ್ನು ಉಪರಾಟಿಯಾಗಿ (ಗುಜ್ಜರಂತೆ) ಹೊತ್ತು ಆ ಸೆರಗಿನ ಅಂಚನ್ನು ನಡುವಿಗೆ ಸಿಕ್ಕಿಸುತ್ತಿದ್ದರು. ಇವರಿಬ್ಬರೂ ಒಂದು ಮೊಳದಳತೆಯ ಕಟ್ಟಿಗೆಯನ್ನೋ ದಂಟನ್ನೋ ಕೈಯಲ್ಲಿ ಹಿಡಿಯುತ್ತಿದ್ದರು. ಇವರ ಹಿಂದೊಬ್ಬ ತುಂತುಣಿ ಹಿಡಿದುಕೊಂಡಿರುತ್ತಿದ್ದ. ಜಾಕೀಟು ಹಾಕಿ, ಧೋತ್ರ ಉಟ್ಟು ತಲೆಗೆ ರುಮಾಲು ಸುತ್ತಿರುತ್ತಿದ್ದ ಇವನು, ಹೆಣ್ಣುಮಕ್ಕಳು ಹಾಡುತ್ತಿದ್ದಂತೆ ಹಿಂದಿನಿಂದ ಜೀ ಜೀ ಎಳೆಯುತ್ತಿದ್ದ. ಇವರು ಮನೆ ಮನೆಗೆ ಹೋಗಿ ಹಾಡಿ ಜೋಳವನ್ನೋ ಹಣವನ್ನೋ ತಗೆದುಕೊಳ್ಳುತ್ತಿದ್ದರು. ವಿಷಯ ನಿರೂಪಣೆಯಲ್ಲಿ ಇವರ ಹಾಡುಗಳು ನಾನಾ ಬಗೆಯಾಗಿವೆ. ಶೃಂಗಾರ, ಕೌಟುಂಬಿಕ, ವಿಡಂಬನಾತ್ಮಕ ಮುಂತಾಗಿ ಹಲವು ವಿಧದ ಹಾಡುಗಳಿಗೆ ಇಲ್ಲಿ ಎಡೆ ದೊರೆತಿದೆ. ಕಾಲಕ್ಕೆ ತಕ್ಕಂತೆ ಇವರು ಹಾಡುಗಳನ್ನು ಹೊಸೆಯುತ್ತಿದ್ದರು. ಕಾಂಗ್ರೆಸ್ಸು, ಖಾದಿಗಳನ್ನು ಕುರಿತಾಗಿಯೂ ದೇಶದ ಸ್ವಾತಂತ್ರ್ಯ ಚಳುವಳಿಯ ಕಾಲಕ್ಕೆ ಇವರು ಹಾಡುತ್ತಿದ್ದರಂತೆ.

ಇವರು ಹಾಡುತ್ತಿದ್ದ ಹಾಡುಗಳು ಹೆಚ್ಚಾಗಿ ಶೃಂಗಾರ ಮತ್ತು ಹಾಸ್ಯರಸಗಳಿಗೆ ಪೋಷಕಗಳಾಗಿರುತ್ತಿದ್ದುದರಿಂದ ಮರುಳುಗೊಂಡ ಜನ, ಇವರು ಇದ್ದಲ್ಲೆಲ್ಲ ಗುಂಪುಗೂಡಿ ನಿಲ್ಲುತ್ತಿದ್ದರು. ಇವರು ಓಣಿಗುಂಟ ಸಾಗಿದಂತೆಲ್ಲ ಜನಸ್ತೋಮ ಇವರನ್ನು ಹಿಂಬಾಲಿಸುತ್ತಿತ್ತು. ಹಾಡಿಗೆ ತಕ್ಕಂತೆ ಹೆಜ್ಜೆಹಾಕುತ್ತ ಕಟ್ಟಿಗೆಯನ್ನು ತೋರುಬೆರಳು ಮತ್ತು ಹೆಬ್ಬೆರಳುಗಳ ಮಧ್ಯೆ ತೂಗುಬಿಟ್ಟು ಉಳಿದ ಮೂರೂ ಬೆರಳುಗಳನ್ನು ಮೇಲಕ್ಕೆಬ್ಬಿಸಿ, ತಮ್ಮಷ್ಟಕ್ಕೆ ತಾವೇ ಸುತ್ತುವರಿದು ಭಾವಕ್ಕೆ ತಕ್ಕಂತೆ ಧ್ವನಿಯ ಏರಿಳಿತ ನೀಡಿ ಹಾಡುತ್ತಿದ್ದರೆ ನೋಟಕರ ರೆಪ್ಪೆ ಅಲುಗಾಡುತ್ತಿರಲಿಲ್ಲ. ಮುಂದೆ ಹಾಡುವವರು ತಿರುಗಿದತ್ತ ತಿರುಗಿ, ನಟಿಸಿದಂತೆ ನಟಿಸಿ ನಡುನಡುವೆ ಹಾಸ್ಯದ ಚಟಾಕಿ ಹಾರಿಸುವ ತುಂತುಣಿಯವನೂ ಗಮನಸೆಳೆಯುತ್ತಿದ್ದ. ಇವರ ಸೋಗಿನಲ್ಲಿ ಹಾಡು ಮುಖ್ಯವೇ ಹೊರತು ನಟನಾಕೌಶಲ್ಯವಲ್ಲ. ಅಂತೂ ಸಂಜೆ, ಮುಂಜಾವುಗಳಲ್ಲಿ ಬಯಸಿದರೆ ಸಿಗಲಾರದಂಥ ಮನರಂಜನೆ ಮನೆಬಾಗಿಲಿಗೆ ಬಂದು ಹಳ್ಳಿಗರೆದುರು ನಿಲ್ಲುತ್ತಿತ್ತು. ಇದು ಇಷ್ಟು ಮೂಲದಲ್ಲಿದ್ದ ಚಿಕ್ಕಲಿಗರ ಸೋಗಿನ ಸ್ವರೂಪ. ಇಲ್ಲಿ ಗೀಗೀ ಮೇಳದ ಪ್ರಭಾವವಿರುವಂತೆ ಕಾಣುತ್ತದೆ. ಸಾಕ್ಷಿಯಾಗಿ ತುಂತುಣಿ ಮತ್ತು ಹಿಮ್ಮೇಳದವನ ಜೀ ಜೀ ಸ್ವರ ಎರಡೇ ಸಾಕು. ಲಾವಣಿಸಂಪ್ರದಾಯದ ಒಂದು ಪರಿಚ್ಛಾಯೆ ಎನ್ನುವಂತೆ ಚಿಕ್ಕಲಿಗರು ತಮ್ಮದೇ ಆದ ರೀತಿಯಲ್ಲಿ ಈ ಪ್ರಭೇದವನ್ನು ರೂಢಿಸಿಕೊಂಡಂತೆ ತೋರುತ್ತದೆ. ಲಾವಣಿಪದಗಳಲ್ಲಿರುವ ಸಾಹಿತ್ಯಸೌರಭವಾಗಲಿ, ಆ ಮೇಳಗಳಲ್ಲಿ ಕಾಣುವ ಗಂಭೀರ ಡೌಲಾಗಲಿ ಇಲ್ಲಿ ಸಿಗಲಿಕ್ಕಿಲ್ಲ. ಆದರೆ ಮನ ಹಿಡಿಸಿ

ದಷ್ಟು ಮೊರದಲ್ಲಿ ಜೋಳ ಸೇಡಿ ಕಣ್ತುಂಬ ಮನರಂಜನೆ ಪಡೆಯುವವರಿಗೆ ಇವರು ಹೇಗಿದ್ದರೂ ಚೆಂದ.

ಆದರೆ ಕಾಲಾಂತರದಲ್ಲಿ ಇದು ಕೇವಲ ಅಣಕವಾಗಿ ಮಾರ್ಪಟ್ಟು, ಮೂಲ ಸ್ವರೂಪ ಮಾಯವಾದದ್ದು ದುರ್ದೈವದ ಸಂಗತಿ. ಈ ಸೋಗು ಕಾಲಗತಿಸಿದಂತೆ ಕೇವಲ ಚಿಕ್ಕಲಿಗರಿಗೆ ಮಾತ್ರ ಸೀಮಿತವಾಗಿ ಉಳಿಯಲಿಲ್ಲ. ಮಹಾಲಿಂಗಪುರದ ಸುತ್ತಮುತ್ತಲಿನ ಹಳ್ಳಿಯ ಚಿಕ್ಕಲಿಗೇತರ ಉತ್ಸಾಹಿ ತರುಣರನೇಕರ ಅನುಕರಣೆಗೆ ಮೊದಲುಮಾಡಿ ದೊಡ್ಡದೊಡ್ಡ ಹಬ್ಬಗಳಲ್ಲಿ ತಮ್ಮ ಖುಷಿಗೆ ಒಂದು ಮಾಧ್ಯಮ ವನ್ನಾಗಿ ಮಾಡಿಕೊಂಡರು. ಈ ಕಲೆ ಇವರಿಗೆ ಕೇವಲ ಅಣುಕಾಗಿ ನಿಂತಿತು. ಕೇವಲ ಅಪಹಾಸ್ಯವೇ ಮುಖ್ಯವಾಗಿ ಕೇವಲ ಬೀದಿಮನರಂಜನೆ ಎನಿಸಿತು. ಈಗ ಚಿಕ್ಕಲಿಗರ ಸ್ತ್ರೀಯರಂತೆ ಉಳಿದ ಸ್ತ್ರೀಯರು ಇದರಲ್ಲಿ ಭಾಗವಹಿಸುವುದಿಲ್ಲ. ಗಂಡಸರಲ್ಲೇ ಒಬ್ಬರು ಸ್ತ್ರೀವೇಷ ಹಾಕುತ್ತಾರೆ. ಹರಕುಸೀರೆ(ಉತ್ತರ ಕರ್ನಾಟಕದ 'ಪಡಕಿ')ಯನ್ನು ಉಟ್ಟು, ಸೆರಗನ್ನು ಉಪರಾಟಿಯಾಗಿಯೇ ಹೊದೆಯುತ್ತಾರೆ. ಇನ್ನೊಂದು ವಿಶೇಷವೆಂದರೆ ಕುಪ್ಪಸವನ್ನು ಹಿಂದುಮುಂದಾಗಿ ತೊಡುವುದು. ಹಾಗೆ ತೊಟ್ಟ ಕುಪ್ಪಸವನ್ನು ಉದ್ದೇಶಪೂರ್ವಕ ಸಭಿಕರಿಗೆ ಕಾಣುವಂತೆ ಮಾಡಲು ಪ್ರಯತ್ನಿಸುವುದೊಂದು ಮೋಜಿನ ಸಂಗತಿ. ಇವರಿಗೂ ಕೈಯಲ್ಲಿ ಕಟ್ಟಿಗೆಯೋ ದಂಟೋ ಇರುತ್ತದೆ. ಇನ್ನು ಹಿಮ್ಮೇಳದ ವನು ಅಂಗಿತೊಡದೆ ಹರಕು ಜಾಕೀಟೊಂದನ್ನು ಹಾಕಿಕೊಂಡು, ಅದಕ್ಕೆ ಬಿರಡಿ ಇಲ್ಲದೆ ಹಾಗೇ ಬಿಟ್ಟಿರುತ್ತಾನೆ. ಒಬ್ಬ ಧೊತ್ರವನ್ನು (ಗಂಡುಗಚ್ಚಿ ಹಾಕಿ) ಮೇಲೆ ಸಿಕ್ಕಿಸಿರು ತ್ತಾನೆ. ನಗೆತರುವ ಮುಖ್ಯಭೂಷಣವಸ್ತ್ರವೆಂದರೆ ಇವನು ತಲೆಗೆ ಸುತ್ತಿರುವ ಹರಕುಸೀರೆ. ಮೊಳಕಾಲಿಗೆ ಬಡಿಯುವಷ್ಟುದ್ದ ಬಿಟ್ಟಿರುವ ಶಮನ. ಪ್ರೇಕ್ಷಕರಿಂದ 'ಶಬ್ಬಾಶ್' ಹೇಳಿಸಿಕೊಳ್ಳುತ್ತದೆ. ಇವನ ತುಂತುಣಿಯೋ ! ಒಂದು ಹರಕು ಮಾವಿನ ಕರಂಡಿಗೆಯನ್ನೋ ಸಿಂದಿಹಿಡಿಗೆಯನ್ನೋ ತೆಗೆದುಕೊಂಡು ಅದಕ್ಕೊಂದು ಬಡಿಗೆ ಸಿಕ್ಕಿಸಿ ಒಂದು ಚರಿಯನ್ನು ಬಿಗಿದರೆ ಸುಶ್ರಾವ್ಯ ಸಂಗೀತದ ವಾದ್ಯವಾಯಿತೆಂದು ನಾವು ಕಲ್ಪಿಸಿ ಕೊಳ್ಳಬೇಕು!! ಹಾಡು ಹೇಳುತ್ತ ಸ್ತ್ರೀವೇಷಧಾರಿಗಳು ಹುಬ್ಬುಹಾರಿಸುವುದು, ಇನ್ನಿತರ ಅಂಗಚೇಷ್ಟೆಮಾಡುವುದು. ಗುರುತಿನವರನ್ನು ಕುರಿತು ಉತ್ಥಾನ ಶೃಂಗಾರದ ಮಾತುಗಳನ್ನಾಡುವುದು— ಇವೆಲ್ಲ ಮಕ್ಕರಹರೆ ತುಳುಕುತ್ತಿರುವವರಿಗೆ ಮಹದಾ ನಂದ ನೀಡುತ್ತವೆ.

ಈ ರೀತಿ ಇಂದು ಇವರು ಸೋಗು ಹಾಕುವುದು ಕೇವಲ ಹಬ್ಬಗಳಲ್ಲಿ, ಉದ್ಯೋಗ ದಂದು ಖಂಡಿತ ಅಲ್ಲ. ವಿಶೇಷವಾಗಿ ಯುಗಾದಿಯಲ್ಲಿ ಈ ಮುಂಚೆ ಹೇಳಿದ ಪ್ರದೇಶ ದಲ್ಲಿ ಈ ಸೋಗಿನ ಪರಮೋಚ್ಚ ಮಟ್ಟವನ್ನು ಗುರುತಿಸಬಹುದು.

ಚಿಕ್ಕಲಿಗರ ಹಾಡುಗಳು ಭಾವನಿರೂಪಣೆಯಲ್ಲಿ ತ್ರಿಪದಿಗಳನ್ನು ಹೋಲುತ್ತವೆ. ಮೊದಲು ಸ್ತ್ರೀಯರೇ ಹಾಡುತ್ತಿದ್ದರು ಎಂಬ ಕಾರಣವಾಗಿ ಹೀಗಾಗಿರಬೇಕು. ಈ ಗೀತ

ಗಳು ಬಹುಪಾಲು, ಹೆಣ್ಣಿನ ಆಶೆ-ಅನಿಸಿಕೆಗಳನ್ನೇ ಹಿಡಿದಿಟ್ಟಿವೆ. ತ್ರಿಪದಿಗಳಂತೆ ಬಿಡಿಬಿಡಿಯಾದ ಪದ್ಯಗಳಿವು. ಕ್ವಚಿತ್ತಾಗಿ ಒಂದೇ ಭಾವ ೩-೪ ಪದ್ಯಗಳ ವರೆಗೆ ಹರಿದುಕೊಂಡು ಹೋಗಬಹುದು. ನಾನಿಲ್ಲಿ ಸಂಗ್ರಹಿಸಿ ವಿಶ್ಲೇಷಿಸಿದ ಹಾಡುಗಳು ಎಂದು ಹುಟ್ಟಿಕೊಂಡವು ಎಂಬ ನಿಷ್ಕರ್ಷೆಗಾಗಲಿ, ಇವೆಲ್ಲ ಮೂಲತಃ ಚಿಕ್ಕಲಿಗರೇ ಹಾಡುತ್ತಿದ್ದ ಹಾಡುಗಳೋ ಅಥವಾ ತೀರ ಇತ್ತೀಚೆಗೆ ಹುಟ್ಟಿಕೊಂಡವುಗಳೋ ಎಂಬಂತಹ ಖಚಿತ ಅಭಿಪ್ರಾಯಕ್ಕಾಗಲಿ ಈಗಿರುವ ಸಾಧನಸಾಮಗ್ರಿ ಸಾಲದು. ಮೊದಮೊದಲು ಗಂಭೀರಭಾವದ ಹಾಡುಗಳನ್ನು ಚಿಕ್ಕಲಿಗರು ಹಾಡುತ್ತಿರಬಹುದಾದರೂ ಚಿಕ್ಕಲಿಗರಲ್ಲದವರಿಂದ ಅಣಕು ಮೊದಲಾದ ಮೇಲೆ ನಗೆಯೇ ಹಾಡುಗಳ ಕೇಂದ್ರ ವಸ್ತುವಾಯಿತು. ಹೀಗೆಂದು ಇವನ್ನು ತಳ್ಳಿಹಾಕುವಂತಿಲ್ಲ. ಸಾಹಿತ್ಯ ಹೇಗೇ ಇರಲಿ, ಇವರೂ ಜನಪದ ಜೀವನದ ಒಂದಂಗವಾಗಿ ತಮ್ಮ ಅನಿಸಿಕೆಗಳಿಗೆ ಪ್ರತಿರೂಪ ಕೊಟ್ಟು ಪ್ರತಿಭಾಶಕ್ತಿಯನ್ನು ಇಂದಿಗೂ ತೋರ್ಪಡಿಸುತ್ತಿರುವುದು ಮೆಚ್ಚಬೇಕಾದ ವಿಷಯ. ರೂಪ ವ್ಯತ್ಯಾಸವಾಗಿದ್ದರೂ ಮುಂಚಿನ ಹೆಸರನ್ನೇ (ಚಿಕ್ಕಲಿಗರ ಸೋಗು-ಚಿಕ್ಕಲಿಗರ ಹಾಡು) ಉಳಿಸಿಕೊಂಡು ಬಂದು ಅಭ್ಯಾಸಕ್ಕಿತ್ತ ಪ್ರೇರಣಶಕ್ತಿಯನ್ನು ಕಡಗಣಿಸುವಂತಿಲ್ಲ.

ಕೌಟುಂಬಿಕ : ವ್ಯಕ್ತಿ-ಕುಟುಂಬ-ಸಮಾಜ ಈ ಮೂರೂ ಜೀವನವನ್ನು ರೂಪಿಸುವಲ್ಲಿ ಬಹು ಪ್ರಮುಖ ಪಾತ್ರವಹಿಸುತ್ತವೆ. ಕುಟುಂಬದಲ್ಲಿ, ಸಮಾಜದಲ್ಲಿ ಬಾಳುತ್ತಿರುವ ವ್ಯಕ್ತಿಯ ಗುಣ-ಸ್ವಭಾವಗಳ ಅಭಿವ್ಯಕ್ತಿ, ಪಡೆದ ಅನುಭವಗಳಿಂದ ನಾನಾ ವಿಧವಾಗಿ ರೂಪಿತಗೊಂಡು ಪರಿಸರದ ಹಲವು ಮುಖದ ದರ್ಶನ ಒದಗುತ್ತದೆ. ಸಂತೋಷ, ಕೋಪ, ಈರ್ಷೆ ಮೊದಲಾದ ಗುಣಗಳೆಲ್ಲ ಕೇವಲ ಎದೆಯ ಗಹ್ವರದಲ್ಲಿ ಉಳಿಯುವುದಿಲ್ಲ. ಜಾನಪದರ ಎದೆಯಾಳದಿಂದ ಹೊರಟ ಅನಂತ ಭಾವನೆಗಳು ನಾದಸಹಿತ ಹಾಡುಕಟ್ಟಿ ನಿತ್ಯ ಗುಣಗುಣಿಸುವಂತೆ ಮಾಡುತ್ತವೆ. ಒಂದುಕಡೆಗೆ ನಿಶ್ಚಿತವಾಗಿ ನಿಲ್ಲಲಾರದೆ, ಸುವ್ಯವಸ್ಥಿತವಾದ ಬದಕು ಸಾಗಿಸಲಾರದ ಈ ಜನತೆ, ತಮ್ಮ ದುಡಿತಕ್ಕೆ ತಕ್ಕ ಪ್ರತಿಫಲ ನೀಡಿ ಸಲಹುವ ಹಳ್ಳಿಸಮಾಜವನ್ನು ಕಣ್ಣಿಟ್ಟು ಗಮನಿಸಿ, ಅದರಲ್ಲಡಗಿರುವ ಭಾವತರಂಗಗಳನ್ನು ಬಯಲಿಗೆಳೆದಿದೆ.

> ಅಣ್ಣ ತಮ್ಮಾರೊಳಗ ಸಣ್ಣಾಕಿ ನಾ ತಂಗಿ
> ಉಣ್ಣಾಕಿ ತಿನ್ನಾಕಿ ಹಗಲೆಲ್ಲಾ ಽ
> ಉಣ್ಣಾಕಿ ತಿನ್ನಾಕಿ ಹಗಲೆಲ್ಲಾ
> ಹಿರ್ತಿ ಎನಮ್ಯಾಲಾ ಽ ಽ

ಎನ್ನುವ ಈ ಪದ್ಯದಲ್ಲಿ ಚಿಕ್ಕವಳ ಅಭಿಮಾನದ ಮನೋಧರ್ಮ ಯಾವೊಂದು ಅಲಂಕಾರದ ಆಡಂಬರವಿಲ್ಲದೆ ಎಷ್ಟೊಂದು ಶಕ್ತಿಯುತವಾಗಿ ಮೂಡಿನಿಂತಿದೆ! ಮನೆಯಲ್ಲಿ ನಾಲ್ಕೈದು ಜನ ಅಣ್ಣತಮ್ಮಂದಿರಿರಬಹುದು. ಇವಳು ಚಿಕ್ಕವಳು. ತಂದೆ-ತಾಯಿಗಳಿಗೆ, ಅಣ್ಣ-ಅಕ್ಕಂದಿರಗೆ ಚಿಕ್ಕವಳೆಂದರೆ ಅಕ್ಕರೆ. ಇವಳು ಏನು

ಉಟ್ಟುತೊಟ್ಟರೂ ಎಷ್ಟು ತಿಂದರೂ ಇವರಿಗೆ ಸಾಕಿಲ್ಲ. ಅವಳಿಗೊದಗುವ ಸೌಕರ್ಯ ಸಲುಗೆ ಮತ್ತಾರಿಗೂ ದೊರೆಯುವುದಿಲ್ಲ. ಕುಳಿತರೂ ನಿಂತರೂ ಎಲ್ಲರ ಪ್ರೀತಿಯ ದೃಷ್ಟಿ ಇವಳ ಮೇಲೆ ಹರಿದಾಡಿ ಎಲ್ಲರ ಕಣ್ಮಣಿಯಾಗಿ ಬೆಳೆಯುತ್ತಾಳೆ. ಬೆಳೆದು ದೊಡ್ಡವಳಾಗಿ ಗಂಡನಮನೆಗೆ ಹೋಗುವ ವರೆಗೂ ಇವಳು ಆ ಮನೆಯ ಅಚ್ಚೆಯ ಮಗಳು. ಇಂಥವಳು ಹೇಳುವ ಈ ಹಾಡು ಸಹಜಾಭಿವ್ಯಕ್ತಿಗೊಂದು ಸೊಗಸಾದ ನಿದರ್ಶನ.

ದೂರದ ಗಂಡನ ಮನೆಯಲ್ಲಿದ್ದ ಹೆಣ್ಣುಮಗಳೊಬ್ಬಳು ಹೆಮ್ಮೆಯಿಂದ ತನ್ನ ತೌರಿನವರನ್ನು ಕುರಿತು ಓರಿಗೆಯವರ ಮುಂದೆ ಹೀಗೆ ಹೇಳುತ್ತಾಳೆ :

> ವಾರಿಗಿ ಗೆಳತ್ಯಾರ ಮುಂದ ನಾರಿ ಹೇಳತಾಳ
> ನನ್ನ ತವರ ದೂರsss
> ನನ್ನ ತವರ ದೂರ
> ಕರಿಯಾಕ ಬಂದಾರ ತವರವರss

ಮೇಲುನೋಟಕ್ಕೆ ಈ ಪದ್ಯ ಬರಡಾಗಿ ಕಂಡರೂ ಕೊನೆಯ ಭಾಗ ಧ್ವನಿಪೂರ್ಣವಾಗಿ ನಿಂತಿದೆ. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂಬ ಮಾತು ಸತ್ಯವಾದರೂ ತೌರಿನತ್ತ ಇವಳ ಸೆಳೆತ ಇದ್ದೇ ಇರುತ್ತದೆ. ತಾಯಿ ಇರುವವರೆಗೆ, ತಾಯಿ ತೀರಿದ ಮೇಲೂ ಅಣ್ಣ–ತಮ್ಮಂದಿರಲ್ಲಿ ಹೃದಯವಂತಿಕೆ ಇದ್ದರೆ ತೌರಿನ ಪ್ರೀತಿಯ ರುಚಿ ಬತ್ತುವುದಿಲ್ಲ. ಅಂತೆಯೇ ತಾನು ಇಷ್ಟು ದೂರವಿದ್ದರೂ ಕರೆಯಲು ಬಂದಿದ್ದಾರೆ ಎಂಬ ಒಂದೇ ಒಂದು ಮಾತಿನಲ್ಲಿ, ಮುಂದೆ ತನ್ನ ತೌರಿನ ಕಳ್ಳ-ಬಳ್ಳಿಯಲ್ಲಿ ಬೆರೆತು ಪಡೆಯಬಹುದಾದ ಸುಖಾನುಭವವೆಲ್ಲ ಅಡಗಿ ಕುಳಿತಿದೆ.

ಕರುಣೆಯ, ಕಕ್ಕುಲಾತಿಯ ಪರಮಾವಧಿಯನ್ನು ತಲುಪಬಲ್ಲ ಹಳ್ಳಿಯ ಹೆಣ್ಣುಮಕ್ಕಳಲ್ಲಿ ಈರ್ಷೆ, ಕೋಪ, ಅಸಹನೆ– ಇವುಗಳೂ ಅಷ್ಟೇ ಸಹಜವಾಗಿ ಮನೆ ಮಾಡಿಕೊಂಡು ಆಡಳಿತ ಸಾಗಿಸುತ್ತವೆ.

> ಆರ ತಿಂಗಳ ಹಿಂದ ಕೊಟ್ಟೆನ್ನಿ ನಾನು
> ಅರಪಾವ ಹಿಟ್ಟಾs
> ಅರಪಾವ ಹಿಟ್ಟಾ
> ಇನ್ನs ಆದ್ರೂ ಕೊಡಲಿಲ್ಲ ಪಡಿಸೆಂಟಾss

ಇವಳ ಈ ಅಸಹನೆಗೆ ಕಾರಣವೆಷ್ಟು ಚಿಕ್ಕದು ! ಹಿಟ್ಟು ಕಡಿಮೆ ಬಿದ್ದಾಗ ಓಣಿಯಲ್ಲಿ ಯಾವಳೋ ಒಬ್ಬಳು ಇವಳ ಕಡೆಯಿಂದ ಕೇವಲ ಅರಪಾವು ಹಿಟ್ಟು 'ಕಡ' ಒಯ್ದಿದ್ದಾಳೆ. ಆರು ತಿಂಗಳಾದರೂ ಹಿಂದಿರುಗಿಸಿಲ್ಲ (ಅವಳೂ ಗಟ್ಟಿ !). ನಿಯತ್ತಿಲ್ಲದ ಅವಳ ನಡತೆ, ಇವಳಿಗೆ ಬೇಸರ ತಂದಿದೆ. ಪರಿಣಾಮವಾಗಿ ಅಸಹನೆ ಭುಗಿಲ್ಲೆಂದು

ಹಳ್ಳಿಗೆ ವಿಶಿಷ್ಟವಾದ ಮತ್ತೊಂದು ಬಾಯಿಂದ ಉದುರಿ ದೇಶಿಯತೆಯ ಸಿಜವಾದ ಅರಿವು ಹಾಡು ಕಟ್ಟುವ ಕೈಗೆ ಚೆನ್ನಾಗಿದೆ ಎಂಬುದನ್ನು ತೋರಿಸಿಕೊಟ್ಟಿದೆ.

ಮೊದಲಗಿತ್ತಿಯಾಗಿ ಮನೆಗೆ ಬರುವವಳು ಹಾಸಿಗೆ ಸುರಳಿ, ಕೊಡಪಾನಗಳ ಸಂಗಡ ಟ್ರಂಕೊಂದನ್ನು ಗಂಡನಮನೆಗೆ ತರುತ್ತಾಳೆ. ಅದರಲ್ಲಿ ಅವಳ ಸೀರೆ, ಕುಪ್ಪಸ, ವಸ್ತು-ಒಡವೆ. ಟ್ರಂಕಿಗಿರುವ ಪುಟ್ಟಕೀಲಿ ಅವಳ ಖಾಸಾ ಆಸ್ತಿಯನ್ನು ಸದಾಕಾಲ ಕಾಯುತ್ತದೆ. ಯಾರೂ ಅದನ್ನು ಮುಟ್ಟುವಂತಿಲ್ಲ. ನಿಜಸಂಗತಿ ಹೀಗಿದ್ದರೂ ತೌರ ಮನೆಗೆ ಬಂದಿದ್ದವಳೊಬ್ಬಳು

ತೌರಮನಿಗೊಸ್ತಾ ತರಲಿಲ್ಲ ನಾನು
ತಂಗಿಗಿ ಇಡಿಸ್ಯಾಳವ್ವ ತಗದ ಕೀಲಿs
ತಂಗಿಗಿ ಇಡಿಸ್ಯಾಳವ್ವ ತಗದ ಕೀಲಿ
ಎಂಥಾ ಹೊಯ್‌ಮಾಲಿss

ಎಂದು ಚಡಪಡಿಸುತ್ತಿದ್ದಾಳೆ. ಗಂಡನ ಮನೆಯವರ ಮೇಲೆ ವಿಶ್ವಾಸವಿಟ್ಟು ಒಡವೆಗಳ ನ್ನಿಟ್ಟ ಟ್ರಂಕನ್ನು ಅಲ್ಲಿಯೇ ಬಿಟ್ಟು ತೌರಿಗೆ ಬಂದಳು. ಅವಳ ಒಡವೆಗಳನ್ನು ಯಾರೂ ಎತ್ತಿ ಮಾರಿಲ್ಲ, ಹಾಳೂಮಾಡಿಲ್ಲ. ಓರೆಗಿತ್ತಿ ತನ್ನ ತಂಗಿಗೆ ಕೀಲಿ ಮುರಿದು ಇವಳ ಒಡವೆ ಇಡಿಸಿದ್ದೇ ಈ ಕೋಪಕ್ಕೆ ಕಾರಣ. ತಾನಿಲ್ಲದಾಗ ಕೀಲಿಮುರಿದು ಒಡವೆ ಬಳಸಿದರೆ ತಡೆದುಕೊಂಡಾಳೆ? 'ಹೊಯ್‌ಮಾಲಿ' ಎಂದು ಬೈದು ಹಗರಣಕ್ಕೆ ಪೀಠಿಕೆ ಹಾಕುತ್ತಾಳೆ. ಹಳ್ಳಿಯ ಹೆಣ್ಣುಮಕ್ಕಳ ಜೀವನದ ಸ್ವಲೋಕನೀತಿ ಚೆನ್ನಾಗಿ ಪ್ರತಿಪಾದನೆಗೊಂಡಿದೆ ಇಲ್ಲಿ.

ಜಾತ್ರೆಯೆಂದರೆ ಹಳ್ಳಿಗರಿಗೆ ಎಲ್ಲಿಲ್ಲದ ಸಡಗರ. 'ಊರಿನ ಸೊಕ್ಕು ಮುರಿಯಲು ಜಾತ್ರೆ ಮಾಡಬೇಕು, ಗಂಡಿನ ಸೊಕ್ಕು ಮುರಿಯಲು ಮದುವೆ ಮಾಡಬೇಕು' ಎಂಬ ಮಾತಿದ್ದರೂ ಹಳ್ಳಿಗರಿಗೆ ಇವುಗಳಲ್ಲೇ ಅಖಂಡತೃಪ್ತಿ. ವರ್ಷವಿಡಿ ದುಡಿಯುವ ಜೀವಿಗಳಿಗೆ ನಾಲ್ಕಾರುದಿನ ಬಿಡುವು ದೊರೆಯುವುದು ಜಾತ್ರೆಯ ಸಂದರ್ಭದಲ್ಲಿ. ಹೊಸ ಅರಿವೆಯುಟ್ಟು ನಕ್ಕು ನಲಿಯುವುದು ಈ ಕಾಲದಲ್ಲಿ ಮಾತ್ರ. ಮನೆಯವರು ತಂದುಕೊಡುವ ಅರಿವೆಗಳಲ್ಲದೆ ತಮ್ಮ ಸ್ವಂತ ಹಣದಿಂದಲೂ ಅರಿವೆ ಹೊಲಿಸಿಕೊಳ್ಳು ವರು. ವರ್ಷವಿಡಿ ಪ್ರಯತ್ನಮಾಡಿ ಅಷ್ಟಿಷ್ಟು 'ಇಡಗಂಟು' ಮಾಡಿಕೊಂಡು ವರ್ಷದ ಕೊನೆಯಲ್ಲಿ ಅದನ್ನು ಹೊರಹಾಕಿ ಮನಮೆಚ್ಚುವ ಅರಿವೆ ಹಾಕಿಕೊಳ್ಳುವುದು, ವಸ್ತ್ರ-ಒಡವೆ ಮಾಡಿಸಿಕೊಳ್ಳುವುದು ಸರ್ವೇ ಸಾಮಾನ್ಯ.

ಜಾತರಿ ಮುಂದ ಜಮಾ ಮಾಡಿ ನಾ
ಜರದ ಕುಬಸ ಬೇಕ ತೊಡಲಾಕs
ಜರದ ಕುಬಸ ಬೇಕ ತೊಡಲಾಕ
ಬಿಚ್ಚಿ ಉಡಲಾಕss

ಜರದ ಕುಪ್ಪಸ ತೊಟ್ಟು ಸಂತೋಷಪಡಲು ತಾನೇ ಸ್ವತಃ ಹಣವನ್ನು ಜಮಾ ಮಾಡಿಕೊಂಡಿದ್ದಾಳೆ ಇಲ್ಲಿ. ಇನ್ನು ಆ ಸಂಭ್ರಮದ ಸಾರ್ಥಕತೆಯಾಗುವುದು ಜಾತ್ರೆಯಲ್ಲಿ. ಜಾತ್ರೆಗಾಗಿ ನಾನಾ ರೀತಿಯ ತಿಂಡಿ-ತಿನಿಸುಗಳ ಮೆರವಣಿಗೆ ಹೇಗೆ ಸಾಗಿದೆ ನೋಡಿ :

ಕರದ ಕರಚಿಕಾಯಿ ಕಂಬಳಿ ಮೂಲ್ಯಾಗ ಹಾಕಬ್ಯಾಡ
ಇಲಿಗಿಲಿ ಕಡದಿತ ಮಂದೀದುs
ಇಲಿಗಿಲಿ ಕಡದಿತ ಮಂದೀದು
ದಗದ್ಹೆಂತಾದುss

ಮಾದೇಲಿ ಉಂಡಿ ಮತ್ತsಟ ಮಾಡಿಕ್ವಾ
ಒತಾಟಿ ಕುತಗೊಂಡ ತಿನ್ನೂದುs
ಒತಾಟಿ ಕುತಗೊಂಡ ತಿನ್ನೂದು
ಅದಕೇನಾಗೂದುss

ಚಜ್ಜಿರೊಟ್ಟಿ ಚವಳಿಕಾಯಿ ಎಣ್ಣಿಹಚ್ಚಿದ ಬದನಿಕಾಯಿ
ಈಗ ಬೇಕ ಒಂದ ಯೋಳೆಂಟಾs
ಈಗ ಬೇಕ ಒಂದ ಯೋಳೆಂಟಾ
ಹತ್ತ ಹದಿನೆಂಟಾss

ಈ ಪದ್ಯಗಳಲ್ಲೆಲ್ಲ ಚಿಕ್ಕಲಿಗರ ಜೀವನರೀತಿ ಸಿಗುವುದಿಲ್ಲ. ಬದಲಾಗಿ ಒಕ್ಕಲಿಗರ ಬದುಕಿನ ಸುಖ-ಸಂತೋಷಗಳೇ ಕಳೆಗೂಡಿ ನಿಂತಿವೆ.

ಶೃಂಗಾರ : ಸಾಮಾನ್ಯವಾಗಿ ಶೃಂಗಾರ ಎಲ್ಲ ಸಾಹಿತ್ಯಪ್ರಕಾರಗಳಲ್ಲಿ ಮೊಗದೋರಿದೆ. ಕೆಲ ಸಾಹಿತ್ಯಗಳಿಗಂತೂ ಅದೇ ಮೈಯಾಗಿದೆ. ಗಂಡು-ಹೆಣ್ಣಿನ ಆಕರ್ಷಣೆಗೆ ಶೃಂಗಾರ ಮೂಲವಾದಾಗ ಭೇಟಿ ಪ್ರಾರಂಭವಾಗಿ ಕಂಡದ್ದೆಲ್ಲ ಗಂಡಿಗೆ ಹೆಣ್ಣಾಗುತ್ತದೆ, ಹೆಣ್ಣಿಗೆ ಗಂಡಾಗುತ್ತದೆ. ಉಕ್ಕುವ ಯೌವನಕ್ಕೆ ಎಷ್ಟು ತಡೆಹಾಕಿದರೂ ಅದು ತನ್ನ ಒಡನಾಡಿಯನ್ನು ಹುಡುಕಿಕೊಂಡು ಹೋಗುತ್ತದೆ. ಈ ವಯಸ್ಸಿನ ರೂಪ-ಯೌವನಗಳ ತೀಕ್ಷ್ಣತೆ-ಪರಿಣಾಮ ಕೆಳಗಿನ ಪದ್ಯದಲ್ಲಿ ಕೆನೆಗಟ್ಟಿ ನಿಂತಿದೆ.

ಕಳಿ ನೋಡಿ ನಾ ಕಡಗೊಂಡ ಬಿದ್ದಿನವ್ವ
ಕಣ್ಣಿಗಿ ಬಂದಿತ ಬವಳೀಕಿs
ಕಣ್ಣಿಗಿ ಬಂದಿತ ಬವಳೀಕಿ
ಸಿತ್ತ ಉಸರ್ಹಾಕೀss

ಇಡೀ ನುಡಿಯ ಯಾವ ಮೂಲೆಯಲ್ಲಿಯೂ ಭಾವ ಸೋಲುವುದಿಲ್ಲ. ಪ್ರತಿಯೊಂದು ಶಬ್ದವೂ ಪದ್ಯದ ಮೂಲಭಾವವನ್ನು ಪುಷ್ಟೀಕರಿಸುತ್ತಿದೆ. ತನ್ನ ಪ್ರೇಮಿಯ ಮುಖ

ದಲ್ಲಿ ಚಿಮ್ಮುವ ಕಳೆಯನ್ನು ಕಂಡಾಗ ಇವಳಿಗೆ ಮತ್ತು ಬಂದಂತಾಯಿತು-ಸುತ್ತಲಿನ ಪ್ರಪಂಚದ ಚಾಲನೆಯೆಲ್ಲ ನಿಂತಂತೆ. ಮೈತ್ರಿಳಿದು ಎಚ್ಚರಾದಾಗ ಹಾಕುವ ಉಸಿರು, ವಿರಹವನ್ನು ಸಮರ್ಥವಾಗಿ ಪ್ರತಿನಿಧಿಸುತ್ತದೆ. ಅವನಿನ್ನೂ ತನಗೆ ದಕ್ಕಿಲ್ಲ. ಸಮಾಜದ ಕಟ್ಟೋ ತನ್ನೊಳಗಿನ ಅಂಜಿಕೆಯೋ ಅಂತೂ ಎರಡು ಒಂದಾಗಿಲ್ಲ. ಆದರೆ ಅವನನ್ನು ಕಂಡಾಗ ಉಂಟಾಗುವ ಹೃದಯದ ಬಡಿತ, ಮೈಮರೆತ, ನಿಡಿದಾದ ಉಸಿರು ತುಂಬಿರುವ ಅನುರಾಗದ ಗುಟ್ಟನ್ನು ಬಯಲು ಮಾಡುತ್ತಿವೆ. ಹೇಳಲಾರದ ಭಾವ, ತಾಳಲಾರದ ಕಾತರ. ಹೆಣ್ಣಿನ ಕೋಮಲವಾದ ಒಳಮನಸ್ಸು ಒದ್ದಾಡುವ ರೀತಿ ಚಿತ್ರವಾಗಿ ನೋಟಕರ ಮುಂದೆ ನಿಲ್ಲುತ್ತದೆ.

ಹೆಣ್ಣಿನ ಭಾವಮೃದುತ್ವ ಹೀಗಿದ್ದರೆ, ಎಲ್ಲ ಬಿಟ್ಟು ನಿಂತ ಗಂಡುಗೂಳಿ ಹೀಗೆ ಗುಟುರು ಹಾಕುತ್ತದೆ.

ಜಗ್ಗತನ ನಾರಿ ನಿನ್ನ ಜಗ್ಗತನ ಪೋರಿ ನಿನ್ನ
ಜಗ್ಗತನ ಪೋರಿ ನಿನ್ನ ಜನದಾಗs
ಜಗ್ಗತನ ಪೋರಿ ನಿನ್ನ ಜನದಾಗ
ಜನ್ಮ ಸಾಕೀಗ.

ಇವನು ಮೊದಲು ತಾನು ಕಣ್ಣಿಟ್ಟವಳನ್ನು ಪ್ರೇಮ(?)ಕ್ಕಾಗಿ ಆಹ್ವಾನಿಸಿರಬೇಕು. ಅವಳು ಹೂಂಗೊಟ್ಟಿಲ್ಲ. ಇವನು ಹತ್ತಾರು ಬಾರಿ ಹಲ್ಕಿರಿದು ಕೇಳಿ ನೋಡಿರಬೇಕು. ಆದರವಳು ಸೊಪ್ಪುಹಾಕಿಲ್ಲ. ಮೇಲಾಗಿ ಇವನ ಮನಸ್ಸಿಗೆ ಪೆಟ್ಟಾಗದಂತೆ ಚುಚ್ಚು ಮಾತನಾಡಿರಬೇಕು ಅವಳು. ಈಗ ಪ್ರೇಮದ ತಂಗಾಳಿ ನಿಂತು, ಸೇಡಿನ ಕಾವು ಶಬ್ದರೂಪ ಪಡೆದಿದೆ ಇಲ್ಲಿ. ಅಥವಾ ಕೊನೆಯದಾದ ಅಂಜಿಕೆಯು ಅಸ್ಟ್ರವೂ ಇದಾಗಿರಬೇಕು. 'ಜಗ್ಗತನ ನಿನ್ನ' ಎನ್ನುವ ಮಾತೇ ಮೇಲಿಂದ ಮೇಲೆ ಪುನರಾವರ್ತನೆಗೊಳ್ಳುತ್ತಿದೆ. ಇಷ್ಟು ಚಿಕ್ಕಪದ್ಯದಲ್ಲಿ ಅವನು ಗಂಡಸುತನಕ್ಕೆ ಸಾಕ್ಷಿಯಾಗಿ ತೋರಿಸಬೇಕಾದ ಉಳಿದ ಮಾರ್ಗ ಅದೊಂದೇ. ತಲೆತುಂಬ ಅದೇ ತುಂಬಿರುವುದರಿಂದ ಬೇಸರಿಸದೆ ಬರುವ ಒಂದೇ ಮಾತು ಪದ್ಯಕ್ಕೆ ಕಳೆಕೊಟ್ಟಿದೆ. ಇವನು ಜಗ್ಗುವುದು ಜನರಲ್ಲೇ ಹೊರತು ಎಲ್ಲೋ ಒಂದು ಮೂಲೆಯಲ್ಲಿ, ಯಾರೂ ಇರಲಾರದಲ್ಲಿ ಅಲ್ಲ. ಆದರ ಪರಿಣಾಮವೇನಾಗುತ್ತದೆ ಎಂಬುದೂ ಅವನಿಗೆ ಗೊತ್ತು. ಆದರೆ ಜೀವದ ಹಂಗು ಅವನಿಗಿಲ್ಲ. ಮುಂದೆ ಏನಾದರಾಗಲಿ, ಇಂದು ತಾನು ಅವಳನ್ನು ಅವಮಾನಗೊಳಿಸಬೇಕೆಂಬ ಒಂದೇ ಒಂದು ಗುರಿ ಜಾನಪದ ಗಂಡಿನ ಒರಟುತನವನ್ನು ಬಿಚ್ಚಿ ತೋರಿಸಿದೆ.

ಮದುವೆಯಾದರೂ ಪುರಿಯದ ಮುಂಚಿನ ಸಂಬಂಧ ಕೆಳಗಿನ ಪದ್ಯದಲ್ಲಿ ಒಡೆದುತೋರುತ್ತಿದೆ.

ಹುಬ್ಬಳ್ಳಿ ಜಾತರಿ ಒಂದ ಹುಚ್ಚಿದ್ದ ಮಾಡುವಾಗ
ಜಾತರ್ಯಾಗ ಬರಬ್ಯಾಡ ನಮ್ಮಾವ್ವಾs
ಜಾತರ್ಯಾಗ ಬರಬ್ಯಾಡ ನಮ್ಮಾವ್ವಾ
ಮನ್ಯಾಗ ಅದಾನ ಹೆಬ್ಬಾಂವ್ವಾss

ಮದುವೆಯಾಗಿ ಗಂಡನೊಂದಿಗೆ ಬಾಳುತ್ತಿದ್ದವಳೊಬ್ಬಳನ್ನು ಮುಂಚಿನ ಪ್ರೇಮಿ ಹುಬ್ಬಳ್ಳಿ ಜಾತ್ರೆಯಲ್ಲಿ ಸಂಧಿಸಿ ಮಾತನಾಡಲು ಹವಣಿಸುತ್ತಾನೆ. ಇವಳಲ್ಲಿಯೂ ಮುಂಚಿನ ವಾಸನೆ ಇನ್ನೂ ಹೋಗಿಲ್ಲವೆಂಬುದು ಅವಳಾಡುವ ಮಾತಿನಿಂದಲೇ ಸ್ಪಷ್ಟವಾಗುತ್ತದೆ. ನಿಷ್ಠುರವಾಗಿ ಅವನನ್ನು ದೂರವಿರಿಸಲಾರಳು. ಬದಲಾಗಿ ಗಂಡನನ್ನು ಹೆಬ್ಬಾಂವೆಂದು ಹೆಸರಿಟ್ಟು ಭಂಗಿಸಿ, ಇವನಲ್ಲಿ ತನ್ನ ಒಲವನ್ನು ತೋರಿಸುತ್ತಾಳೆ. ಒಲವು ಎಷ್ಟಿದ್ದರೂ ಕಟ್ಟಿದ ಕೊರಳತಾಳಿ ನಿರ್ಬಂಧನ ಕಲ್ಪಿಸಿಕೊಡುತ್ತದೆ. ಆದ್ದರಿಂದಲೇ ಜಾತ್ರೆಯಲ್ಲಿ ನಮ್ಮ ಮಾತುಕತೆ ನಡೆದರೆ ಸುದ್ದಿ ಹರಡುತ್ತದೆ. ಅಪವಾದ ಹೊತ್ತು ಬಾಳುವುದು ಹೇಗೆ ? ಎಂಬರ್ಥದ ಹಿನ್ನೆಲೆಯಲ್ಲಿ ತನ್ನ ಪ್ರಿಯಕರನಿಗೆ ಪ್ರೀತಿಯ ತಾಕೀತು ಮಾಡುತ್ತಾಳೆ, ಹಳ್ಳಿಗಳ ಯಾವುದೋ ಒಂದು ಮೂಲೆಯಲ್ಲಿ ತೆರೆಯ ಮರೆಯಲ್ಲಿ ಸಾಗುವ ಇಂಥ ಕಾಮಜೀವನ ಸತ್ಯಕ್ಕೆ ದೂರವೇನಲ್ಲ. ಜಾನಪದ ಪ್ರತಿಭೆ ಅದನ್ನೂ ಗುರುತಿಸಿದೆ.

ವಿಡಂಬನಾತ್ಮಕ : ಸಮಾಜದ ಸಲ್ಲದ ರೀತಿನೀತಿ ಸಾಹಿತಿಯ ವಿಡಂಬನೆಗೆ ಆಹಾರ. ಈ ದಿಸೆಯಲ್ಲಿಯೂ ಚಿಕ್ಕಲಿಗರ ಹಾಡುಗಳ ಹರಹು ಹೆಚ್ಚಿದೆ. ಚಹದ ಚಟ ಹೀನವೆಂಬ ನಂಬುಗೆಯ ಹಿನ್ನೆಲೆಯಲ್ಲಿ ಬೆಳೆದುಬಂದಿರುವ ಈ ಹೀನ ಸನ್ನಿವೇಶ ಕಣ್ಣಿಗೆ ಕಟ್ಟುವಂತಿದೆ :

ಹೊಟ್ಟಿ ತುಂಬಿಲಾರ್ಕ ಹಟೇಲಕ ಹೋಗತಾರ
ಕಪ್ಪಬಸಿ ತೊಳಿಲಾಕs
ಕಪ್ಪಬಸಿ ತೊಳಿಲಾಕ
ಗಟಾರದಾನ ಚುಟ್ಟಾ ಸೇದಲಾಕss

ಹೊಟೆಲ್‌ಗಳಲ್ಲಿ ಚಹ ಕುಡಿಯುವುದೆಂದರೆ ದುಡ್ಡು ಹಾಳಾಗಲು ದಾರಿ ಎಂಬ ಅನಿಸಿಕೆ ಹಳ್ಳಿಗರಲ್ಲಿ. ಒಮ್ಮೆ ಆ ಚಟಕ್ಕೆ ಅಂಟಿಕೊಂಡರೆ ಮನೆಯ ಅನ್ನ ವೈರಿಯಾಗುವುದಿಲ್ಲ ಎಂಬ ಬಲವಾದ ನಂಬಿಗೆ ಅವರದು. ದುಡ್ಡಿಲ್ಲದವರಿಗೂ ಈ ಚಟ ವೈರಿಯುಂಡರೆ ಚಹದಂಗಡಿಯಲ್ಲಿ ಕೊಡುವುದೇನು ? ಕೊಡುವ ಹಣಕ್ಕೆ ಬದಲಾಗಿ ಕಪ್ಪುಬಸಿ ತೊಳೆದು ಕೂಲಿ ಸಲ್ಲಿಸಬೇಕು. ಮನುಷ್ಯ ಈ ಮಟ್ಟಕ್ಕಿಳಿದರೆ ಒಂದು ಬೀಡಿಗೂ ಹಣ ಉಳಿಯಲಾರದು. ಕೊನೆಗೆ ಗಟಾರಿನ ಚುಟ್ಟವೇ ಗತಿಯಾಗುವ ನತದೃಷ್ಟತನ ಪ್ರಾಪ್ತವಾಗುತ್ತದೆ.

ಬ್ಯಾಸಿಗಿ ಬಿಸಲಿಗಿ ಬೇಸಿ ಅಂತ ಹೇಳಿ
ತೊಡತಾರ ಮಲಮಲ್ಲಾs

ತೊಟ್ಟು ಖಾದಿ ಅಂಗಿ ಕೂರಿ ಆಗಿಕ್ಯಾರ
ಕಡಿತಾವ ಮೈಯೆಲ್ಲಾss

ಎನ್ನುವ ಪದ್ಯದಲ್ಲಿ ಖಾದಿಯ ಬಗೆಗೆ ನವಿರಾದ ವಿಡಂಬನೆಯಿದ್ದರೆ, ಮುಂದಿನದು ಖಾದಿ ತೊಟ್ಟವರ ಬಗೆಗೆ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ.

ಜರದ ಪಟಕಾದವರನ ಕರದ ಕುಂಡ್ರಸತಾರ
ಓದ ಕುರ್ಚೆದ ಮ್ಯಾಲಾs
ಖಾದಿ ಟೊಪಿಗ್ಯಾವರನ ದಾದಮಾಡುದಿಲ್ಲ
ಎಂಥಾ ಕಾಡುಕಾಲಾss

ಸ್ವಾತಂತ್ರ್ಯಪೂರ್ವದಲ್ಲಿ ಹುಟ್ಟಿದ ಹಾಡು ಇದಾಗಿರಬೇಕು. ಅಧಿಕಾರಕ್ಕೆ ಬಾಯಿ ಬಿಟ್ಟು ಹೇಳಿದಷ್ಟು ಕೇಳಿಕೊಂಡು ಹೋಗುವ ಜರದಪೇಟಾ ಸುತ್ತುವ ಸಂಸ್ಥಾನಿಕ ರೆಂದರೆ, ಸಮಯಸಾಧಕ ಬ್ರಿಟಿಶರಿಗೆ ಬಲುಪ್ರೀತಿ. ತಮ್ಮ ಸ್ವಾರ್ಥಕ್ಕಾಗಿ ಅವರ ನ್ನೊಯ್ದು ಕುರ್ಚೆಯ ಮೇಲೆ ಕೂಡ್ರಿಸಿ, ಸನ್ಮಾನದ ನಟನೆಮಾಡುತ್ತಿದ್ದರೆ ಅದೇ ವೇಳೆಗೆ ಖಾದಿ ತೊಟ್ಟವರೆಂದರೆ ಬ್ರಿಟೀಶರಿಗೆ ಕಣ್ಣುರಿ. ನಾಡಿನ ಗೌರವ ಕಾಯುವ ಭರದಲ್ಲಿ ತಮಗೆ ಯಾವ ವೇಳೆಯಲ್ಲಿ ಎಂಥ ಆತಂಕ ಒಡ್ಡುತ್ತಾರೋ ಎಂಬ ಭಯ. ಕಾರಣವಾಗಿ ಇಂಥ ದೇಶಭಕ್ತರತ್ತ ಬ್ರಿಟೀಶರು ತೋರುವುದು ಕೇವಲ ನಿರ್ಲಕ್ಷ್ಯ, ಅಸೂಯೆ.

ಮುಂದೆ ಸಂಗ್ರಹಿಸಿದ ಹಾಡುಗಳು ಒಂದಕ್ಕೊಂದು ಸಂಬಂಧವಿದ್ದು, ಒಂದೇ ಭಾವವನ್ನು ಪ್ರಕಟಿಸುತ್ತವೆ. ತುದಿ ಮೊದಲ್ಗೊಂಡು ಎಲ್ಲ ಪದ್ಯಗಳನ್ನು ಈಕ್ಷಿಸಿದರೆ ಸುವ್ಯವಸ್ಥಿತವಾದ ಪ್ರಾರಂಭವಾಗಲಿ ಮುಕ್ತಾಯವಾಗಲಿ ಇದ್ದುದು ಕಂಡುಬರುವುದಿಲ್ಲ.

ಹುಬ್ಬಳ್ಳಿ ಊರಾಗ ಹುಚ್ಚೆದ್ದ ಕುಣಿತಾಳ
ಹುಳಬಿದ್ದ ಹುಚ್ಚ ತನಕs
ಹುಬ್ಬಳ್ಳಿ ಹುಡುಗುರು ದುಬ್ಬಕ ಒದ್ದರ
ಓಡ್ಯಾಳ ಧಾರವಾಡ ತನಕss

ಧಾರವಾಡದಾಗ ದರ್ಪ ಇಳಿಸ್ಯಾಳಾಕಿ
ಎಲ್ಲಾರನು ಅಂಜಸುದಕs
ಧಾರವಾಡ ಹುಡುಗುರು ದಾಡಿಗಿ ಒದ್ದರ
ಓಡ್ಯಾಳ ಬೆಳಗಾಂಯಿ ತನಕ

ಬೆಳಗಾಂಯಿ ಶಾಪುರ ತಿರಗ್ಯಾಡಿ ಹೇಳತಾಳ
ಬಾಳಬಾಳ ಬೆಳಕs
ಬೆಳಗಾಂಯಿ ಹುಡುಗುರು ಬೆಳಗಿ ಬಿಟ್ಟರ
ಓಡ್ಯಾಳ ಗದುಗಿನ ತನಕss

ಗದಗಿನೂರಾಗ ಗದಬಡಿಸಿ ಹುಡಕತಾರ
ಬಿದ್ದಾಳ ಗದ್ದಲಕ
ಗದುಗಿನ ಹುಡುಗೂರು ಗದ್ದಕ ಒದ್ದರ
ಒಡ್ಯಾಳ ಯಾದವಾಡ ತನಕ

ಯಾದವಾಡ ಹುಡುಗೂರು ಎಚ್ಚರಂತ ಹೇಳಿ
ಹಾಕ್ಯಾರ ಹಳ್ಳಕ

ಈ ಪದ್ಯಗಳು ಗೀಗೀ ಪದಗಳಲ್ಲಿ ಬರುವ ನಾಗೇಶಿಯನ್ನು ಕುರಿತು ಹರದೇಶಿ ಹಾಡುವ ಹಾಡಿನ ಪ್ರತಿರೂಪದಂತೆ ಕಾಣುತ್ತವೆ. ಇದಕ್ಕಿಂತಲೂ ಹೆಚ್ಚಿನ ಯಾವೊಂದು ಭಾವವೂ ಈ ಪದ್ಯಗಳೊಡಲಿನಿಂದ ಹೊರಬರುವುದಿಲ್ಲ. ಯಾವುದೋ ಲಾವಣಿಯ ಒಂದು ಚೌಕದ ಭಾಗ ಈ ಪದ್ಯಗಳಾಗಿರಲೂ ಸಾಕು. ಈ ಸಂಶಯಕ್ಕೆ ಕಾರಣ ವೆಂದರೆ ಲಾವಣಿಗಳಲ್ಲಿಯ ಒಂದೊಂದು ಭಾಗವನ್ನು ತುಂಡಿಸಿ ಸ್ವತಂತ್ರಪದ್ಯ ಗಳೆಂಬಂತೆ ಈ ಚಿಕ್ಕಲಿಗರ ಹಾಡುಗಳ ಮಧ್ಯೆ ಸೇರಿಸುತ್ತಿದ್ದರು ಎಂದು ಎರಡೂ ಸಾಹಿತ್ಯದ ಪರಿಚಯವುಳ್ಳವರು ಹೇಳಿದ್ದಾರೆ. ಗೀಗೀ ಮೇಳಗಳು ಅದೇ ಭಾಗದಲ್ಲಿ ಹೆಚ್ಚಿರುವುದು ಮೇಲಿನ ಹೇಳಿಕೆಯಲ್ಲೇ ತಥ್ಯವನ್ನು ಅರಸಲು ಪ್ರಚೋದನೆ ಕೊಡು ತ್ತದೆ. ಯಾವುದಕ್ಕೂ ಇನ್ನಷ್ಟು ಚಿಕ್ಕಲಿಗರ ಹಾಡುಗಳ ಸಂಗ್ರಹ ಅಗತ್ಯ. ಹಾಗೇ ಲಾವಣಿಗಳಲ್ಲಿ ಈ ಪದ್ಯಗಳೇನಾದರೂ ಸಿಕ್ಕುತ್ತವೆಯೋ ಎಂಬ ಅಭ್ಯಾಸದ ಹಿನ್ನೆಲೆ ಯಲ್ಲಿ ಶೋಧನೆ ಮುಂದುವರಿಯಬೇಕು. ಆಮೇಲೆ ಚಿಕ್ಕಲಿಗರ ಹಾಡುಗಳಲ್ಲಿ ಸ್ವಂತಿಕೆ ಎಷ್ಟೆಂಬುದು ನಿರ್ಧಾರವಾಗಬೇಕು.

ಉದಾಹರಿಸಿದ ಎಲ್ಲ ಚಿಕ್ಕಲಿಗರ ಹಾಡುಗಳನ್ನು ಸಾಹಿತ್ಯಿಕದೃಷ್ಟಿಯಿಂದ ಸಮಾ ಲೋಚಿಸಿದಾಗ ಇಲ್ಲೆಲ್ಲ ಕಲ್ಪನೆ ಕಡಿಮೆ ಎನಿಸುತ್ತದೆ. ಹಳ್ಳಿಯ ಬದುಕಿನ ನೈಜತೆಯೇ ಈ ಹಾಡುಗಳ ಜೀವಾಳ. ವರ್ಣನಾವಿಧಾನದಲ್ಲಿ ಅಂಥ ಮೆಚ್ಚಬೇಕಾದುದೇನಿಲ್ಲ. ಎಲ್ಲ ಜಾನಪದಗೀತಗಳಲ್ಲಿಯಂತೆ ಅನುಪ್ರಾಸ, ಅಂತ್ಯಪ್ರಾಸಗಳು ಇಲ್ಲಿಯೂ ಗಣನೀಯ.

ಮುಂದಿನ ಅಭ್ಯಾಸಿಗಳಿಗೆ ಈ ಲೇಖನ ತೋರುಬೆರಳಾದರೆ ಈ ನಿಟ್ಟಿನಲ್ಲಿ ಪ್ರಾರಂಭದ ನನ್ನ ಈ ಶ್ರಮ ಸಾರ್ಥಕವಾಯಿತೆಂದು ಬಗೆಯುತ್ತೇನೆ.

• •

ಸೂಜಿಗಲ್ಲ ವ್ಯಾಲ ತಪಸವ

● ಲೀಲಾವತಿ ತೋರಣಗಟ್ಟಿ

ಕವಿಕುಲಗುರು ಕಾಳಿದಾಸ ಪಾರ್ವತಿಯನ್ನು ಶಿವನಿಗಾಗಿ ಹಿಮಾಲಯದಲ್ಲಿ ತಪಸ್ಸು ಮಾಡಿಸಿದರೆ, ಮಹಾಕವಿ ಹರಿಹರ ಗಿರಿಜೆಯನ್ನು ಹೇಮಕೂಟದಲ್ಲಿ (ಹಂಪೆ) ತಪಸ್ಸು ಮಾಡಿಸುತ್ತಾನೆ. ನಮ್ಮ ಜಾನಪದಕವಿ (ಅಥವಾ ಕವಯಿತ್ರಿ) ಗೌರಿಯನ್ನು ಸೊಗಲದ ಗುಡ್ಡದಲ್ಲಿ ಸೂಜಿಗಲ್ಲಿನ ಮೇಲೆ ನಿಲ್ಲಿಸಿ ತಪಸ್ಸು ಮಾಡಿಸಿದ್ದಾನೆ.

ತಾನು ಗೌರವ್ವನ ಅಂಗಳಕಲ್ಲ ಮೆಟ್ಟಿ
ಗುರುಧರ್ಮ ಕೋರ್‍ಯಾನ್ನ ಭಿಕ್ಷಾಂದ ।ರ। ಕೋ।

'ಸೂಜಿಗಲ್ಲ ವ್ಯಾಲ ತಪಸವ' ಈ ಕಥನದ ಆರಂಭದ ಪಾದಗಳೇ ಸತ್ವಭರಿತವಾಗಿವೆ. 'ಅಂಗಳಕಲ್ಲ ಮೆಟ್ಟಿ' ಇದು ಜಾನಪದ ಸತ್ವಭರಿತ ಪದಪ್ರಯೋಗ. ಹೋಗು ಹೋಗು ನಿನ್ನ 'ಅಂಗಳಕಲ್ಲ ಮೆಟ್ಟಿದರ' ಹೇಳ ಎಂದು ಸೆಡವಿನಿಂದ ಹೇಳುವದುಂಟು. 'ಅಂಗಳಕಲ್ಲ ಮೆಟ್ಟೊದುಲ್ಲ' ಎನ್ನುವುದು ನಿನ್ನ ಮನೆ ಬಾಗಿಲಿಗೆ ಬರುವದಿಲ್ಲವೆನ್ನುವದರ ಘೋರಪ್ರತಿಜ್ಞೆ. ಗೌರಿಯು 'ಅಂಗಳಕಲ್ಲ ಮೆಟ್ಟಿ' ಸತ್ತೆಯಿಂದ ಭಿಕ್ಷೆ ನೀಡಿಸಿಕೊಂಡೇ ಮುಂದೆ ಸಾಗುವದೆಂಬ ದೃಢಸಂಕಲ್ಪದಿಂದ "ಗುರುಧರ್ಮ ಕೋರ್‍ಯಾನ್ನ ಭಿಕ್ಷಾ" ಎಂದು ಜೋಳಿಗೆ ಹಿಡಿದುಕೊಂಡು ನಿಂತಿದ್ದಾನೆ ಜಂಗಮ. ಇದು ಒಂದು ಚಿತ್ರಮಯ ಸನ್ನಿವೇಶ. ಕಾಲಿಗೆ ಜಂಗು ಕಟ್ಟಿ, ಒಂದು ಕೈಯಲ್ಲಿ ಬೆತ್ತ, ಇನ್ನೊಂದು ಕೈಯಲ್ಲಿ ಜೋಳಿಗೆ ಹಿಡಿದು ಬಾಗಿಲಲ್ಲಿ ನಿಂತ ದೃಢಸಂಕಲ್ಪ ಮುಖಭಾವದ ಜಂಗಮನೊಬ್ಬನ ಚಿತ್ರವಿಲ್ಲಿದೆ.

ಭಿಕ್ಷಾ ಅಂದ ಸಬದಾ ಕೇಳ್ಯಾಳ ಗೌರವ್ವ
ತೂಗುಮಂಚಾ ಬಿಟ್ಟ ಇಳದಾಳ ।ರ। ಕೋ।

'ಗುರುಧರ್ಮ ಕೋರ್‍ಯಾನ್ನ ಭಿಕ್ಷಾ' ಎಂಬ ಶಬ್ದ ತೂಗುಮಂಚದ ಮೇಲೆ ಒರಗಿ ಹಾಯಾಗಿ ಕಾಲಕಳೆಯುವ ಗೌರಿಗೆ ಕೇಳಿಸುತ್ತದೆ. ತೂಗುಮಂಚದಿಂದ ಇಳಿದು ಬರುತ್ತಾಳೆ.

ತೂಗುಮಂಚಾ ಬಿಟ್ಟ ಇಳದಾಳ ಗೌರವ್ವ
ಕೊಚ್ಚಕ್ಕಿ ಬಾನಾ ಎಡಿಮಾಡೆ ।ರ। ಕೋ।

ಕೊಚ್ಚಕ್ಕಿ ಬಾನಾ ಎಡಿಮಾಡೆ ಅದಕಿನ್ನ
ಮುತ್ತಿನ ವಸ್ತ್ರ ಮಡಿಗ್ಯಾಳ ।ರ। ಕೋ।
ಮುತ್ತಿನ ವಸ್ತ್ರ ಮಡಿಗ್ಯಾಳ ಗೌರವ್ವ
ತಂದಾಳs ಶಿವನ ಎದುರಿಗೆ ।ರ। ಕೋ।

ಮಂಚದಿಂದ ಇಳಿದು ಅಡಿಗೆಮನೆಗೆ ಹೋಗಿ 'ಕೊಚ್ಚಕ್ಕಿ ಬಾನಾ ಎಡೆ' ಮಾಡುತ್ತಾಳೆ (ಕೊಚ್ಚಕ್ಕಿ > ಕೊಚ್ಚಿದ ಅಕ್ಕಿ). ಮರದಲ್ಲಿ ಹಾಕಿ ನುಚ್ಚುನುರಿಯನ್ನೆಲ್ಲ ಕೊಚ್ಚಿ ತೆಗೆದು ಹಿಂದೆ ಉಳಿದ ನೀಟಾದ ಅಕ್ಕಿಯಿಂದ ಮಾಡಿದ ಬೋನವನ್ನು ಎಡೆಮಾಡುತ್ತಾಳೆ. ಅದಕ್ಕೆ ಮುತ್ತುಹಚ್ಚಿ ಮಾಡಿದ ವಸ್ತ್ರವನ್ನು ಮರೆಮಾಡಿ ಶಿವರೂಪಿ ಜಂಗಮನೆದುರು ತರುತ್ತಾಳೆ.

ಒಂದ ಬಾಂವದಲಿ ತಂದಿಲ್ಲ ಭಿಕ್ಷಾವ
ಹಿಂದಕ ನಾರಿ ಹೊಳ್ಳೆಂದ ।ರ। ಕೋ।

ದೇವರ ಎಡೆಗೆ ಹಳ್ಳು-ಕಲ್ಲುಗಳನ್ನಷ್ಟೇ ಅಲ್ಲ, ನುಚ್ಚುನುರಿಯನ್ನು ಕೊಚ್ಚಿ ತೆಗೆದು ನೀಟಾದ ಅಕ್ಕಿಯಿಂದ ನಿಷ್ಠೆಯಿಂದ ಬೋನ ಮಾಡಿದ್ದರೂ ಮಂಡ ಜಂಗಮನಿಗೆ ನಿಷ್ಠೆ ಕಡಿಮೆ ಎನಿಸಿತಂತೆ. ನಿತ್ಯ ಜಂಗಮನೊಬ್ಬನಿಗೆ ನೀಡಿದ ನಂತರವೇ ಉಣ್ಣುವದು ವೀರಶೈವ ಸಾಂಪ್ರದಾಯವಾಗಿತ್ತು. ಪ್ರತಿ ಸೋಮವಾರ ಜಂಗಮಭುಕ್ತಿಯ ನಂತರವೇ ಊಟ ಮಾಡುವ ನಿಷ್ಠಾರಸಂಪ್ರದಾಯದ ಕೆಲವು ಕುಟುಂಬಗಳು ಹಳ್ಳಿಗಳಲ್ಲಿದ್ದವು. ಈಗ ಅದು ಮರೆಯಾಗುತ್ತಾ, ಹಬ್ಬದದಿನಗಳಲ್ಲಿ ಮತ್ತು ಶ್ರಾವಣಸೋಮವಾರಗಳಲ್ಲಿ ಮಾತ್ರ ಹಳ್ಳಿಗಳಲ್ಲಿ ಪ್ರತಿಯೊಂದು ವೀರಶೈವಕುಟುಂಬದಲ್ಲೂ ಉಳಿದುಕೊಂಡು ಬಂದಿದೆ.

ಒಂದ ಬಾಂವದಲಿ ತಂದೇನ ಭಿಕ್ಷಾವ
ನಂದಿಗೀಶ್ವರ ಕೈಕೊಳರಿ ।ರ। ಕೋ।

ನಿಷ್ಠೆಗೆ ಗೌರಿಯಲ್ಲೇನೂ ಕೊರತೆಯಿಲ್ಲ. ಒಂದೇ ಭಾವದಿಂದ, ಏಕನಿಷ್ಠೆಯಿಂದ ಭಿಕ್ಷೆ ತಂದಿದ್ದಾಳೆ. ಜಂಗಮನ್ಯಾರೇ ಇರಲಿ ಅವನು ಶಿವ "ಕೂಡಲಸಂಗಮದೇವರ ನರಿವೊಡೆ ಶರಣರ ಸಂಗವೆ ಮೊದಲು" ಎಂದು ಅಣ್ಣ ನುಡಿದ ನುಡಿಯನ್ನೇ ನಂಬಿ ಬದುಕಿದ ನಮ್ಮ ಜನಪದ, ಜಂಗಮ–ಶಿವರಲ್ಲಿ ಅಭೇದ ಕಲ್ಪಿಸಿ ಗೌರಿಯ ಬಾಯಿಂದ 'ನಂದಿಗೀಶ್ವರ ಕೈಕೊಳರಿ' ಎಂದು ನುಡಿಸಿದೆ.

ಮಜ್ಜಿಗ್ಹೋಗಿ ನಾನು ಇದ್ದದ್ದ ಹೇಳುವೆ
ಮುದ್ದಾ ಗೌರಿ ಇದು ತರವೇನ ।ರ। ಕೋ।
ಬಾನಕ್ಹೋಗಿ ನಾನ ಆದದ್ದ ಹೇಳುವೆ
ನಾರಿ ಗೌರಿ ಇದು ತರವೇನ ।ರ। ಕೋ।

ನಿಷ್ಠೆ ಅಪಾರವೆಂದು ಹೇಳಿದರೂ ಶಿವರೂಪಿ ಜಂಗಮನಿಗೆ ನೆಮ್ಮದಿಯಿಲ್ಲ. ಬಾಯಿಂದ ಹೇಳಿದರೆ ಆಗದು. ಕೃತಿಗಿಳಿಸಿ ತೋರಿಸಬೇಕಲ್ಲವೇ ? ಮಜ್ಜಿಗೆ, ಬೋನಗಳ ನೆಪಮಾಡಿಕೊಂಡು ಅವಳ ರೀತಿ ತರವಲ್ಲವೆಂದು ಹೇಳಿ ಬರುತ್ತಾನಂತೆ. ಆದರೆ ಹೋಗುವ ಬಗೆಯೆಂತು ? ಹಿಂದೆ ಜಂಗಮ ವೇಷಧರಿಸಿ 'ಅಂಗಳಕಲ್ಲ ಮೆಟ್ಟಿ' ಬಂದಿದ್ದಾನೆ. ಇನ್ನಾವ ಬಗೆಯಿಂದ ಅವಳ ಮನೆಗೆ ಹೋಗುವದು !

ನಾರದ ಬುಟ್ಟ್ಯಾದ ಬಸವಂತ್ಯಾ ಕೂಸಾದ
ನಂದಿಗೀಶ್ವರ ಕೊರವ್ಯಾದ ।ರ। ಕೋ।

'ಜಗಳಗಂಟ' ನಾರದನನ್ನು ಬುಟ್ಟಿ ಮಾಡಿಕೊಂಡು ಬಸವನನ್ನು ಕೂಸು ಮಾಡಿಕೊಂಡು ನಂದಿಗೀಶ್ವರ ಕೊರವಂಜಿಯಾಗಿ ನಿಲ್ಲುತ್ತಾನೆ. ಪಾರಿಜಾತದಲ್ಲಿ ಕೃಷ್ಣ ಕೊರವಂಜಿಯಾಗಿದ್ದಾನೆ. ಇಲ್ಲಿ ಶಿವ ಕೊರವಂಜಿಯಾದದ್ದನ್ನು ನಾವು ಕಾಣುತ್ತೇವೆ. ಕಾವ್ಯಗಳಲ್ಲಿ ಶಿವ ಶಬರನಾದದ್ದುಂಟೇ ಹೊರತು ಕೊರವಂಜಿಯಾದ ಉದಾಹರಣೆಗಳಿಲ್ಲ. ಜನಪದಕಾವ್ಯದಲ್ಲಿ ಶಿವ ಕೊರವಂಜಿಯಾಗಿದ್ದಾನೆ.

ಸ್ವಾಮಾರದ್ಯ ದಿನ್ಯಾ ಹೊಂಟಾಳ ಕೊರವಂಜಿ
ಸ್ವಾಮಿಗಿ ಪಂಜಾ ಹಿಡದ್ಹಂಗ ।ರ। ಕೋ।
ಸುಕ್ರಾರದ್ಯಾ ದಿನ್ಯಾ ಹೊಂಟಾಳ ಕೊರವಂಜಿ
ಸೂರ್ಯಾಗ ಪಂಜಾ ಹಿಡದ್ಹಂಗ ।ರ। ಕೋ।

ಸಾಕ್ಷಾತ್ ಶಿವನೇ ಕೊರವಂಜಿಯಾಗಿರುವಾಗ ಅವಳ ರೂಪವನ್ನು ಬಣ್ಣಿಸುವ ಬಗೆ ಹೇಗೆ ! 'ಸ್ವಾಮಿಗಿ ಪಂಜಾ ಹಿಡದ್ಹಂಗ, ಸೂರ್ಯಾಗ ಪಂಜಾ ಹಿಡದ್ಹಂಗ' ಎಂಬ ಅಭಿವ್ಯಕ್ತಿಯಲ್ಲೇ ಕೊರವಂಜಿಯ ರೂಪವನ್ನು ಕಲ್ಪಿಸಿಕೊಳ್ಳಬೇಕು.

ಓಣಿಓಣಿಗುಂಟ ಹ್ವಾದಾಳ ಕೊರವಂಜಿ
ಓಣ್ಯಾನ್ನ ನಾಯಿ ಬಗಳ್ಯಾವ ।ರ। ಕೋ।
ಕೇರಿಕೇರಿಗುಂಟ ಹ್ವಾದಾಳ ಕೊರವಂಜಿ
ಕೇರ್ಯಾನ್ನ್ಯ ನಾಯಿ ಬಗಳ್ಯಾವ ।ರ। ಕೋ।

ಮಣ್ಣಿನಲ್ಲಿ ಬದುಕಿದ ಜನರಿಂದ ರಚಿತವಾದ ಕಾವ್ಯ ಮಣ್ಣಿನಲ್ಲೇ ಬದುಕಬೇಕಾದದ್ದು ಸಹಜ. ಶಿವನೇ ಕೊರವಂಜಿಯಾಗಿ ಬಂದರೇನಂತೆ, ಅವಳನ್ನು ಕಂಡು ಬೊಗಳುವದು ನಾಯಿಗಳ ಧರ್ಮ. ಶಿವನು ಕೊರವಂಜಿಯಾಗಿರುವನೆಂಬುದನ್ನು ಲಕ್ಷಕ್ಕೆ ತಾರದ, ಮಣ್ಣಿನಿಂದ ದೂರಾಗದ ಕವಿ(ಕವಯಿತ್ರಿಯರು)ಗಳು ನಮ್ಮ ಜಾನಪದ ಕವಿಗಳು.

ಒಕ್ಕಲಗೇರ್ಯಾಗ ಹೊಕ್ಕಾಳ ಕೊರವಂಜಿ
ಹಾಲಿನ ತೆಕ್ಕ ಹೊಸ ನೆಲುವ ।ರ। ಕೋ।
ಹಾಲಿನ ತೆಕ್ಕ ಹೊಸ ನೆಲುವ
ಸಿನ್ನ ಬಾಲನ ತೆಕ್ಕ ಗಿಲಗಿಂಚಿ ।ರ। ಕೋ।

ಈ ನಾಲ್ಕು ಪಾದಗಳಲ್ಲಿ ಒಕ್ಕಲಗೇರಿಯಲ್ಲಿ ಹೊಕ್ಕು ಮನೆಮನೆಗೆ ನೆಲವು (ಹಾಲು ಮೊಸರು ಇಡಲು ಮಾಡಿದ ನುಲಿಯ ಒಂದು ಸಾಧನ) ಗಿಲಗಿಂಚಿ, ಕಸಬರಿಗೆ ಮಾರಲು ಬರುವ ಕೊರವಂಜಿಯ ಚಿತ್ರ ಕಣ್ಣುಮುಂದೆ ನಿಲ್ಲುತ್ತದೆ. ಜಾಳಿಗೆಯ ಕಪಾಟು, ಪ್ಲ್ಯಾಸ್ಟಿಕ್ ಗಿಲಗಿಂಚಿ ಬಳಸುವ ನಾಗರಿಕರಿಗೆ ಈ ನೆಲುವು, ಗಿಲಗಿಂಚಿಗಳು ಹೊಸವು. 'ನಿಂಗವ್ವs, ನೀಲವ್ವs, ತಾಯವ್ವs, ನಮ್ಮವ್ವss' ಎಂದು ಬುಟ್ಟಿ ಹಿಡಿದುಕೊಂಡು ಬರುವ ಕೊರವಂಜಿಯೂ ಹೊಸಬಳು. ಗಿಲಿಗಿಲಿ ಸಪ್ಪಳಾಗಲು ಹರಳುಗಳನ್ನು ಹಾಕಿ ಚಾಪೆ ಹೆಣೆಯುವ ಈಚಲುಗರಿಗಳಿಂದ ಗಿಲಗಿಂಚಿ ಮಾಡಿ ರೊಟ್ಟಿ, ನುಚ್ಚುಗಳಿಗೆ ಗಿಲಿಗಿಂಚಿ ಮಾರುವ ಕೊರವಂಜಿಯರೂ ಕಡಿಮೆಯಾಗುತ್ತಿದ್ದಾರೆ. ಕೊಳ್ಳುವ ತಾಯಂದಿರೂ ಕಡಿಮೆಯಾಗುತ್ತಿದ್ದಾರೆ, ಹೀಗಿದ್ದರೂ ಹಳ್ಳಿಗಳಲ್ಲಿ ನೆಲುವು, ಕಸಬರಿಗೆ ಮಾಡಿಕೊಡುವ ಕೊರವಿಯರಿದ್ದಾರೆ. ಕೊಳ್ಳುವ ಹಳ್ಳಿಗರೂ ಇದ್ದಾರೆ. ಅವರ ಮನೆಮನೆಗಳಲ್ಲಿ ನೆಲುವು ಕಾಣದೊರಕುತ್ತವೆ.

> ಗೌರವ್ವನ ಮನಿ ದಾಸ್ಯಾರು ನೀರಿಗಿ ಹ್ವಾದರ
> ಅಲ್ಲಿ ಕೊರವೀಯ ಕಂಡಾರ ।ರ। ಕೋ।
> ಬಾರವ್ವ ಕೊರವಂಜಿ ನಮ್ಮವ್ವ ಕರಿತಾಳ
> ವರಕೊಟ್ಟ ನಮ್ಮ ಕಳುವ್ಯಾಳ ।ರ। ಕೋ।

ಗೌರಿಯ ಮನೆಯ ದಾಸಿಯರು ನೀರು ತರಲು ಬಂದಿದ್ದಾರೆ. ದಾರಿಯಲ್ಲಿ ಕೊರವಂಜಿಯನ್ನು ಕಂಡಿದ್ದಾರೆ. ತಕ್ಷಣ ಒಡತಿಗೆ ಸುದ್ದಿ ಮುಟ್ಟಿದೆ. ಕೊರವಂಜಿ ಹಳೆಗಾಲದಲ್ಲಿ ಗ್ರೇಟ ಪಾಮಿಸ್ಟ್ರಿ (Great palmistry) ಸುದ್ದಿಕೇಳಿ ಶ್ರೀಗೌರಿ ತನ್ನ ಭವಿಷ್ಯ ಕೇಳಲು ದಾಸಿಯರಿಗೆ ವರಕೊಟ್ಟು ಅಂದರೆ ಅಪ್ಪಣೆಮಾಡಿ ಕೊರವಂಜಿಯನ್ನು ಕರೆ ತರಲು ಹೇಳಿದ್ದಾಳೆ. ನಾಗರಿಕತೆ ಬೆಳೆಯುತ್ತಿದ್ದರೂ ಭವಿಷ್ಯ ಕೇಳುವದು ನಿಂತಿಲ್ಲ. Western Palmistry, Eastern Palmistry ಎಂದು ಇಬ್ಬಗೆಯ ಪದ್ಧತಿಗಳಾಗಿ ನಿಂತಿವೆ. ಪರೀಕ್ಷೆಯ ಪರಿಣಾಮ ಕೇಳುವ ವಿದ್ಯಾರ್ಥಿಗಳಿಂದ, ಇಲೆಕ್ಷನ್ ಪರಿಣಾಮ ಕೇಳುವ ಮಂತ್ರಿಗಳಿಂದ ರಾಷ್ಟ್ರಪತಿಗಳವರೆಗೆ ಎಲ್ಲರೂ ಭವಿಷ್ಯ ಕೇಳುವವರೆ. ಈ ಹುಚ್ಚು ಎಲ್ಲಿಯವರೆಗೆಂದರೆ ಮರದಡಿಯಲ್ಲಿ ಕವಡೆ ಪುಸ್ತಕಗಳನ್ನಿಟ್ಟುಕೊಂಡು, ಹೋಟೆಲ್ಲುಗಳೆದುರು ದೊಡ್ಡದೊಡ್ಡ ಬೋರ್ಡುಗಳನ್ನು ಹಾಕಿಕೊಂಡು, ಮಿನಿಸ್ಟರು-ರಾಜ್ಯಪಾಲರುಗಳಿಂದ ಸರ್ಟಿಫಿಕೇಟಗಳನ್ನು ಪಡೆಯುವ, ಅದನ್ನೇ ವೃತ್ತಿಮಾಡಿಕೊಳ್ಳುವವರೆಗೆ ಮುಂದುವರೆದಿದೆ.

> ಓಣ್ಯಾಗಿಂದ ಒಬ್ಬ ಕೊರವಿ ಓಡಿ ಬಂದು
> ಗಟ್ಯಾಗಿ ಪಾದ ಹಿಡದಾಳ ।ರ। ಕೋ।
> ಗಟ್ಯಾಗಿ ಪಾದ ಹಿಡದದ ಕೇಳತಾಳ
> ಮಕ್ಕಳ ಸಂತಾನ ಮೊದಲಿಲ್ಲ ।ರ। ಕೋ।

ಹಳ್ಳಿಯ ಮುಗ್ಧಜನರಿಗೆ ಕೊರವಿ ದೇವರ ಸಮಾನ. ಒಬ್ಬ ಕೊರವಿ ಓಡಿಬಂದು ಕಾಲಹಿಡಿದು ಸಂತಾನ ಬೇಡುತ್ತಾಳೆ.

ಮುಂಜೇಲಿ ಏಳುತ್ತ ಲಿಂಗಪೂಜಿಯ ಮಾಡ
ಸ್ವಾಮಾರದೊಂದತ್ತ ಹಿಡಿಯವ್ವ ।ರ। ಕೋ।
ಸ್ವಾಮಾರದೊಂದತ್ತ ಹಿಡಿಯವ್ವ ನಿನಗಿನ್ನ
ಕಂದರ ಬಾಳ್ಯಾರ ಕಡಿತಾವ ।ರ। ಕೋ।

ಕಾಲು ಹಿಡಿದು ಮಕ್ಕಳು ಬೇಕೆನ್ನುವವಳಿಗೆ ಈ ದೇವಕೊರವಿ ವ್ರತ ಹೇಳಿಕೊಡುತ್ತಾಳೆ. ಒಕ್ಕಲುಮಕ್ಕಳಿಗೆ ದಿನನಿತ್ಯ ಸ್ನಾನಪೂಜೆ ಆಗದ ಮಾತು. ಸೋಮವಾರ, ಗುರುವಾರ ಅಥವಾ ಮಂಗಳವಾರ, ಶುಕ್ರವಾರ (ವಿಶೇಷವಾಗಿ ಹೆಣ್ಣುಮಕ್ಕಳು) ಸ್ನಾನ–ಪೂಜೆ ಮಾಡುವದು ಅವರ ರೂಢಿ. ಕೊರವಿ ಹೊತ್ತಾರೆ ಎದ್ದು ಲಿಂಗಪೂಜೆ ಮಾಡಹೇಳಿ

ಲಿಂಗಕ್ಕೆ ತೋರದಲೆ ಅಂಗಕ್ಕೆ ತೋರಿದರೆ
ತಿಂಗಳ ಹಿಂದಿನ ಹಳೆಹಂದಿ ನಾಯಿಗಳ
ಮಾಂಸವನು ತಿಂದಂತೆ ।ಸರ್ವಜ್ಞ।

ಎಂಬ ಸರ್ವಜ್ಞನ ಕಟ್ಟಪ್ಪಣೆಯನ್ನು ನೆನಪಿಗೆ ತಂದುಕೊಡುತ್ತಾಳೆ. ಬರಿ ನಿತ್ಯಲಿಂಗ ಪೂಜೆಯೊಂದೇ ಅಲ್ಲ ಜೊತೆಗೆ 'ಸ್ವಾಮಾರದೊಂದತ್ತ'ನ್ನೂ ಹೇಳುತ್ತಾಳೆ. ಒಕ್ಕಲಿಗರಿಗೆ ಸೋಮವಾರ ಪವಿತ್ರದಿನ. ಅವರನ್ನಷ್ಟೇ ಅಲ್ಲ, ಅವರ ಸಂಪತ್ತು–ಬಸವಣ್ಣನನ್ನೂ ಅಂದು ಶುಚಿಗೊಳಿಸುತ್ತಾರೆ. ಇಂದಿಗೂ ಪ್ರತಿಯೊಬ್ಬ ಒಕ್ಕಲಿಗ ಸೋಮವಾರದಂದು ಎತ್ತುಗಳನ್ನು ಹೂಡುವದಿಲ್ಲ. ಅಂಥ ಸೋಮವಾರದಂದು 'ವಂದತ್ತು' (ಅಂದರೆ ಒಪ್ಪತ್ತು, ಒಂದೇ ಹೊತ್ತು ಊಟ ಎಂದು ಅರ್ಥ) ಮಾಡಲು ಹೇಳುತ್ತಾಳೆ. ಹದಿನಾರು ಸೋಮವಾರವ್ರತವೊಂದು ಪ್ರಚಲಿತವಿದೆ. ಮಹಾರಾಷ್ಟ್ರದಲ್ಲಿ ಅದು 'ಸೋಳಾ ಸೋಮವಾರ' ವ್ರತವೆಂದು ಕರೆಯಲ್ಪಡುತ್ತದೆ. ಮರಾಠಿಭಾಷೆಯ ಪ್ರಭಾವವಿರುವ ನಮ್ಮ ಉತ್ತರಕರ್ನಾಟಕದ ಗಡಿಪ್ರದೇಶಗಳಲ್ಲೂ ಈ ವ್ರತ 'ಸೋಳಾ ಸೋಮವಾರ ವ್ರತ'ವೆಂದೇ ಪ್ರಚಲಿತದಲ್ಲಿದೆ.

ಕೇರ್ಯಾಗಿಂದ ಒಬ್ಬ ನಾರಿ ಓಡಿಬಂದ
ಗಟ್ಯಾಗಿ ಪಾದ ಹಿಡದಾಳ ।ರ। ಕೋ।
ಗಟ್ಯಾಗಿ ಪಾದ ಹಿಡದ ಕೇಳತಾಳ
ಪುತ್ರನ ಸಂತಾನ ಕೊಡ ನಮಗ ।ರ। ಕೋ।

ಅತ್ತಿ ಮಾವರಿಗ್ವಾಳಿ ಸುತ್ಯೋಳ ಬಳಗಕ್ವಾಳಿ
ಮತ್ತೆ ಪುರುಸರಿಗೆ ಮೊದಲ್ವಾಳಿ ।ರ। ಕೋ।
ಮತ್ತ ಪುರುಸರಿಗೆ ಮೊದಲ್ವಾಳಿ ಗಯ್ಯಾಳಿ
ಕತ್ತೆ ನಿನಗೆಲ್ಲಿ ಫಲಗೋಳ ।ರ। ಕೋ।

ಗರತಿ ಕಾಲ್ವಿಡಿದು ಕೇಳಿದರೆ ವ್ರತ-ನಿಯಮಗಳನ್ನು ಹೇಳಿಕೊಡಬಹುದು, ಗಯ್ಯಾಳಿ ಕೇಳಿದರೆ? ಗಯ್ಯಾಳಿತನದ ಡಿಸ್ಕ್ರಿಪ್ಷನ್‌ನ್ನು ಕೊರವಿಯ ಬಾಯಿಂದಲೇ ಕೇಳಬೇಕು. 'ಅತ್ತಿ ಮಾವರಿಗ್ವಾಳಿ' (ವಾಳಿ- ಬೇಡಾಗು) ಅತ್ತೆಮಾವರಿಗೆ ಬೇಡಾದವಳು, ಸುತ್ತೇಳು ಬಳಗಕ್ಕೆಲ್ಲ ಬೇಡಾದವಳು. ಅಷ್ಟಾದರೆ ಸಾಕಾಗಿತ್ತು. 'ಮತ್ತೆ ಪುರುಸರಿಗೆ ಮೊದಲ್ವಾಳಿ' 'ಗಂಡನಿಗೆ ಬೇಡಾದವಳು ಗುಂಡುಕಲ್ಲಿಗೂ ಬೇಡ'. ಇಂಥ ಗಯ್ಯಾಳಿಯನ್ನು 'ಕತ್ತೆ ನಿನಗೆಲ್ಲಿ ಫಲಗೋಳ' ಎಂದು ಬಯ್ದು ಸಾಗಹಾಕುತ್ತಾಳೆ.

ಬಾಳಿಯ ಬಲಕ್ಹಾಕಿ ಇಳ್ಯೇವ ಎಡಕ್ಹಾಕಿ
ನಾಗಸಂಪ್ಹಿಗಿ ನಡವ್ಹಾಯ್ದು ।ರ। ಕೋ।
ನಾಗರ ಸಂಪ್ಹಿಗಿ ನಡವ್ಹಾಯ್ದು ಕೊರವಂಜಿ
ಬಂದಾಳ ಗೌರವ್ನ ಅರಮನಿಗೆ ।ರ। ಕೋ।

ಬಂದಂತಾ ಕೊರವಂಜ್ಗೆ ಗಿಂಡಿಲುದಕಾವ ಕೊಟ್ಟ
ಜಂಬುಕಾನಗಳ ಹರವ್ಯಾರ ।ರ। ಕೋ।

ಎಡಬಲಗಳಲ್ಲಿ ಬಾಳೆ, ಎಲೆದೋಟಗಳನ್ನುಳಿದು ನಾಗ ಸಂಪಿಗೆಯ ವನಗಳಲ್ಲಿ ಹಾಯ್ದು ಅರಮನೆಗಳಿಗೆ ಬರುವದು ಜಾನಪದಕಥನಗಳಲ್ಲಿಯ ಗತಾನುಗತಿಕ ವರ್ಣನೆ. ಗೌರಿಯ ಅರಮನೆಯಲ್ಲಿ ಅವಳಿಗೆ ಗಿಂಡಿತುಂಬಿ ಕಾಲ್ತೊಳೆಯಲು ನೀರುಕೊಟ್ಟು ಜಮಖಾನ ಹಾಸಿ ಸ್ವಾಗತಿಸುತ್ತಾರೆ.

ದೇಸದೇಸ ತಿರಗಿ ಬ್ಯಾಸೊತ್ತ ಬಂದೇನ
ಕೂಸ ಕೈಬಿಟ್ಟ ಇಳಿವಲ್ದ ।ರ। ಕೋ।
ಕೂಸ ಕೈಬಿಟ್ಟ ಇಳಿವಲ್ದ ಕೂಸಿನ ಕೈಗೆ
ದಾಸಿಯ ಹರಕ ಕೊಡ ಗೌರಿ ।ರ। ಕೋ।

ದಿಕದಿಕ್ಕ ತಿರಗಿ ತಕ್ಕೆಟ್ಟ ಬಂದೇನ
ಕೂಸ ಕೈಬಿಟ್ಟ ಇಳಿವಲ್ದ ।ರ। ಕೋ।
ಕೂಸ ಕೈಬಿಟ್ಟ ಇಳಿವಲ್ದ ಕೂಸಿನ ಕೈಗೆ
ಮಂಡಿಗಿ ಮುರ್ಕ ಕೊಡ ಗೌರಿ ।ರ। ಕೋ।

ಗೌರಿ ರತ್ನಗಂಬಳಿ ಹಾಸಿ ಸ್ವಾಗತಿಸಿದರೂ ಇವಳು ಬಡಕೊರವಿ. ಅರಮನೆಗೆ ಬಂದಿದ್ದರೂ ಅದು ಅವಳಿಗೆ ಗೌಣ. ದೇಶದೇಶ (ದೇಶವೆಂದರೆ ಊರು. ಉತ್ತರ ಹಿಂದುಸ್ಥಾನದಲ್ಲೂ ಊರಿಗೆ ದೇಸವೆಂದೇ ಕರೆಯುತ್ತಾರೆ. 'ತುಮ್ಹಾರಾ ದೇಸ ಕೌನಸಾ' ಎಂದು ಕೇಳುವದುಂಟು) ದಿಕ್ಕುದಿಕ್ಕು ತಿರುಗಿ ತಕ್ಕೆಟ್ಟು ಬಂದಿದ್ದಾಳೆ. ಕೂಸು ಕೈಬಿಟ್ಟು ಕೆಳಗೆ ಇಳಿಯಲೊಲ್ಲದು. ಆ ಕೂಸಿಗೆ ದಾಸಿಯ ಹರಕನ್ನೂ ಮಂಡಿಗೆಯ ಮುರುಕನ್ನೂ ಬೇಡುತ್ತಾಳೆ. ಎಷ್ಟು ಸಹಜ, ಸರಳ ನಮ್ಮ ಜಾನಪದಕಾವ್ಯ ! ಬೇರೆ ಕವಿಗಳ ಕೈಯಲ್ಲಿ ಈ ಸಂದರ್ಭ ಸಿಕ್ಕಿದ್ದರೆ ಪುಟಪುಟಗಳಷ್ಟು ಭಕ್ಷ, ಭೋಜ್ಯಗಳ

ವರ್ಣನೆ ಬರುತ್ತಿತ್ತು. ಅರಮನೆಯಲ್ಲಿದ್ದರೂ ಅವರ ದಿನನಿತ್ಯದ ಊಟ ತಿಂಡಿಗಳೇ ಅವರೆದುರು ನಿಲ್ಲುವವು. ಇಂಥವರನ್ನು ಕುರಿತೇ ನೃಪತುಂಗ

"ಕುರಿತೋದದೆಯುಂ ಕಾವ್ಯ ಪ್ರಯೋಗ
ಪರಿಣತ ಮತಿಗಳ್ ... ..."

ಎಂದು ಅಭಿಮಾನದಿಂದ ಹಾಡಿ ಹೊಗಳಿರಬೇಕು.

ಅಂಗೈ ಗೆರಿ ನೋಡಿ ಮುಂಗೈ ಸುಳಿ ನೋಡಿ
ಗಂಗಾಯಿ ಎಂಬ ಸಿನ ಸಂವತಿ ।ರ। ಕೋ।
ಗಂಗಾಯಿ ಎಂಬ ಸಿನ ಸಂವತೆ ಗೌರಿ
ಈರಣ್ಣನೆಂಬ ಮಲಮಗ ।ರ। ಕೋ।

ಅಂಗೈ–ಮುಂಗೈಗಳಲ್ಲಿಯ ರೇಷೆ ನೋಡಿ ಕೊರವಂಜಿ ಭವಿಷ್ಯ ಹೇಳುತ್ತಾಳೆ. ಭವಿಷ್ಯ ಸಂತೋಷದಾಯಕವಿಲ್ಲ. ಗಂಗೆಯೆಂಬ ಸವತಿ, ಈರಣ್ಣನೆಂಬ ಮಲಮಗನೂ ಉಂಟು. ಮಲಮಗ ಈರಣ್ಣನೆಂಬುದಕ್ಕೆ ಆಕ್ಷೇಪವೆತ್ತಬಹುದು. ದಕ್ಷಬ್ರಹ್ಮನ ಯಜ್ಞಕುಂಡ ದಲ್ಲಿ ಹುಟ್ಟಿದ ವೀರಭದ್ರನೆ ಈರಣ್ಣ. ವೀರಭದ್ರ ಗೌರಿಯ ಮಲಮಗ ಹೇಗಾದಾನು! ಜನಪದ ಸಾಹಿತ್ಯದಲ್ಲಿ ಬರುವ ಕಥೆ, ಸಂಬಂಧಗಳೆಲ್ಲ ಅವರ ಸ್ವಂತ ಕಲ್ಪನೆಗಳು. ಹೇಗೆ? ಏಕೆ? ಎಂದು ಪ್ರಶ್ನಿಸಬಾರದು ಮಹಾಕಾವ್ಯಗಳನ್ನು ಎಲ್ಲಿ ಬೇಕಾದಲ್ಲಿ ಬೇಕಾದ ಹಾಗೆ ಬದಲಿಸಿಕೊಂಡಿಲ್ಲವೇ ನಮ್ಮ ಮಹಾಕವಿಗಳು? ನಮ್ಮ ಜಾನಪದ ಕವಿಗಳೂ (ಕವಯಿತ್ರಿಯರೂ) ಆ ಸ್ವಾತಂತ್ರ್ಯ ಪಡೆದಿದ್ದಾರೆ.

ಗಂಡನ್ನ ಹೇಳಂದ್ರ ಮಕ್ಕಳ್ನ ಹೇಳತಿ
ಸುಳ್ಳೇಳ ಕೊರವಿ ಪುರದಾಗ ।ರ। ಕೋ।

'ಹೋಗ್, ಗಂಡನ್ನ ಹೇಳಂದ್ರ ಮಕ್ಕಳ್ನ, ಸಂವತಿನ್ನ ಹೇಳತಿ. ನೀ ಹೆಂತಾ ಕೊರವಂಜಿ ಹೋಗ್ ಒಳೆ ಶಕುನಾ ಹೇಳಾಕಿ ನೀ' ಎಂಬುದು ಗೌರಿಯ ಆಕ್ಷೇಪಣೆ. ಪ್ರಸಿದ್ಧ ಭವಿಷ್ಯಕಾರತಿಯೆಂದು ಪಟ್ಟಣದಲ್ಲಿ ಹೆಸರುವಾಸಿಯಾದದ್ದು ಸುಮ್ಮನೆ ವ್ಯರ್ಥವೆಂದು ಗೌರಿಯ ಹೇಳಿಕೆ.

ಹಡದವ್ರ ಮನಿಯಾಗೆ ಹಾಲು ಬಾನ ಉಂಡ
ಹಿಂಗಿದ್ರ ಶಿವನು ಒಲಿಯಾನ ।ರ। ಕೋ।
ಹೆತ್ತವ್ರ ಮನಿಯಾಗ ತುಪ್ಪ ಬಾನಾ ಉಂಡ
ಮತ್ತಿದ್ರ ಶಿವನು ಒಲಿಯಾನ ।ರ। ಕೋ।

ವೇಷಧಾರಿ ಜಂಗಮನ ಆಕ್ಷೇಪಣೆ ಇಲ್ಲಿ ಕೊರಮಂಜಿಯ ಬಾಯಿಂದ ಸ್ಪಷ್ಟವಾಗಿದೆ. 'ಒಂದ ಭಾವದಲಿ ತಂದಿಲ್ಲ ಭಿಕ್ಷಾವ' ಎಂಬ ಗುಟ್ಟಿನ ಮಾತು ಮೇಲಿನ ನಾಲ್ಕು ಪಾದಗಳಲ್ಲಿ ವಿವರಿಸಲ್ಪಟ್ಟಿದೆ.

ಮನಸದಲ್ಲಿಯ ಮಾತನ್ನು ಅವರು ಹೇಳದೆ ತಿಳಿದುಕೊಳ್ಳುವದೇ ಶಕುನಕಾರರ (ಜ್ಯೋತಿಷ್ಯಕಾರರ) ಮೂಲಧರ್ಮ. ಹೆಸರಾಂತ ಶಕುನಕಾರತಿ ಕೊರವಿಗೆ, ಗೌರಿಗೆ ಯಾರು ಪತಿಯಾಗಬೇಕೆಂಬ ಬಯಕೆಯಿದೆಯೆಂಬುದು ಗೊತ್ತಿದೆ. ಗಮ್ಮನೆ ಹೆತ್ತವರ ಮನೆಯಲ್ಲಿ ನಿರಾಯಾಸ ಸುಗ್ರಾಸ ಭೋಜನ ಮಾಡುತ್ತ ಕುಳಿತರೆ ನಿಗಮಾಗಮಾತೀತ ನಾದ ಶಿವನು ದೊರಕುವದೆಂತು? 'ಮುದ್ದಾ ಗೌರಿ ಇದು ತರವಲ್ಲ' ಎಂದು ಜಂಗಮ ಉಸಿರಿದ್ದೂ ಇದನ್ನೇ.

ಸೊಗಲದ ಗುಡ್ಡಕ್ಹೋಗಿ ಸಾಯದ ಗಂಡನಪಡಿಯ
ಸೂಜಿಗಲ್ಲ ಮ್ಯಾಲ ತಪಸವ ।ರ। ಕೋ।
ಸೂಜಿಗಲ್ಲ ಮ್ಯಾಲ ತಪಸವಗೈದರ
ಹಿಂಗಾದರ ಶಿವ್ನ ಒಲಿದಾನ ।ರ। ಕೋ।

ಬೈಲಹೊಂಗಲದ ಹತ್ತಿರ ಸೊಗಲವೆಂಬ ಕ್ಷೇತ್ರವಿದೆ. ಪ್ರತಿವರ್ಷ ಫಾಲ್ಗುಣಮಾಸದ ಶುಕ್ಲಪಕ್ಷದಲ್ಲಿ ಸೊಗಲದ ಸೋಮಲಿಂಗನ ಜಾತ್ರೆ ನೆರವೇರುತ್ತದೆ. ಅಂದು ಶಿವ ಪಾರ್ವತಿಯರ ಮದುವೆ. ಅದೇ ಸಮಯಕ್ಕೆ ಸುತ್ತಲಿನ ಪ್ರದೇಶದ ಜನ ಆ ಮಂಗಳ ಮುಹೂರ್ತದಲ್ಲಿ ವಿವಾಹಗಳನ್ನು ನೆರವೇರಿಸುತ್ತಾರೆ. ಶಿವ-ಪಾರ್ವತಿಯರ ವಿವಾಹ ಮೂಹೂರ್ತದಲ್ಲಿ ಅವರ ಜತೆ ನಡೆದ ವಿವಾಹಗಳನ್ನು ಪುಣ್ಯಫಲವೆಂದು ಜನ ಭಾವಿಸುತ್ತಾರೆ.

ಅಲ್ಲಿ ಒಂದು ಕಲ್ಲೂ ಇದೆ. ಅದನ್ನೇ ಜನ ಸೂಜಿಗಲ್ಲೆಂದು ಕರೆಯುತ್ತಾರೆ. ಅದರ ಮೇಲೆ ನಿಂತು ಪಾರ್ವತಿ ತಪಸ್ಸು ಮಾಡಿ ಸಾಯದ ಗಂಡನನ್ನು ಪಡೆದಳೆಂದು ಐತಿಹ್ಯವಿದೆ. ಭೂಮಿ-ಆಕಾಶಗಳ ಸಂಬಂಧ ಬೆಳೆಸಿದ ಸೊಗಲದ ಕ್ಷೇತ್ರ ಬೆಳಗಾವಿ ಜಿಲ್ಲೆಯ ಪುಣ್ಯಕ್ಷೇತ್ರಗಳಲ್ಲೊಂದಾಗಿದೆ.

ಶಿವನನ್ನು ಒಲಿಸುವ ಪರಿಯನ್ನು ಕೊರವಂಜಿ ಹೇಳಿಕೊಡುತ್ತಾಳೆ. ಶಿವನನ್ನು ಒಲಿಸುವದು ಅರ್ಥ-ಕಾಮಗಳಿಂದ ಸಾಧ್ಯವಾಗದ ಮಾತು. ಭಾರತೀಯರಿಗೆ ಚತುರ್ವಿಧ ಪುರುಷಾರ್ಥಗಳಲ್ಲಿ ಕಾಮ-ಅರ್ಥಗಳ ಸ್ಥಾನ ಗೌಣ. ಧರ್ಮಮಾರ್ಗ ದಲ್ಲಿ ನಡೆದು ಮೋಕ್ಷ ಸಾಧಿಸುವದೇ ಬದುಕಿನ ಮೂಲ ಉದ್ದೇಶ. ಈ ತತ್ವವನ್ನೇ ಜಾನಪದ ಕವಿ (ಕವಯಿತ್ರಿ) ಕೊರವಂಜಿಯ ಬಾಯಿಂದ ಹೇಳಿಸಿದ್ದಾನೆ. ಅರಮನೆಯ ಸಿರಿಯಿಂದ ಮೈಗೆ ಆತ್ಮಸಾಕ್ಷಾತ್ಕಾರವಾಗದು ಆಗಬೇಕಾದರೆ ಮನೆ ಬಿಟ್ಟು ಬೆಟ್ಟಕ್ಕೆ ಹೋಗಬೇಕು. ಅಲ್ಲಿ ಸೂಜಿಗಲ್ಲಿನ ಮೇಲೆ ಒಂಟಿಗಾಲಿನ ಮೇಲೆ ನಿಂತು ಘೋರ ತಪಸ್ಸು ಮಾಡಬೇಕು. ಅರ್ಥವಿಷ್ಟೇ, ದೇಹದ ಮೇಲಿನ ಮೋಹವಳಿದಾಗ ಮಾತ್ರ ಶಿವಸಾಕ್ಷಾತ್ಕಾರ.

ಇಂದಿರ ಕೊರವಂಜಿ ಬಂದಿಗ್ಹೊನ್ನ ಕೊಡುವೆ
ಇಂದಿರೇ ನಮ್ಮ ಪುರದಾಗ ।ರ। ಕೋ।

ಗೌರಿಗೆ ಸಂಭ್ರಮವೇ ಸಂಭ್ರಮ. ಮಾಯೆಯ ಮುಸುಕಿನಿಂದ ಕರ್ತವ್ಯ ಮರೆತ ಗೌರಿಗೆ ಕೊರವಂಜಿ ಬೆಳಕು ತೋರುತ್ತಾಳೆ. ಬಾಗಿಲಿಗೆ ಭಾಗ್ಯವೆಂಬಂತೆ ಬಂದ ಕೊರವಿಯನ್ನು ತಕ್ಷಣ ಕಳಿಸಲು ಮನಸಿಲ್ಲ. ಅವಳನ್ನು ಒಂದುದಿನ ಪಟ್ಟಣದಲ್ಲಿಟ್ಟುಕೊಂಡು ಸತ್ಕರಿಸಿ ಬಿಂದಿಗೆ ತುಂಬಾ ಹೊನ್ನು ಕೊಟ್ಟು ಕಳಿಸಬಯಸುತ್ತಾಳೆ ಗೌರಿ.

ಇಂದ ಇದ್ದರ ನಮ್ಮ ಬಿಂದು ದೂರಾದಾವ
ಬಿಂದಿಗೊಲ್ಲವ ನಾನು ಕೊರವ ।ರ। ಕೋ।
ಬಿಂದಿಗೊಲ್ಲವ ನಾನು ಕೊರವ ಕೇಳಿದರ
ಕಾದ ಮಳಲಾಗ ನಿಲಿಸ್ಯಾನ ।ರ। ಕೋ।

ಗೌರಿ ರಾಜಕುಮಾರಿಯಾಗಿ ಅಪ್ಪಣೆಮಾಡಿದರೂ ಕೊರವಂಜಿಯ ಉತ್ತರ ಕೇಳಿರಿ. ಅದೊಂದು ದಿನ ಅವಳು ತನ್ನ ಮನೆಯಿಂದ ಹೊರಗುಳಿದರೆ "ಬಿಂದು ದೂರಾದಾವ" ಎಂಬಲ್ಲಿ ತಾನು ತನ್ನ ಪತಿಯಿಂದ ದೂರಾದೆನೆಂಬ ಧ್ವನಿ ಅಡಗಿದೆ. 'ಬಿಂದು' ಎಂದರೆ ಬೊಟ್ಟು, ಕುಂಕುಮವೆಂದು ಅರ್ಥ. ಗಂಡನಿಂದ ದೂರಾದವಳು ಕುಂಕುಮವಿಡುವ ಅಧಿಕಾರ ಕಳೆದುಕೊಳ್ಳುತ್ತಾಳೆಂಬ ಸೂಚನೆಯಿದೆ. ಕೊರವಿಯಾದರೇನು? ಊರೂರು ಅಲೆದು ಭವಿಷ್ಯನುಡಿದರೇನು ? ನೆಲವು ಗಿಲಿಗಿಂಚಿ ಮಾರಿ ಹೊಟ್ಟೆಹೊರೆದರೇನು? ಸಂಜೆಗೆ ಮನೆ ಸೇರಲೇ ಬೇಕು. ಇಲ್ಲಿರುವ ಸಾಮಾಜಿಕಪ್ರಜ್ಞೆಯನ್ನು ನೋಡಬೇಕು. ರಾಣಿ ಅಪ್ಪಣೆ ಮಾಡಿದರೆ ಕೊರವಿ ನಿಲ್ಲಬೇಕಿಲ್ಲ. ಅರಸಿಯಾದರೂ ಕೊರವಿಯಾದರೂ ಎಲ್ಲರಿಗೂ ಒಂದೇ ನಿಯಮ, ಕಟ್ಟಳೆ. ಹೆಣ್ಣುಮಕ್ಕಳು ರಾತ್ರಿ ಎಲ್ಲಿ ಬೇಕಲ್ಲಿ ವಸತಿ ಮಾಡುವದು ನಿಷೇಧ. ಆ ಕಟ್ಟಪ್ಪಣೆ ಮೀರಿ ನಡೆದರೆ ಅವರಿಗೆಂಥ ಶಿಕ್ಷೆ! ಕೊರವಿಯನ್ನೇ ಕೇಳಿ, 'ಕಾದ ಮಳಲಾಗ ನಿಲಿಸ್ಯಾನ'. ತಪ್ಪುಮಾಡಿದವರಿಗೆ ಕಾಯ್ದ ಮಳಲಿನಲ್ಲಿ ನಿಲ್ಲುವಂಥ ಕಠಿಣ ಶಿಕ್ಷೆ ಕೊಡುತಿದ್ದರೆಂಬುದನ್ನು ನೋಡಬೇಕಿಲ್ಲಿ.

ನಾಳಿರ ಕೊರವಂಜಿ ಜಾಳಿಗ್ಹೊನ್ನ ಕೊಡುವೆ
ನಾಳಿರ ನಮ್ಮ ಪುರದಾಗ ।ರ। ಕೋ।
ನಾಳೆ ಇದ್ದರ ನಮ್ಮ ನಾಡ ದೂರಾದಾವ
ನಾಲ್ವತ್ತುಮಂದಿ ಸಂವತ್ಸಾರ ।ರ। ಕೋ।
ನಾಲ್ವತ್ತುಮಂದಿ ಸಂವತ್ಸಾರಾಗೆಲ್ಲಾ
ಹೇಳುವ್ಹಾಕಿ ನಾ ಹಿರಿಯಾಕಿ ।ರ। ಕೋ।

ಆದರೂ ಗೌರಿಗೆ ಅಸಮಾಧಾನ. ಹೇಗಾದರೂ ಮಾಡಿ ಅವಳನ್ನು ಒಂದುದಿನ ತನ್ನ ಹತ್ತಿರ ನಿಲ್ಲಿಸಿಕೊಳ್ಳಬೇಕೆಂಬ ಆಸೆ. ಇಂದು ಹೋಗಿ ನಾಳೆ ಬರಬಹುದಲ್ಲಾ! ನಾಳೆ ಬಂದು ಅವಳ ಬಳಿ ಇದ್ದು ಜಾಳಿಗೆ ತುಂಬಾ ಹೊನ್ನು ಪಡೆದುಕೊಂಡು ಹೋಗಲು ಹೇಳುತ್ತಾಳೆ. ಆ ಕೊರವಿಯೋ ಒಂದೇ ಮಾತಿನವಳು. 'ನಾಳೆ ಇದ್ದರ ನಮ್ಮ ನಾಡ ದೂರಾದಾವ'. ಕಾದ ಮಳಲಿನಲ್ಲಿ ನಿಲ್ಲುವ ಕಠಿಣ ಶಿಕ್ಷೆಯಷ್ಟೇ ಅಲ್ಲ, ಅವಳ ಗಂಡ

ಅವಳನ್ನು ಕೇಳಿದರೆ ಗಡಿಪಾರು ಮಾಡಿಯಾನೆಂದು ಹೇಳುತ್ತಾಳೆ. ಗಂಡನ ಆಜ್ಞೆಯಷ್ಟೇ ಅಲ್ಲ ಅವಳಿಗಿರುವ ಇನ್ನೊಂದು ಅಡಚಣೆಯೂ ಇದೆ. ಮನೆಯಲ್ಲಿ ನಾಲ್ವತ್ತುಜನ ಸವತಿಯರು. ಅವರ ಮೇಲ್ವಿಚಾರಕಳು ಇವಳು. ಗಂಡ ಕಠೋರನೆಂಬ ವ್ಯಥೆಯಿಲ್ಲ. ನಾಲ್ವತ್ತುಜನ ಸವತಿಯರೆಂಬ ಮತ್ಸರವಿಲ್ಲ. 'ನಾಲ್ವತ್ತಮಂದಿ ಸಂಪತ್ತ್ಯಾರಿಗೆಲ್ಲಾ ಹೇಳುವಾಕಿ ನಾ ಹಿರಿಯಾಕಿ' ಎಂಬ ಸಂತೃಪ್ತಿ ಅವಳಿಗೆ. ನಾಲ್ವತ್ತು ಮಂದಿಯಲ್ಲಿ ಪಟ್ಟಮಹಿಷಿ ಅವಳು. ಬಹುಪತ್ನಿತ್ವಪದ್ಧತಿಯಲ್ಲೂ ಅವಳನ್ನು ನೆಮ್ಮದಿಯಿಂದ ಬಾಳಗೊಟ್ಟಿದ್ದೆಂದರೆ ಆ ಸಮಾಧಾನ.

ಏನವ್ವ ಕೊರವಂಜಿ ನೀ ಚೆಲಿವಿರಿವಿ
ಕೊರವನ ಚೆಲಿವಿಕಿ ಹೇಳೆಮಗ ।ರ। ಕೋ।

ತನ್ನ ವೈಯಕ್ತಿಕ ವಿಷಯಗಳೆಲ್ಲ ಮುಗಿದ ಮೇಲೆ ಕೊರವಿಯ ಚೆಲಿವಿಕೆಯ ಮೇಲೆ ಗೌರಿಯ ದೃಷ್ಟಿ ಹೊರಳುತ್ತದೆ. ಅಂಥ ಕೊರವಿಯ ಕೊರವ ಹೇಗಿರಬೇಕೆಂದು ತಿಳಿದುಕೊಳ್ಳುವ ಉತ್ಸುಕತೆ ಗೌರಿಗೆ. ಶಿವಪತ್ನಿಯಾಗಬೇಕಾದವಳಾದರೂ ಹೆಂಗಸು ಸಹಜ ಕಿತಾಪತಿ ಎಲ್ಲಿ ಹೋಗಬೇಕು! ಗೌರಿಯಿಲ್ಲಿ ಆದಿಶಕ್ತಿಯಾದರೂ ಶ್ರೀಸಾಮಾನ್ಯ ವಾಚಾಳಿ ಹೆಂಗಸಾಗಿದ್ದಾಳೆ.

ಕುಂಡ್ಯಾಗ ಲಂಗೋಟಿ ಎದಿಮ್ಯಾಗ ಚಿಂದಾಟಿ
ಉಡದಾರದಾಗ ಕುಡಗೋಲ ।ರ। ಕೋ।
ಉಡದಾರದಾಗ ಕುಡಗೋಲ ಇಟಗೊಂಡ
ಊರ್ಸುತ್ತ ಬೇಲಿ ಕೊಯ್ವೊನ ।ರ। ಕೋ।

ಉತ್ಸಾಹದಿಂದ ಕೊರವನ ಚೆಲ್ವಿಕೆ ಕೇಳಿದ ಗೌರಿಗೆ ನಿರಾಸೆಯಾಗುವಂತೆ ಕೊರವಿ ಉತ್ತರಿಸುತ್ತಾಳೆ. ಆದಿವಾಸಿ ಕೊರವನ ಸಹಜವರ್ಣನೆ ಇಲ್ಲಿದೆ. ಲಂಗೋಟಿ ಧರಿಸಿ, ಬರಿಮೈ, ಉಡದಾರದಲ್ಲಿ ಹರಿತವಾದ ಕುಡಗೋಲು ಸಿಕ್ಕಿಸಿಕೊಂಡು, ಊರ ಸುತ್ತಲೂ ನೆಟ್ಟ ಬೇಲಿ ಕೊಯ್ದು ಉರುವಲಿಕ್ಕೆಂದು ಮುಳ್ಳುಕಟ್ಟಿಗೆ ಆರಿಸುತ್ತಿರುವ ಕೊರವ ನಾಗರಿಕತೆಯ ಗಾಳಿ ಸೋಂಕದ ಕೊರವರ ಗುಂಪಿನ ಪ್ರತಿನಿಧಿಯಾಗಿದ್ದಾನೆ.

ವೇಷಧಾರಿ ಶಿವನ ಭಿಕ್ಷಾಟನೆಯ ಗಂಭೀರ ಸನ್ನಿವೇಶದಿಂದ ಆರಂಭವಾದ ಕಥನ ಕವನ ಕೊರವಿಯ ಹಾಸ್ಯದಲ್ಲಿ ಮುಕ್ತಾಯವಾಗುತ್ತದೆ.

* *

" ಸೂಜಿಗಲ್ಲ ನ್ಯಾಲ ತಪಸವ "

ತಾನು೬ ಗೌರವ್ವ ಅಂಗಳಕಲ್ಲ ಮೆಟ್ಟಿ
ಗುರುಧರ್ಮ ಕೋರ್ಯ್ಯಾನ್ನ ಭಿಕ್ಷಾಂದ ।ರ। ಕೋ।
ಭಿಕ್ಷಾ ಅಂದ ಸಬ್ದಾ ಕೇಳ್ಯಾಳ ಗೌರವ್ವ
ತೂಗೂ ಮಂಚಾ ಬಿಟ್ಟ ಇಳದಾಳ ।ರ। ಕೋ।

ತೂಗು ಮಂಚಾ ಬಿಟ್ಟ ಇಳದಾಳ ಗೌರವ್ವ
ಕೊಚ್ಚಕ್ಕಿ ಬಾನಾ ಎಡಿಮಾಡೆ ।ರ। ಕೋ।
ಕೊಚ್ಚಕ್ಕಿ ಬಾನಾ ಎಡಿಮಾಡಿ ಅದಕಿನ್ನ
ಮುತ್ತಿನ ವಸ್ತ್ರಾ ಮಡಗ್ಯಾಳ ।ರ। ಕೋ।
ಮುತ್ತಿನ ವಸ್ತ್ರಾ ಮಡಗ್ಯಾಳ ಗೌರವ್ವ
ತಂದಾಳ ಶಿಂವನ ಇದರಿಗೆ ।ರ। ಕೋ।
ಒಂದ ಭಾಂವದಲಿ ತಂದಿಲ್ಲ ಭಿಕ್ಷಾವ
ಹಿಂದಕ ನಾರ್ಯಿ ಹೊಳ್ಳಂದ ।ರ। ಕೋ।
ಒಂದ ಭಾಂವದಲಿ ತಂದೇನ ಭಿಕ್ಷಾವ
ನಂದೀಗೀಶ್ವರ ಕೈಕೊಳರಿ ।ರ। ಕೋ।
ಮಜ್ಜಿಗ್ಹೋಗಿ ನಾನು ಇದ್ದದ್ದ ಹೇಳುವೆ
ಮುದ್ದಾ ಗೌರಿ ಇದು ತರವೇನ ? ।ರ। ಕೋ।
ಬಾನಕ್ಹೋಗಿ ನಾನು ಆದದ್ದ ಹೇಳುವೆ
ನಾರಿ ಗೌರಿ ಇದು ತರವೇನ ? ।ರ। ಕೋ।
ನಾರದ ಬುಟ್ಬ್ಯಾದ ಬಸವಯ್ಯ ಕೂಸಾದ
ನಂದಿಗೀಶ್ವರ ಕೊರವ್ಯಾದ ।ರ। ಕೋ।
ಸ್ವಾಮಾರದ ದಿನಾ ಹೊಂಟಾಳ ಕೊರವಂಜಿ
ಸ್ವಾಮಿಗಿ ಪಂಜಾ ಹಿಡದ್ಹಂಗ ।ರ। ಕೋ।
ಸುಕ್ರವಾರದ ದಿನಾ ಹೊಂಟಾಳ ಕೊರವಂಜಿ
ಸೂರ್ಯಾಗ ಪಂಜಾ ಹಿಡದ್ಹಂಗ ।ರ। ಕೋ।
ಓಣಿಓಣಿಗುಂಟ ಹ್ವಾದಾಳ ಕೊರವಂಜಿ
ಓಣ್ಯಾನ್ನ ನಾಯಿ ಬಗಳ್ಯಾವ ।ರ। ಕೋ।
ಕೇರಿಕೇರಿಗುಂಟ ಹ್ವಾದಾಳ ಕೊರವಂಜಿ
ಕೇರ್ಯಾನ್ನ ನಾಯಿ ಬಗಳ್ಯಾವ ।ರ। ಕೋ।
ಒಕ್ಕಲಗೇರ್ಯಾಗ ಹೊಕ್ಕಾಳ ಕೊರವಂಜಿ
ಹಾಲಿನ ತೆಕ್ಕ ಹೊಸ ನೆಲುವ ।ರ। ಕೋ।
ಹಾಲಿನ ತೆಕ್ಕ ಹೊಸ ನೆಲುವ ನಿನ
ಬಾಲನ ತೆಕ್ಕ ಗಿಲಿಗಿಂಚಿ ।ರ। ಕೋ।
ಗೌರವ್ನ ಮನಿ ದಾಸ್ಯಾರು ಸೀರಿಗಿ ಹ್ವಾದಾರ
ಅಲ್ಲಿ ಕೊರವಿಯು ಕಂಡಾರ ।ರ। ಕೋ।
ಬಾರವ್ವಾ ಕೊರವಂಜಿ ನಮ್ಮವ್ವ ಕರಿತಾಳ
ವರಕೊಟ್ಟ ನಮ್ಮ ಕಳವ್ಯಾಳ ।ರ। ಕೋ।

ಓಣ್ಯಾಗಿಂದ ಒಬ್ಬ ಕೊರವಿ ಓಡಿ ಬಂದ
ಗಟ್ಟ್ಯಾಗಿ ಪಾದ ಹಿಡದಾಳ ।ರ। ಕೋ।
ಗಟ್ಟ್ಯಾಗಿ ಪಾದ ಹಿಡದ ಕೇಳತಾಳ
ಮಕ್ಕಳ ಸಂತಾನ ಮದಲಿಲ್ಲ ।ರ। ಕೋ।
ಮುಂಜೇಲಿ ಏಳುತ ಲಿಂಗಪೂಜೆಯ ಮಾಡಿ
ಸ್ವಾಮಾರದೊಂದತ್ತ ಹಿಡಿಯವ್ವ ।ರ। ಕೋ।
ಸ್ವಾಮಾರದೊಂದತ್ತ ಹಿಡಿಯವ್ವ ನಿನಗಿನ್ನ
ಕಂದರ ಬಾಳ್ಯಾರ ಕಡಿತಾನ್ಯ ।ರ। ಕೋ।
ಕೇರ್ಯಾಗಿಂದ ಒಬ್ಬ ನಾರಿ ಓಡಿಬಂದ
ಗಟ್ಟ್ಯಾಗಿ ಪಾದ ಹಿಡದಾಳ ।ರ। ಕೋ।
ಗಟ್ಟ್ಯಾಗಿ ಪಾದ ಹಿಡದ ಕೇಳತಾಳ
ಪುತ್ರನ ಸಂತಾನ ಕೊಡ ನಮಗ ।ರ। ಕೋ।
ಅತ್ತಿ ಮಾವಂಗ್ವಾಳಿ ಸುತ್ತ್ಯೋಳ ಬಳಗ್ವಾಳಿ
ಮತ್ತೆ ಪುರುಷರಿಗೆ ಮೊದಲ್ವಾಳಿ ।ರ। ಕೋ।
ಮತ್ತೆ ಪುರುಷರಿಗೆ ಮೊದಲ್ವಾಳಿ ಗಯ್ಯಾಳಿ
ಕತ್ತಿ ನಿನಗೆಲ್ಲಿ ಫಲಗೋಳ ।ರ। ಕೋ।
ಬಾಳಿಯ ಬಲಕ್ಹಾಕಿ ಇಳ್ಳೇವ ಎಡಕ್ಹಾಕಿ
ನಾಗರಸಂಪಿಗಿ ನಡವ್ಹಾಯ್ದು ।ರ। ಕೋ।
ನಾಗರಸಂಪಿಗಿ ನಡವ್ಹಾಯ್ದು ಕೊರವಂಜಿ
ಬಂದಾಳ ಗೌರವ್ನ ಅರಮನಿಗೆ ।ರ। ಕೋ।
ಬಂದಂತಾ ಕೊರವಂಜ್ಗಿ ಗಿಂಡಿಲುದಕವ ಕೊಟ್ಟ
ಜಂಬುಖಾನಗಳ ಹರವ್ಯಾರ ।ರ। ಕೋ।
ದೇಸದೇಸ ತಿರ್ಗಿ ಬ್ಯಾಸತ್ತ ಬಂದೇನ
ಕೂಸ ಕೈಬಿಟ್ಟ ಇಳಿವಲ್ದ ।ರ। ಕೋ
ಕೂಸ ಕೈಬಿಟ್ಟ ಇಳಿವಲ್ದ ಕೂಸಿನ ಕೈಗೆ
ದಾಸಿಯ ಹರಕ ಕೊಡ ಗೌರಿ ।ರ। ಕೋ।
ದಿಕ್ಕದಿಕ್ಕ ತಿರ್ಗಿ ತಕ್ಕೆಟ್ಟ ಬಂದೇನ
ಕೂಸ ಕೈ ಬಿಟ್ಟ ಇಳಿವಲ್ದ ।ರ। ಕೊ।
ಕೂಸ ಕೈಬಿಟ್ಟ ಇಳಿವಲ್ದ ಕೂಸಿನ ಕೈಗೆ
ಮಂಡಿಗಿ ಮುರಕ ಕೊಡ ಗೌರಿ ।ರ। ಕೋ।
ಅಂಗೈಗೆರಿ ನೋಡಿ ಮುಂಗೈಸುಳಿ ನೋಡಿ
ಗಂಗಾಯಿ ಎಂಬ ನಿನ ಸಂವತಿ ।ರ। ಕೋ।

ಗಂಗಾಯಿ ಎಂಬ ನಿನ ಸಂವತಿ ಗೌರಿ
ಈರಣ್ಣನೆಂಬ ಮಲಮಗ ।ರ। ಕೋ।
ಗಂಡನ್ನ ಹೇಳಂದ್ರ ಮಕ್ಕಳ್ನ ಹೇಳತಿ
ಸುಳ್ಳೇಳ ಗೌರಿ ಪುರದಾಗ ।ರ। ಕೋ।
ಹಡದವ್ರ ಮನಿಯಾಗ ಹಾಲು ಬಾನಾ ಉಂಡ
ಹಿಂಗಿದ್ರ ಶಿಂವನು ಒಲಿಯಾನ ।ರ। ಕೋ।
ಹೆತ್ತವ್ರ ಮನಿಯಾಗ ತುಪ್ಪ ಬಾನಾ ಉಂಡ
ಮತ್ತಿದ್ರ ಶಿಂವನು ಒಲಿಯಾನ ।ರ। ಕೋ।
ಸೊಗಲದ ಗುಡ್ಡಕ್ಹೋಗಿ ಸಾಯದ ಗಂಡನ ಪಡಿಯ
ಸೂಜಿಗಲ್ಲ ಮ್ಯಾಲ ತಪಸವ ।ರ। ಕೋ।
ಸೂಜಿಗಲ್ಲ ಮ್ಯಾಲ ತಪಸವ ಮಾಡಿದರ
ಹಿಂಗಾದರ ಶಿಂವನು ಒಲಿದಾನ ।ರ। ಕೋ।
ಇಂದಿರ ಕೊರವಂಜಿ ಬಿಂದಿಗ್ಹೊನ್ನ ಕೊಡುವೆ
ಇಂದಿರೇ ನಮ್ಮ ಪುರದಾಗ ।ರ। ಕೋ।
ಇಂದ ಇದ್ದ್ಯರ ನಮ್ಮ ಬಿಂದು ದೂರಾದಾವ
ಬಿಂದಿಗೊಲ್ಲವ ನಮ ಕೊರವ ।ರ। ಕೋ।
ಬಿಂದಿಗೊಲ್ಲವ ನಮ ಕೊರವ ಕೇಳಿದರ
ಕಾದ ಮಳಲಾಗ ನಿಲಸ್ಯಾನ ।ರ। ಕೋ।
ನಾಳಿರ ಕೊರವಂಜಿ ಜ್ಯಾಳಿಗ್ಹೊನ್ನ ಕೊಡುವೆ
ನಾಳ್ಯಿರೇ ನಮ್ಮ ಪುರದಾಗ ।ರ। ಕೋ।
ನಾಳೆ ಇದ್ದ್ಯರ ನಮ್ಮ ನಾಡ ದೂರಾದಾವ
ನಾಲ್ವತ್ತಮಂದಿ ಸಂವತ್ಯಾರ ।ರ। ಕೋ।
ನಾಲ್ವತ್ತಮಂದಿ ಸಂವತ್ಯಾರಿಗೆಲ್ಲಾ
ಹೇಳುವಾಕಿ ನಾ ಹಿರಿಯಾಕಿ ।ರ। ಕೋ।
ಏನವ್ವ ಕೊರವಂಜಿ ನೀ ಇಷ್ಟ ಚೆಲುವಿರಿವಿ
ಕೊರವನ ಚೆಲುವಿಕಿ ಹೇಳೆಮಗ ।ರ। ಕೋ।
ಕುಂಡ್ಯಾಗ ಲಂಗೋಟಿ ಎದಿಮ್ಯಾಲ ಚಿಂದಾಟಿ
ಉಡದಾರದಾಗ ಕುಡಗೋಲ ।ರ। ಕೋ।
ಉಡದಾರದಾಗ ಕುಡಗೋಲ ಇಟಗೊಂಡ
ಊರಸುತ್ತ ಬೇಲಿ ಕೊಯ್ಯೂನ ।ರ। ಕೋ।

ರೇವಣಸಿದ್ಧನನ್ನು ಕುರಿತ ಶಿರವಾಳ ಶಾಸನ

● ಎಚ್. ಸಿ. ಗೋಗಿ

ತುಂಗಭದ್ರೆಯ ದಕ್ಷಿಣಕ್ಕಿರುವ ಕರ್ನಾಟಕದ ಎಲ್ಲ ಭಾಗಗಳಲ್ಲಿ ಸಂಚರಿಸಿ, ತಮ್ಮ ದೃಷ್ಟಿಗೆ ಬಿದ್ದ ಎಲ್ಲ ಶಾಸನಗಳನ್ನು ಶೋಧಿಸಿ ರೈಸ್‌ರು 'ಎಪಿಗ್ರಾಫಿಯ ಕರ್ನಾಟಿಕ' ಸಂಪುಟಗಳನ್ನು ಪ್ರಕಟಿಸಿದರು. ಆದರೆ ಉತ್ತರಭಾರತದ ಯಾವುದೇ ರೀತಿಯ ಎಂದರೆ ರಾಜಕೀಯ, ಧಾರ್ಮಿಕ ಒತ್ತಡ ಪ್ರಭಾವಗಳಿಗೆ ಮೈಯೊಡ್ಡಿನಿಂತಿರುವ ಹಾಗೂ ಕರ್ನಾಟಕದ ಪ್ರಮುಖ ರಾಜಮನೆತನಗಳ ರಾಜಧಾನಿಗಳನ್ನೊಳಗೊಂಡಿರುವ ತುಂಗಭದ್ರೆಯ ಉತ್ತರಭಾಗದಲ್ಲಿ ಶಾಸನಗಳ ಪರಿರಕ್ಷಣೆ, ಪರಿವೀಕ್ಷಣೆ, ಪ್ರಕಟನೆ, ಸಂಶೋಧನೆ, ಚಿಂತನೆಯ ಕಾರ್ಯಗಳು ನಡೆಯದೆ, ಕಾಲನ ಪ್ರಕೋಪ – ಜನತೆಯ ಮೂಢನಂಬಿಕೆಗಳಿಗೆ ಸಹಸ್ರಾರು ಶಾಸನಗಳು ತುತ್ತಾಗಿವೆ; ತುತ್ತಾಗುತ್ತಲಿವೆ.

ಈ ಭಾಗದಲ್ಲಿ ಸಮಗ್ರತೆಯನ್ನು ಮೈಗೂಡಿಸಿಕೊಂಡ ರೈಸ್‌ರಂತಹವರು ಹುಟ್ಟದೇ ಇದ್ದರೂ, ರೈಸ್‌ರಿಗಿಂತ ಮೊದಲು ಗಮನಾರ್ಹವಾದ ಕಾರ್ಯಮಾಡಿದ ವ್ಯಕ್ತಿ ವಾಲ್ಟರ್ ಇಲಿಯಟ್. ಕನ್ನಡ ಶಾಸನಾಧ್ಯಯನದ ಇತಿಹಾಸದಲ್ಲಿ "ಸರ್ ವಾಲ್ಟರ್ ಇಲಿಯಟ್ ಯುಗ : ೧೮೩೭ – ೧೮೭೦"[೧] ಎಂದು ಕರೆಯಿಸಿಕೊಂಡು ಯುಗಪುರುಷರಾಗುವಷ್ಟರ ಮಟ್ಟಿಗಿನ ಸಾಧನೆ ಅವರದಾಗಿದೆ. ಆಡಳಿತರಂಗದಲ್ಲಿ ಕನ್ನಡದ ಮಾಧ್ಯಮ, ಕನ್ನಡದಲ್ಲಿ ಶಿಕ್ಷಣ, ಪಠ್ಯಪುಸ್ತಕ ರಚನೆ, ಶಾಸನಗಳ ಸಂಗ್ರಹ. ಕೃತಿಸಂಪಾದನೆ, ಸಂಶೋಧನಾತ್ಮಕ ಲೇಖನಗಳು[೨] —ಈ ಎಲ್ಲ ಸ್ತರಗಳಲ್ಲಿ ದುಡಿದ ಇಲಿಯಟ್‌ರ ಸೇವಾಭಾವವು ಕನ್ನಡಿಗರು ಯಾವ ಕಾಲಕ್ಕೂ ಮೆಚ್ಚುವಂತಹದು, ಸ್ಮರಿಸುವಂಥಹದು. ಮುಂಚಿನವರು ಕೇವಲ ಶಾಸನಸಂಗ್ರಹ ಮಾಡಿದರೆ, ಇವರು ಆಧುನಿಕದೃಷ್ಟಿಕೋನದಿಂದ ಅವುಗಳ ಸತ್ಯಾಸತ್ಯತೆಯನ್ನು ಒರೆಗಲ್ಲಿಗೆ ಹಚ್ಚಿ ಪರಿಷ್ಕರಿಸುವ. ನಿಬಂಧ ಬರೆಯುವ ಕಾರ್ಯವನ್ನು ಕೈಕೊಂಡರು. ಇವರು ಮುಂಬೈ ಕರ್ನಾಟಕ, ನಿಜಾಂ ಕರ್ನಾಟಕದ ಪಶ್ಚಿಮಭಾಗ, ಹಳೆಯ ಮೈಸೂರು ಪ್ರಾಂತದ ಉತ್ತರಭಾಗದ ಸುಮಾರು ೧೩೦೦ ಶಿಲಾಶಾಸನ ಹಾಗೂ ತಾಮ್ರಶಾಸನಗಳನ್ನು ಸಂಗ್ರಹಿಸಿದರು. ಇವುಗಳಲ್ಲಿ ೫೯೫ ಶಾಸನಗಳನ್ನು ಆರಿಸಿಕೊಂಡು ಸಿದ್ಧಪಡಿಸಿದ

೧ ಶಾಸನವ್ಯಾಸಂಗ ಸಂ. ೧ ಪು. ೧೩೧.

೨ ಹೊಸಗನ್ನಡದ ಅರುಣೋದಯ– ಶ್ರೀನಿವಾಸ ಹಾವನೂರ.

"Karnatak Desh Inscriptions" ಎಂಬ ಸಂಪುಟ ಅಪೂರ್ವವಾದುದು. ಇದರ ೪ ಹಸ್ತಪ್ರತಿಗಳನ್ನು ಕುರಿತು ಫ್ಲೀಟ್‌ರು "ಎಡಿನ್‌ಬರ್ಗ್ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಒಂದು ಪ್ರತಿ ನನ್ನ ಕೈಯಲ್ಲಿದೆ. ಇನ್ನೊಂದು ಪ್ರತಿ ಲಂಡನ್ನಿನ ರಾಯಲ್ ಏಸಿಯಾಟಿಕ್ ಸೊಸೈಟಿಯಲ್ಲಿದೆ. ಮಿಕ್ಕೆರಡು ಎಲ್ಲಿವೆಯೋ ನನಗೆ ಗೊತ್ತಿಲ್ಲ"[೩] ಎಂದಿದ್ದಾರೆ. ಲಂಡನ್ನಿನ ರಾಯಲ್ ಏಸಿಯಾಟಿಕ್ ಸೊಸೈಟಿಯಲ್ಲಿರುವ "Karnatak Desh Inscriptions" ಹಸ್ತಪ್ರತಿಯನ್ನು ಅಭ್ಯಸಿಸಿ ಡಾ. ಶಿ. ಚೆ. ನಂದೀಮಠರು ಅದರಲ್ಲಿದ್ದ ಶಿರವಾಳ ಶಾಸನವನ್ನು ಹಿಂದೊಮ್ಮೆ "ಚೌಡದಾನಪುರದ ಶಿಲಾಶಾಸನಗಳು" ಎಂಬ ತಲೆಬರೆಹದಡಿಯಲ್ಲಿ ಪ್ರಕಟಿಸಿದ್ದರು.[೪] ಅವರಿತ್ತ ಪಾಠದಲ್ಲಿ ಅವರೇ ಹೇಳಿಕೊಂಡಿರುವಂತೆ ದೋಷಗಳು ಹೇರಳವಾಗಿದ್ದುದರಿಂದ, ಪದ್ಯಭಾಗಗಳನ್ನು ಛಂದಸ್ಸಿಗನುಗುಣವಾಗಿ ಮಿಂಗಡಿಸಿ ಪ್ರಕಟಿಸಿದ್ದರಿಂದ, ಮೇಲಾಗಿ ಶಾಸನದ ಹಿಂದಿನ ಹಾಗೂ ಮುಂದಿನ ಭಾಗಗಳನ್ನು ಬಿಟ್ಟು ೨೩ ರಿಂದ ೩೭ ನೆಯ ಸಾಲುಗಳ ಪಾಠವನ್ನು ಮಾತ್ರ ಪ್ರಕಟಿಸಿದುದರಿಂದ ಇಡೀ ಶಾಸನವನ್ನು ಬೆಳಕಿಗೆತರುವದು ತೀರ ಅವಶ್ಯವೆನಿಸಿದ್ದಿತು. ಇಲ್ಲಿಯ ಸಿದ್ಧರೇವಣ ಎಂಬ ಹೆಸರು ಈ ಶಾಸನವನ್ನು ಇಡಿಯಾಗಿ ಪ್ರಕಟಿಸಲು ಇನ್ನೂ ಪ್ರಚೋದನೆ ಕೊಡುತ್ತಲಿದ್ದಿತು. ಹೀಗಿದ್ದ ಶಾಸನದ ಅಪೂರ್ವತೆ ಹಾಗೂ ಅಪೂರ್ಣತೆಗಳನ್ನು ಗಮನದಲ್ಲಿಟ್ಟುಕೊಂಡು ಈ ಲೇಖನವನ್ನು ಬರೆಯಲಾಗಿದೆ.

ದೊರೆತ ಸ್ಥಳ : ಈಗ ಸಾಮಾನ್ಯಹಳ್ಳಿಯೆನಿಸಿದ ಶಿರವಾಳ, ಗುಲ್ಬರ್ಗ ಜಿಲ್ಲೆಯ ಶಹಾಪುರ ತಾಲೂಕಿನ ಒಂದು ಹಳ್ಳಿ. ಇದು ಶಹಾಪುರದಿಂದ ಈಶಾನ್ಯಕ್ಕೆ ಸುಮಾರು ೧೦ ಕಿಲೋಮೀಟರ ದೂರದಲ್ಲಿದೆ. ಊರು ಹಿಂದೊಮ್ಮೆ ಶೈವಕೇಂದ್ರವಾಗಿತ್ತು ಎಂಬುದನ್ನು ಸಾರುವಂತೆ ಇಂದಿಗೂ ೧೫ ವಿಭಿನ್ನ ದೇವಾಲಯಗಳು ತಲೆಯೆತ್ತಿ ನಿಂತಿವೆ. ಕೆಲವು ದೇವಾಲಯಗಳು ರಾಷ್ಟ್ರಕೂಟರ ಕಾಲದಷ್ಟು ಪ್ರಾಚೀನವೆಂದು ಇತ್ತೀಚೆಗೆ ಗುರುತಿಸಿದ್ದಾರೆ.[೫] ಈ ದೇವಾಲಯಗಳಲ್ಲಿ ಒಂದಾದ ಸಿದ್ಧೇಶ್ವರ ಅಥವಾ ಸಿದ್ಧಲಿಂಗೇಶ್ವರದೇವಸ್ಥಾನ ಅಪೂರ್ವವಾದದ್ದು ಎನಿಸುತ್ತದೆ. ಮಹಾದ್ವಾರ, ಸುತ್ತಲೂ ಪೌಳಿ, ಮಧ್ಯದಲ್ಲಿ ೪ ರಂಗಮಂಟಪಗಳನ್ನೊಳಗೊಂಡ ಪಂಚಲಿಂಗಗಳ ದೇವಸ್ಥಾನವಿದು. ಈ ಪಂಚಲಿಂಗಗಳಲ್ಲಿ ಪೂರ್ವದಿಕ್ಕಿನದು ಬಾಳೇಹಳ್ಳಿಪೀಠ, ಉತ್ತರದ್ದು ಕೇದಾರಪೀಠ, ಪಶ್ಚಿಮದ್ದು ಉಜ್ಜಯಿನಿಪೀಠ, ದಕ್ಷಿಣದ್ದು ಶ್ರೀಶೈಲ ಪೀಠ, ಮಧ್ಯದಲ್ಲಿರುವದು ಕಾಶಿಪೀಠವೆಂದು ಅಲ್ಲಿಯ ಜನ ಹೇಳುತ್ತಾರೆ. ಮಹಾದೇವನ ಪಂಚಭಾವಗಳಾದ ಸದ್ಯೋಜಾತ (ಮುಂದಿನದು), ಅಘೋರ (ಬಲದ್ದು),

೩ ಶಾಸನವ್ಯಾಸಂಗ. ಸಂ. ೧, ಪು. ೧೩೩.

೪ ಶಿವಾನುಭವ. ಸಂ. ೪, ಸಂ. ೨.

೫ ಸಂಯುಕ್ತ ಕರ್ನಾಟಕ ೨೦-೧೧-೧೯೭೫.

ವಾಮದೇವ (ಎಡದ್ದು), ತತ್ಪುರುಷ (ಹಿಂದಿನದು), ಈಶಾನ (ಮಧ್ಯದ್ದು)ಗಳೆಂಬುದು ಮೊದಲಿನಿಂದ ನಡೆದುಬಂದ ರೀತಿ. ಅದನ್ನೇ ಸಾಮಾನ್ಯಜನ ಪಂಚಪೀಠಗಳ ಹೆಸರಿನಿಂದ ಕರೆಯುತ್ತಾರೆ. ಇಂಥ ದೇವಸ್ಥಾನಗಳು ವಾಸ್ತುಶಿಲ್ಪ ದೃಷ್ಟಿಯಿಂದ ಸರ್ವತೋಭದ್ರ ದೇವಾಲಯುಗಳೆನ್ನಿಸಿಕೊಳ್ಳುತ್ತವೆ.[೬] ಮಧ್ಯದ ಗರ್ಭಗುಡಿಯು ಮೇಲೆ ಮಾತ್ರ ಶಿಖರ ವಿದೆ. ಈ ದೇವಸ್ಥಾನದ ದಕ್ಷಿಣರಂಗಮಂಟಪದಲ್ಲಿಯೇ ಪ್ರಸ್ತುತ ಶಾಸನದ ಕಲ್ಲಿದೆ.

ಶಾಸನಸ್ವರೂಪ : ಶಾಸನಕಲ್ಲು ಸು. ೩೫'' ಉದ್ದ, ೩೦'' ಅಗಲವಿದೆ. ಈ ಭಾಗದಲ್ಲಿ ಅತಿವಿರಳವಾಗಿ ಸಿಕ್ಕುವ ಕರಿಕಲ್ಲಿನ ಒಂದು ಮುಖವನ್ನು ನುಣುಪಾಗಿ ಮಾಡಿಕೊಂಡು ನಂತರ ಅಕ್ಷರಗಳೆನ್ನು ಆಳವಾಗಿ ಕೊರೆಯಲಾಗಿದೆ. ಶಾಸನದ ಮೇಲ್ಭಾಗ ಒಡೆದು ಹೋಗಿದೆ. ಆ ಭಾಗ ಹತ್ತಿರದಲ್ಲೆಲ್ಲಿಯೂ ದೊರೆಯಲಿಲ್ಲ. ಲಿಪಿಶಾಸ್ತ್ರದ ಪ್ರಕಾರ ೧೨ ನೆಯ ಶತಮಾನದ ಕನ್ನಡಾಕ್ಷರಗಳಿವು. ಱಕಾರ (ಶಕಟರೇಫ) ಬಳಕೆಗೊಂಡಿದೆ. ದ್ವಿತ್ವಅನುನಾಸಿಕಗಳು (ನ, ಮ) ಬಂದೆಡೆಯಲ್ಲೆಲ್ಲ ಹಿಂದೆ ಅನುಸ್ವಾರವನ್ನು ಬರೆಯಲಾಗಿದೆ. ಉದಾ : ಚೆಂನ್ನ, ಮಂನ್ನೆಯ, ಅಂದೊಂಮ್ಮೆ ಇತ್ಯಾದಿ. ಕೆಲವೆಡೆ ದ್ವಿತ್ವವಿರದೆ ಕೇವಲ ಅನುನಾಸಿಕವನ್ನು ಬಳಸಲಾಗಿದೆ. ಉದಾ : ಮುಂನಿಜೀವ, ಸಂಪಂನರುಂ ಇತ್ಯಾದಿ. ಶಾಸನದಲ್ಲಿ ಅನುಸ್ವಾರವನ್ನು ಸಾಲಿನ ಮಧ್ಯ ಹಾಗೂ ಮೇಲ್ಭಾಗದಲ್ಲಿ ಬಳಸಲಾಗಿದೆ. ಸಾಮಾನ್ಯವಾಗಿ ಅರ್ಕಾವಳಿ ಬಂದಲ್ಲೆಲ್ಲ ದ್ವಿತ್ವ ಬಳಸುವದನ್ನು ಇಲ್ಲಿಯೂ ಅನುಸರಿಸಲಾಗಿದೆ. ಉದಾ : ಸೂರ್ಯ್ಯಂ, ಸೌರ್ಯ್ಯಮುಂ, ಕಾತ್ತ್ಯಯನೀದೇವೀ ಇತ್ಯಾದಿ. ಈ ಶಾಸನದ ವಿಶೇಷವೆಂದರೆ ದ, ಪ ಗಳ ಬದಲು ಹೆಚ್ಚಾಗಿ 'ಬ' ಬಳಸಿರುವದು. ಉದಾ : ಸರ್ಬ್ಬಯ, ಬ್ರ್ಬತಿತ ಬ್ರತಾನುಕಾರಿಗಳು, ದಿಬ್ಯಸಹಶ್ರ, ಸರ್ಬ್ಬಜ್ಞಮೂರ್ತಿ ಇತ್ಯಾದಿ.

ಶಾಸನದ ಮಿತಿ : ಇಡೀ ಶಾಸನದಲ್ಲಿ ಬರುವ ಏಕೈಕ ಸಂಖ್ಯೆಯೆಂದರೆ ಮಿತಿಯದು. ಶಾಸನದಲ್ಲಿ ಶಕವರ್ಷ ೧೧೧೦ ನೆಯ ಪ್ಲವಂಗ ಸಂವತ್ಸರದ ಭಾದ್ರಪದ ಬಹುಳದಮಾವಾಸ್ಯೆ ಶುಕ್ರವಾರ ಸೂರ್ಯ್ಯಗ್ರಹಣವನ್ನು ಹೆಸರಿಸಲಾಗಿದೆ. ಇಲ್ಲಿ ಶಕವರ್ಷ ೧೧೧೦ ರ ಬದಲು ೧೧೧೯ ಎಂದಿರಬೇಕಿತ್ತು.[೭] ಉಳಿದ ವಿವರಗಳೆಲ್ಲ ಕ್ರಿಶ್ಚಿಯನ್ ಕ್ಯಾಲೆಂಡರಿನ ಪ್ರಕಾರ ಸೆಪ್ಟೆಂಬರ್ ೪, ೧೧೯೮ ಕ್ಕೆ ಸರಿಹೊಂದುತ್ತವೆ.

---

೬ ಈ ವಿಚಾರವನ್ನು ಹಾಗೂ ಇಂತಹುದೇ ದೇವಸ್ಥಾನ ಉಣಕಲ್ಲಿನ (ಹುಬ್ಬಳ್ಳಿ ತಾಲೂಕು) ಚಂದ್ರಮೌಳೀಶ್ವರನದು ಎಂದು ತಿಳಿಸಿದವರು ಗುರುಗಳಾದ ಡಾ. ಅ. ಸುಂದರ ಅವರು.

೭ ಇದನ್ನು ಡಾ. ನಂದೀಮಠರು ೧೧೧೯ ಎಂದೇ ಪ್ರಕಟಿಸಿದ್ದಾರೆ. ಆದರೆ ಶಾಸನದಲ್ಲಿ ಸ್ಪಷ್ಟವಾಗಿ ೧೧೧೦ ಎಂದೇ ಇದೆ.

ರಾಜವಂಶ : ಶಾಸನದ ಮೇಲ್ಭಾಗ ಒಡೆದುಹೋಗಿರುವದರಿಂದ ಚಕ್ರವರ್ತಿ ಯಾರಾಗಿದ್ದರೆಂಬುದು ತಿಳಿಯದು. ಉಳಿದಿರುವ ಶಾಸನದ ಆರಂಭ, ಮಹಾಮಂಡಳೇಶ್ವರನ ಬಿರುದಾವಳಿಗಳಿಂದ ಕೂಡಿದೆ. ೧೧ ನೆಯ ಸಾಲಿನಲ್ಲಿ 'ಶ್ರೀಮತು ಭಿಲ್ಲಮದೇವರ ಮಹಾಪಸಾಯಿತ' ಎಂದಿರುವದರಿಂದ ಶಾಸನ ಸೇವುಣ ಭಿಲ್ಲಮ Vನ ಆಳಿಕೆಯ ಕಾಲದ್ದೆನ್ನಬಹುದು. ಈತ ೧೧೮೭ ರಲ್ಲಿ ಸ್ವತಂತ್ರ ಅರಸನಾದನೆಂದು ಬಹುಜನ ಇತಿಹಾಸಕಾರರ ಅಭಿಪ್ರಾಯ. ಶಾಸನದಲ್ಲಿ ಮಹಾಪ್ರಧಾನನಾದ ಘಟ್ಟಿಯ ಕೇತಯ ನಾಯಕನಿಗೆ ರಿಪುಮದಮರ್ದ್ದನಂ, ಪ್ರತಾಪ ರಣರಂಗಭೈರವಂ ಎಂಬ ಬಿರುದುಗಳಿರುವಾಗ, ಭಿಲ್ಲಮ ಯಾವ ಬಿರುದಾವಳಿಗಳೂ ಇಲ್ಲದೆ ಇಲ್ಲಿ ಉಲ್ಲೇಖಿತನಾಗಿರುವದರಿಂದ ಈ ಪ್ರದೇಶದ ಚಕ್ರವರ್ತಿಯಾಗಿ ಈ ಕಾಲದಲ್ಲಿದ್ದನೆನ್ನಲು ಆಧಾರಗಳು ಸಾಲವು. ಈ ಶಾಸನದಲ್ಲಿರುವ ಮಹಾಮಂಡಳೇಶ್ವರ ಸಿಂಗಿದೇವರಸನು ಕಳಚೂರ್ಯರಾಯಮುರಾರಿ ಸೋವಿದೇವನ[೮] ಹಾಗೂ ಕಲ್ಯಾಣ ಚಾಳುಕ್ಯ ಸೋಮೇಶ್ವರ IVನ[೯] ಮಹಾಮಂಡಳೇಶ್ವರನಾಗಿದ್ದನೆಂದು ಇತರ ಶಾಸನಗಳಿಂದ ತಿಳಿದುಬರುತ್ತದೆ. ಶಿರವಾಳ ಶಾಸನದ ಕಾಲಕ್ಕೂ ಸಿಂಗಿದೇವರಸನು ಚಾಳುಕ್ಯ ಸೋಮೇಶ್ವರನ ಮಹಾಮಂಡಳೇಶ್ವರನಾಗಿರುವಂತೆ ಕಾಣುತ್ತದೆ. ಹೀಗೆಂದು ಊಹಿಸಿದಾಗ ಸೆಪ್ಟೆಂಬರ್ ೪, ೧೧೮೭ ರ ವರೆಗೆ ಸೇವುಣ ಭಿಲ್ಲಮ V ಈ ಭಾಗವನ್ನು ಗೆದ್ದಿರಲಾರ ಎಂಬ ಭಾವಕ್ಕೆ ಪುಷ್ಟಿ ದೊರೆಯುತ್ತದೆ.

ತರ್ದವಾಡಿಯ ಶಿಲಾಹಾರರು : ಮಧ್ಯಯುಗದಲ್ಲಿ ದಕ್ಷಿಣ ಪ್ರಸ್ಥಭೂಮಿ ಹಾಗೂ ಪಶ್ಚಿಮ ತೀರಗಳನ್ನು ಆಳಿದ ಮಾಂಡಲಿಕ ವಂಶಗಳಲ್ಲಿ ಶಿಲಾಹಾರರದೂ ಒಂದು. ದಕ್ಷಿಣ ಕೊಂಕಣ, ಉತ್ತರ ಕೊಂಕಣ, ಕರ್ಹಾಡ– ಹೀಗೆ ೩ ಶಾಖೆಗಳಿದ್ದವೆಂದು ಫ್ಲೀಟ್ ಹಾಗೂ ಅಲ್ಟೇಕರರು ಗುರುತಿಸಿದ್ದರೆ, ಪಿ. ಬಿ. ದೇಸಾಯಿಯವರು ೭ ಶಾಖೆಗಳನ್ನು ಗುರುತಿಸಿದ್ದಾರೆ. ಇವುಗಳಲ್ಲಿ ತರ್ದವಾಡಿಯ ಶಿಲಾಹಾರರ ಮನೆತನವೂ ಒಂದು. ಶಿಲಾಹಾರರ ಪ್ರಮುಖ ಪ್ರಶಸ್ತಿಗಳಾದ ಸುವರ್ಣಗರುಡಧ್ವಜ, ಜೀಮೂತವಾಹನಾನ್ವಯ ಪ್ರಸೂತ, ಸೀಳಾಜಿಕುಳಕಮಳಮಾರ್ತಾಂಡ, ತಗರ ನಗರಾಧೀಶ್ವರ ಇತ್ಯಾದಿಗಳೊಡನೆ ಈ ಶಾಖೆಯವರು ಕೊಪಣಪುರವರಾಧೀಶ್ವರ, ಕಾತ್ಯಾಯನೀದೇವಿ ಲಬ್ಧವರಪ್ರಸಾದರೆಂದೂ ಕರೆಯಿಸಿಕೊಳ್ಳುತ್ತಿದ್ದರು. ಇವರನ್ನು ಶಿಲಾಹಾರ, ಸೆಳರ, ಸೆಳಜಿ, ಶಿಲಾರ, ಸೇಲಾರ, ಶೀಲಾಹಾರರೆಂದೂ ಶಾಸನಗಳಲ್ಲಿ ಕರೆಯಲಾಗಿದೆ. ಈ ವಂಶದ ಪಿಟ್ಟುಮಸಿಂದ ಚಾಳುಕ್ಯ ವಿಕ್ರಮಾದಿತ್ಯ VI ನ ಮಾಂಡಲಿಕ ಗೋವಣರಸ IV ನ ವರೆಗಿನ ೨೧ ಜನರ ವಂಶಾವಳಿಯು ಶಾಸನವೊಂದರಲ್ಲಿ ದೊರೆತಿದೆ.[೧೦] ಮುಂದಿನವರ ಬಗೆಗೆ ಅಲ್ಲಲ್ಲಿ ಹಲವಂಶಗಳು ತಿಳಿದುಬಂದಿವೆ.

---

೮ S I. I. XX No. 151 (೧೧೬೮ ಕಾಲ).

೯ S. I. I. XX No. 158 (೧೧೭೬ ಕಾಲ).

೧೦ ಅಗರಖೇಡ ಶಾಸನ, ಇಂಡಿ ತಾಲೂಕು; ವಿಜಾಪುರಜಿಲ್ಲೆ.

ಈ ಶಾಸನದಲ್ಲಿ ಉಕ್ತನಾದ ಸಿಂಗಿದೇವರಸ ಇದೇ ತರ್ದವಾಡಿಯ ಶಿಲಾಹಾರರ ವಂಶಜನು. ಈತ ೧೧೬೮ ರಿಂದ ೧೧೭೬ ರ ವರೆಗಿನ S. I. I. XX ರ ೧೫೧, ೧೫೪, ೧೫೮ ನೆಯ ಶಾಸನಗಳಲ್ಲಿಯೂ ಉಲ್ಲೇಖಿತನಾಗಿರುವನು. ಈತನ ಕೊನೆಯ ಗಡುವನ್ನು (೧೧೮೭) ಈ ಶಿರವಾಳ ಶಾಸನ ತಿಳಿಸುತ್ತದೆ. ಉಳಿದೆಡೆ ಸೋಮಸಂಕಕಾಜಿ ಎಂಬ ಬಿರುದಿದ್ದರೆ ಈ ಶಾಸನದಲ್ಲಿ ಅದಕ್ಕಿಂತ ಭಿನ್ನವಾದ 'ಆಸಗನಂಕಕಾಜಿ' ಎಂಬ ಬಿರುದಿದೆ. ಉತ್ತರೇಶ್ವರದೇವರ ಪಾದಾರಾಧಕ ಎಂದು ಕರೆಸಿಕೊಂಡಿರುವದರಿಂದ ಎಳಮೇಲದ ಉತ್ತರೇಶ್ವರದೇವರ[೧೧] ಭಕ್ತನಾಗಿದ್ದನೆಂದು ತಿಳಿದುಬರುತ್ತದೆ.

ಶಾಸನದ ಉದ್ದೇಶ : ಸೂರ್ಯಗ್ರಹಣದಂತಹ ಪುಣ್ಯದಿನದಲ್ಲಿ ಮಹಾಮಂಡಳೇಶ್ವರ ಸಿಂಗಿದೇವರಸ, ಅವ್ವೆ ನಾಗಲದೇವಿ, ಮಹಾಪ್ರಧಾನ ಸೇನಾಧಿಪತಿ ಘಟ್ಟಿಯ ಕೇತಯನಾಯಕ, ಮಹಾಪಸಾಯಿತ ಅಧಿಕಾರಿ ಪಯ್ಯನಾಯಕ, ಸಮಸ್ತ ಪರಿವಾರ, ನಾಡಗ್ರಾಯಿತರು – ಇವರೆಲ್ಲ ಸೇರಿ ಸಿರಿವೊಳಲ ಸಿದ್ಧಸಾತೇಶ್ವರದೇವರ ಅಂಗಭೋಗ, ರಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರ ಮತ್ತು ಅಲ್ಲಿ ವಾಸಿಸುವ ಶಿವಯೋಗಿಗಳ ಅಶನ, ಆಚ್ಛಾದನೆಗಳಿಗಾಗಿ, ಅಲ್ಲಿಯ ಸ್ಥಾನಾಚಾರಿಯಾಗಿರಬಹುದಾದ ರೇವಣದೇವಯ್ಯನ ಪಾದಪ್ರಕ್ಷಾಳನಮಾಡಿ ದತ್ತಿ ನೀಡಿದುದನ್ನು ಈ ಶಾಸನ ತಿಳಿಸುತ್ತದೆ. ಎಳಮೇಲಯ್ವತ್ತು ವಿಭಾಗದ ಹತ್ತಿರದಲ್ಲಿಯೇ ಇದ್ದ 'ಮುಜುವಡಿ' ಗ್ರಾಮದ ಮೇಲಾಳಿಕೆ, ಆ ಗ್ರಾಮದ ಸೀಮೆಯಲ್ಲಿರುವ ನಿಧಿನಿದಾನನಿಕ್ಷೇಪಜಲಪಾಷಾಣ ಮಾಳಾ ವೃಕ್ಷಗುಲ್ಮಲತಾವಳಿ ಅಷ್ಟಭೋಗತೇಜ, ಅರುವಣ, ಕಿಱುಕುಳಾಯದಾಯ, ಮೂಲೆಗರರುವಣ ಇತ್ಯಾದಿ ಸುಂಕಗಳನ್ನೂ ದಾನದ ಅಂಗವಾಗಿಸಲಾಯಿತು.

ಈ ದತ್ತಿಯ ಜೊತೆಯಲ್ಲಿಯೇ ಪ್ರಭುಗಳು, ಎಂಟು ಹಿಟ್ಟುಗಳು, ಸೋಮನಾಥದೇವರು, ನಾವಿದಿಗೆಯೂರುಗಳ ಹೆಸರನ್ನುಳ್ಳ ಇನ್ನೊಂದು ದಾನವೂ ಇರುವಂತೆ ತೋರುತ್ತದೆ. ಮಧ್ಯದ ಅಕ್ಷರಗಳು ಸಂಪೂರ್ಣವಾಗಿ ಅಳಿಸಿಹೋಗಿರುವದರಿಂದ ವಿವರ ತಿಳಿಯಲಾಗದು. ಶಾಸನದ ಕೊನೆಯಲ್ಲಿ ಸರ್ವೇಸಾಮಾನ್ಯವಾಗಿ ಬರುವ 'ಸ್ವದತ್ತಂ ಪರದತ್ತಂ' ಮತ್ತು 'ಸಾಮಾನ್ಯೋಯಂ' ಎಂಬ ಎರಡು ಸಂಸ್ಕೃತದ ಫಲಶ್ರುತಿಗಳನ್ನು ಹೇಳಲಾಗಿದೆ.

ರೇವಣಸಿದ್ಧ : ಕನ್ನಡ ಸಾಹಿತ್ಯ, ಶಾಸನ ಮತ್ತು ಐತಿಹ್ಯಗಳಲ್ಲಿ ಉಲ್ಲೇಖಗೊಂಡಿರುವ ಸಿದ್ಧರೇವಣರು, ಹಲವಾರು ಜನ. ವೀರಶೈವ ಪಂಚಾಚಾರ್ಯರಲ್ಲಿ ಬರುವ ರೇಣುಕಾಚಾರ್ಯ, ಸಿದ್ಧರಾಮಶಿವಯೋಗಿಯ ಜನನ ಭವಿಷ್ಯ ನುಡಿದ ರೇವಣ, ಅವ್ವೆಯರಹಳ್ಳಿ ಶಾಸನದಲ್ಲಿ ಉಕ್ತನಾದ ಪವಾಡ ಮೆರೆದ ಮರುಳಸಿದ್ಧೇಶ್ವರನ

೧೧ S. I. I. XX No. 298 ಹಾಗೂ 38.

ತಂದೆ ರೇವಣಸಿದ್ಧ, ಚೌಡದಾನಪುರ ಶಾಸನದ ಭಕ್ತ್ಯಾಚಾರ ಚೀಲಾಳನ ಗುರು ಕಾರಣಿಕ ಸಿದ್ಧರೇವಣ, ವಚನಕಾರ ರೇವಣಸಿದ್ಧ, ಬಯಿರತ್ತಿ ಹಾಗೂ ಲಕ್ಷ್ಮೇಶ್ವರ ಶಾಸನಗಳಲ್ಲಿಯ ರೇವಣರಲ್ಲದೆ ಇನ್ನೂ ಹಲವು ರೇವಣಸಿದ್ಧರಿರಬಹುದಾದ ಸಾಧ್ಯತೆಯಿದೆ. ಇವರಲ್ಲಿ ಪವಾಡಸದೃಶ ಘಟನೆಗಳನ್ನು ಲೀಲಾಜಾಲವಾಗಿ ಮಾಡಿತೋರಿಸಿದ, ಶಿರವಾಳ ಶಾಸನದಲ್ಲಿ ಬಾಯ್ತುಂಬ ಹೊಗಳಿಸಿಕೊಂಡ ಶಾಸ್ತ್ರಿಮಯ್ಯಗಳ ಪುತ್ರ ರೇವಣದೇವಯ್ಯ ಯಾರು ಎಂಬುದೇ ತೊಡಕಿನ ವಿಷಯ. ಇವರೆಲ್ಲರೂ ಭಿನ್ನರೋ, ಅಭಿನ್ನರೋ ಎಂಬುದನ್ನು ನಿರ್ಣಯಿಸಲು ಆಧಾರಗಳಿನ್ನೂ ಸಾಲವು.

ಅದರಲ್ಲಿಯೂ ಶಿರವಾಳ ಶಾಸನದಲ್ಲಿ ಇಬ್ಬರು ರೇವಣಸಿದ್ಧರ ಉಲ್ಲೇಖವಿರುವಂತೆ ತೋರುತ್ತದೆ. "ಮುನ್ನೊಮ್ಮೆ ಸಿದ್ಧನಾಗಿಯುವನ್ನದ ತವಸಿಧಿಯಂ ತೋಱಿ" ಎನ್ನುವಲ್ಲಿ ಈ ಶಾಸನದ ರೇವಣನಿಗಿಂತ ಪ್ರಾಚೀನನಾದ ಸಿದ್ಧರೇವಣನೊಬ್ಬ ಇದನೆಂದು ಊಹಿಸಲು ಅವಕಾಶವುಂಟಾಗುತ್ತದೆ. ಇಲ್ಲಿಯ ೬ ಪವಾಡಗಳಲ್ಲಿ ಹರಿಹರ ಮಹಾಕವಿ ಚಿತ್ರಿಸಿರುವ ರೇವಣಸಿದ್ಧನಿಗೆ ತವನಿಧಿಯ ಪವಾಡ, ಒರ್ಬುಳ ತಂಡುಳ ಪವಾಡ, ಧರೆ ಬೆಂದ ಪವಾಡ– ಈ ಮೂರೇ ಹೊಂದುತ್ತವೆ. ಇನ್ನುಳಿದ ತೊಱೆ ದಾಟಿದ ಪವಾಡ, ಗೀತಪವಾಡ, ನೃತ್ಯಪವಾಡಗಳು ಆ ರೇವಣಸಿದ್ಧನಿಗೆ ಹೊಂದದೆ ಶಿರವಾಳ ಶಾಸನದಲ್ಲಿ ಪಾದಪ್ರಕ್ಷಾಳನೆ ಮಾಡಿಸಿಕೊಂಡ ರೇವಣಯ್ಯನವಾಗಿ ಉಳಿಯುತ್ತವೆ. ಹೀಗಾಗಿ ಇವರಿಬ್ಬರೂ ಭಿನ್ನರೆಂದು ಭಾವಿಸಬೇಕಾಗುತ್ತದೆ. ಶಿರವಾಳ ಶಾಸನದ ರೇವಣಯ್ಯ ೧೧೪೭ರಲ್ಲಿ ಬದುಕಿದ್ದನೆನ್ನುವದು ಗಮನಾರ್ಹ; ಇನ್ನೊಬ್ಬ ರೇವಣಸಿದ್ಧ ಇವನಿಗಿಂತ ಹಿಂದಿರುವದು ಅಷ್ಟೇ ಸಹಜ.

ಶಾಂತಿಮಯ್ಯ : ಕೃತಯುಗ, ತ್ರೇತೆ, ಹಾಗೂ ದ್ವಾಪರದಲ್ಲಿ ಜನಿಸಿ ವ್ರತಗಳನ್ನಾಚರಿಸಿದರೆಂದು ಹೊಗಳಿಸಿಕೊಂಡು, ಅಪಾರ ಭಕ್ತಿಯನ್ನು ಹೊಂದಿದ ಶಾನ್ತಿಮಯ್ಯ ಕಲಿವೀರನೋ ವೀರಭದ್ರನೋ ಎನ್ನುವಂತೆ ಶೋಭಿಸುತ್ತಿದ್ದನಂತೆ. ಈ ಶಾಂತಿಮಯ್ಯನನ್ನು ನೆಲವಿಗೆಯ ಶಾಂತಯ್ಯನೊಡನೆ ಹೊಂದಿಸುವ ಪ್ರಯತ್ನಗಳೂ ನಡೆದಿವೆ.[೧೨] ಕಾಲ, ದೇಶ, ನಾಮಗಳಲ್ಲಿ ಸಾಮ್ಯತೆಯಿದ್ದರೂ ಇವರಿಬ್ಬರೂ ಅಭಿನ್ನರೆಂದು ಹೇಳಲು ಆಧಾರ ಬಯಸುತ್ತದೆ. ಅಲ್ಲದೆ ಈ ಶಾಂತಿಮಯ್ಯ ರೇವಣಯ್ಯನ ಗುರುವೋ, ತಂದೆಯೋ ಎಂಬ ಬಗ್ಗೆಯೂ ವಾದಗಳಿರುವದನ್ನು ವಿದ್ವಾಂಸರು ಗಮನಿಸಬೇಕು. ಈ ಶಾಸನದ ಕಾಲಕ್ಕೆ ಶಾಸ್ತ್ರಿಮಯ್ಯ ಲಿಂಗೈಕ್ಯನಾಗಿದ್ದನೆಂದೂ ಆತನ ಹೆಸರಿನಲ್ಲಿಯೇ ಈ ಸಿದ್ಧಸಾತೇಶ್ವರ ದೇವಸ್ಥಾನವನ್ನು ಕಟ್ಟಿಸಿರಬೇಕೆಂದು ಊಹಿಸಲವಕಾಶವಿದೆ. ಶಾಂತಯ್ಯ >ಸಾಂತಯ್ಯ > ಸಾತಯ್ಯ ಎಂಬ ಪರಿವರ್ತನೆ ಭಾಷೆಯಲ್ಲಿ ನಡೆಯುವ ಸಹಜಕ್ರಿಯೆಯೆಂದು ಈಗಾಗಲೇ ತೋರಿಸಿಕೊಟ್ಟಿದ್ದಾರೆ.[೧೩] ಆ ಕಾಲ

೧೨ ಶಾಸನವ್ಯಾಸಂಗ. ಸಂ. ೨. ಪು. ೬೨.

೧೩ ಅದೇ. ಪು. ೭೧.

ದಲ್ಲಿ ಯಾರೊಬ್ಬರ ಹೆಸರಿನ ಮುಂದೆ ಈಶ್ವರ ಎಂದು ಸೇರಿಸಿ ದೇವರನ್ನು ಕರೆಯುಬಹುದಾಗಿದ್ದುದು ಈ ಊಹೆಗೆ ಪುಷ್ಟಿ ನೀಡುತ್ತದೆ. ಉದಾ : ಕೇತಯ್ಯ ಕಟ್ಟಿಸಿದ್ದು ಕೇತೇಶ್ವರ, ಬಿಬ್ಬಯ್ಯ ಕಟ್ಟಿಸಿದ್ದು ಬಿಬ್ಬೇಶ್ವರ.

ಶಾಸನದಲ್ಲಿಯ ಸಾಹಿತ್ಯಾಂಶ : ಶಾಸನ ಗದ್ಯ ಹಾಗೂ ಕಂದಗಳಿಂದ ಕೂಡಿ ಕನ್ನಡಭಾಷೆಯಲ್ಲಿ ರಚಿತವಾಗಿದ್ದರೂ ಸಂಸ್ಕೃತಭೂಯಿಷ್ಠ ಬಿರುದಾವಳಿ ಹಾಗೂ ಸಂಸ್ಕೃತ ಫಲಶ್ರುತಿಗಳು ಹಣೆಕಿಕ್ಕಿವೆ. ಶಾಸನಗದ್ಯವು ಪದ್ಯದ ಲಯದಲ್ಲಿಯೇ ಪ್ರವಹಿಸುವದರಿಂದ ಒಂದು ರೀತಿಯ ಶೋಭೆಯುಂಟಾಗಿದೆ.

ಈ ಶಾಸನದಲ್ಲಿ ಬರುವ ಆರೂ ಕಂದಪದ್ಯಗಳು ಅಶುದ್ಧ. ಹೆಚ್ಚಾಗಿ –U– ಈ ಗಣ ಇಲ್ಲವೆ ಮೂರು ಮಾತ್ರೆಯ ಗಣ ಹಾಗೂ ೨,೪ ನೆಯ ಪಾದಾಂತ್ಯಗಳಲ್ಲಿ ಲಘುವುಳ್ಳ ಗಣಗಳು ಬಂದು ಛಂದಸ್ಸಿನಲ್ಲಿ ಅಶುದ್ಧತೆಯನ್ನುಂಟುಮಾಡಿವೆ ಎಂಬುದನ್ನು ಗಮನಿಸಬೇಕು. ಈ ಆರು ಕಂದಗಳಲ್ಲದೆ ಇನ್ನೊಂದು ವೃತ್ತವೂ ಈ ಶಾಸನದಲ್ಲಿರುವ ಸಾಧ್ಯತೆಯಿದೆ. ಶಿವಯೋಗಿ ಶಾಸ್ತ್ರಿಮಯ್ಯಗಳ ಮಹಿಮೆಯೆಂತೆನೆ ಎಂದು ಹೇಳಿದ ನಂತರ ಎರಡು ದಂಡಗಳಿದ್ದು, ಕಲಿವೀರನೋ ವೀರಭದ್ರನೋ ಎಂದು ನಿಲ್ಲಿಸಿ ಎರಡು ದಂಡಗಳನ್ನು ಹಾಕಿರುವದರಿಂದ ಇದನ್ನು ಪದ್ಯವೆನ್ನುವಂತೆ ಹಿಂದು ಮುಂದಿನ ಗದ್ಯಗಳಿಂದ ಬೇರ್ಪಡಿಸಲಾಗಿದೆ ಎನ್ನಬಹುದು. ಪ್ರಯತ್ನಪಟ್ಟರೆ ೩ ಸಾಲುಗಳಲ್ಲಿ ಪ್ರಾಸವೂ ಬರುತ್ತದೆ. ಆದರೆ ಅರ್ಥದ ಅಸ್ಪಷ್ಟತೆ-ಕ್ಲಿಷ್ಟತೆಗಳು, ತಪ್ಪಾದ ಗಣಸಂಯೋಜನೆಯಿಂದ ಏನನ್ನೂ ನಿರ್ಧಾರವಾಗಿ ಹೇಳಲು ಸಾಧ್ಯವಿಲ್ಲ. ಹೊಣೆಗೇಡಿ ಲಿಪಿಕಾರನೊಬ್ಬನಿಂದ ಒಂದು ಸುಂದರ ಪದ್ಯ ತಪ್ಪಿಹೋಗಿದೆ ಎಂದು ಹೇಳಬಹುದು.

ಇತರ ಅಂಶಗಳು : ಈ ಶಾಸನದಲ್ಲಿ ಉಕ್ತವಾದ 'ಸಿರಿವೊಳಲ'ವೇ ಶಾಸನ ದೊರೆತ ಸ್ಥಳ, ಈಗಿನ ಶಿರವಾಳ. ಇದು ಸಿರಿಯ+ಪೊಟಿಲ್ >ಸಿರಿಪೊಟಿಲ್ >ಸಿರಿಪೊಳಲ್ >ಸಿರಿವೊಳಲ್ >ಸಿರಿವೊಳ >ಸಿರಿವಾಳ >ಶಿರವಾಳ ಎಂದಾಗಿರಬಹುದು. ಈ ಶಾಸನದಲ್ಲಿ ಬರುವ ಇನ್ನುಳಿದ ಊರುಗಳೆಂದರೆ ಎಳೆಮೇಲಯ್ವತ್ತು, ಮುಱುವಡಿ ಹಾಗೂ ನಾವಿದಿಗೆಯೂರುಗಳು. ವಡಗೆರೆ ಶಾಸನದಲ್ಲಿ ಬರುವ ಎಳೆಮೇಲ ಗ್ರಾಮವನ್ನು ಪಿ. ಬಿ. ದೇಸಾಯಿಯವರು ಈಗಿನ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಆಲಮೇಲ ಎಂದು ಗುರುತಿಸಿದ್ದಾರೆ. ಅಲ್ಲಿಯ ಜನ ಈಗಲೂ ಅದನ್ನು ಎಳಮೇಲಿ ಎಂದೇ ಕರೆಯುತ್ತಾರೆ. ಈ ಎಳಮೇಲ ಹಿಂದೆ ಐಯ್ವತ್ತು ಹಳ್ಳಿಗಳ ವಿಭಾಗದ ಮುಖ್ಯ ಪಟ್ಟಣವಾಗಿದ್ದು, ಇದರ ಹೆಸರಿನಿಂದಲೇ ವಿಭಾಗವನ್ನು ಎಳಮೇಲಯ್ವತ್ತು ಎಂದು ಕರೆಯುತ್ತಿದ್ದಿರಬೇಕು. ಈ ಎಳಮೇಲಯ್ವತ್ತು ತರ್ದವಾಡಿ ಸಾಸಿರದ ಭಾಗವಾಗಿತ್ತು. ಈ ಶಾಸನದಲ್ಲಿ ಉಕ್ತವಾದ ಎಳಮೇಲಯ್ವತ್ತರ ಬಳಿಯ ಬಾಡ 'ಮುಱುವಡಿ' ಎಂದರೆ ಸಿಂದಗಿ ತಾಲೂಕಿನ ಈಗಿನ ಮುರಡಿ. ಆಲಮೇಲದ ಹತ್ತಿರವೂ ಒಂದು

ನಾವದಗಿಯಿದ್ದಂತೆ ಶಿರವಾಳದ ಹತ್ತಿರವೂ ಒಂದಕ್ಕಿಂತ ಹೆಚ್ಚು ನಾವದಗಿಗಳಿವೆ. ಕಾರಣ ಈ ಶಾಸನೋಕ್ತ ನಾವಿದಿಗೆಯನ್ನು ಬೆರಳಿಟ್ಟು ಹೇಳುವದು ಕಷ್ಟಸಾಧ್ಯ. ಹಿಂದೆ ಅಗ್ರಹಾರವೆನಿಸಿದ, ಆಲಮೇಲದ ಹತ್ತಿರದ ನಾವಿದಿಗೆ ಇದಾಗಿರಬಹುದು.

ಶಾಸನದ ಮಹತ್ವ: ೧. ತರ್ದವಾಡಿ ಶಿಲಾಹಾರರ ಶಾಖೆಯ ಸಿಂಗಿದೇವರಸನ ಕಾಲವನ್ನು ೧೧೭೬ ರಿಂದ ೧೧೮೭ರ ವರೆಗೆ ಎಳೆದು ತರುತ್ತದೆ.

೨. ೧೧೮೭ ಸಪ್ಟೆಂಬರ್ ೪ರ ವರೆಗೆ ಸೇವುಣ ಐದನೆಯ ಭಿಲ್ಲಮ ಈ ಭಾಗದಲ್ಲಿ ಪ್ರತ್ಯೇಕ ಬಿರುದಾವಳಿಯಿಂದ ಕೂಡಿದ ಚಕ್ರವರ್ತಿಯಾಗಿರಲಿಲ್ಲ.

೩. ಇಬ್ಬರು ರೇವಣಸಿದ್ಧರನ್ನು ಉಲ್ಲೇಖಿಸುತ್ತದೆ.

೪. ರೇವಣಯ್ಯನ ಕಾಲ ೧೧೮೭ ಎಂದಾದರೆ, ಇನ್ನೊಬ್ಬನು ಆತನಿಗಿಂತ ಹಿಂದಿರುವ ಸಾಧ್ಯತೆಯೆಡೆ ಬೆರಳಿಟ್ಟು ತೋರಿಸುತ್ತದೆ.

೫. ರೇವಣಯ್ಯನ ತಂದೆ ಶಿವಯೋಗಿ ಶಾನ್ತಿಮಯ್ಯನು ಅವನಷ್ಟೇ ಎತ್ತರದ ವ್ಯಕ್ತಿತ್ವವುಳ್ಳಾತನೆಂದು ಎತ್ತಿತೋರಿಸುತ್ತದೆ.

ಒಟ್ಟಿನಲ್ಲಿ ಬಸವಾದಿ ಶಿವಶರಣರ ಸಮಕಾಲೀನರಾಗಿ, ಪವಾಡಮಯ ಬದುಕನ್ನು ಬಾಳಿದ ರೇವಣಯ್ಯ ಆತನ ತಂದೆ ಶಾನ್ತಿಮಯ್ಯರ ವ್ಯಕ್ತಿತ್ವ ಚಿತ್ರಣಕ್ಕಾಗಿಯೇ ತಲೆಯೆತ್ತಿ ನಿಂತಿರುವ ಶಾಸನ, ಶಿರವಾಳ ಶಾಸನ.

ಶಾಸನದ ಪಾಠ

೧ *[ಸ್ವಸ್ತಿ ಸಮಧಿಗತ ಪಂಚಮಹಾಶಬ್ದ] ಮಹಾಮಂಡಳೇಶ್ವರಂ ತಗರನಗರಾ ಧೀಶ್ವರಂ [ಜೀಮೂತವಾಹ]

೨ ನಾನ್ವಯಪ್ರಸೂತಸೂರ್ಯ್ಯಂ ಚ(ರ?)ಘುಜಾತಂ ಶ್ರೀ ಶಿಳಾಜಿವಂಶೋದ್ಭವ ನರೇಂದ್ರ ವಿಭವಾಮರೇಂದ್ರ (ಡಂಗಾಱ)–

೩ ಭೇರಿಸಿರ್ಗ್ಘೋಷಣಂ ಸಮರವಿಭೀಷಣಂ ವಿದಗ್ಧಮುಗ್ಧಾಂಗನಾಹ್ರಿದಯ ಕುಸುಮಕೋದಂಡ ಕದನಪ್ರಚಂಡ ಚಿಂ–

೪ ನಮನ್ನೆಯ ಪನ್ನಗವೈನತೇಯ ವೀರಾಧಿಮನ್ನೆಯ ತಾರಕಾಸುರಕಾರ್ತ್ತಿಕೇಯ ನತಿ ವಿಷಮಹಯಾ–

೫ ರೂಢಪ್ರೌಢರೇಖಾರೇವಂತ ವಿಜೇಯಲಕ್ಷ್ಮೀಕಾಂತ ಸುವರ್ಣಗರುಡಧ್ವಜ ವಿಮಳಕೀರ್ತ್ತಿಧ್ವಜ ಕಾರ್ತ್ತ್ಯಯಸಿದೇವಿಲ–

* ಪ್ರಾರಂಭದ ಭಾಗ ಒಡೆದು, ಕಳೆದುಹೋಗಿದೆ.

೬ ಬ್ಧವರಪ್ರಸಾದ ಮೃಗಮದಾಮೋದ ಆಳಿಂ ಮುಂನಿಜೀವ ಸೌರ್ಯ್ಯಮಂ ಮೆಱೆವ ಆ ಬಂಟರಭಾವ

೭ ಮಱವ್ವಗೆ ಕಾವ ಅಸೆಗಸಂಕಕಾಱ ರಣರಂಗಸೀಱ ನಿಜದಬೆಡಂಗ ಸಾಹಸೋತ್ತುಂಗ ಶ್ರೀಮದು–

೮ ತ್ರರೇಶ್ವರದೇವರ ಪಾದಾರಾಧಕ ಪರಬಳಸಾಧಕ ನಾಮಾದಿ ಸಮಸ್ತಪ್ರಸಸ್ತಿ ಸಹಿತಂ ಶ್ರೀಮನು ಮಹಾಮಂ–

೯ ಡಳೇಶ್ವರ ಎಳೆಮೋಲ ಸಿಂಗಿದೇವರಸಗುಂ ಅವ್ವೆ ನಾಗಲದೇವಿಯರುಂ ಶ್ರೀಮನು ಮಹಾಪ್ರಧಾನಂ ಸೇನಾಧಿಪ–

೧೦ ತಿಮಹಾಪಸಾಯಿತಂ ರಿಪುಮದಮರ್ದ್ದನಂ ಪ್ರತಾಪರಣರಂಗಭೈರವಂ ಶ್ರೀಮತು ಘಟ್ಟಿಯ

೧೧ ಕೇತಯನಾಯಕನುಂ ಸಮಸ್ತಪರಿವಾರಮುಂ ನಾಡಗ್ರಾಯಿತರುಂ ಶ್ರೀಮತು ಭಿಲ್ಲಮದೇವರ ಮ–

೧೨ ಹಾಪಸಾಯಿತಂ ಅಧಿಕಾರಿ ಪಯ್ಯನಾಯಕರುಂ ಸಕವರುಷ ೧೧೧೦ನೆಯ ಪ್ಲವಂಗ ಸಂವತ್ಸರ–

೧೩ ದ ಭಾದ್ರಪದ ಬಹುಳದಮಾವಾಸ್ಯೆ ಶುಕ್ರವಾರ ಸೂರ್ಯ್ಯಗ್ರಹಣ ನಿಮಿತ್ತವಾಗಿ ಎಳೆಮೋಲ–

೧೪ ಯ್ವತ್ತಱ ಬಳಿಯ ಬಾಡಂ ಮುಱುವಡಿಯ ಮುಂನ್ನಿಯ ಮೇಲಾಳಿಕೆಯುಂ ಬಾಹಿರ ಸೀಮೆಯೊ–

೧೫ ಳಗಣ ನಿಧಿನಿಧಾನನಿಕ್ಷೇಪಜಲಪಾಷಾಣಪೂಳಾವೃಕ್ಷಗುಲುಮಲತಾವಳಿ ಚತುರಾಘಾಟ

೧೬ ಕಲ್ಲಕಣಿ ಅರುವಣ..ದೆಱ ಮೂಲೆಗರರುವಣ ಅಷ್ಟಭೋಗತೇಜಸಾಮ್ಯ ದಂಡದೋಷ ಕಾಣಿಕೆ ಕಿ–

೧೭ ಱುಕುಳಾಯದಾಯ ಸರ್ಬ್ಬಯ ಶುದ್ಧವಾಗಿಯೆಂತಿನಿತುಮಂ ಶ್ರೀಮದ್ದಕ್ಷಿಣ ವಾರಣಾಸಿ

೧೮ ಧರ್ಮ್ಮದಮನೆಯಾದಿಪಟ್ಟಣ ಸಿರಿವೊಳಲ ಶ್ರೀಮತು ಸಿದ್ಧಸಾತೇಶ್ವರದೇವರ ಅಂಗಭೋಗರಂ–

೧೯ ಗಭೋಗ ಖಂಡಸ್ಫುಟಿತ ಜೀರ್ನ್ನೋದ್ಧಾರಕ್ಕಂ ಶಿವಯೋಗಿಗಳಶನಾತ್ಸಾಧನಕ್ಕಂ ಶ್ರೀಮತು ಸರ್ವ್ವ–

೨೦ ದೇವದಯೊಳಗೆ ಶಿವಯೋಗಿ ಶಾ[ನ್ತಿ*]ಮಯ್ಯಂಗಳ ಮಹಿಮೆಯೆಂತೆನೆ ॥ ಕೃತಯುಗ ತ್ರೇತೆ–

೨೧ ಮೂಱನೆಯ ದ್ವಾಪರದೊಳು ನೆಗಳ್ದ ಭೂತೋದ್ಭವರ್ಬ್ಬಶ್ರಿತ ಬ್ರತಾನುಕಾರಿ
ಗಳು ದಿಬ್ಯಸಹಸ್ರಶತಾ-

೨೨ ನುಮಬ್ದ ಕಿಂಕರನು ಹರಯಿಬಳಿಕವಾತೆಸೆದೀವನದೆಂತೆನೆ ಶಾನ್ತಿಮಯ್ಯ ತತುಕ್ಷ-

೨೩ ಣದೊಳೆ ಭಕ್ತಿಯ ಪಡೆದನೇಂ ಕಲಿವೀರನೋ ವೀರಭದ್ರನೋ ॥ ಶ್ರೀಮದಣಿ
ಮಾದ್ಯಷ್ಟಗುಣಸಂ-

೨೪ ಪಂನರುಂ ತತ್ವಜ್ಞಾನಪ್ರಸನ್ನರುಂ ಷಡಂಗಯೋಗಸಂಗದರುಂ ಸಸಾರಭ್ಯಸಂಗ
ನಿಸಂಗರುಮಪ್ಪ ಶಿವಯೋ-

೨೫ ಗಿ ಶಾನ್ತಿಮಯ್ಯದೇವಂಗಳ ಪುತ್ರ ರೇವಣದೇವಯ್ಯಂಗಳ ಪ್ರಸಿದ್ಧತಿಕೆಯೆಂತೆನೆ ॥
ಒರ್ಬ್ಬಳ ತಂಡುಳದಿಂ-

೨೬ ದಮ್ದುರ್ಬ್ಬೀಶನ ರಾಯಕಟಕವಂ ತಣಿಪಿದನಾ ಸರ್ಬ್ಬಜ್ಞಮೂರ್ತ್ತಿ ಜಗದೊಳ
ಗೊರ್ಬ್ಬನೆ ಶಿವಸಿಧ ಚ-

೨೭ ಕ್ರಿ ರೇವಣದೇವಂ ॥ ತೋಱಿ ತುಂಬಿ ಬಂದಡರೆ ತಾ ಹಱುಗೋಲಂ ತನ್ನಿವೆಂನ
ದಾಜ್ಞಾಬಲದಿಂ ತೋಱಿ-

೨೮ ಯಂ ದಾಂಟುವನಿಂತೀ ಕುಱುಪಿನ ತತುಕಾರನೀ ರೇವಣದೇವಂ ॥ ಅಂದೊಂಮ್ಮೆ
ಸಿದ್ಧನೆಂದೊಡೆ

೨೯ ನಿಂದಿಸಿದರು ಮನುಜರೆಲ್ಲ ಧರೆ ಭೂರ್ಭ್ಭುಗಿಲೆನೆ ಬೆಂದುದು ಸತ್ವರಜಂತಮ
ವಂದಿನ ಸಿದ್ಧಂ ಪ್ರ-

೩೦ ಸಿದ್ಧ ರೇವಣದೇವಂ ॥ ಮುನ್ನೊಮ್ಮೆ ಸಿದ್ಧನಾಗಿಯುವನ್ನದ ತವನಿಧಿಯ
ತೋಱಿ ಲೋಕದೊಳಂ

೩೧ ಮತ್ತಿನ್ನೊಮ್ಮೆ ನೋರ್ಪ್ಪನೆಂದುಂ ತಂನಂ ತಾನಱಿಪ್ಪ ನೆಗಳ್ದ ರೇವಣದೇವಂ ॥
ತಾರದ ಮಂದ್ರದ ಮಧು-

೩೨ ರದ ಸಾರಾಯದ ಸಪ್ತಸರದಿಂದ ಸರೇಶ್ವರಸಂ ಭೋರೆನೆ ಕೇಳಿಸುತಿಪ್ಪ ಧಾರಿಣೆ
ತಳದೊಳಗೆ ನೆಗಳ್ದ ರೇವಣದೇವ ॥

೩೩ ನ್ರಿತ್ಯಕ್ಕೆ ನಿಂದಡೆವೆ ಬಲದತ್ಯದ್ಭುತ ಮರುಳತಂಡ ರೌದ್ರಮಿದೆನಲುಂ ಪ್ರತ್ಯಕ್ಷ
ಲಿಂಗ ಬೆಮರಲು ಸತ್ಯ-

೩೪ ದಿಂದತ್ಯಂತ ಸಿದ್ಧರೇವಣದೇವ ॥ ಅನ್ತಾ ಭೂಲೋಕ ಸಿದ್ಧಪ್ರಸಿದ್ಧರಪ್ಪ ರೇವಣ
ದೇವಯ್ಯಂಗಳ

೩೫ ಪಾದಪ್ರಕ್ಷಾಳನಂ ಮಾಡಿ ತ್ರಿಭೋಗಾಭ್ಯಂತರ ಸರ್ಬ್ಬನಮಶ್ಯವಾಗಿ ಧಾರಾ
ಪೂರ್ಬ್ಬ-

೩೬ ಕಂ ಮಾಡಿ ಕೊಟ್ಟರು ಮಂಗಳ ಮಹಾ ಶ್ರೀಶ್ರೀ. . .ಯ ಪ್ರಭುಗಳು ಎಂಟು ಹಿಟ್ಟುಗ

೩೭ ಳಮಯ್ಯಂ. . . . .ಂಭು ಸೋಮನಾಥದೇವರಾಣೆಯ. .

೩೮ ಲೂರು ನಾವಿದಿಗೆಯೂರಾ. . . . . .ಮಿ ಪೂರ್ಬ್ಬಮರ್ಯ್ಯಾಲದೆ ॥. .

೩೯ ತ್ತಂ ಪರದತ್ತಂ ವಾಯೋಹ. . . . . .ಣೆ ವಿಪ್ಟಾಯಾ. .

೪೦ ತೆ ಕ್ರಿಮಿ ॥. . . . . .ಲನಿಯೊಭವ. . . . . .

೪೧ ವಿನಃ ಪಾರ್ತ್ಥಿ. . . . .ಃ॥

• •

ವೀಣೆಗುರುಬಸವನ ಒಂದು ಹಾಡು

● ಎಸ್. ಉಮಾಪತಿ

ರಾಗ : ಜಂಪೆ (ಖಂಡಛಾಪು)*

ದೊರಕುವುದು । ಪುಣ್ಯನೋ । ಡಮ್ಮ ಶರ । ಣರ ಸಂಗ ।
ಪರತರಾ । ನಂದದೊಳ । ಗಿಪ್ಪ ಮಹಿ । ಮರ ಚರಿತೆ ॥ಪಲ್ಲವಿ॥

ಹಿಮಗಿರಿಯ । ಆಧಾರ । ದಲ್ಲಗ್ನಿ । ಗಿರಿಯಿರಲು ।
ಹಿಮಗಿರಿಯ । ಸುತನಣ್ಣ । ತಮ್ಮನನು । ಕೊಲುತಿರಲು ।
ಹಿಮಗಿರಿಯ । ಪುರದರಸು । ಕಯ್ಯಮುಗಿ । ವುತ್ತಿರಲು ।
ಹಿಮ ಹಿಮಾ । ರಮವೆಂಬ । ವಾಕ್ಯ ಕೇ । ಳುತ್ತಿರದೆ ।
ಕ್ರಮದಿಂದ । ಬೇಗ ನೋ । ಡಿ— । ತಿಳಿದು ತಾ ।
ಹಿಮ ಹಿಮಾ । ತ್ಮಕವ ಕೂ । ಡಿ— । ಇಂತಪ್ಪ ।
ಸುಮನಸದಿ । ಎರಡಳಿದ । ವಿಮಲ ಪುರು । ಷರ ಸಂಗ
ದೊರ....... ॥೧॥

ಟೀಕು : ಶರಣರ– ತ್ರಿವಿಧಲಿಂಗಾನುಭಾವಿಗಳಾದ ಶಿವಶರಣರ; ಸಂಗ– ಶಿವಾನುಭಾವದ ಗೋಷ್ಠಿಯ ಸಂಪರ್ಕವು; ದೊರಕುವದು –ಲಭಿಸುವುದು; ಪುಣ್ಯ– ಪೂರ್ವಾರ್ಜಿತ ಸುಕೃತವು; ನೋಡ– ಕಂಡಾ; ಅಮ್ಮ – ಎಲೆ ತಾಯೆ; ಎಂದು ಜ್ಞಾನ ಶಕ್ತಿಯ ಸ್ವರೂಪವಾದ ಗುರುಮೂರ್ತಿಯು ಕ್ರಿಯಾಶಕ್ತಿ ಸ್ವರೂಪವಾದ ಶಿಷ್ಯರಿಗೆ ಬೋಧಿಸುತ್ತಿಹರು.

ಪರತರಾನಂದದೊಳಗಿಪ್ಪ ಮಹಿಮರ– ಮಹಾತ್ಮರಾದ ಶಿವಶರಣರ: ಚರಿತೆ– ಷಡುಸ್ಥಲ ಜ್ಞಾನಕ್ರಿಯಾಚಾರದ ನಡವಳಿಯು; ದೊರಕುವುದು– ಸಿದ್ಧಿಸುವುದು; ಪುಣ್ಯ– ಮುನ್ನಮಾಡಿದ ಸುಕೃತಾನುಸಾರದ ಫಲವು; ನೋಡಾ– ಕಂಡ ಅಮ್ಮ– ಎಲೆ ತಾಯೆ; ಎಂದು ಜ್ಞಾನಶಕ್ತಿ ಸ್ವರೂಪವಾದ ಗುರುಮೂರ್ತಿಯು ಕ್ರಿಯಾಶಕ್ತಿಯ ಸ್ವರೂಪವಾದ ಶಿಷ್ಯರಿಗೆ ಬೋಧಿಸುತ್ತಿಹರು.

* ಈ ಹಾಡಿನ ಲಯವಿನ್ಯಾಸವನ್ನು ಗುರುತಿಸಿ ಕೊಟ್ಟ ಶ್ರೀಮಾನ್. ಕುಕ್ಕಿಲ ಕೃಷ್ಣಭಟ್ಟ, ಕೋಡ ಪದವು, ದಕ್ಷಿಣ ಕನ್ನಡ ಜಿಲ್ಲೆ, ಇವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳು.

ಪದಕ್ಕೆ ಟೀಕು : ಹಿಮ– ಅನಿಷ್ಟಾ ಪಂಚಕಾಸ್ವರೂಪವಾದ; ಗಿರಿಯ–ಮೂಲ ಅಹಂಕಾರಯುಕ್ತವಾದ ದೇಹದ; ಆಧಾರದಲ್ಲಿ– ಆಸ್ಪದದಲ್ಲಿ; ಅಗ್ನಿಗಿರಿ– ಚಿದಾಗ್ನಿ ಸ್ವರೂಪವಾದಾತ್ಮನು; ಇರಲು– ಆಶ್ರಯಿಸಿಕೊಂಡಿರಲು; ಹಿಮಗಿರಿಯ– ಅನಿಷ್ಟ ಪಂಚಕದ ಸ್ವರೂಪವಾದ ಮೂಲಹಂಕಾರಯುಕ್ತವಾದ ದೇಹಭಾವದಿಂದ ಹುಟ್ಟಿರಲ್ಪಟ್ಟ; ಸುತನ– ಜೀವಾತ್ಮನ; ಅಣ್ಣ– ಅಗ್ರಜನಾದ ಪರಮಾತ್ಮನು; ತಮ್ಮನನು– ಅನುಜನಾದ ಜೀವನ ಜೀವತ್ವವನು; ಕೊಲುತಿರಲು– ಅದೆ ದೇಹಭಾವದ ಪ್ರಪಂಚಿನೊಡನ ಕೂಡಿ ಚರಿಸಿದರೆ ಭವ ದುಃಖವಾದೀತಲಾ ಎಂದು, ಶಿವಾನುಭಾವದ ಬೋಧೆಯಿಂದ ದಂಡಿಸುತ್ತಿರಲು;

ಹಿಮಗಿರಿಯ –ಅನಿಷ್ಟ ಪ್ರಪಂಚ ಸ್ವರೂಪವಾದ ಮೂಲಹಂಕಾಯುಕ್ತವಾದ; ಪುರದರಸು– ದೇಹವೆಂಬ ಗ್ರಾಮಕ್ಕೆ ಕರ್ತೃವಾದ ಜೀವಾತ್ಮನು; ಕಯ್ಯ ಮುಗಿವುತ್ತಿರಲು– ಆ ದೇಹಭಾವದ ಪ್ರಪಂಚಿನೊಡನೆ ಕೂಡಿ ಚರಿಸುವುದಲ್ಲಾ ಎಂದು ದೈನ್ಯ ವೃತ್ತಿಯಿಂದ ಯೋಚಿಸಿಕೊಳ್ಳುತ್ತಿರಲು; ಹಿಮ– ಅನಿಷ್ಟಪಂಚಕಸ್ವರೂಪವಾದ ದೇಹವು; ಹಿಮಾರಮವೆಂಬ– ಭವದುಃಖಕ್ಕೆ ಕಾರಣವಾದುಂತಾದುದು ಎಂದು ಬೋಧಿಸುವ; ವಾಕ್ಯ– ಆ ಬೋಧೆಯನು; ಕೇಳುತ್ತ– ಬೆಸಗೊಳುತ್ತ; ಇಂದ– ಆ ದೇಹ ಭಾವದ ಪ್ರಪಂಚಿನೊಡನೆ ಕೂಡಿ ಚರಿಸುತ್ತಿರದೆ; ಕ್ರಮದಿಂದ– ಆ ಬೋಧೆಯ ಪರಿವಿಡಿಯಿಂದ; ಬೇಗ– ಗಮ್ಮನೆ; ನೋಡಿ– ಪರಾಂಬರಿಸಿ ತಿಳಿದು; ಹಿಮಹಿಮಾತ್ಮಕವ ಕೂಡಿ– ಆ ದೇಹಭಾವದ ಪ್ರಪಂಚ ಭವದುಃಖಕ್ಕೆ ಕಾರಣವಾದಂತಾದುದು ಎಂದು ಅರಿದು ಜ್ಞಾನೋದಯವಾಗಿ, ಗುರುಪಾವಸ್ತಿಯಂ ಮಾಡಿ, ಗುರುಕಾರುಣ್ಯವ ಪಡೆದು ಲಿಂಗಾಂಗ ಸಂಬಂಧಿಯಾದ ತಾ– ಶರಣನು; ಹಿಮ ಅನಿಷ್ಟಪಂಚಕ ಸ್ವರೂಪವಾದ ದೇಹಪ್ರಪಂಚ ನಷ್ಟವಮಾಡಿ ಆಚಾರಾಂಗಸ್ವರೂಪವನ್ನೈದಿಸಿ, ಆ ಆಚಾರಾಂಗವನು ಹಿಮಾತ್ಮಕವ ಪರಮ ಶಾಂತಿಸ್ವರೂಪವಾದ ಇಷ್ಟಲಿಂಗದ ಸತ್ಕ್ರಿಯೆಯಲ್ಲಿ; ಕೂಡಿ– ಸಮರಸವ ಮಾಡಿ; ಇಂತಪ್ಪ ಸುಮನಸದಿ– ಇಂತಹ ಉನ್ಮನೆಯ ಮನಸಿನಿಂಧ, ಎರಡ– ತಾನು ಲಿಂಗವೆಂಬ ದ್ವೈತಭಾವವನು; ಅಳಿದ– ನಷ್ಟವಮಾಡಿದ; ಇಂತಪ್ಪ– ಈ ಪ್ರಕಾರವಾದ; ವಿಮಲ– ನಿರ್ಮಲವಾದ; ಪುರುಷರ– ಸತ್ಪುರುಷರಾದ ಶಿವಶರಣರ; ಸಂಗ– ಅವಿರಳಜ್ಞಾನ ಕ್ರಿಯಾಚಾರದ ಕೂಟವು; ದೊರಕುವುದು– ಸಿದ್ಧಿಸುವುದು; ಪುಣ್ಯ– ಮುನ್ನಮಾಡಿದ ಸುಕೃತಾನುಸಾರದ ಫಲವು; ನೋಡಾ– ಕಂಡ; ಅಮ್ಮ –ಎಲೆ ತಾಯೆ ಎಂಬುದರ್ಥ ॥ ೧ ॥

ರಾಮನಣು। ಗನ ಮೊಸಳೆ। ನೀರಿಂಗೆ। ಎಳೆದೊಯ್ಯೆ
ರಾಮರಾ। ಮರ ಜನಕ। ಕೂಡೆತಾ। ಮೊರೆಗಯ್ಯೆ।
ರಾಮರಾ। ಮರು ಬಾಯ। ಬಿಡಲುತಾ। ಕರೆದೊಯ್ಯೆ।
ರಾಮರಾ। ಮರ ತಲೆಯು। ದಾರಿಯೊಳು। ಬೀಳಲಿಕೆ।

ಸೋಮನದ। ಮುಸುಕಸೂ।ಡೆ— । ಕೂಡೆತಾ ।
ರಾಮುರ।ಟ್ಟುಳಿಯನಾ।ಡೆ—।ಇಂತಪ್ಪ।
ರಾಮುಸಭೆ।ಯನು ಮೀಱ।ದಚಲ ಮಹಿ।ಮುರ ಚರಿತೆ ॥
ದೊರಕು....॥ ೨ ॥

ಟೀಕು : ರಾಮುನ– ಆತ್ಮರಾಮನಾದ ಪರಶಿವಲಿಂಗದ; ಅಣುಗನ– ಅಂಶಿಭೂತವಾದ ಜ್ಞಾನ ಕಲಾತ್ಮನ; ಮೊಸಳೆ– ಸಂಸಾರವಿಷಯುಜಲದಲ್ಲಿ ಕ್ರೀಡಿಸಲ್ಪಟ್ಟ ಮಾಯಾ ಶಕ್ತಿಯೆಂಬ ನಕ್ರನು; ನೀರಿಂಗೆ– ಸಂಸಾರ ವಿಷಯು ಜಲದತ್ತ; ಎಳದೊಯ್ಯೆ– ಬರಸೆಳೆದುಕೊಂಡು ಹೋಗಲು; ರಾಮು– ಆತ್ಮನ; ರಾಮು– ಕರಣಂಗಳ; ಜನಕ– ತಂದೆಯಾದ ಪರಶಿವಲಿಂಗವು ತಾನೆ ಗುರುವಾಗಿ ಬಂದು; ಕೂಡೆ– ಒಡನೆ; ಮೊರೆಗಯ್ಯೆ– ಆ ಚಿದಾಂಶಿಕನಾದ ಆತ್ಮನ ಸಂಸಾರವಿಷಯುಜಲದತ್ತ ಬರಸೆಳೆದುಕೊಂಡು ಹೋಗಬಹುದೆ ಎಂದು ಆಕ್ರೋಶ ಧ್ವನಿಯಿಂದ ಮಾಯಾಶಕ್ತಿಯನು ಸಂಹರಿಸುತ್ತಿರಲು; ರಾಮು– ಆತ್ಮನು; ರಾಮುರು– ಕರಣಂಗಳು; ಬಾಯುಬಿಡಲು– ಶಿವಾಪೇಕ್ಷೆಯಿಂದ ಗುರೂಪಾವಸ್ಥೆಯು ಮಾಡಲು; ತಾ ಕರದೊಯ್ಯೆ– ತಾ ಆ ಮಾಯಾಶಕ್ತಿ ತಾನು ಶುದ್ಧ ವಿದ್ಯಾಶಕ್ತಿಯಾಗಿ; ಕರೆದೊಯ್ಯೆ– ಆತ್ಮನ ಆಹ್ವಾನಿಸಿಕೊಂಡು ಹೋಗಿ, ಗುರು ತತ್ವದಲ್ಲಿ ಕೂಡಿಸಿ ಬಿಡಲು: ರಾಮು– ಆತ್ಮನ; ರಾಮುರ– ಕರಣಂಗಳ; ತಲೆಯು– ಸುಜ್ಞಾನವೆಂಬ ಶಿರಸ್ಸು; ದಾರಿಯೊಳು– ಸುಕೃತ ಮಾರ್ಗದಲ್ಲಿ; ಬೀಳಲಿಕೆ– ಸನ್ನದ್ಧವಾಗಲಿಕೆ.

ಸೋಮನದ – ಇಷ್ಟಲಿಂಗ ಸಂಬಂಧವಾದ; ಮುಸುಕ – ಸತ್ಕ್ರಿಯಾಚಾರವೆಂಬ ಅಂಬರವನು; ಸೂಡೆ–ಅಂಗಕ್ಕೆ ಆವರಣವ ಮಾಡಿಕೊಳಲು; ಕೂಡೆ – ಆ ಆವರಣವ ಮಾಡಿಕೊಂಡವನೆ; ತಾ– ಆ ಜ್ಞಾನ ಕಲಾತ್ಮನಾದಂತ ಶರಣನು ತಾನು; ರಾಮುರ– ಮನಮಾರುತರೆಂಬ ಕಾಲ ಕಾಮುರಿಂದಾಗುವಂತಾ ಜನನ ಮುರಣಂಗಳನು; ಅಟ್ಟುಳಿಯ ನಾಡೆ–ಓಡಿಸಿ ಬಿಡಲು; ಇಂತಪ್ಪ– ಈ ಪ್ರಕಾರವಾದ; ರಾಮುಸಭೆಯನು ಸಕಲ ಕರಣಂಗಳ ವರ್ತನೆಗಳನು, ಮೀಱದ– ಅತಿಕ್ರಮಿಸಿ, ಅವನೆಲ್ಲ ಲಿಂಗ ಕರಣಂಗಳಾಗಿ ಅಳವಡಿಸಿಕೊಂಡ; ಅಚಲಸ್ಥಿರವಾದ; ಮುಹಿಮುರ–ಘನ ಮುಹಾತ್ಮರಾದ ಶಿವಶರಣರ; ಚರಿತೆ– ಅಪರಿಳಜ್ಞಾನ ಕ್ರಿಯಾಚಾರದ ಸದಾವಳಿಯು; ದೊರಕುವುದು– ಸಿದ್ಧಿಸುವುದು; ಪುಣ್ಯ-ಪೂರ್ವಾರ್ಜಿತ ಸುಕೃತವು; ನೋಡಾ–ಕಂಡಾ; ಅಮ್ಮ–ಎಲೆತಾಯೆ ಎಂಬುದರ್ಥ ॥ ೨ ॥

ಅಳಿದೊರ್ವ।ನಾಕಾಶ।ದಲ್ಲಿಗುಡಿ।ಗಟ್ಟಿರಲು।
ಬಳಗವೆ।ಲ್ಲವು ಬಂದು।ಆಳುತ ತ।ಬ್ಬಿತ್ತಿರಲು।
ಅಳಿಯುನ।ಕ್ಕಗೆ ತಮ್ಮ।ತಾನೆಗತಿ।ಎನುತಿರಲು।

ಕಾಳಿಯೊಳಗೆ। ಮಳಲೆಣ್ಣೆ । ಬರಿಸಿ ದೀ । ಪವತುಂಬಿ ।
ಕುಳವಾಡಿ। ಮಗಳು ಬಂ । ದು— । ಕಳೆಯೊಳಗೆ ।
ತಿಳಿದೊಂದು । ಗೂಡಿ ನಿಂ । ದು— । ಇಂತಪ್ಪ ।
ಹೆಳವ ಗುರು । ಬಸವನೊಳ । ಗಿಪ್ಪಮಹಿ । ಮರ ಚರಿತೆ॥

ದೊರಕು........॥೩॥

ಟೀಕು : ಅಳಿದೋರ್ವನಾಕಾಶದಲ್ಲಿ ಗುಡಿಗಟ್ಟಿರಲು– ಓರ್ವ– ಅದ್ವಿತೀಯ ಸ್ವರೂಪವಾದ ಬ್ರಹ್ಮತಾನಾದಂತಾ ಒಬ್ಬಾನೊಬ್ಬ ಶರಣನು; ಅಳಿದು– ತಾನೆಂಬ ಭಾವವ ನಷ್ಟವ ಮಾಡಿಬಿಟ್ಟು; ಆಕಾಶದಲ್ಲಿ–ಆತ್ಮಾಕಾಶದೊಳಗೆ; ಗುಡಿಗಟ್ಟಿ–ಹರುಷ ಭಾವವನೊಡಗೂಡಿ, ತೋರಣವಾಗಿ ಅಳವಡಿಸಿಕೊಂಡು; ಇರಲು–ಪ್ರಾಣಲಿಂಗ ಸಂಬಂಧಿಯಾಗಿರಲು, ಬಳಗವೆಲ್ಲವು–ಮನ ಮೊದಲಾದ ಸಕಲ ಕರಣಂಗಳು; ಬಂದು ಆ ಪ್ರಾಣಲಿಂಗ ಸಂಬಂಧಕ್ಕೆ ಅನುಗುಣೆಗಳಾಗಿ ಶಿವೋಹಂ ಪ್ರಾಣವೋಹಂ ಬ್ರಹ್ಮೋಹಂ ಎಂದು; ಅಳುತ್ತ– ಉಚ್ಚರಿಸುತ್ತ; ತಬ್ಬುತ್ತಿರಲು–ಪ್ರಾಣಲಿಂಗವನು ಮುಟ್ಟಿ ಮುಟ್ಟಿ ಆರಾಧಿಸುತ್ತಿರಲು;

ಅಳಿಯನಕ್ಕಗೆ ತಮ್ಮ ತಾನೆಗತಿ ಎನುತ್ತಿರಲು– ಅಳಿಯಂ–ಜ್ಞಾನಶಕ್ತಿಯ ಮಗಳಾದ ಕ್ರಿಯಾಶಕ್ತಿಗೆ ಶರಣನು ರಮಣನಾದ ಕಾರಣ, ಆ ಜ್ಞಾನ ಶಕ್ತಿಗೆ ಶರಣನು ಅಳಿಯನೆನಿಸಿಕೊಂಡನು. ಅಂತಪ್ಪಳಿಯನಾದ ಶರಣನು, ಅಕ್ಕಗೆ–ತನ್ನಗ್ರಜೆಯಾದ ಜ್ಞಾನ ಶಕ್ತಿಗೆ; ತಮ್ಮ– ಅನುಜನಾದ ಶರಣನು; ತಾನೆಗತಿ ಎನುತ್ತಿರಲು–ಜ್ಞಾನವನು ವರ್ಧನವ ಮಾಡುವುದಕ್ಕೆ ಆಸ್ಪದವೆಂದು ಹೇಳುತ್ತಿರಲು; ಕುಳಿಯೊಳಗೆ–ಶಿವಧರ್ಮ ವೆಂಬ ಗಡ್ಡೆಯೊಡನೆ ಕೂಡಿದ ಸುಜ್ಞಾನನಾಳವೆಂಬ ಕಂಬದ ಮೇಲಿರುವ ಸುವಿವೇಕ ದೊಡನೆ ಕೂಡಿದ ಹೃದಯಾಬ್ಜವೆಂಬ ಪ್ರಣತೆಯೊಳಗೆ ನಿರ್ಮಲ ಮನಸ್ಸೆಂಬ ನೀರ ಬುತ್ತಿಯನಿಟ್ಟು; ಮಳಲ–ಚಿತ್ಕರಣಂಗಳಲ್ಲಿ ತುಂಬಿರುವ; ಎಣ್ಣೆ–ಸದ್ಭಕ್ತಿರಸವೆಂಬ ತೈಲವನು; ಬರಿಸಿ– ಆಗುಮಾಡಿಕೊಂಡುಬಂದು; ದೀಪವ– ಮಹಾಜ್ಞಾನವೆಂಬ ಜ್ಯೋತಿಯನು; ತುಂಬಿ–ಪ್ರಕಾಶವ ಮಾಡಿ; ಕುಳವಾಡಿ–ಸರ್ವಾಚಾರ ಸಂಪತ್ತಿನಾ ಚರಣೆಗೆ ಅಧಿಷ್ಠಾನುಕರ್ತೃವಾದ ಸದ್ಗುರು ದೇವನ; ಮಗಳು–ಕುಮಾರಿಯಾದ ಕ್ರಿಯಾಶಕ್ತಿಯು; ಬಂದು– ಆ ಪ್ರಾಣಲಿಂಗದಲ್ಲಿ ಕೂಡುವುದಕ್ಕೆ ಅನುಗುಣೆಯಾಗಿ ಐತಂದು, ಕಳೆಯೊಳಗೆ ತಿಳಿದೊಂದುಗೂಡಿ ನಿಂದು, "ಕಳೆಯೊಳಗೆ ಕಳೆವರಂ ಶರೀರ್ಯ" ಎಂದು, ದೇಹದಲ್ಲಿ ತಿಳಿದು ಆ ಪ್ರಾಣಲಿಂಗದಲ್ಲಿ ಕೂಡುವಂತಾದೆ ಶ್ರೇಷ್ಟವೆಂದರಿದು: ಒಂದುಗೂಡಿ–ಏಕರಸವಾಗಿ ಬೆರೆದು; ನಿಂದು– ಆ ಪ್ರಾಣಲಿಂಗವೆ ತಾನು ತಾನೆ

ಪ್ರಾಣಲಿಂಗವಾಗಿ ನೆಲೆಗೊಂಡು; ಇಂತಪ್ಪ ಹೊಳವ ಗುರುಬಸವನೊಳಗಿಪ್ಪ ಮಹಿಮರ ಚರಿತೆ ದೊರಕುವದು ಪುಣ್ಯ ನೋಡಮ್ಮ.

ಹೊಳವ-ಸಕಲ ಶರಣ ಜನಂಗಳ ಹೃದಯಾಬ್ಜದಲ್ಲಿ ನೆಲೆಗೊಂಡು ಪ್ರಕಾಶಿಸುವ; ಗುರು–ಜಗದಾರಾಧ್ಯನಾದ; ಬಸವನೊಳಗೆ–ಬಸವೇಶ್ವರನೆ ತಾನಾದ ಪ್ರಾಣಲಿಂಗದಲ್ಲಿ; ಇಪ್ಪ–ಕೂಡಿರುವ: ಇಂತಪ್ಪ........ಎಲೆ ತಾಯೆ ಎಂಬುದರ್ಥ ॥ ೩ ॥

ಮೇಲಿನ ಹಾಡನ್ನು ಮುರುಘಾಮಠ ಚಿತ್ರದುರ್ಗ ಮತ್ತು ಮುರುಘಾಮಠ ಬ್ಯಾಡಗಿಯಲ್ಲಿ ದೊರೆತ ಓಲೆಪ್ರತಿಗಳಿಂದ ಪ್ರತಿಮಾಡಲಾಗಿದೆ.

• •

ಒರೆಗಲ್ಲು

'ಕುಪ್ಪಕುೞಿ' ಎಂದರೇನು ?

ಇದೇ ಪತ್ರಿಕೆಯ ಹಿಂದಿನ ಸಂಚಿಕೆಯೊಂದರಲ್ಲಿ (ಕರ್ನಾಟಕ ಭಾರತಿ, ೫, ೧. ಪು. ೧೫೫-೬೦) 'ಲಕ್ಕುಂಡಿ ಶಾಸನದ ಒಂದು ಪದ್ಯ ಮತ್ತು ಭಗವತಿಯೇಱು ಎಂಬ ನನ್ನ ಒಂದು ಲೇಖನ ಪ್ರಕಟವಾಗಿದೆ. ಆ ಶಾಸನದ ಪದ್ಯದಲ್ಲಿ ಬರುವ 'ಕುಪ್ಪಕುೞಿ' ಎಂಬ ಮಾತಿನ ಬಗ್ಗೆ ಬರೆಯುತ್ತ ಅದು "ಉತ್ತರ ಕರ್ನಾಟಕದಲ್ಲಿದ್ದ ಯಾವುದೋ ಮಕ್ಕಳ ಆಟವನ್ನು ಹೇಳುವಂತೆ ಕಾಣುತ್ತದೆ" ಎಂದು ಊಹಿಸಿದ್ದೆ. ಹಾಗೆ ಊಹಿಸಲು ಧರ್ಮಾಮೃತದ (೧೩.೭೭) "ಕುಪ್ಪಕುೞಿಯಾಡುವ ಮಕ್ಕಳಂತೆ ತನ್ನಂ ಪೊಗೞ್ದು ಕೊಳ್ಳದೆ" ಎಂಬ ಉಕ್ತಿ ಆಧಾರ. 'ಕುಪ್ಪಕುೞಿ' ಮಾತು ನಮಗೆ ತಿಳಿದಮಟ್ಟಿಗೆ ಇರುವುದು ಈ ಎರಡು ಕಡೆ ಮಾತ್ರ. ಧರ್ಮಾಮೃತದಲ್ಲಿ ಬರುವ ಸಂದರ್ಭ ನೋಡಿದರೆ ಅದೊಂದು ಮಕ್ಕಳ ಆಟ ಎಂಬುದು ತೀರಾ ಸ್ಪಷ್ಟ.

ಆದರೆ ಇದೇ ಹೆಸರಿನ ಮಕ್ಕಳ ಆಟ ಬೆಂಗಳೂರುಜಿಲ್ಲೆಯ ಗೋರಿಬಿದನೂರುತಾಲೂಕಿನ ಹಳ್ಳಿಗಳಲ್ಲಿ ಇನ್ನೂ ಜೀವಂತವಾಗಿದೆಯೆಂಬ ಸೋಜಿಗದ ಸಂಗತಿ ತಿಳಿಯಿತು.[೧] ಅದನ್ನು 'ಕುಪ್ಪೆಕುರಿ' ಎನ್ನುತ್ತಾರೆ. ಸುಮಾರು ಹತ್ತು ಹನ್ನೆರಡುವರ್ಷ ವಯಸ್ಸಿನ ಹುಡುಗರು ಸಂಜೆ ಹೊತ್ತು ಇದನ್ನು ಆಡುತ್ತಾರೆ. ಆಟದಲ್ಲಿ ಎರಡು ಪಂಗಡಗಳಾಗಿ, ಒಂದೊಂದು ಪಂಗಡದಲ್ಲೂ ನಾಲ್ಕಾರು ಹುಡುಗರು ಸೇರುತ್ತಾರೆ. ಒಂದೊಂದು ಪಂಗಡವೂ ತಮ್ಮ ತಮ್ಮ ಕ್ಷೇತ್ರವನ್ನು ಆರಿಸಿಕೊಳ್ಳುತ್ತಾರೆ. ಉದಾ : ಇಂಥವರ ಮನೆಯಿಂದ ಇಂಥ ಮನೆಯವರೆಗೆ ಅಥವಾ ಇಂಥ ಬೀದಿಯವರೆಗೆ ಒಂದೊಂದು ಪಂಗಡವೂ ಬೇರೆ ಬೇರೆಯಾಗಿ ತಮ್ಮ ತಮ್ಮ ಕ್ಷೇತ್ರದ ಸೀಮೆಯಲ್ಲಿ ಇನ್ನೊಂದು ಪಕ್ಷದವರಿಗೆ ಗೊತ್ತಾಗದಂತೆ ಚಿಕ್ಕ ಚಿಕ್ಕ ಮಣ್ಣಿನ ಗುಡ್ಡೆಗಳನ್ನು (ಕುಪ್ಪೆಗಳನ್ನು) ಆ ಕ್ಷೇತ್ರದ ಸಂದಿ ಮೂಲೆಗಳಲ್ಲಿ ಇಡುತ್ತಾರೆ. ಒಂದೊಂದು ಕಡೆ ಹತ್ತು ಹದಿನೈದರಂತೆ ನಾಲ್ಕಾರು ಕಡೆ ಗುಡ್ಡೆಗಳನ್ನು ಹಾಕುತ್ತಾರೆ. ಇದೆಲ್ಲ ಹತ್ತು ಹದಿನೈದು ನಿಮಿಷದ ಕೆಲಸ. ಗುಡ್ಡೆ ಹಾಕುವುದನ್ನು ನಿಲ್ಲಿಸಿ ಒಂದು ಪಂಗಡದ

೧ ಇದನ್ನು ತಿಳಿಸಿದವರು ಶ್ರೀ. ಕೆ. ಎಂ. ಕೃಷ್ಣೋಜಿರಾವ್ ಅವರು. ಲಕ್ಕುಂಡಿ ಶಾಸನದ ಪದ್ಯ ವಿವರಿಸುವಾಗ, 'ಕುಪ್ಪಕುೞಿ' ಎಂದರೆ ಎಂತಹ ಮಕ್ಕಳ ಆಟವೋ ಏನೋ ಎಂದು ನಾನು ಸಂದೇಹ ವ್ಯಕ್ತಪಡಿಸಿದಾಗ, ಅವರು ಆ ಆಟ ತಮ್ಮಲ್ಲಿರುವುದಾಗಿ ತಿಳಿಸಿ ನನ್ನನ್ನು ಆಶ್ಚರ್ಯಚಕಿತನನ್ನಾಗಿ ಮಾಡಿದರು.

ಹುಡುಗರು 'ಶ್ಯಾಲೆ ಮೇಲೆ ಗುಡ್ಡು' (=ಸೀರೆಯ ಮೇಲೆ ಗುಡ್ಡೆ)[೨] ಎಂದು ಕೂಗುತ್ತ ಆಟ ಆರಂಭವಾದ ಜಾಗಕ್ಕೆ ಬಂದರೆ, ಗುಡ್ಡೆ ಹಾಕಲು ಹೋಗಿದ್ದ ಇನ್ನೊಂದು ಪಕ್ಷದ ಹುಡುಗರು ತಮ್ಮ ಕೆಲಸ ಮುಗಿಸಿ ಅವರೂ ಅಲ್ಲಿಗೆ ಬಂದು ಸೇರುತ್ತಾರೆ. ಈಗ ಮೊದಲ ಪಕ್ಷದವರು ಇನ್ನೊಂದು ಗುಂಪಿನವರನ್ನು ಸುಮ್ಮನೆ ಹಿಂಬಾಲಿಸುತ್ತಾರೆ. ಗುಡ್ಡೆಗಳ ಗುಂಪನ್ನು ಹುಡುಕಿ ಹುಡುಕಿ ಅಳಿಸಬೇಕು ಅಥವಾ ಕೆಡಿಸಬೇಕು. ಪೂರ್ತಿ ಹುಡುಕಿ ಕೆಡಿಸಿದರೆ ಗೆದ್ದಂತೆ. ಆದರೆ ಎಷ್ಟು ಗುಡ್ಡೆಗಳನ್ನು ಹುಡುಕದೆ ಹೋಗಿರುತ್ತಾರೋ ಅಷ್ಟು ಏಟನ್ನು ಸೋತವರು ತಿನ್ನಬೇಕು. ಈಗ, ಮೊದಲ ಪಕ್ಷದವರ ಗುಡ್ಡೆಗಳನ್ನು ಇನ್ನೊಂದು ಗುಂಪಿನವರು ಹುಡುಕಬೇಕು. ಅಲ್ಲಿಯೂ ಹುಡುಕದೆ ಉಳಿಯುವ ಗುಪ್ಪೆಗಳನ್ನು ಎಣಿಸಿ, ಅಷ್ಟು ಏಟು ಕೊಡುತ್ತಾರೆ ಗೆದ್ದವರು ಸೋತವರಿಗೆ. ಅಲ್ಲಿಗೆ ಆಟ ಮುಗಿಯುತ್ತದೆ. ಮತ್ತೆ ಅದೇ ಆಟವನ್ನು ಹೊಸದಾಗಿ ಆರಂಭಿಸಬಹುದು. ಈ ಇಡೀ ತಮಾಷೆಯ ಆಟ ಅರ್ಧಗಂಟೆ ನಡೆಯಬಹುದು.

ಧರ್ಮಾಮೃತದ ಮತ್ತು ಲಕ್ಕುಂಡಿ ಶಾಸನದ 'ಕುಪ್ಪಕುೞಿ'ಯೂ ಈ 'ಕುಪ್ಪೆ ಕುರಿ' ಆಟವೂ ಒಂದೇ ಎಂಬಲ್ಲಿ ಅನುಮಾನವಿಲ್ಲ. ಮಕ್ಕಳು ತಮ್ಮ 'ಕುಪ್ಪಕುೞಿ' ಆಟದಲ್ಲಿ ತಮ್ಮನ್ನು ತಾವು ಹೊಗಳಿಕೊಳ್ಳುತ್ತಿದ್ದರೆಂದು ನಯಸೇನನಲ್ಲಿ ಬಂದಿದೆ. ಈಗಿನ ಆಟದಲ್ಲೂ ಗೆದ್ದವರು ಹೊಗಳಿಕೊಳ್ಳುತ್ತಾರೆ (ಮತ್ತು ಸೋತವರಿಗೆ ಸಣ್ಣ ಏಟು ಕೊಡುತ್ತಾರೆ). ಲಕ್ಕುಂಡಿ ಶಾಸನದಲ್ಲಿ "ಸಾಮಾನ್ಯರ ಕೀರ್ತಿಯೆಲ್ಲ ಕುಪ್ಪಕುೞಿ" ಎಂದು ಹೇಳುವಾಗ, ಅವರ ಕೀರ್ತಿ ಗಂಭೀರಸ್ವರೂಪದ್ದಲ್ಲ, ಬಹಳ ಲಘುವಾದುದು, ಹಾಸ್ಯಾಸ್ಪದವಾದುದು ಎಂಬ ವಿಡಂಬನೆ ಸ್ಪಷ್ಟವಾಗಿದೆ. ಕುಪ್ಪೆಕುರಿ ಆಟದಲ್ಲಿ ಪಡೆಯುವ 'ವಿಜಯ' ಕೇವಲ ತಮಾಷೆಯದು, ಲಘುವಾದುದು. ಇಟ್ಟ ಮಣ್ಣಿನ ಗುಪ್ಪೆಗಳನ್ನು ಹುಡುಕಿ ಅಳಿಸುವುದು ಮಹತ್ಕಾರ್ಯವೇನೂ ಅಲ್ಲ; ಅದು ಕೇವಲ ಹುಡುಗಾಟಿಕೆ.

'ಕುಪ್ಪಕುೞಿ (ಲಕ್ಕುಂಡಿ ಶಾಸನ), 'ಕುಪ್ಪ ಕುೞಿ' (ಧರ್ಮಾಮೃತ), 'ಕುಪ್ಪೆ ಕುರಿ' (ಈಗಿನ ಆಟ)- ಈ ಮೂರು ರೂಪಗಳಲ್ಲಿ -ಕುೞಿ ಎಂಬ ಉತ್ತರಾರ್ಧವನ್ನು ತಿರಸ್ಕರಿಸಬಹುದು. ಅದು 'ಕುೞಿ' ಎಂಬಲ್ಲಿ ಅನುಮಾನವಿಲ್ಲ. ಪೂರ್ವಾರ್ಧ 'ಕುಪ್ಪ' ಇರಬಹುದು. 'ಕುಪ್ಪಂ' ಎಂದರೆ ಗುಡ್ಡೆ, ರಾಶಿ ಎಂದರ್ಥ. ಕನ್ನಡದಲ್ಲಿ ಕುಪ್ಪ, ಕುಪ್ಪೆ, ಗುಪ್ಪೆ ಎಲ್ಲಕ್ಕೂ ಇದೇ ಅರ್ಥ. ಆದ್ದರಿಂದ ಈಗಿನ ಆಟದ ಹೆಸರಲ್ಲಿರುವ 'ಕುಪ್ಪೆ'ಗೂ ಸಮರ್ಥನೆಯಿದೆ. ಉತ್ತರಾರ್ಧ 'ಕುೞಿ' ಎಂಬುದು ಗುರುತು, ಸಂಕೇತ ಎಂಬರ್ಥದ ಪದ. (ನೋಡಿ. ಕುೞಿ = to mark, to take

೨ ಈ ಮಾತಿನ ಅರ್ಥದ ಔಚಿತ್ಯವೇನೋ ತಿಳಿಯದು. ಕೂಗುವುದು ಮಾತ್ರ ಇನ್ನೊಂದು ಪಂಗಡದವರು ಬರಲಿ ಎಂಬ ಸಂಕೇತಕ್ಕಾಗಿ.

note; a mark, a sign). ಕುಱುಪ್ಪ, ಕುರುಹು ಇದರಿಂದಲೇ ಬಂದ ಪದಗಳು. 'ಗುಱುತು' ಎನ್ನುವುದೂ ಇದೇ ಮೂಲವುಳ್ಳದ್ದು.

ಮಣ್ಣಿನ ಕುಪ್ಪ/ಕುಪ್ಪೆಗಳನ್ನು ಸಂಕೇತ ಅಥವಾ ಗುರುತು ಮಾಡಿಕೊಂಡು ಆಡುವ ಆಟವೇ 'ಕುಪ್ಪಕುಱು' ಅಥವಾ ಕುಪ್ಪೆಕುರಿ.[3]

—ಎಂ. ಚಿದಾನಂದಮೂರ್ತಿ

೨. ಗರಣಿಬಸವಲಿಂಗನ "ಸಿದ್ಧೇಶ್ವರನ ಪವಾಡದ ತಾರಾವಳಿ"ಯ ಒಂದು ಹಸ್ತಪ್ರತಿ :

ಮದ್ರಾಸ್‌ಸರ್ಕಾರದ ಪ್ರಾಚ್ಯಸಂಶೋಧನಾಲಯದ ಕನ್ನಡಹಸ್ತಪ್ರತಿಗಳ ವರ್ಣನಾತ್ಮಕಸೂಚಿ[1]ಯ ಸಂಪುಟ ನಾಲ್ಕು, ಕ್ರಮಾಂಕ ೮೨೪ (ಪುಟ ೧೧೫೨–೧೧೫೪) ರಲ್ಲಿ 'ಸಿದ್ಧೇಶ್ವರನ ಪವಾಡದ ವಚನ' ಎಂಬ ಕೃತಿಯ ಉಲ್ಲೇಖವಿದೆ. ಕೃತಿ ಅಪೂರ್ಣವಾಗಿದ್ದು ಸೂಚಿಯಿಂದ ಕೃತಿಕಾರನ ಬಗೆಗೆ ಯಾವ ಸಂಗತಿಯೂ ತಿಳಿದುಬರುವುದಿಲ್ಲ.

ಮೇಲೆ ಉಕ್ತವಾದ ಕೃತಿಯ ಸಮಗ್ರ ಪ್ರತಿಯೊಂದು [K. 356] 'ಕನ್ನಡ ಅಧ್ಯಯನ ಸಂಸ್ಥೆ' (ಮೈಸೂರು ವಿಶ್ವವಿದ್ಯಾನಿಲಯ) ಯ ಸಂಗ್ರಹದಲ್ಲಿ ಉಪಲಬ್ಧವಿದೆ. ಕೃತಿಯ ಅಂತ್ಯದಲ್ಲಿ ೭ ಕಂದಗಳಿದ್ದು ಅವುಗಳಲ್ಲಿ ಮೊದಲನೆಯದರಿಂದ ಕೃತಿಕಾರ ಗರಣಿಬಸವಲಿಂಗನೆಂಬ ಅಂಶ ತಿಳಿದುಬರುತ್ತದೆ.

ಕೃತಿಕಾರನನ್ನು ಹೆಸರಿಸುವ ಆ ಕಂದ ಇಂತಿದೆ :

ಗುರು ತೋಂಟದ ಯತಿರಾಯನ
ವರಮಹಿಮೆಯನಖಿಳ ಭಕ್ತರೆಲ್ಲಾ ಮಾಹೇ–
ಶ್ವರರೋದಲೆಂದು ಹರ ಕಿಂ–
ಕರ ಗರಣಿಯಬಸವಲಿಂಗನಿ ನೀನುತಿವೇಳ್ದಂ

ಈ ಮೇಲಿನ ವಿವರಣೆಯಿಂದ ಸೂಚಿಯ ಕ್ರಮಾಂಕ ೮೨೪ ರ ಕರ್ತೃ ಗರಣಿಬಸವಲಿಂಗನೆಂಬ ಸಂಗತಿ ಸ್ಪಷ್ಟವಾಗುತ್ತದೆ.

೩ ಕನ್ನಡ ಸಾಹಿತ್ಯಪರಿಷತ್ತಿನ ಕನ್ನಡ ನಿಘಂಟಿನಲ್ಲಿ (ಸಂಪುಟ ಪು. ೧೯೩೫) 'ಕುಪ್ಪಕುಱು' ಎಂದರೆ ಮಕ್ಕಳು ಆಡುವ ಒಂದು ಬಗೆಯ ಆಟವೆಂಬ ಅರ್ಥವನ್ನು ಕೊಟ್ಟಿದೆ. ನಿಷ್ಪತ್ತಿಯ ಬಗ್ಗೆ ಸಂದೇಹವನ್ನು ವ್ಯಕ್ತಪಡಿಸಿದೆ. ಮೇಲೆ ಕೊಟ್ಟ ನಿಷ್ಪತ್ತಿ ಆ ಪದವನ್ನು ಸಮರ್ಪಕವಾಗಿ ವಿವರಿಸುತ್ತದೆ.

೧ A Descriptive Catalogue of the Kannada Manuscripts in the Government Oriental Manuscripts Library, Madras. Ed. A. ankaran, Vol. IV, No. 824

೨ ಈತನ ಕಾಲ ಇತ್ಯಾದಿಗಳಿಗೆ 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' ಸಂಪುಟ ೨೪. ಸಂಚಿಕೆ ೪ (ಪು. ೨೮೧–೨೮೨) ನೋಡಿ.

ಶಂಕರದೇವನ "ಇಷ್ಟಲಿಂಗ ಚಾರಿತ್ರ"ದ ಒಂದು ಹಸ್ತಪ್ರತಿ :

ಮದ್ರಾಸ್‌ಸರ್ಕಾರದ ಪ್ರಾಚ್ಯಸಂಶೋಧನಾಲಯದ ಕನ್ನಡಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ[1]ಯ ಸಂಪುಟ ನಾಲ್ಕು, ಕ್ರಮಾಂಕ, ೭೯೩ (ಪುಟ ೧೧೧೯–೧೧೨೦) ರಲ್ಲಿ 'ವೀರಶೈವ ವಿಷಯ'ವೆಂಬ ಹೆಸರಿನ ಕೃತಿಯೊಂದರ ಉಲ್ಲೇಖವಿದೆ. ಕೃತಿ ಅಪೂರ್ಣ ವಾಗಿದ್ದು ಅದರ ಆದ್ಯಂತ್ಯಗಳಿಲ್ಲ. ಸೂಚಿಯ ಸಂಪಾದಕರು ಕೃತಿಯ ಬಗೆಗೆ ಯಾವ ಗ್ರಂಥದ ಭಾಗವೆಂದು ತಿಳಿಯಬರುವದಿಲ್ಲ ಎಂದಿದ್ದಾರೆ.

ಮೇಲೆ ನಿರ್ದೇಶಿತವಾದ ಅಸಮಗ್ರ ಕೃತಿ ಶಂಕರದೇವ (ಸು. ೧೫೦೦)ನ ಇಷ್ಟ ಲಿಂಗ ಚಾರಿತ್ರ[2] (ಅಥವಾ ಇಷ್ಟಲಿಂಗ ಸ್ತೋತ್ರ)ಕ್ಕೆ ಸಂಬಂಧಿಸಿದುದಾಗಿದೆ. ಸೂಚಿ ಯಲ್ಲಿ ಉದ್ಧೃತವಾಗಿರುವ ಪದ್ಯಗಳು ಕ್ರಮವಾಗಿ ೨೭, ೨೮, ೩೫ ಮತ್ತು ೪೩ನೆಯ ಷಟ್ಪದಿಗಳಾಗಿವೆ.

ಹೀಗಾಗಿ ಸೂಚಿಯಲ್ಲಿನ ಕ್ರಮಾಂಕ ೭೯೩ರಲ್ಲಿನ 'ವೀರಶೈವ ವಿಷಯ' ಎಂಬ ಉಲ್ಲೇಖ 'ಇಷ್ಟಲಿಂಗ ಚಾರಿತ್ರ'ವೆಂದೂ, ಅದರ ಕರ್ತೃ ಶಂಕರದೇವನೆಂದು ತಿದ್ದುಪಡಿ ಯಾಗಬೇಕಾಗಿದೆ.

—ಎಸ್. ಶಿವಣ್ಣ

●

೩. ಶಾಸನದಲ್ಲಿ ಇನ್ನೊಂದು ತ್ರಿಪದಿ :

'ತ್ರಿಪದಿ : ಛಂದಸ್ಸಿನ ಸ್ವರೂಪ ಮತ್ತು ಇತಿಹಾಸ'[1] 'ಶಾಸನ ಛಂದಸ್ಸು'[2] 'ಎರಡು ಶಾಸನೋಕ್ತಸೇರಿ ಒಟ್ಟು ಐದು ತ್ರಿಪದಿಗಳು'[3] ಎಂಬ ಮುಂತಾದ ಲೇಖನ ಗಳಲ್ಲಿ ಡಾ. ಎಂ. ಚಿದಾನಂದಮೂರ್ತಿ, ಡಾ. ಎಂ. ಎಂ. ಕಲ್ಬುರ್ಗಿ– ಇವರುಗಳು ಶಾಸನಗಳಲ್ಲಿ ಬಂದ ತ್ರಿಪದಿಗಳ ಬಗೆಗೆ ಲೇಖನಗಳನ್ನು ಈಗಾಗಲೇ ಬರೆದಿದ್ದಾರೆ. ಆ ಪಂಕ್ತಿಗೆ ಇನ್ನೊಂದು ಶಾಸನವನ್ನು ಸೇರಿಸುವುದು ಈ ಕಿರುಲೇಖನದ ಗುರಿ.

---

೧ A Descriptive Catalogue of the Kannada Manuscripts in the Government Oriental Manuscripts Library, Madras. Ed. Sankaran, Vol. IV, No. 793.

೨ K.42/2 (ಗರಿ 9–18); ಕನ್ನಡ ಅಧ್ಯಯನ ಕೇಂದ್ರ (ಬೆಂಗಳೂರು ವಿಶ್ವವಿದ್ಯಾಲಯ) ದ ಸಂಗ್ರಹ.

೧ ಡಾ. ಎಂ. ಚಿದಾನಂದಮೂರ್ತಿ, ಸಂಶೋಧನ ತರಂಗ (೧೯೬೬) pp. 31-35, 205-241

೨ ಡಾ. ಎಂ. ಎಂ. ಕಲ್ಬುರ್ಗಿ, ಕರ್ನಾಟಕ ಭಾರತಿ, ಸಂ. ೩; ಸಂಚಿಕೆ–೪. ಪುಟ ೫೮–೬೦.

೩ ಡಾ. ಎಂ. ಚಿದಾನಂದಮೂರ್ತಿ, ಸಾಧನೆ, ಸಂ. ೫; ಸಂಚಿಕೆ–೩, pp. 164-165

ದಿ. ಡಾ. ಪಿ. ಬಿ. ದೇಸಾಯಿಯವರು ಸಂಪಾದಿಸಿದ ಶಾಸನ ಸಂಪುಟ S.I.I. Vol. XV. (B. K. I. Vol. II) ಶಾಸನ ಸಂಖ್ಯೆ– ೨೧೪ (೧೧೯೮ A. D.) ರಲ್ಲಿ ಒಂದು ತ್ರಿಪದಿಯನ್ನು ಬರೆದಿದೆ. ಧಾರವಾಡ ಜಿಲ್ಲೆಯ ಗದಗಿನಲ್ಲಿರುವ ತ್ರಿಕೂಟೇಶ್ವರ ದೇವಸ್ಥಾನದಲ್ಲಿಯ ಪ್ರಾಕಾರದ ಗೋಡೆಯಲ್ಲಿ ಕಟ್ಟಿರುವ ಕಲ್ಲುಚಪ್ಪಡಿಯಲ್ಲಿ ಕೆತ್ತಿರುವ ಶಾಸನದಲ್ಲಿ ಈ ಪದ್ಯ ಬಂದಿದೆ. ಶಾಸನದಲ್ಲಿ ಇದನ್ನು 'ತ್ರಿಪದಿ' ಎಂದೇ ಸೂಚಿಸಿದೆ. ಆ ಭಾಗವಿಂತಿದೆ :

14. . . . . ॥ ತ್ರಿಪದಿ ॥ ನವಿಲ
15ಕ್ಕಿ ಮೂಡವನೇಱಿ³ಮಂಡಲಿಕನೇಸರನೋಂತು [ಬೆಳ್ವೊಲ ನಾಡೆಲ್ಲವ]
ನಾಳ್ದಂ ಶೌರ್ಯನಿಧಿ ಕೆಂಚ ॥೪

ಇದನ್ನು ಓದಿದಾಗ ಇದರಲ್ಲಿ ಅರ್ಥದೃಷ್ಟಿಯಿಂದ ಕೆಲದೋಷಗಳಿದ್ದುದು ಸ್ಪಷ್ಟವಿದೆ. ಛಂದಸ್ಸಿನ ದೃಷ್ಟಿಯಿಂದಲೂ ಸದ್ಯ ಇದು ಅಂಶಗಣದ ತ್ರಿಪದಿಯೆಂದು ಹೇಳಲು ಬರುವದಿಲ್ಲ. ಶಾಸನ ಓದುವವರು ಚಾಕ್ಷುಷ ರೂಪದ ಸಾದೃಶ್ಯತೆಯ ಕಾರಣದಿಂದ 'ಮೂಡವನೇಱಿ'ಯನ್ನು 'ಮೂಡವನೇಜಿ³ (ಱಿ/ಜಿ³) ಎಂದೂ ಮತ್ತು 'ಮಂಡಲಿಕ ವೆಸರ' ಎಂಬುದನ್ನು 'ಮಂಡಲಿಕನೇಸರ' (ವೆ/ನೇ) ಎಂದೂ ತಪ್ಪು ಓದಿರಲೂ ಸಾಧ್ಯವಿದೆ; ಇಲ್ಲವೆ ಕಂಡರಣೆಕಾರನು ಅಕ್ಷರಗಳನ್ನು ತಪ್ಪು ಕೆತ್ತಿರಲೂಬಹುದು. ಏನೇ ಇರಲಿ ಈ ಪದ್ಯವನ್ನು ಹೀಗೆ ಪರಿಷ್ಕರಿಸಬಹುದು.

ನವಿಲಕ್ಕಿ।ಮೂಡವ।ನೇ[ಱಿ]। ಮಂಡಲಿ (ವಿ+ವಿ+ಬ್ರ+ವಿ)
ಕ[ವೆ]ಸರ।ನೋಂತು।ಬೆಳ್ವೊಲ ನಾಡೆ (ವಿ+ಬ್ರ+ವಿ+ಬ್ರ)
ಲ್ಲವನಾಳ್ದಂ । ಶೌರ್ಯ । ನಿಧಿ ಕೆಂಚ॥ (ವಿ+ಬ್ರ+ವಿ)

ರಸದಶ (೬ ಮತ್ತು ೧೦ನೆಯ) ಸ್ಥಾನಗಳಲ್ಲದೆ ಮೂರನೆಯ ಹಾಗೂ ಎಂಟನೆಯ ಸ್ಥಾನಗಳಲ್ಲಿ 'ಬ್ರಹ್ಮಗಣ' ಬಂದಿರುವುದೂ ಮೊದಲನೆಯ ಪಾದದಲ್ಲಿ ಒಳಪ್ರಾಸವಿಲ್ಲದುದೂ ಗಮನಾರ್ಹ ಸಂಗತಿ. ಶೌರ್ಯನಿಧಿ ಕೆಂಚ, ನವಿಲ ಪಲ್ಲಕ್ಕಿಯನ್ನೇರಿ ಮಂಡಲಿಕ ಎಂಬ ಪ್ರಶಸ್ತಿಯನ್ನು ಹೊಂದಿ (ಅಥವಾ ಪಡೆದು) ಬೆಳ್ವೊಲ ನಾಡನ್ನು ಆಳಿದನೆಂಬುದು ಪದ್ಯದ ಭಾವ.[೫]

—ಸೀತಾರಾಮ ಜಾಗೀರದಾರ್

• •

೪ SII. Vol. XV. No.214 pp. 256-258 (Lines : 14 and 15).

೫ ಈ ಲೇಖನವನ್ನು ಬರೆಯುವಲ್ಲಿ ಡಾ. ಹಾ. ಮಾ. ನಾಯಕ ಹಾಗೂ ಡಾ. ಬಾ. ರಾ. ಗೋಪಾಲ ಮೊದಲಾದ ಹಿರಿಯರಿಗೆ ಋಣಿಯಾಗಿದ್ದೇನೆ.

ಗ್ರಂಥಾವಲೋಕನ

ಸಂತೆಯಲ್ಲೊಂದು ಮನೆ (ವಿಮರ್ಶೆಗಳು) : ದೇಶಪಾಂಡೆ ಸುಬ್ಬರಾಯ. ಪ್ರ. : ಕಾವ್ಯಾಧಾರಾ ಪ್ರಕಾಶನ, ಧಾರವಾಡ, ೧೯೭೫; ಪುಟ : ೫೦; ಬೆಲೆ : ೪-೫೦, ೧೧-೫೦.

ತನ್ನ ವಿಶಿಷ್ಟ ಆಲೋಚನಾವಿಧಾನದಿಂದ, ಮೊನಚುದೃಷ್ಟಿಕೋನದಿಂದ, ಇದೆಲ್ಲವನ್ನೂ ಭಾಷೆಯಲ್ಲಿ ರಭಸವಾಗಿ, ಗಾಢವಾಗಿ ತೋರಿಸಬಲ್ಲ ವಿಲಕ್ಷಣಶೈಲಿಯಿಂದ ನಮ್ಮ ಗಮನಸೆಳೆಯುವ ಶ್ರೀ ದೇಶಪಾಂಡೆಯವರ ಗದ್ಯಬರವಣಿಗೆಯ ಮೊದಲ ಕಂತು : "ಸಂತೆಯಲ್ಲೊಂದು ಮನೆ". ಗ್ರಂಥದ ಶೀರ್ಷಿಕೆಯೇ, ತಾನು ಒಳಗೊಂಡ ವಿಷಯಗಳ ವೈವಿಧ್ಯ, ವೈಷಮ್ಯ ಹಾಗೂ ಅಸ್ತವ್ಯಸ್ತ ವಿಚಾರಸರಣಿಯನ್ನು ಸ್ಪಷ್ಟವಾಗಿ ಸೂಚಿಸುವಂತಿದೆ. ಸಾಂಪ್ರದಾಯಿಕ ಶೈಲಿಯಲ್ಲಿ, ರೂಢಿಗ್ರಸ್ತ ಹೇಳಿಕೆಗಳ ಏಕತಾನದಲ್ಲಿ, ಅನಿರ್ದಿಷ್ಟ ಅಭಿಪ್ರಾಯ-ಧೋರಣೆಗಳ ಮುಚ್ಚುಮರೆಯಲ್ಲಿ ಬೆಳೆಯುತ್ತಿರುವ ನಮ್ಮ ಬಾಕೀ ಎಲ್ಲ ವಿಮರ್ಶಾಬರಹಗಳಿಗೆ, ವಿಮರ್ಶಕರಿಗೆ ಹಾಗೂ 'ರಿವ್ಯೂ'ಗಾರರಿಗೆ ಒಂದು ಬಗೆಯ 'ಶಾಕ್' ಮುಟ್ಟಿಸುವ ತುರ್ತಿನ ಕೆಲಸವನ್ನಿಲ್ಲಿ ಕೈಕೊಂಡಿದ್ದಾರೆ ದೇಶಪಾಂಡೆ. ನಮ್ಮ ವಿಮರ್ಶೆಯ ಧಾಟಿ-ಧೋರಣೆಗಳು ಆಮೂಲಾಗ್ರ ಬದಲಾಗಬೇಕೆನ್ನುವ ನಮ್ಮೆಲ್ಲರ ಕಳಕಳಿ ನಿಜವೇ ಆಗಿದ್ದರೆ, ದೇಶಪಾಂಡೆಯವರ ಈ ಬರಹಗಳಲ್ಲಿ ಕೆಲವಾದರೂ 'ಶಾಕ್' ಕೊಡುವುದಕ್ಕಿಂತ ಹೆಚ್ಚಾಗಿ, ಹೊಸ ದಿಗ್ದರ್ಶನ ಮಾಡಬಲ್ಲ ಗುಣವನ್ನೂ ಹೊಂದಿವೆ. ಆದರೆ ಈ ಗುಣ ಸ್ವಯಂಪೂರ್ಣವಲ್ಲ. ಏಕೆಂದರೆ ಈ ವಿಮರ್ಶಕನನ್ನು ಕೆಣಕುವ, ಪ್ರಚೋದಿಸುವ ಮುಖ್ಯ ಕಾಳಜಿಗಳು ಒಂದೇ ರೀತಿಯಾಗಿ, ಕೊನೆತನಕವೂ ತಮ್ಮ ಮೂಲ ಕಳಕಳಿಯನ್ನೂ ಗಾಂಭೀರ್ಯವನ್ನೂ ಉಳಿಸಿಕೊಳ್ಳುವುದಿಲ್ಲ. ಆದುದರಿಂದ ಈ ಪುಸ್ತಕ, ದೇಶಪಾಂಡೆಯವರ ಬಗೆಗೆ ಯಾವ ಭರವಸೆಯನ್ನೂ ಹುಟ್ಟಿಸುವುದಿರಲಿ, ಇವರ ವಿಮರ್ಶಾದೃಷ್ಟಿಯ ಮಿತಿಯ ಬಗೆಗೇ ಅನುಮಾನ ಹುಟ್ಟಿಸುತ್ತವೆ; ಸದ್ಯದ ಮಟ್ಟಿಗೆ ನಿರಾಶೆಯನ್ನು ಉಂಟುಮಾಡುತ್ತವೆ.

ಇಲ್ಲಿಯ ಎಂಟು ಬರಹಗಳ ಗುರಿ ಒಂದೇ ಅಲ್ಲ. ಅವುಗಳಿಂದ ಹೊರಬರುವ ವಿಮರ್ಶಾಧ್ವನಿಯೂ ಒಂದೇ ತರದ್ದಲ್ಲ. ಹಾಗೆಂದು, ಇಲ್ಲಿ ಗುಣಾತ್ಮಕವಾದ ವೈವಿಧ್ಯವಿದೆಯೆಂದು ಹುಡುಕಲುಹೋದರೆ ನಿರಾಶೆಯೇ ಆಗುತ್ತದೆ. ಮೂಲತಃ ಸ್ಪಷ್ಟ, ನಿಷ್ಠುರ ವಿಚಾರವಾದಿಯಾಗಿ ಮೊದಮೊದಲು ಕಾಣಿಸಿಕೊಳ್ಳುವ ದೇಶಪಾಂಡೆ, ಕೆಲವು

ಸಂದರ್ಭಗಳಲ್ಲಿ ಸ್ವಾಭಾವಿಕವಾದ ತಮ್ಮ ವಸ್ತುನಿಷ್ಠೆಯ ಹದ್ದುಮೀರಿ ಬರೆಯ ತೊಡಗುತ್ತಾರೆ (ಉದಾ : ಪುಟ ೨೧ ರಲ್ಲಿ ಓಂಗಮಿರೆಯವರ ಬಗೆಗಿನ ಕೊನೆಯ ಮಾತು). ಹೀಗೆ ವಿಚಲಿತವಾಗುವುದಕ್ಕೆ ಯಾವ ಸಾಹಿತ್ಯಿಕ, ವಿಮರ್ಶಾತ್ಮಕ ಕಾರಣವೂ ಅವರ ಬೆಂಬಲಕ್ಕಿಲ್ಲ. ಕೇವಲವೆನಿಸುವ ವೈಯುಕ್ತಿಕ ಆಸ್ಥೆ, ಆತ್ಮೀಯತೆಗಳು ಈ ವಿಮರ್ಶಕನ ವಸ್ತುನಿಷ್ಠೆಯನ್ನು ಮಸುಳಿಸುವಲ್ಲಿಯೂ ವಿಲಕ್ಷಣ ಪಾತ್ರ ವಾಡುತ್ತವೆ. ಈ ಮಾತಿಗೆ ನಿದರ್ಶನ : 'ಪ್ರಾಣ ತುಂಬಿದ ಪಾತ್ರ' ನಾಟಕದ ವಿಶ್ಲೇಷಣೆ; "ಪ್ರೇಮ, ಕ್ಷಾಮ, ಕಾರ್ಮಿಕ...."ದಲ್ಲಿ ವ್ಯಕ್ತವಾಗುವ "ಆತ್ಮವಿಶ್ವಾಸ"ದ ಶರಾಗಳು. 'ಒಂದು ಕೆಟ್ಟ ಕವನಸಂಕಲನ'ದ ಪೊಳ್ಳುತನವನ್ನು ಛಿದ್ರ-ವಿಚ್ಛಿದ್ರ ಮಾಡಿ ಬಯಲಿಗೆಳೆಯುವ; 'ಮೊದ್ದುನಿಲುವಿನ ದಡ್ಡಸಂಪಾದಕೀಯ' ವನ್ನು ಸೂಕ್ಷ್ಮವಾಗಿ ಸೀಳುವ ದೇಶಪಾಂಡೆಯವರಿಗೆ, ಮೇಲುನೋಟದಲ್ಲೇ ತೀರ ಬಾಲಿಶವಾಗಿ ಕಾಣಿಸುವ, ಪ್ರಚಾರಧ್ಯೇಯವನ್ನೇ ಮುಖ್ಯವಾಗಿ ಉಳ್ಳ 'ಎಸ್ಕೆ' ಅವರ ಒಂದು ಜನಪ್ರಿಯ ರೇಡಿಯೋನಾಟಕ ಹಾಗೂ ಶರ್ಮ ಅವರ ಪದ್ಯರೂಪದ ಬರಹಗಳು ಸಮರ್ಥನೀಯ ಸಾಹಿತ್ಯವಾಗಿ ತೋರಲು ಯಾವ ಕಾರಣಗಳಿರಬೇಕು? ಈ ಪ್ರಶ್ನೆಗೆ ಉತ್ತರ, ತೀರ ವೈಯುಕ್ತಿಕ ತುರ್ತಿನದಾದ್ದರಿಂದ, ದೇಶಪಾಂಡೆಯವರು ವಿಭಿನ್ನ ಸ್ವಭಾವದ ಈ ಕೃತಿಗಳನ್ನು ಖಂಡತುಂಡವಾಗಿ ಅಳೆಯಲು ಹೊರಟ ಸಾಹಸ 'ಗಾಳಿಯೊಂದಿಗಿನ ಗುದ್ದಾಟ'ವಾಗಿ, 'ಗುಬ್ಬಿಯ ಮೇಲಿನ ಬ್ರಹ್ಮಾಸ್ತ್ರ'ವಾಗಿ ಪರಿಣಮಿಸಿಬಿಡುತ್ತದೆ. ಇಲ್ಲಿಯ ತೀವ್ರವಾದ ನಿಷ್ಠುರತೆಗೆ ಪ್ರಾಮಾಣಿಕತೆಯ ಬೆಂಬಲ ತೀರ ತೆಳುವಾಗಿಬಿಡುತ್ತದೆ.

"ಕಥೆಗಳಲ್ಲಿ ಕಳ್ಳತನ"ದ ಒಂದು ವಿಚಿತ್ರ ಪ್ರಕರಣದ ಬಗೆಗಿನ 'ವಾಚಕರವಾಣಿ'ಯ ಪತ್ರ, ಈ ವಿಮರ್ಶಾಪುಸ್ತಕದಲ್ಲಿ ತಲೆತೂರಿಸಿಕೊಂಡಿದ್ದರ ಔಚಿತ್ಯ ಎಷ್ಟು ತಲೆ ತುರಿಸಿದರೂ ಅರ್ಥವಾಗುವುದಿಲ್ಲ. ಆದರೆ ಕೃತಿಚೌರ್ಯದ ಒಂದು ನಾಚಿಗ್ಗೇಡಿ ಪ್ರಕರಣದ ಸುಳುಹು ಹಿಡಿದು, ಸಕಾಲಕ್ಕೆ ಓದುಗರ, ನವಲೇಖಕರ ಕಣ್ಣು ತೆರೆಸಿದ ದೇಶಪಾಂಡೆಯವರ ಪತ್ತೇದಾರಿಕೆ ನಿಜವಾಗಿಯೂ ಅಭಿವಂದನೀಯ. ಇಲ್ಲಿ ಪ್ರಕಟಗೊಂಡ ಅವರ ನೆನಪಿನಶಕ್ತಿಯ ಅಗಾಧತೆ ಬೆರಗುಪಡಿಸುತ್ತದೆ.

ತೇಜಸ್ವಿಯವರ ಒಂದು ವಿಚಾರಕ್ಕೆ ಸಾಂದರ್ಭಿಕ ಪ್ರತಿಕ್ರಿಯೆಯಾಗಿ ಬಂದ 'ಮಣ್ಣಿನ ವಾಸನೆ, ಸಮಕಾಲೀನ ಪ್ರಜ್ಞೆ' ಇತ್ಯಾದಿ ವಿಚಾರಗಳು ದೇಶಪಾಂಡೆಯವರ ಅಭ್ಯಾಸೀ ಮನೋಭಾವಕ್ಕೆ ಉತ್ತಮ ಉದಾಹರಣೆಯಾಗುಳಿಯುತ್ತವೆ. ಈ ವಿಚಾರ-ಅಂಶಗಳನ್ನೇ ಹಿಗ್ಗಿಸಿ, ವಿವರವಾಗಿ ಬರೆಯಲು ಅವರು ಮನಸ್ಸುಮಾಡಿದರೆ, ಆಧುನಿಕಸಾಹಿತ್ಯದ ಮೂಲಪ್ರೇರಣೆಗಳ ಕುರಿತು ನಾವು ಮೌಲಿಕವಾದುದನ್ನೇ ಇವರಿಂದ ದೊರಕಿಸಬಹುದು.

ಬಾದಲ್ ಸರಕಾರರ 'ಬಾಕೀ ಇತಿಹಾಸ' ನಾಟಕದ 'ಕಥಾವಿಶ್ಲೇಷಣೆ' ಒಂದು ಹೊಸತರದ ಪ್ರಯತ್ನ. ಆದರೆ ಈ ಬರವಣಿಗೆಯು ಸರಳವಾಗಿ ಓದಿಸಿಕೊಳ್ಳುವಷ್ಟು ಆಕರ್ಷಕವಾಗಿಲ್ಲ. ಭಾಷೆಯ ಬಿಗಿತ, ಯೋಚನೆಯ ರಭಸ ಇಡೀ ಬರವಣಿಗೆಯನ್ನು ಲಡ್ಡುಗೊಳಿಸಿವೆ.

'ಸಂಜೆ ಐದರ ಮಳೆ'ಯ ವಿಮರ್ಶೆ, ವಿಚಾರವನ್ನೇ ತೊತ್ತಳದುಳಿದು ವಾಗಾಡಂಬರದ ಶೈಲಿ, ಆವೇಶದ ಹೇಳಿಕೆಗಳ ರಭಸದಲ್ಲಿ ತನ್ನ ಜೋಕೆ-ತೂಕವನ್ನೇ ತಪ್ಪುತ್ತದೆ. ಯಾವೊಂದು ವಿಚಾರದ ಅಂಶವೂ ಸಮರ್ಥನೀಯವಾಗಿ ಪ್ರಕಟಗೊಂಡಿಲ್ಲ.

ಇಲ್ಲಿಯ ವಿಮರ್ಶಾಭಾಷೆಯಲ್ಲಿ ವಾಗಾಡಂಬರದ ಆಟೋಪವೇ ಎಲ್ಲ ಬರಹಗಳಲ್ಲೂ ವಿಜೃಂಭಿಸಿದೆ. ಒಮ್ಮೊಮ್ಮೆ ಈ ಶೈಲಿಯು ನಾಟಕೀಯವಾಗಿ, ಹತಾಶೆಯ ಕೀಚಲು ಧ್ವನಿಯನ್ನೂ ಹೊರಡಿಸುತ್ತದೆ. ವಿಚಾರವನ್ನೇ ನುಂಗಿಹಾಕುವ, ಒಮ್ಮೊಮ್ಮೆ ತೀರ ಸಾಮಾನ್ಯ ವಿಚಾರನಿರೂಪಣೆಯೂ ಅಸಾಮಾನ್ಯ ಪದ-ಪದಪುಂಜಗಳು ದಾಳಿ ಮಾಡುವ ರೀತಿಯಿಂದಾಗಿ ಓದುಗನ ತಾಳ್ಮೆ, ವಿವೇಚನೆಗಳು ಹಿಂಸೆಗೆ ಒಳಗಾಗುವದುಂಟು. ಇಂಥ ಅಹಿತಕರ ಅನುಭವಕ್ಕೆ ಒಳಗಾದ ಓದುಗ, ತಾನೂ ಈ ವಿಮರ್ಶಾ ಸಂತೆಯಲ್ಲಿ ಮನೆ ಮಾಡಿದ್ದೇನೆನ್ನುವ ಗಾಬರಿಗೆ ಒಳಗಾಗುವ ಸಂಭವವೂ ಉಂಟು. ನಿಜವಾಗಿಯೂ ಇದು ಯಾವ ಓದುಗನೂ ಅಪೇಕ್ಷಿಸದ ಸಂಗತಿ.

●

ಬೊಗಸೆ ತುಂಬದ ಬದುಕು (ಕವನಸಂಕಲನ): ದೇಶಪಾಂಡೆ ಸುಬ್ಬರಾಯ. ಪ್ರ.: ಕಾವ್ಯಧಾರಾ ಪ್ರಕಾಶನ; ೧೯೭೫: ಪುಟಗಳು ಐವತ್ತೆರಡು: ಬೆಲೆ: ರೂ. ೫ ಮತ್ತು ರೂ. ೧೨.

ಶ್ರೀ ದೇಶಪಾಂಡೆ ಸುಬ್ಬರಾಯರ ವಿಮರ್ಶಾಬರಹಗಳನ್ನು ಓದಿದಾಗ ಉಂಟಾಗುವ ಬೇಸರ, ನಿರಾಶೆಗಳು ಅವರ ಈ ಕವನಸಂಕಲನ ಓದುವಾಗ ಅಷ್ಟಾಗಿ ಕಾಡುವದಿಲ್ಲ. ಈ ಕವಿಯ ಸ್ವಭಾವಸಹಜ ತುಡಿತ-ಮಿಡಿತಗಳು ಸಂದರ್ಭಕ್ಕೆ ತಕ್ಕಂತೆ ಗಾಂಭೀರ್ಯವನ್ನೂ ವಿನೋದವನ್ನೂ ಪ್ರದರ್ಶಿಸುತ್ತ, ಒಮ್ಮೊಮ್ಮೆ ಭಾವಾಭಿನಯಿಸುತ್ತ ರೂಪುಗೊಳ್ಳುವ ಕ್ರಮದಿಂದಾಗಿ ಕೆಲಮಟ್ಟಿಗೆ ಆಕರ್ಷಿಸುತ್ತವೆ.

ತಮ್ಮ 'ಎರಡು ಮಾತು'ಗಳಲ್ಲಿ ಉದ್ದಕ್ಕೂ ಈ ಕವಿ, ಓದುಗರ ಮುಂದೆ ಹರಡುವ ತೀವ್ರ ಭಾವನಾತ್ಮಕ ಮಾತುಗಳಲ್ಲಿಯ ತುರ್ತಿಗೂ, ಕವನಗಳಲ್ಲಿ ಅವೇ ಮಾತು, ಮೂರ್ತಗೊಳ್ಳುವಕ್ರಿಯೆಗೂ ಎಲ್ಲೋ ಒಂದು ಬಗೆಯ ಕೊರಕಲು ಉಳಿದುಕೊಳ್ಳುತ್ತದೆ. ಅಂದರೆ, ತನ್ನ ನಿತ್ಯದ ವಾಸ್ತವ ಬದುಕಿನಲ್ಲಿ ಕವಿ ಗುರುತಿಸುವ

"....ಸುತ್ತಲಿನ ನೂರೊಂದು ಬಗೆಯ ಅನಿಶ್ಚಿತ 'ಬದುಕು'ಗಳ ಹಂತಗಳು, ಗುಂಪುಗಳು, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಇತಿವೃತ್ತಗಳು, ಮೆಟ್ಟಿಲುಗಳು, ಇವು ಈವ ಅಸಂಖ್ಯ ಅವಮಾನ, ಆನಂದ, ತಹತಹಗಳಿತ್ತ ಆಶೆ-ನಿರಾಶೆಗಳು, ಅನಿಸಿಕೆ-ವಿಚಾರಗಳು ಮತ್ತು ಅನುಭವ-ಅನುಭೂತಿಗಳನ್ನು ಪ್ರಜ್ಞೆ ಮೂಸೆಯಲ್ಲಿ ಪುಟಕ್ಕಿಟ್ಟು, ಪ್ರಾಮಾಣಿಕತೆಯ ಚಾಣಕ್ಕೊಡ್ಡಿ...." ಈ ತರದ ಗದ್ಯ ಮಾತಿನಲ್ಲಿಯ ಸವಾಲುಗಳು ಕವನವಾಗುವ ಸೂಕ್ಷ್ಮ ಕ್ಷಣಗಳಲ್ಲಿ ಇಡಿಯಾಗಿ. ಈ ತರದ ವೈಭವ, ಆಢ್ಯತೆಯನ್ನು ಉಳಿಸಿಕೊಳ್ಳದೆ ತರಲವಾಗುವ ಸಾಧ್ಯತೆಗಳೇ ಹೆಚ್ಚು. ಆದುದರಿಂದ, ಮಾತು-ಕೃತಿಗಳ ನಡುವೆ, ಅಪ್ರಯತ್ನವಾಗಿ ಸಂಭವಿಸುವ ಈ ಕೊರಕಲು, ದೇಶಪಾಂಡೆಯವರ ಕಾವ್ಯ ರಚನೆಯ ಮಿತಿಗಳನ್ನು ನಿರ್ದೇಶಿಸುತ್ತದೆ.

ತಮ್ಮ ಈ ಮುಂಚಿನ ಕವನಸಂಕಲನ 'ನಾಲ್ಕು ಓಡಿಬೆಂಕಿ' (೧೯೬೯) ಗಿಂತ ದೇಶಪಾಂಡೆ, ಈ ಬಾರಿ ಕೆಲಮಟ್ಟಿಗೆ ಬೆಳೆದಿದ್ದಾರೆ. ಅಲ್ಲಿರುವ ಗಾಢ ಅನುಭವದ ತೀವ್ರ ಅಭಿವ್ಯಕ್ತಿ ಇಲ್ಲಿಲ್ಲವಾದರೂ ಅಂದಿನ ಅಸ್ಪಷ್ಟ, ಅಮೂರ್ತವಾಗಿ ಉಳಿಯುವ ಸ್ಪಂದನೆಗಳು ಇಲ್ಲಿಲ್ಲ. ತಮ್ಮ ಕಣ್ಣು, ಕಿವಿ,ಮೂಗುಗಳನ್ನಾದರೂ ತೋರಿಸುತ್ತವೆ. 'ನಾಲ್ಕು ಓಡಿ ಬೆಂಕಿ'ಯಲ್ಲಿಯ ಅನುಭವ ಒಂದೇ; ಅದರ ದೃಶ್ಯ ಚಿತ್ರಗಳಲ್ಲಿ ಮಾತ್ರ ವೈವಿಧ್ಯವಿದೆ. 'ಬೊಗಸೆ ತುಂಬಿದ ಬದುಕಿ'ನಲ್ಲಿಯ ಕವಿಯ ಅನುಭವಸಾಮಗ್ರಿ ಅಲ್ಲಿಯಂತೇ ವೈಯುಕ್ತಿಕವಾಗಿದ್ದರೂ ಇದು ಒಳಗೊಳ್ಳುವ ಪ್ರತಿಮಾಪ್ರಪಂಚ ಕೆಲವು ಸಂದರ್ಭಗಳಲ್ಲಿ ಬಹಿರ್ಮುಖದ್ದಾಗಿ, ಕವಿಯ ಕಾಳಜಿ ವಸ್ತುನಿಷ್ಠವಾಗಿ ಹಬ್ಬುವ ಸ್ಪಷ್ಟ ಲಕ್ಷಣಗಳನ್ನು ಪಡೆಯುತ್ತದೆ.

ವಿಷಣ್ಣತೆ, ಅವ್ಯಕ್ತ ವಿಲಿವಿಲಿತನ, ದೇಶಪಾಂಡೆಯವರ ಕಾವ್ಯದ ಸ್ಥಾಯೀಭಾವ. "ಭಾರ ರೆಪ್ಪೆಗಳಡಿಯಲ್ಲಿಯೇ ಉಡಿ ತುಂಬಿ ನಿಂತಂತೆ ಭಾಸ"ವಾಗುವ "ನಿನ್ನೆಯ ಆ ಹೊರಳು ದಾರಿಯ ಬದುಕು" ಕವಿಯ ಪಾಲಿಗೆ ನಿಶ್ಚಲದ ಸಂಗತಿಯಾಗಿ ಕಂಡಿದೆ. ಇದರ ಪರಿಣಾಮ: ನಿರಾಶೆಯ-ಹತಾಶೆಯ ಧ್ವನಿ, ಹೀಗೆ ಸಹಜವಾಗಿ ಹೊರಪಡುತ್ತದೆ:

ಇಲ್ಲಿ ಹೀಗೆಯೇ
ಇದ್ದದ್ದು ಬರೀ ಸುದ್ದಿಯಾಗಿ
ಸುದ್ದಿ ಗಣಕವಾಗಿ, ಗಾಳಿಯಾಗಿ, ಹವೆಯಾಗಿ
ಕೊನೆಗೆ ಲಯವಾಗಿ ಇಲ್ಲದಾಗಿ
ಹೋಗುವುದು ಕಾಲನಿಯಮ

'ದೃಶ್ಯಗಳು', 'ಯಾನ' ಈ ಕವನದ ಶಿಲ್ಪ ಖಚಿತವಾದ, ವ್ಯವಸ್ಥಿತವಾದ ರೀತಿಯಲ್ಲಿ ರೂಪುಗೊಂಡಿದೆ. ಮೂಲದ ವಿಷಣ್ಣತೆಯು ವಿಡಂಬನವಾಗುವ ಕ್ರಮದಲ್ಲಿ

ಭಾಷೆ ವಹಿಸುವ ಪಾತ್ರ ತುಂಬ ಕಿಳುವಾದದ್ದು. ಕವಿತೆಯ ವಸ್ತು ವಿಶಿಷ್ಟ ಬಗೆಯ ವಿವರಗಳನ್ನೊಳಗೊಂಡಿದ್ದರೂ ಧಾಟಿಯಲ್ಲಿ ತೂರಿಕೊಳ್ಳುವ ವಿದೂಷಕತನದ ಧ್ವನಿ. ಬರೀ ನಗೆಚಾಟಿಕೆಯ ಅನುಭವವನ್ನಷ್ಟೇ ನೀಡಿ ಒಟ್ಟು ಪರಿಣಾಮಕ್ಕೆ ಎರವಾಗುತ್ತದೆ. ಉದಾ : ''ಇದಕ್ಕಾಗಿ ನೂರೆಂಟು, ಸಾವಿರ ಎಕ್ಸ್‌ಟ್ರಾಗಳ ನಿಧನ'' ಹಾಗೂ

"ಈಗ ನೋಡಿ. ನಮ್ಮ ಅದ್ಭುತ ಡಿನ್ನರಿನ ರವಾನಿ,
ಬೆಚ್ಚನೆಯ ಅಂಗಾಂಗಗಳ ಬಿಸಿಬಿಸಿ ಬಿರಿಯಾನಿ,
ಚಿಕ್ಕಮುಗುಗಳ ಕೊಬ್ಬಿದವಯವದ ಪಲಾವು
ಕಮ್ಮನೆ ತುಪ್ಪದಲಿ ಹುರಿದಿಟ್ಟ ತಂದೂರಿ ಚಿಲ್ಡ್ರನ್"

ಇತ್ಯಾದಿ ಮಾತುಗಳು. ''ಯಾನ'', ಈ ಕವಿತಾಸಂಕಲನದ ಪ್ರಮುಖ ಕವನವಾಗಿ ಕಂಡರೂ ದುರ್ಬಲತೆಯನ್ನು ತನ್ನ ಮೈಯಲ್ಲಿ ಒಡಗೂಡಿಸಿಕೊಂಡೇ ರಚಿತವಾದದ್ದು. ''ಏನೊ ಅಂತೆ. ಎಲ್ಲೋ ಸುದೂರ ಸಾಗಬೇಕಂತೆ. ಈ ದೋಣಿ ಈಗ ನಮ್ಮದಂತೆ, ನಮ್ಮದೇ" ಎಂದು ಸುರುವಿಗೇ ಕವಿ, ತಾನಾರಿಸಿಕೊಂಡ ವಸ್ತುವಿಗೆ ಪಕ್ಕಾಗಿರುವ 'ಸ್ಥಿತಿ' ಯೊಂದಿಗೆ ನಿರ್ಲಿಪ್ತ ಸಂಬಂಧ ಏರ್ಪಡಿಸಿಕೊಂಡುಬಿಡುತ್ತಾನೆ. ಇದರಿಂದ, ಗುರುರಚಿತ ಪಯಣಕ್ಕೆ ಪಕ್ಕಾಗಿರುವ ''ಯುಗ"ದ ಗಂಭೀರ ಗತಿಯ ಚಲನವಲನಗಳಿಂದ ಕವಿ ಹೊರಗೇ ನಿಲ್ಲುವಂತಾಗುತ್ತದೆ. ಅಂದರೆ, 'ಯಾನ'ದ ಬಹಿರ್ಮುಖ ಚಟುವಟಿಕೆಗಳ ಸೂಕ್ಷ್ಮವಾದ, ಸೊಗಸಾದ ವಿವರಗಳ ವರ್ಣನೆಗೆ ಮಾತ್ರ ತೊಡಗುವ ಕವಿಯ ಬಾಹ್ಯಾವತರಣದ ನಿಲವು, ಚಿಂತನೆಯ ವ್ಯಾಪ್ತಿಯನ್ನೇ ಮೊಟಕುಗೊಳಿಸಿದೆ. ಚಿಂತನೆ, ಕೇವಲ ವಿಡಂಬನೆಯ ಧಾಟಿಯಲ್ಲೇ ಸೀಮಿತಗೊಳ್ಳುವುದರಿಂದ, ಕವಿತೆ ಕೇವಲ ಶಬ್ದ ಚಿತ್ರವಾಗಿ, ಪರಿಣಾಮದಲ್ಲಿ ಶೂನ್ಯವಾಗುತ್ತದೆ. ಮೊದಲೇ ಹೇಳಿದಂತೆ ಈ ಕವನದ ಸೂಕ್ಷ್ಮ ಕೆತ್ತನೆಯ ಶಿಲ್ಪ, ಒಂದು ಆಕಸ್ಮಿಕ ಆಕರ್ಷಣೆಯಾಗಿ ಮನಸ್ಸನ್ನಾವರಿಸುತ್ತದೆ.

"ದಿಕ್ಕುದಿಕ್ಕು ಕೂಗಿದೆವು
ಕೈ ಎತ್ತಿ ಬೇಡಿದೆವು
ಬಿಕ್ಕಿಬಿಕ್ಕಿ ಅತ್ತೆವು
ಬೆಟ್ಟದಂತಹ ಹಡಗು ನೆನಪು ಕೆತ್ತಲಿಲ್ಲ
ಕನಸು ನನಸುಗಳೆರಡೂ ಸತ್ತವಗೆ ದಕ್ಕುವುದಿಲ್ಲ"

–ಎಂಬ ಕೊನೆ, ಇಡಿ ರಚನಾಶಿಲ್ಪಕ್ಕೆ ತಕ್ಕುದಾದ ಕಳಸ.

ದೇಶಪಾಂಡೆ, ಮೂಲತಃ ಭಾವನಾಸಕ್ತ ಕವಿ. ಭಾವನಾಜೀವಿ ಎಂದುಬಿಟ್ಟರೆ, ಇವರ ವ್ಯಕ್ತಿತ್ವಕ್ಕೆ ಏಕಪಕ್ಷೀಯ ಪರಿಮಿತಿ ಹಾಕಿದಂತಾದೀತು. ಏಕೆಂದರೆ ಭಾವನಾ ಸಕ್ತಿ ಇಟ್ಟುಕೊಂಡೇ ವಿಚಾರದ ಹಾದಿಯಲ್ಲಿ ನುಸುಳಿ, ತನ್ನ ಹಾಗೂ ಸುತ್ತಲಿನದನ್ನು ವಿಶ್ಲೇಷಿಸುವ ವಿಶಿಷ್ಟಶೋಧನೆಯನ್ನಿವರು ಕವಿತೆಯ ಮುಖಾಂತರ ಕೈಕೊಳ್ಳುತ್ತಾರೆ. ಈ ಮಾತಿಗೆ ಉದಾ : 'ವಾಸ್ತವತೆ', 'ಅನವರತ', 'ಗೋಡೆಗಳು', 'ಉತ್ತರಾಯಣ',

'ಕಣ್ಣು', 'ಕಟ್ಟಡ'– ಕವಿತೆಗಳು. ಕವಿಯ ಸೂಕ್ಷ್ಮ ಭಾವನಾಲೋಕವೂ ಇಲ್ಲಿ ಎದ್ದು ಕಾಣುವಂತಿದೆ.

'ಪರಂಪರೆ', 'ಒಂದು ಕವನ', 'ಅಣ್ಣ–ತಮ್ಮ', 'ಹಾವು', 'ಒಂದು ಗಿದ್ಯ'– ಇವೆಲ್ಲ ಒಂದು ಜಾತಿಗೆ ಸೇರುವ ಕವಿತೆಗಳು. ಅಸಂಗತಿಯಿಂದ ಹುಟ್ಟುವ ಭ್ರಮೆ, ಕಲಿಯುವ ಪಾಠ, ಉಂಟಾಗುವ ವಿಸ್ಮಯಪೂರ್ಣ ಅನುಭವಗಳ ಹಠಾತ್ ಚಿತ್ರಣ ಇಲ್ಲಿದೆ. ದೇಶಪಾಂಡೆ ಗಂಭೀರ ಭಾವನಾಸಕ್ತ ಕವಿಯಾಗಿದ್ದು, ಬದುಕನ್ನು ಅದರ ಅಸಂಬದ್ಧ, ವಾಸ್ತವಿಕಸ್ಥಿತಿಯಲ್ಲಿ ನೋಡಿ, ಅದನ್ನೊಪ್ಪಿಕೊಂಡರೂ ತಾನು ಮಾತ್ರ ಪ್ರತ್ಯೇಕವಾಗಿ ಉಳಿದು, ಬೆಳೆಯಬಲ್ಲರೆಂಬುದಕ್ಕೆ ಈ ಬರಹಗಳು ಉತ್ತಮ ನಿದರ್ಶನ. ಈ ರಚನೆಗಳ ರೂಪ, ಈಗಾಗಲೇ ಕನ್ನಡ ಕಾವ್ಯದಲ್ಲಿ ಒಂದು ಜಾಡಿಗೆ ಬಿದ್ದಿರುವ ರಾಮಾನುಜನ್‌ರನ್ನು ನೆನಪಿಸುತ್ತವಾದರೂ ಶೈಲಿಯ ಅನುಕರಣೆಯನ್ನು ಮುಚ್ಚಿ, ತನ್ನ ಅನುಭವ ಆಕಸ್ಮಿಕಗಳ ಮಿಶ್ರಣವನ್ನು ಬಿಚ್ಚುವ ವಿಶಿಷ್ಟಧಾಟಿಯಿಂದ ಮನ ಸೆಳೆಯುತ್ತವೆ. ಬಹುಶಃ ಇಂಥ ಲಘುಕವಿತೆಗಳ ರಚನೆಯಿಂದಲೇ ಯಾವುದಕ್ಕೆ ನಾವು, ಕವಿತೆ ಜನಸಾಮಾನ್ಯರನ್ನು ಮುಟ್ಟಬೇಕು, ತಟ್ಟಬೇಕು, ತಾಗಬೇಕು ಎಂದು ಹೇಳುತ್ತೇವೆಯೋ ಆ ಕೆಲಸವನ್ನು ದೇಶಪಾಂಡೆ ನಿಭಾಯಿಸಬಲ್ಲರೆಂದು ಅನಿಸುತ್ತದೆ.

'ಪರಂಪರೆ' ಕವನ, ಮೇಲ್ನೋಟಕ್ಕೆ ಅಸಂಗತದ ಒಂದು ಶಬ್ದಚಿತ್ರವಾಗಿ ಕಂಡರೂ ಅದರೊಳಗಿನ ಚಿಂತನ ಗಹನವಾಗಿದೆ. ಆದರೆ ಅದೇನೂ ಅಲ್ಲದ 'ಒಂದು ಗಿದ್ಯ' ವಿನೋದದ ಅಲೆ ಎಬ್ಬಿಸಿ, ಅಷ್ಟಕ್ಕೆ ತಣ್ಣಗಾಗುವ ಅತ್ಯಂತ ಸಾಮಾನ್ಯ ರಚನೆಯಾಗಿ ಮರೆಯಾಗುತ್ತದೆ.

—ಎಸ್. ಜಿ. ಬಿದರಕುಂದಿ

•

ಚಿತ್ತಲೆ ಪದ್ಯಗಳು (ಕವನಸಂಕಲನ) : ಹೊ. ಮ. ಪಂಡಿತಾರಾಧ್ಯ : ಪ್ರ. : ಯುವಕ ಸಂಘ, ರಾಮನಗರ, ಹಗರಿಬೊಮ್ಮನಹಳ್ಳಿ. ೧೯೭೫. ಬೆಲೆ : ರೂ. ೪–೦೦. ಪುಟ : ೫೯

ಅನುಭವಗಳು, ಭಿನ್ನಭಿನ್ನ ಅಭಿವ್ಯಕ್ತಿ ಪಡೆಯುವಾಗ ವ್ಯಂಗಮಾಧ್ಯಮ ಅನುಭವ ಗಾಢತೆ ಬಿಚ್ಚಬಹುದೆ ಎಂಬ ಸಮಸ್ಯೆ ದಿನದಿನಕ್ಕೂ ಸಮಕಾಲೀನವಾಗುತ್ತಿರುವುದನ್ನು ಕಾಣಬಹುದು. ಇಂಥ ಸಮಯದಲ್ಲಿ ಅದನ್ನೇ ಮುಖ್ಯ ಮಾಧ್ಯಮವಾಗಿ, ಹತ್ತಿರದ ಅಭಿವ್ಯಕ್ತಿ ರೀತಿಯಾಗಿ ಹಲವಾರು ಪದ್ಯಗಳನ್ನು ಬರೆದು ಸಂಕಲನರೂಪದಲ್ಲಿ ಪ್ರಸ್ತುತ ಕವಿ ತಂದಿದ್ದಾರೆ. ವ್ಯಂಗ್ಯ ತೀರ ಸರಳಬಂಧ ಪಡೆದಾಗ, ಅನುಭವದ ಒಟ್ಟು ಪರಿಣಾಮ ಶಿಥಿಲಹೊಂದುತ್ತದೆ ಎಂಬ ಮಾತು ಪಂಡಿತಾರಾಧ್ಯರ ಕಾವ್ಯದೃಷ್ಟಿಯಿಂದ ನೋಡಿದಲ್ಲಿ ಬಹಳ ಪದ್ಯಗಳು ಸೋತಿವೆ ಎನಿಸುತ್ತದೆ. ವಿಪರೀತ ಚಲಾವಣೆ ಹೊಂದಿದ ವ್ಯಂಗ್ಯ ನವ್ಯದ ಅತಿ ನವಕಳಿ ನಾಣ್ಯವಾದ ಈ ಸಂದರ್ಭದಲ್ಲೂ ಒಂದೆರಡು ಒಳ್ಳೆಯ ರಚನೆಗಳನ್ನೂ ಇಲ್ಲಿ ನೀಡಿದುದನ್ನು ಕಾಣಬಹುದು. ಉದಾ :

ಬಿತ್ತಿದನು ಬೆಳೆಯೂ ಬಂತು,
ಹುಟ್ಟಿದರು ಇವನಿಗಿಷ್ಟು
ತಿಗಣೆ ಕೋರಿ ಹುಳುಗಳಂತೆ
ಕುವರೀ ಕುವರ

[ಇವನ ಈ ಚರಿತ್ರೆ]

ನಾಯಿಯ ಕಣ್ಣಲ್ಲಿ ಏನೋ ತೇವ
ಕಣ್ಣಲ್ಲಿ ಕಾಣುವ ಏನೋ ಸೋತ ಪ್ರವಾಹ,
ಹೊತ್ತು ಹೊತ್ತಿಗೆ ಹಾಕಿದ್ದ ತಿಂದು,
ಗೂಟದ ಸುತ್ತು ಗಸ್ತುಹೊಡೆವ
ನಾಯಿಯು ಹೂಡಲಾರದು ಯಾವ ಕೋರ್ಟಿನಲಿ
ಹಕ್ಕಿನ ದಾವಾ
ಈ ನಾಯಿ ಪಾಡಿಗೆ
ನನ್ನ ಪಾಡಿಗೆ ನಕ್ಕೆ.

[ನನ್ನ ಪಾಡು]

ಈ ವರೆಗೆ ಒಂದು ರೀತಿಯಲ್ಲಿ ಸಂಪೂರ್ಣವಾಗಿ ಯುರೋಪಿಯನ್ ಕಾವ್ಯಸುಳಿಯಲ್ಲಿ ಸಿಕ್ಕ ನಮ್ಮ ಕಾವ್ಯ ಇದೀಗ ಬಿಡುಗಡೆ ಪಡೆದು ನಿಂತನೆಲದ ಸಂವೇದನೆ ಮಾಡುತ್ತಿರುವುದನ್ನು ಕಾಣಬಹುದು. ಹೊಸತಲೆಮಾರಿನಲ್ಲಿ ಬರೆಯುತ್ತಿರುವ ಸರಜೂ ಕಾಟಕರ, ಅಲ್ಲಮಪ್ರಭು ಬೆಟ್ಟದೂರ, ಗವಿಸಿದ್ಧ ಬಳ್ಳಾರಿ ಮುಂತಾದ ಪ್ರತಿಭಾವಂತ ಯುವಕವಿಗಳ ಕಾವ್ಯ ಅತಿ ಆಶೆ ಹುಟ್ಟಿಸಿದೆ. ಇಂಥ ಕಾವ್ಯದ ಸಾಮಗ್ರಿ ಇಲ್ಲಿಯೂ ಸಿಗುತ್ತದೆ. ಉದಾ : 'ನನ್ನೂರ ಹಾರವರು', 'ನಮ್ಮ ಇತಿಹಾಸ', 'ಉರಿಯುತ್ತಿರುವ ಓಸ ನಾವು' ಮುಂತಾದ ಗಂಭೀರ ರಚನೆಗಳು ಸಂಕಲನಕ್ಕೆ ಮೌಲ್ಯ ಕಟ್ಟುತ್ತವೆ. ಅಲ್ಲಲ್ಲಿ ಈಗಾಗಲೇ ಪ್ರಕಟವಾದ ಪದ್ಯಗಳನ್ನೇ ಸಂಕಲನರೂಪದಲ್ಲಿ ತಂದಿರುವುದರಿಂದ ಬರೆವಣಿಗೆಯ ಪ್ರಾರಂಭದಲ್ಲಿ ಬರೆದ ಬಹಳ ಕವನಗಳು ಇಲ್ಲಿ ಸೇರಿಕೊಂಡಿವೆ. ಅವು ಪರಿಣಾಮದೃಷ್ಟಿಯಿಂದ ಇತ್ತೀಚೆಗೆ ಬರೆದ ಚುಟುಕುಗಳಷ್ಟೇ ಚುರುಕುಹೊಂದಿವೆ. ಇಲ್ಲಿ ಗಮನಿಸಬಹುದಾದ ಇನ್ನೊಂದು ಅಂಶವೆಂದರೆ ಬಹಳಷ್ಟು ಕವನಗಳ ಪ್ರಾರಂಭದಲ್ಲಿ ಕಂಡ ರೋಷ, ಉದ್ವೇಗ, ಕಟ್ಟು– ಕವನ ಮುಗಿಸುವಾಗ ಇರದೇ ಇರುವುದು. ಅದಕ್ಕೆಂದೇ ಕೃತ್ರಿಮ ಮುಕ್ತಾಯ ಕವನಗಳು ಪಡೆಯುವುದು. ಉದಾ ; 'ಕಾಲ', 'ಮೃಗಜಲ', 'ಸಂಗೀತ', 'ಹಂತ' ಮುಂತಾದವುಗಳಲ್ಲಿ.

'ನನ್ನೂರ ಹಾರವರು', 'ನಮ್ಮ ಇತಿಹಾಸ', 'ಉರಿಯುತ್ತಿರುವ ಓಸ ನಾವು' ಗಳಂಥ ಒಳ್ಳೆಯ ಕವಿತೆಗಳನ್ನು ಬರೆದ ಪಂಡಿತಾರಾಧ್ಯರಿಂದ ಇನ್ನೂ ಆಶಿಸಲು ಕಾವು ಮತ್ತು ಕಸುವು ಇದೆ ಎನ್ನಬಹುದು.

—ಸತೀಶ ಕುಲಕರ್ಣಿ

• •

ಸಂಪಾದಕೀಯ

ಪ್ರಾಚ್ಯವಿದ್ಯಾಸಮ್ಮೇಲನ

'ಅಖಿಲಭಾರತ ಪ್ರಾಚ್ಯವಿದ್ಯಾಸಮ್ಮೇಲನ' (All India Oriental Conference) ದೇಶವಿದೇಶಗಳ ಅಗ್ರಮಾನ್ಯವಿದ್ವಾಂಸರ ಮಹಾಪರಿಷತ್ತು. ತನ್ನ ರಜತ ಮಹೋತ್ಸವ ವರ್ಷದ ಸಂದರ್ಭದಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯ ಈ ಅಗ್ರಸಮ್ಮೇಳನ ವನ್ನು ಆಮಂತ್ರಿಸಿ, ದಿನಾಂಕ ೧೦, ೧೧, ೧೨ ರ ನವಂಬರ ೧೯೭೬ ರಂದು ವೈಭವದಿಂದ ಆಚರಿಸಿತು. ಮಾನ್ಯ ರಾಜ್ಯಪಾಲರಾದ ಶ್ರೀ ಉಮಾಶಂಕರ ದೀಕ್ಷಿತ ಅವರಿಂದ ಉದ್ಘಾಟಿ ಸಲ್ಪಟ್ಟ ಈ ಸಮ್ಮೇಲನದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚ್ಯವಿದ್ಯಾವಿದ್ವಾಂಸರಾದ ಡಾ. ಸಿ. ಶಿವರಾಮಮೂರ್ತಿಯವರು ಸಂಸ್ಕೃತಭಾಷೆಯ ಪುನರುಜ್ಜೀವನ, ಸಂಸ್ಕೃತ ಸಾಹಿತ್ಯದ ಅಧ್ಯಯನಗಳ ಅವಶ್ಯಕತೆಯನ್ನು ಒತ್ತಿಹೇಳಿದರು. ಇದರ ಅಂಗವಾಗಿ ಅನೇಕ ಗೋಷ್ಠಿಗಳು ಜರುಗಿ ಹೊಸಹೊಸ ಕ್ಷೇತ್ರಗಳ ಮೇಲೆ ಮಿಂಚನ್ನು ಮಿನುಗಿಸಿ, ಬೆಳಕನ್ನು ಬೆಳಗಿಸಿದವು.

'ಕರ್ನಾಟಕ ಭಾರತಿ' ರಾಷ್ಟ್ರಮಟ್ಟದ ಈ ಸಮ್ಮೇಳನದ ಯಶಸ್ಸಿಗೆ ಕಾರಣರಾದ ಸರ್ವರನ್ನೂ ಅಭಿವಂದಿಸಿ, ಭವಿಷತ್ತಿನಲ್ಲಿ ಇಂಥ ಸಮ್ಮೇಳನಗಳು ಇನ್ನೂ ಉಜ್ವಲ ವಾಗಿ ಜರುಗಲಿ ಎಂದು ಹಾರೈಸುತ್ತದೆ.

ರಜತಮಹೋತ್ಸವ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ರಜತಮಹೋತ್ಸವದ ಮುಕ್ತಾಯ ಸಮಾರಂಭವನ್ನು ಒಂದು ವಾರದ ವರೆಗೆ ವೈಭವದಿಂದ ಆಚರಿಸಿತು. ವಿಶ್ವವಿದ್ಯಾಲಯದ ಆವರಣವೆಲ್ಲ ವಿದ್ಯುತ್ ದೀಪಾಲಂಕಾರ, ವಿದ್ವತ್ ಗೋಷ್ಠಿಗಳಿಂದ ೭ ದಿನಗಳ ವರೆಗೆ ಶೋಭಿಸಿತು. ಜ್ಯೋತಿರ್ಲೋಕದ ಅನುಭವದಲ್ಲಿ ವೀಕ್ಷಕರು, ವಿದ್ವತ್‌ಲೋಕದ ಅನು ಭವದಲ್ಲಿ ಶ್ರೋತೃಗಳು ವಿಹರಿಸಿದರು. ಘಟಿಕೋತ್ಸವ, ಜನಪದಸಾಹಿತ್ಯ ಸಮ್ಮೇಲನ, ವಿಚಾರಸಂಕಿರಣ, ವಿದ್ವಾಂಸರ ಉಪನ್ಯಾಸ, ಪ್ರತಿದಿವಸ ಸಂಜೆ ಖ್ಯಾತಕಲಾವಿದರಿಂದ ಕಲಾಪ್ರದರ್ಶನ– ಇವು ಈ ಸಮಾರಂಭದ ಮುಖ್ಯ ಆಕರ್ಷಣೆಗಳಾಗಿದ್ದವು.

ಡಿಸೆಂಬರ್ ೨೭ ರಂದು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಮುಖ್ಯಸ್ಥ ರಾದ ಡಾ. ಸತೀಶಚಂದ್ರ ಅವರು ಘಟಿಕೋತ್ಸವದ ಮುಖ್ಯ ಅತಿಥಿಗಳಾಗಿ ಆಗಮಿ ಸಿದ್ದರು. ಶಿಕ್ಷಣಕ್ಷೇತ್ರದ ಅವಕಾಶ(opportunity) ಮತ್ತು ಆಹ್ವಾನ

(challenge) ಗಳನ್ನು ಅರ್ಥಮಾಡಿಕೊಂಡು ರಾಷ್ಟ್ರಾಭ್ಯುದಯಕ್ಕೆ ನೆರವಾಗುವ ರೀತಿಯಲ್ಲಿ ಶಿಕ್ಷಣಾಭಿಲಾಷಿಗಳು ಮುನ್ನಡೆಯಬೇಕೆಂದು ಹೇಳಿದರು.

ಇದರ ಅಂಗವಾಗಿ ಖ್ಯಾತನಾಟಕಕಾರ ಶ್ರೀರಂಗ, ಸುಪ್ರಸಿದ್ಧಕವಯಿತ್ರಿ ಶ್ರೀಮತಿ ಜಯದೇವಿತಾಯಿ ಲಿಗಾಡೆ, ಜನಪ್ರಿಯ ಡಾಕ್ಟರ್ ಆರ್.ಬಿ. ಪಾಟೀಲ ಅವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ದಯಪಾಲಿಸಲಾಯಿತು. ಕುಲಾಧಿಪತಿ ಮಾನ್ಯ ಶ್ರೀ ಉಮಾಶಂಕರ ದೀಕ್ಷಿತರ ಅಧ್ಯಕ್ಷತೆಯಲ್ಲಿ ಈ ಘಟಿಕೋತ್ಸವ ನೆರವೇರಿತು.

ಡಿಸೆಂಬರ್ ೨೯ ರಂದು ಕನ್ನಡ ಅಧ್ಯಯನಪೀಠವು "ಅಖಿಲ ಕರ್ನಾಟಕ ಚತುರ್ಥ ಜಾನಪದ ಸಮ್ಮೇಲನ"ವನ್ನು ನಡೆಸಿತು. ಕುಲಪತಿಗಳಾದ ಡಾ. ಆರ್. ಸಿ. ಹಿರೇಮಠ ಅವರು ಉದ್ಘಾಟಿಸಿದ ಈ ಸಮ್ಮೇಲನದ ಅಧ್ಯಕ್ಷತೆ ವಹಿಸಿದವರು, ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು. ಕನ್ನಡ ಜಾನಪದ ಕ್ಷೇತ್ರದ ಹಿರಿಯ ವಿದ್ವಾಂಸರೂ, ಖ್ಯಾತಸಾಹಿತಿಗಳೂ ಆದ ಶ್ರೀಯುತರು ಜಾನಪದಸಾಹಿತ್ಯದ ಮಹತ್ವವನ್ನು ವಿವರಿಸಿ, ಅದನ್ನು ಉಳಿಸಿಕೊಳ್ಳುವುದು ಪ್ರಜಾಧರ್ಮವೆಂದು ಸಾರಿದರು. ಈ ಸಮ್ಮೇಲನದ ಅಂಗವಾಗಿ 'ಚರ್ಮವಾದ್ಯಗಳ ಹಿಮ್ಮೇಳದ ಹಾಡುಗಳು' ಮತ್ತು 'ತಂತು ಹಾಗೂ ಇತರ ವಾದ್ಯಗಳ ಹಿಮ್ಮೇಳದ ಹಾಡುಗಳು' ಹೆಸರಿನ ಎರಡು ಗೋಷ್ಠಿಗಳು ಡಾ. ಎಲ್. ಆರ್. ಹೆಗಡೆ, ಡಾ. ಎಂ. ಎಸ್. ಸುಂಕಾಪುರ ಅವರ ಅಧ್ಯಕ್ಷತೆಯಲ್ಲಿ ಜರುಗಿದವು. ಸಾಯಂಕಾಲ ವೈವಿಧ್ಯಪೂರ್ಣ ಜಾನಪದ ಕಲಾಮೇಳ ಜರುಗಿತು.

ಜನೆವರಿ ೨ ರಂದು "ವಿಶ್ವವಿದ್ಯಾಲಯ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ" ವಿಷಯವನ್ನು ಕುರಿತು ವಿಚಾರಸಂಕಿರಣವನ್ನು ಹಮ್ಮಿಕೊಳ್ಳಲಾಗಿದ್ದಿತು. ಮಾನ್ಯ ಸಚಿವರಾದ ಶ್ರೀ ಎಸ್.ಎಂ. ಯಾಹ್ಯಾ ಅವರು ಈ ವಿಚಾರಸಂಕಿರಣವನ್ನು ಉದ್ಘಾಟಿಸಿದರು. ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಶ್ರೀ ಡಿ. ವ್ಹಿ. ಅರಸ್, ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಚ್. ಆರ್. ಅರಕೇರಿ ಅವರ ಅಧ್ಯಕ್ಷತೆಗಳಲ್ಲಿ ವಿದ್ವತ್‌ಗೋಷ್ಠಿಗಳು ನಡೆದವು.

ಜನೆವರಿ ೩ ರಂದು ವಿಶ್ವವಿದ್ಯಾಲಯ ತನ್ನ ನಿರ್ಮಾತೃವರ್ಗದ ಅಧಿಕಾರಿಗಳನ್ನೂ ಪ್ರಾಧ್ಯಾಪಕರನ್ನೂ ಅಭೂತಪೂರ್ವವಾಗಿ ಗೌರವಿಸಿತು. ಡಾ. ಡಿ. ಸಿ. ಪಾವಟೆ, ಡಾ. ಎ. ಎಸ್. ಅಡಕೆ, ಡಾ. ಕೆ. ಎಸ್. ನರಗುಂದ ಅವರನ್ನು ಅನುಪಸ್ಥಿತಿಯಲ್ಲಿ. ಡಾ. ತಾವಡೆ, ಪ್ರೊ. ಮೆನೆಝಿಸ್, ಡಾ. ಸಿದ್ದಪ್ಪ ಅವರನ್ನು ಉಪಸ್ಥಿತಿಯಲ್ಲಿ ಗೌರವಿಸಲಾಯಿತು. ಉಸ್ಮಾನಿಯ ವಿಶ್ವವಿದ್ಯಾಲಯದ ಕುಲಪತಿ ಡಾ. ಜಗನ್ಮೋಹನ ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಈ ಸಮಾರಂಭದಲ್ಲಿ ಕೃತಜ್ಞತೆಯ ಕಡಲು ತುಂಬಿ ತುಳುಕಿತು.

ಜನೆವರಿ ೪ ರಂದು ರಜತಮಹೋತ್ಸವದ ಮುಕ್ತಾಯಸಮಾರಂಭ. ಮುಖ್ಯ ಅತಿಥಿಗಳಾದ ಮಾನ್ಯ ರಾಷ್ಟ್ರಪತಿ ಫಕ್ರುದ್ದೀನ ಅಲಿ ಅಹಮ್ಮದ ಅವರು ಅನಾರೋಗ್ಯ ಕಾರಣ ಆಗಮಿಸದುದರಿಂದ ಮಾನ್ಯ ರಾಜ್ಯಪಾಲರಾದ ಶ್ರೀ ಉಮಾಶಂಕರ ದೀಕ್ಷಿತ ಅವರು ರಾಷ್ಟ್ರಪತಿಗಳ ಉಪನ್ಯಾಸವನ್ನು ಸಾದರಪಡಿಸಿದರು. ಮಾನ್ಯ ವಿದ್ಯಾಸಚಿವ ಶ್ರೀ ಎಸ್. ಎಂ. ಯಾಹ್ಯಾ ಅವರು ಅಧ್ಯಕ್ಷತೆ ವಹಿಸಿದ್ದರು.

ಹೀಗೆ ೭ ದಿನಗಳ ವರೆಗೆ ನಡೆದ ಅಭೂತಪೂರ್ವಸಮಾರಂಭಗಳಿಂದ ಸಮಾಲಂಕೃತ ವಾಗಿ ವಿಶ್ವವಿದ್ಯಾಲಯ ಬೆಳ್ಳಿ ಹೊಸ್ತಿಲು ದಾಟಿ, ಬಂಗಾರದ ಹೊಸ್ತಿಲಿಗೆ ಮುನ್ನಡೆ ಯಿತು. ಈ ಸೀಮೋಲ್ಲಂಘನ ಪ್ರಸಂಗದಲ್ಲಿ 'ಕರ್ನಾಟಕ ಭಾರತಿ' ತನ್ನ ಮಾತೃಸಂಸ್ಥೆ ಯಾದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಅಭಿವಂದನೆಗಳನ್ನು ಸಲ್ಲಿಸುತ್ತದೆ.

• •

ಸಾದರ ಸ್ವೀಕಾರ

೧. **ಗಾಂಧೀ ಸ್ಮರಣೆ :**
ಚಂದ್ರಶೇಖರ ಪಾಟೀಲ. ಪ್ರ : ಮುಂಗಾರು ಪ್ರಕಾಶನ, ೭೦, ಕೆಂಗೇರಿ ಉಪನಗರ, ಬೆಂಗಳೂರು ದಕ್ಷಿಣ–೫೬೦೦೬೦. ೧೯೭೬. ಪುಟ : ೧೦೨. ಬೆಲೆ : ರೂ. ೬–೦೦.

೨. **ಬಾಬಾ ಪದಗಳು :**
ಹೊ.ಮ. ಪಂಡಿತಾರಾಧ್ಯ, ಪ್ರ : ಬಹಿರಂಗ ಪ್ರಕಾಶನ, ಕೊಟ್ಟೂರ, ೧೯೭೬. ಪುಟ : ೩೯. ಬೆಲೆ : ರೂ. ೨–೦೦.

೩. **ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ :**
ಸಿಂಗಣ್ಣ ಸಣ್ಣಕ್ಕಿ, ಪ್ರ : ಜಾನಪದ ಮಂಟಪ, ರಾಯಬಾಗ, ೧೯೭೫. ಪುಟ : xxiii+೯೧. ಬೆಲೆ : ರೂ. ೫–೦೦.

೪. **ಕರ್ನಾಟಕ ಜನಪದಕಾವ್ಯಗಳು :**
ಸಂ : ಡಿ. ಲಿಂಗಯ್ಯ, ಪ್ರ : ದಿನಕರ ಪ್ರಕಾಶನ, ಬೆಂಗಳೂರ, ೧೯೭೬. ಪುಟ : ೩೪೭. ಬೆಲೆ : ರೂ. ೧೫–೦೦.

೫. **ಇಪ್ಪತ್ತಂಶಗಳು :**
ಚೆನ್ನಣ್ಣ ವಾಲೀಕಾರ. ಪ್ರ : ಯುಗಧ್ವನಿ ಪ್ರಕಾಶನ, ಧಾರವಾಡ. ೧೯೭೬. ಪುಟ : ೪೭, ಬೆಲೆ : ರೂ. ೫–೦೦.

೬. **ಹಾಲ ತೊರೆಗೆ ಬೆಲ್ಲದ ಕೆಸರು :**
ಸಂ : ಹ. ನಂ. ವಿಜಯಕುಮಾರ್, ಪ್ರ : ಶ್ರೀ ಬಸವೇಶ್ವರ ಗ್ರಂಥಮಾಲೆ, ಹಳೇವೂರು, ೧೯೭೬. ಪುಟ : iv+೮೮. ಬೆಲೆ : ರೂ. ೬–೦೦.

೭. **ಹಾಲು ತೆನೆ :**
ಸಂ : ತಾಳ್ತಜೆ ವಸಂತಕುಮಾರ. ಪ್ರ : ಕನ್ನಡ ಸಂಘ ವಿವೇಕಾನಂದ ಕಾಲೇಜು, ಪುತ್ತೂರು, ೧೯೭೬. ಪುಟ : viii+೪೬. ಬೆಲೆ : ರೂ. ೩–೦೦.

೮. **ಅಲ್ಲಮು, ಪ್ರಭುವಾದ ಮತ್ತು ಇತರ ಪದ್ಯಗಳು :**
ಶಾಮಸುಂದರ ಬಿದರಕುಂದಿ. ಪ್ರ : ಆಲೋಚನ ಪ್ರಕಾಶನ, ಗದಗ ೧೯೭೬. ಪುಟ : iv+೮೦. ಬೆಲೆ : ರೂ. ೪–೦೦.

೯. **ನಾಕ ಹೆಜ್ಜೆ :**
ಲೀಲಾವತಿ ತೋರಣಗಟ್ಟಿ. ಪ್ರ : ಶರತ್ ಪ್ರಕಾಶನ ಮಂದಿರ, ಬೆಳಗಾವಿ. ೧೯೭೬. ಪುಟ : ೫೨. ಬೆಲೆ : ರೂ. ೩–೦೦.

೧೦. ಪರಿಸರದ ಹೊಸಕವಿತೆ :

ಸಂ : ಬಿ. ಎಂ. ರಮೇಶ್. ಪ್ರ : ಪರಿಸರ ಸಾಹಿತ್ಯ, ಕಲಬುರ್ಗಿ, ೧೯೭೭. ಪುಟ : x+೭೬. ಬೆಲೆ : ರೂ. ೫–೦೦.

೧೧. ಪ್ರಬಂಧ ಶ್ರೀಗಂಧ :

ಬಿ. ಬಿ. ಮಹೀಶವಾಡಿ, ಪ್ರ. : ಜ್ಞಾನವಿಕಾಸ ಪ್ರಕಾಶನ, ಧಾರವಾಡ, ೧೯೭೬. ಪುಟ : iv+೧೨೦. ಬೆಲೆ : ರೂ. ೮-೦೦.

ಪತ್ರಿಕೆಗಳು

ಕನ್ನಡ ನುಡಿ	ರಾಷ್ಟ್ರೋತ್ಥಾನ ವಾರ್ತಾ
ಸಾಹಿತ್ಯಪರಿಷತ್ಪತ್ರಿಕೆ	ಮತ್ಸ್ಯಲೋಕ
ಜೀವನವಿಕಾಸ	ಅಭಿರುಚಿ
ಪಂಚಾಚಾರಪ್ರಕಾಶ	ಹೇಮಕೂಟ
ಪರಂಜ್ಯೋತಿ	ಶೃಂಗಾರ
ಕೃಷಿವಿಜ್ಞಾನ	ತರಳಬಾಳು

• •

ಈ ಸಂಚಿಕೆಯ ಲೇಖಕರು

೧ ಶ್ರೀ ಮೋಹನ ಕುರುಡಗಿ :
ತೋಟಗಂಟಿ, ತಾಲೂಕ : ರೋಣ, ಜಿಲ್ಲೆ : ಧಾರವಾಡ.

೨ ಶ್ರೀ ಎಸ್. ಎಸ್. ಹಿರೇಮಠ :
ಕನ್ನಡ ಅಧ್ಯಾಪಕರು, ವಿಜಯನಗರ ಕಾಲೇಜು, ಹೊಸಪೇಟೆ.

೩ ಶ್ರೀ ಎಚ್. ಆರ್. ರಘುನಾಥಭಟ್ :
ಅಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ಮಾನಸಗಂಗೋತ್ರಿ, ಮೈಸೂರು–೬.

೪ ಶ್ರೀ ಅ. ಕೆ. ಪ್ರಕಾಶ :
C/o. ಪಿ. ಕೆ. ರಾಜಶೇಖರ, ಕನ್ನಡ ಅಧ್ಯಾಪಕರು, ಯುವರಾಜ ಕಾಲೇಜು, ಮೈಸೂರು–೫.

೫ ಡಾ. ಎಂ. ಎಂ. ಕಲಬುರ್ಗಿ :
ರೀಡರ್, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬ ಶ್ರೀಮತಿ ಸುಶೀಲಾ ಹೆಂಡಿ :
C/o. ಡಾ. ಬಿ. ಬಿ. ಹೆಂಡಿ, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ.

೭ ಗೌರೀಶ ಕಾಯ್ಕಿಣಿ :
ಗೋಕರ್ಣ (ದ. ಕ).

೮ ಡಾ. ಆರ್. ಎಸ್. ಗುರವ :
ಕೊಪ್ಪದ ಕೆರೆ, ಧಾರವಾಡ–೮.

೯ ಡಾ. ಎಂ. ಎಸ್. ಲಠ್ಠೆ :
ಕನ್ನಡ ಅಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ ಕಲಬುರ್ಗಿ.

೧೦ ಶ್ರೀ ಪ್ರ. ಗೋ. ಕುಲಕರ್ಣಿ :
ಹಿಂದವಾಡಿ, ಬೆಳಗಾವಿ.

೧೧ ಶ್ರೀಮತಿ. ಎಸ್. ವಿ. ಭಾಗ್ಯಲಕ್ಷ್ಮಿ :
ಸಂಶೋಧನ ಅಧಿಕಾರಿ, ಭಾಷಾ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂಗಳೂರು–೨

೧೨ ಶ್ರೀ ಎಸ್. ಡಿ. ಶೆಟ್ಟಿ :
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ (ದ. ಕ.).

೧೩ ಶ್ರೀ ಬಿ. ಬಿ. ಮಹೀಶವಾಡಿ :
ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೪ **ಡಾ. ಎಂ. ಜಿ. ಬಿರಾದಾರ :**
ರೀಡರ್, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ.

೧೫ **ಶ್ರೀ ಬಿ. ಆರ್. ಹಿರೇಮಠ :**
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೬ **ಶ್ರೀ ವ್ಹಿ. ಎಂ. ವಾಲಿ :**
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೭ **ಶ್ರೀರಾಮ ಇಟ್ಟಣ್ಣವರ :**
ಕನ್ನಡ ಅಧ್ಯಾಪಕರು, ಸಿದ್ಧೇಶ್ವರ ಜ್ಯೂನಿಯರ ಕಾಲೇಜು, ಬೀಳಗಿ. ಜಿಲ್ಲೆ : ವಿಜಾಪುರ.

೧೮ **ಶ್ರೀಮತಿ ಲೀಲಾವತಿ ತೋರಣಗಟ್ಟಿ :**
ಬೋಧನ, ನಿಜಾಮಬಾದ ಜಿಲ್ಲೆ (ಆಂಧ್ರ ಪ್ರದೇಶ).

೧೯ **ಕುಮಾರಿ ಎಚ್. ಸಿ. ಗೋಗಿ :**
ಸಂಶೋಧನ ವಿದ್ಯಾರ್ಥಿನಿ, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೦ **ಶ್ರೀ ಎಸ್. ಉಮಾಪತಿ :**
ಕನ್ನಡ ಅಧ್ಯಾಪಕರು, ಎ. ಆರ್. ಜಿ. ಕಾಲೇಜು, ದಾವಣಗೆರೆ.

೨೧ **ಡಾ. ಎಂ. ಚಿದಾನಂದಮೂರ್ತಿ :**
ಕನ್ನಡ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೨ **ಶ್ರೀ ಎಸ್. ಶಿವಣ್ಣ :**
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರ ವಿಶ್ವವಿದ್ಯಾಲಯ, ಬೆಂಗಳೂರು.

೨೩ **ಶ್ರೀ ಸೀತಾರಾಮ ಜಾಗೀರದಾರ್ :**
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೬.

೨೪ **ಶ್ರೀ ಎಸ್. ಜಿ. ಬಿದರಕುಂದಿ :**
ಕನ್ನಡ ಅಧ್ಯಾಪಕರು, ಆದರ್ಶ ಶಿಕ್ಷಣ ಸಮಿತಿಯ ಕಾಮರ್ಸ ಕಾಲೇಜು, ಗದಗ.

೨೫ **ಸತೀಶ ಕುಲಕರ್ಣಿ :**
ವಾಗಳೆ ಗಲ್ಲಿ, ಖಾನಾಪುರ. ಜಿಲ್ಲೆ : ಬೆಳಗಾವಿ.

• •

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವ್ಯಾಸಂಗ ವಿಸ್ತರಣ ಹಾಗೂ ಪ್ರಕಟಣ ವಿಭಾಗ

ಇತ್ತೀಚಿನ ಪ್ರಕಟನೆಗಳು

ಜನಪದ ಸಾಹಿತ್ಯಮಾಲೆ

ಕನ್ನಡ ಸಾವಿರದ ಒಗಟುಗಳು — ೧೦–೦೦

—ಸಂ. : ಸೋಮಶೇಖರ ಇಮ್ರಾಪುರ

ವಚನಸಾಹಿತ್ಯಮಾಲೆ

ಬಾಲಸಂಗಯ್ಯನ ವಚನಗಳು — ೧೨–೦೦

—ಸಂ. : ಎಂ. ಎಸ್. ಸುಂಕಾಪುರ

ಇತರ ಪ್ರಕಟನೆಗಳು

ಕರ್ನಾಟಕ ಹಾಗೂ ಮರಾಠಿ ಸಾಹಿತ್ಯ — (ಸಾ.) ೧೦–೦೦

—ಡಿ. ಎನ್. ಆವಳೀಕರ — (ಕ್ಯಾ.) ೧೬–೦೦

ಅನು : ಎಸ್. ಪಿ. ಪಾಟೀಲ

ಉಪನ್ಯಾಸ ಗ್ರಂಥಮಾಲೆ (ಪ್ರತಿಯೊಂದರ ಬೆಲೆ ೨೫ ಪೈಸೆ)

ಪ್ರಕೃತಿಯಲ್ಲಿ ವರ್ಣವಿನ್ಯಾಸ

—ಎನ್. ಬಿ. ಕಾಖಂಡಿಕಿ

ಸೀತೆಯ ಮೂರು ಚಿತ್ರಗಳು

—ಮಂದಾಕಿನಿ ತವಗ

—

ಒಂದು ವರ್ಷದ ಅವಧಿಯಲ್ಲಿ (ಎಪ್ರಿಲ ೧ ರಿಂದ ಮಾರ್ಚ ೩೧ ರ ವರೆಗೆ) ಒಟ್ಟಿಗೆ ರೂ. ೨೦,೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ಶೆ. ೩೩⅓ ದಂತೆ ಕಮೀಶನ್ ಕೊಡಲಾಗುವದು.

ವಿಶ್ವವಿದ್ಯಾಲಯದ ರಜತಮಹೋತ್ಸವದ ನೆನಪಿಗಾಗಿ ವಿಶೇಷ ರಿಯಾಯಿತಿ

- ೧೦೦ ರೂ. ಹಾಗು ಅದಕ್ಕೂ ಮೇಲ್ಪಟ್ಟು ಪುಸ್ತಕಗಳ (ಪಠ್ಯಪುಸ್ತಕ ಹೊರತು ಪಡಿಸಿ) ಖರೀದಿಗೆ ಶೇ. ೨೫ + ಶೇ. ೧೫
- ೫,೦೦೦ ರೂ. ಹಾಗೂ ಅದಕ್ಕೂ ಮೇಲ್ಪಟ್ಟು ಖರೀದಿಗೆ ಶೇ. ೩೩⅓ + ಶೇ. ೧೫

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೪ (ಅಂಚೆವೆಚ್ಚ ಸಹಿತ)

ಬಿಡಿ ಪ್ರತಿ : ರೂ. ೨-೫೦ (ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨-೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ೧೦೦ ರೂ. ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ 'ಕರ್ನಾಟಕ ಭಾರತಿ' ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವುದು.

'ಮಾನವಿಕ ಭಾರತಿ'

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೬

ಬಿಡಿ ಪ್ರತಿ : ರೂ. ೩-೫೦ (ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೪-೦೦

(ಹಣವನ್ನು ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ್ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩